ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ

ಪ್ರವೀಣ್ ಗೋಡ್ಖಿಂಡಿ ರೂಪಿಸಿದ 'ಗಾಡ್ಸ್ ಬನ್ಸಿ' ಕೊಳಲು ಎಂಟು ಅಡಿ ಎತ್ತರ, 22 ಕೆ.ಜಿ ಭಾರ ಇದೆ, ಗೊತ್ತಾ?

'ಜಾತಿಗಳಲ್ಲಿರುವ ಬ್ರಾಹ್ಮಣ್ಯ ತೊಲಗಿಸಿ' 6

ಪ್ರೀತಿ ಉಣಿಸಿ ನೆನಪ ಉಳಿಸಿದ ಅಪ್ಪ 7

ಎಲ್ಲ ರಾಜ್ಯಗಳಿಗೆ ಕೇಂದ್ರ ಗೃಹಸಚಿವಾಲಯ ಸೂಚನೆ

ಕೋವಿಡ್ ನಿಯಮ ಸಡಿಲ: ಇರಲಿ ಎಚ್ಚರ 9

ಲಸಿಕೆ ಹಾಕಿಸಿಕೊಳ್ಳಲು ಜನರ ಹಿಂದೇಟು: ಮೌಢ್ಯ, ತಪ್ಪು ತಿಳಿವಳಿಕೆ, ಜಾಗೃತಿ ಕೊರತೆ ಕಾರಣ

ಕೋವಿಡ್ ಲಸಿಕೆ: ಏಕೆ ಹಿಂಜರಿಕೆ?

• ಸುಕೃತ ಎಸ್.

ಬೆಂಗಳೂರು: 'ದೇವಿ ಮುನಿಸಿಕೊಂಡಿದ್ದರಿಂದ ಕೋವಿಡ್‌ನಂತಹ ಗಂಡಾಂತರ ಬಂದಿದೆ. ದೇವಿಯನ್ನು ಸಂಪ್ರೀತಗೊಳಿಸಬೇಕು. ಲಸಿಕೆ ಹಾಕಿದರೆ ಕೊರೊನಾ ತೊಲಗದು' ಎಂಬ ಭಾವನೆ ರಾಜ್ಯದ ವಿವಿಧ ಭಾಗಗಳ ಜನರಲ್ಲಿ ಇದೆ. ಇಂತಹ ಮೌಢ್ಯ, ತಪ್ಪುಗ್ರಹಿಕೆಗಳೇ ಕೋವಿಡ್ ಲಸಿಕೆ ಅಭಿಯಾನಕ್ಕೆ ದೊಡ್ಡ ತೊಡಕಾಗಿವೆ.

ಕೋವಿಡ್ ವಿರುದ್ಧದ ಹೋರಾಟದಲ್ಲಿ ಲಸಿಕೆಯೇ ಪ್ರಮುಖ ಅಸ್ತ್ರ. ಶೇ 50ರಿಂದ ಶೇ 90ರಷ್ಟು ಜನರಲ್ಲಿ ರೋಗ ನಿರೋಧಕ ಶಕ್ತಿ ಉಂಟಾದಾಗ ಮಾತ್ರ ಸಮೂಹ ರೋಗ ನಿರೋಧಕ ಶಕ್ತಿ ಸೃಷ್ಟಿಯಾಗುತ್ತದೆ ಎಂದು ಪರಿಣತರು ಹೇಳುತ್ತಿದ್ದಾರೆ. ಈ ಪ್ರಮಾಣದಲ್ಲಿ ರೋಗ ನಿರೋಧಕ ಶಕ್ತಿ ಸೃಷ್ಟಿಯಾಗದಿದ್ದರೆ ಕೋವಿಡ್‌ನಿಂದ ರಕ್ಷಣೆ ಸಾಧ್ಯವಿಲ್ಲ. ಆದರೆ, ಲಸಿಕೆಯ ಬಗ್ಗೆ ಜನರಲ್ಲಿ ಇರುವ ಹಿಂಜರಿಕೆ ಕೋವಿಡ್ ವಿರುದ್ಧದ ಹೋರಾಟಕ್ಕೆ ಅಡ್ಡಿಯಾಗಿದೆ.

ಲಸಿಕಾ ಕೇಂದ್ರ ದೂರ ಇರುವುದು, ಆನ್‌ಲೈನ್ ನೋಂದಣಿಯ ಸಮಸ್ಯೆ, ಆಧಾರ್ ಕಾರ್ಡ್ ಅಥವಾ ಗುರುತಿನ ಚೀಟಿ ಇಲ್ಲದಿರುವುದೇ ಮುಂತಾದ ಸಮಸ್ಯೆಗಳೂ ಲಸಿಕೆ ಅಭಿಯಾನದ ಹಿನ್ನಡೆಗೆ ಕಾರಣವಾಗಿವೆ.

ತಪ್ಪು ತಿಳಿವಳಿಕೆಗಳು: ಲಸಿಕೆ ಪಡೆದುಕೊಂಡರೆ ಎರಡು– ಮೂರು ವರ್ಷಗಳಲ್ಲಿ ಸತ್ತು ಹೋಗುತ್ತೇವೆ, ದೇಹದ ಮೇಲೆ ಹಲವು ಅಡ್ಡ ಪರಿಣಾಮಗಳು ಆಗುತ್ತವೆ, ಎದೆನೋವು ಬರುತ್ತದೆ, ಲಸಿಕೆ ಪಡೆದ ನಂತರ ಒಂದು ತಿಂಗಳ ಕಾಲ ಮದ್ಯ ಸೇವಿಸಬಾರದು, ಮುಂದೆ ಮಕ್ಕಳಾಗುವುದಿಲ್ಲ.... ಹೀಗೆ ತಪ್ಪು ತಿಳಿವಳಿಕೆಗಳ ಪಟ್ಟಿ ಬೆಳೆಯುತ್ತದೆ.

8ನೇ ಪುಟ ನೋಡಿ



ಪುರಾಣಿ ಪೋಡಿನ ಸೋಲಿಗರನ್ನು ಲಸಿಕೆ ಹಾಕಿಸಿಕೊಳ್ಳಲು ಮನವೊಲಿಸುವುದಕ್ಕಾಗಿ ಶಾಸಕ ಎನ್.ಮಹೇಶ್, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಸುರೇಶ್ ಕುಮಾರ್ ಅವರು ಸೋಲಿಗರ ಮನೆಗಳತ್ತ ಹೆಜ್ಜೆ ಹಾಕಬೇಕಾಯಿತು

ಸಚಿವರು ಬರುವ ಮುನ್ನವೇ ಕಾಲ್ಕಿತ್ತ ಸೋಲಿಗರು!

ಚಾಮರಾಜನಗರ: ಯಳಂದೂರು ತಾಲ್ಲೂಕಿನ ಬಿಳಿಗಿರಿರಂಗನಬೆಟ್ಟ ವ್ಯಾಪ್ತಿಯ ಪುರಾಣಿ ಪೋಡಿಯ ಜನರಿಗೆ, ಜೂನ್ 18ರಂದು ಲಸಿಕೆ ನೀಡುವ ಕಾರ್ಯಕ್ರಮ ನಿಗದಿಯಾಗಿತ್ತು. ಜಿಲ್ಲಾ ಉಸ್ತುವಾರಿ ಸಚಿವ ಎಸ್. ಸುರೇಶ್ ಕುಮಾರ್, ಕೊಳ್ಳೇಗಾಲ ಶಾಸಕ ಎನ್. ಮಹೇಶ್ ಅವರೊಂದಿಗೆ ಆರೋಗ್ಯಾಧಿಕಾರಿಗಳು ಸ್ಥಳಕ್ಕೆ ತೆರಳಿದಾಗ, ಹಾಡಿಯ ಗಂಡಸರು ಕಾಡಿಗೆ ಕಾಲ್ಕಿತ್ತಿದ್ದರು. ಮಹಿಳೆಯರು ಮನೆಯೊಳಗೆ ಕುಳಿತು ಬಾಗಿಲು ಹಾಕಿಕೊಂಡಿದ್ದರು!

ಕೋವಿಡ್ ಲಸಿಕೆಯ ಬಗ್ಗೆ ಜಿಲ್ಲೆಯ ಆದಿವಾಸಿಗಳಿಗೆ (ಸೋಲಿಗರು, ಜೇನು ಕುರುಬರು, ಕಾಡು ಕುರುಬರು), ಅದೆಷ್ಟು ಆತಂಕ– ಅಪನಂಬಿಕೆ ಇದೆ ಎನ್ನುವುದಕ್ಕೆ ಇದೊಂದು ನಿದರ್ಶನ.

ಲಸಿಕೆ ಬಗ್ಗೆ ಅವರಲ್ಲಿರುವ ಭಯ ನಿವಾರಣೆಗಾಗಿ ಆರೋಗ್ಯ ಇಲಾಖೆಯ ಸಿಬ್ಬಂದಿಯು ಪಂಚಾಯಿತಿಯ ಮೂಲಕ, ಸೋಲಿಗ ಮುಖಂಡರ ನೆರವಿನೊಂದಿಗೆ ಜಾಗೃತಿ ಮೂಡಿಸಲು ಯತ್ನಿಸಿದ್ದರು.

8ನೇ ಪುಟ ನೋಡಿ

ಒಳನೋಟ

ಮೌಢ್ಯಕ್ಕೂ ಬೇಕು ಲಸಿಕೆ

ಪ್ರತಿಕ್ರಿಯಿಸಿ: 9606038256 feedback@prajavani.co.in

ಲಸಿಕೆ ಬಗ್ಗೆ ಇವರಿಗೆ ವಿಶ್ವಾಸವಿಲ್ಲ. ಕಾಡಿನಲ್ಲಿರುವ ತಮ್ಮ ಆಹಾರ ಪದ್ಧತಿ ಚೆನ್ನಾಗಿದ್ದು, ಯಾವ ಸೋಂಕೂ ಬರದು ಎಂಬ ಅಭಿಪ್ರಾಯವಿದೆ

ಸಿ. ಮಾದೇಗೌಡ, ಸೋಲಿಗ ಮುಖಂಡ

ಅಂಕಿ-ಅಂಶಗಳು

95 ಕೋಟಿ ಜನರು – ವರ್ಷಾಂತ್ಯದೊಳಗೆ ಲಸಿಕೆ ಹಾಕಿಸಲು ನಿರ್ಧರಿಸಿದ ಗುರಿ

27 ಕೋಟಿ – ಈವರೆಗೆ ಲಸಿಕೆ ಹಾಕಿಸಿಕೊಂಡವರ ಸಂಖ್ಯೆ

5.03 ಕೋಟಿ – ಎರಡೂ ಡೋಸ್ ಲಸಿಕೆ ಹಾಕಿಸಿಕೊಂಡವರ ಸಂಖ್ಯೆ

22 ಕೋಟಿ – ಮೊದಲ ಡೋಸ್ ಮಾತ್ರ ಹಾಕಿಸಿಕೊಂಡವರು

ಆಧಾರ್ ಕಾರ್ಡ್ ಇಲ್ಲ

ಲಸಿಕೆ ಹಾಕಿಸಿಕೊಳ್ಳಲು ಯಾವುದಾದರೂ ಗುರುತಿನ ಚೀಟಿ ಕಡ್ಡಾಯ. ವೇಷಗಾರರು, ಹಾವಾಡಿಗರು, ಡಂಬಾರರು, ಜೋಗ್ಯಾರರು– ಇಂಥ ಅಲೆಮಾರಿ ಸಮುದಾಯದವರಲ್ಲಿ ಆಧಾರ್ ಕಾರ್ಡ್ ಅಥವಾ ಯಾವುದೇ ಗುರುತಿನ ಚೀಟಿ ಇಲ್ಲ. ಆದ್ದರಿಂದ, ಇಚ್ಛೆ ಇದ್ದರೂ ಲಸಿಕೆ ಪಡೆಯಲು ಸಾಧ್ಯವಾಗುತ್ತಿಲ್ಲ.

'ಸಿಗಂದೂರು ಬಳಿಯ ಕಳಸವಳ್ಳಿ ಕ್ಯಾಂಪ್‌ನಲ್ಲಿ ಸುಮಾರು 20–22 ಅಲೆಮಾರಿ ಕುಟುಂಬಗಳಿವೆ. ಅವರಲ್ಲಿ ಯಾವುದೇ ಗುರುತಿನ ಚೀಟಿ ಇಲ್ಲ. ನಾವು ಎಷ್ಟು ಹೇಳಿದರೂ ಅವರು ಮಾಡಿಸಿಕೊಳ್ಳುತ್ತಿಲ್ಲ. ಗುರುತಿನ ಚೀಟಿ ಇದ್ದರೆ ಮಾತ್ರ ಲಸಿಕೆ ಹಾಕಬೇಕು. ಇಂಥ ಪರಿಸ್ಥಿತಿಯಲ್ಲಿ ಏನು ಮಾಡುವುದು ಎನ್ನುತ್ತಾರೆ' ಸಾಗರ ತಾಲ್ಲೂಕಿನ, ತುಮರಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಕೃಪಾ ಎಚ್.ವಿ.

ಕೊಡಗು ಜಿಲ್ಲೆಯ ಕಾಫಿ ತೋಟದಲ್ಲಿ ದುಡಿಯುತ್ತಿರುವ ಹೊರರಾಜ್ಯ ಹಾಗೂ ಜಿಲ್ಲೆಯ ಕಾರ್ಮಿಕರಲ್ಲಿ ಆಧಾರ್ ಕಾರ್ಡ್ ಇಲ್ಲ. ಬೇರೆ ಗುರುತಿನ ಚೀಟಿ ಕೊಟ್ಟು ವೆಬ್ ಪೋರ್ಟಲ್‌ನಲ್ಲಿ ನೋಂದಣಿ ಮಾಡಿಕೊಂಡು ಲಸಿಕೆ ಪಡೆಯುವ ಅವಕಾಶ ಇದೆ. ಆದರೆ, ಇವರು ಉತ್ಸಾಹ ತೋರುತ್ತಿಲ್ಲ.

ಇನ್ನಷ್ಟು ಸುದ್ದಿಗಳು 8

ಅರ್ಧ ನಾಡು ನಿರಾಳ

ಮೈಸೂರಿನಲ್ಲಷ್ಟೇ ಕಠಿಣ ನಿರ್ಬಂಧ ಮುಂದುವರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಂದು ವಾರದ ಅವಧಿಯಲ್ಲಿ ಸರಾಸರಿ, ಶೇಕಡ 5ಕ್ಕಿಂತ ಕಡಿಮೆ ಕೋವಿಡ್ ದೃಢ ಪ್ರಮಾಣ ದಾಖಲಾಗಿರುವ 16 ಜಿಲ್ಲೆಗಳಲ್ಲಿ ಸೋಮವಾರದಿಂದ ಹಗಲಿನ ವೇಳೆ ಲಾಕ್‌ಡೌನ್ ಸಂಪೂರ್ಣ ತೆರವಾಗಲಿದೆ.

ಕೋವಿಡ್ ದೃಢಪ್ರಮಾಣ ದರ ಶೇ 5ರಿಂದ ಶೇ 10ರಷ್ಟು ಇರುವ 14 ಜಿಲ್ಲೆಗಳಲ್ಲಿ ಮಧ್ಯಾಹ್ನ 2ರವರೆಗೂ ಲಾಕ್‌ಡೌನ್ ಸಡಿಲಿಕೆ ಆಗಲಿದ್ದು, ಶೇ 10ಕ್ಕಿಂತ ಹೆಚ್ಚಿನ ದೃಢಪ್ರಮಾಣ ದರ ಇರುವ ಮೈಸೂರು ಜಿಲ್ಲೆಯಲ್ಲಿ ಮಾತ್ರ ಕಠಿಣ ನಿರ್ಬಂಧ ಯಥಾಸ್ಥಿತಿಯಲ್ಲೇ ಮುಂದುವರಿಯಲಿದೆ.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಮ್ಮ ಗೃಹ ಕಚೇರಿ ಕೃಷ್ಣಾದಲ್ಲಿ ಸಚಿವರು ಮತ್ತು ಹಿರಿಯ ಅಧಿಕಾರಿಗಳೊಂದಿಗೆ ಶನಿವಾರ ಸಂಜೆ ಸಭೆ ನಡೆಸಿ ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಸಲಹೆಗಳ ಕುರಿತು ಚರ್ಚಿಸಿದರು. ಬಳಿಕ ಎರಡನೇ ಹಂತದ ಲಾಕ್‌ಡೌನ್ ಸಡಿಲಿಕೆ ತೀರ್ಮಾನಗಳನ್ನು ಪ್ರಕಟಿಸಿದರು. ಸೋಮವಾರ(ಜೂ.21) ಬೆಳಿಗ್ಗೆಯಿಂದ ಈ ಬದಲಾವಣೆಗಳು ಜಾರಿಗೆ ಬರಲಿವೆ.

ಯಾವುದೆಲ್ಲ ನಿರ್ಬಂಧ?: ರಾಜ್ಯದಾದ್ಯಂತ ಬಾರ್ ಅಂಡ್ ರೆಸ್ಟೋರೆಂಟ್‌ಗಳಲ್ಲಿ ಕುಳಿತು ಮದ್ಯ ಸೇವನೆಗೆ ಅವಕಾಶ ಇಲ್ಲ. ಪಬ್, ಈಜುಕೊಳಗಳನ್ನು ತೆರೆಯುವಂತಿಲ್ಲ. ಸಭೆ, ಸಮಾರಂಭ ಮತ್ತು ರಾಜಕೀಯ ಕಾರ್ಯಕ್ರಮಗಳನ್ನು ನಿರ್ಬಂಧಿಸಲಾಗಿದೆ. ಪೂಜಾ ಸ್ಥಳಗಳಿಗೆ ಸಾರ್ವಜನಿಕರ ಭೇಟಿಗೆ ಅವಕಾಶವಿಲ್ಲ. ಶಿಕ್ಷಣ ಸಂಸ್ಥೆಗಳು, ಚಿತ್ರಮಂದಿರಗಳು, ಶಾಪಿಂಗ್ ಮಾಲ್‌ಗಳು, ಮನರಂಜನಾ ಪಾರ್ಕ್‌ಗಳು, ಹವಾನಿಯಂತ್ರಿತ ಶಾಪಿಂಗ್ ಕಾಂಪ್ಲೆಕ್ಸ್‌ಗಳ ಮೇಲಿನ ನಿರ್ಬಂಧ ಮುಂದುವರಿಯಲಿದೆ ಎಂದು ಯಡಿಯೂರಪ್ಪ ತಿಳಿಸಿದರು.

ರಾಜ್ಯದಾದ್ಯಂತ ಶೇ 50ರಷ್ಟು ಪ್ರಯಾಣಿಕರ ಸಂಖ್ಯೆಯನ್ನು ಮಿತಿಗೊಳಿಸಿಕೊಂಡು ಬಸ್ ಹಾಗೂ ಬೆಂಗಳೂರಿನಲ್ಲಿ ಮೆಟ್ರೊ ಸಂಚಾರಕ್ಕೆ ಅನುಮತಿ ನೀಡಲಾಗಿದೆ ಎಂದರು.

ರಾತ್ರಿ, ವಾರಾಂತ್ಯ ಕರ್ಫ್ಯೂ: ರಾಜ್ಯದ ಎಲ್ಲೆಡೆ ಪ್ರತಿ ದಿನ ರಾತ್ರಿ 7ರಿಂದ ಬೆಳಿಗ್ಗೆ 5ರವರೆಗೆ ರಾತ್ರಿ ಕರ್ಫ್ಯೂ ಮತ್ತು ಶುಕ್ರವಾರ ರಾತ್ರಿ 7ರಿಂದ ಸೋಮವಾರ ಬೆಳಿಗ್ಗೆ 5ರವರೆಗೆ ವಾರಾಂತ್ಯದ ಕರ್ಫ್ಯೂ ಮುಂದುವರಿಯಲಿದೆ ಎಂದು ತಿಳಿಸಿದರು.

16 ಜಿಲ್ಲೆ, ಬಿಬಿಎಂಪಿ ವ್ಯಾಪ್ತಿಯಲ್ಲಿ ಸಡಿಲಿಕೆ

- ಸಂಜೆ 5ರವರೆಗೆ ಎಲ್ಲ ಅಂಗಡಿಗಳನ್ನೂ ತೆರೆಯಬಹುದು.
- ಹವಾನಿಯಂತ್ರಣ ವ್ಯವಸ್ಥೆ ಇಲ್ಲದೆ ಹೋಟೆಲ್, ಕ್ಲಬ್ ಮತ್ತು ರೆಸ್ಟೋರೆಂಟ್‌ಗಳಲ್ಲಿ ಶೇ 50ರಷ್ಟು ಗ್ರಾಹಕರ ಮಿತಿಯಲ್ಲಿ ಸಂಜೆ 5ರವರೆಗೂ ಕುಳಿತು ಆಹಾರ ಸೇವಿಸಬಹುದು.
- ಹೊರಾಂಗಣ ಚಿತ್ರೀಕರಣಕ್ಕೆ ಅವಕಾಶ.
- ಶೇ 50ರಷ್ಟು ಪ್ರಯಾಣಿಕರ ಮಿತಿಯಲ್ಲಿ ಬಸ್, ಬೆಂಗಳೂರಿನಲ್ಲಿ ಮೆಟ್ರೊ ರೈಲು ಸಂಚಾರ.
- ವೀಕ್ಷಕರಿಲ್ಲದೆ ಹೊರಾಂಗಣ ಕ್ರೀಡಾ ಚಟುವಟಿಕೆಗೆ ಅನುಮತಿ.
- ಶೇ 50ರಷ್ಟು ಸಿಬ್ಬಂದಿಯೊಂದಿಗೆ ಸರ್ಕಾರಿ, ಖಾಸಗಿ ಕಚೇರಿಗಳ ಕಾರ್ಯ ನಿರ್ವಹಣೆ.
- ಲಾಡ್ಜ್ ಮತ್ತು ರೆಸಾರ್ಟ್‌ಗಳಲ್ಲಿ ಶೇ 50ರಷ್ಟು ಗ್ರಾಹಕರು ತಂಗಬಹುದು.
- ಹವಾ ನಿಯಂತ್ರಣ ವ್ಯವಸ್ಥೆ ಇಲ್ಲದೆ ಜಿಮ್‌ಗಳಲ್ಲಿ ಸಾಮರ್ಥ್ಯದ ಶೇ 50ರಷ್ಟು ಮಂದಿಗೆ ಅವಕಾಶ.

ಯಾವ ಜಿಲ್ಲೆಗಳು: ಬೆಂಗಳೂರು ನಗರ, ಉತ್ತರ ಕನ್ನಡ, ಬೆಳಗಾವಿ, ಮಂಡ್ಯ, ಕೊಪ್ಪಳ, ಚಿಕ್ಕಬಳ್ಳಾಪುರ, ತುಮಕೂರು, ಕೋಲಾರ, ಗದಗ, ರಾಯಚೂರು, ಬಾಗಲಕೋಟೆ, ಕಲಬುರ್ಗಿ, ಹಾವೇರಿ, ರಾಮನಗರ, ಯಾದಗಿರಿ, ಬೀದರ್ ಹಾಗೂ ಬಿಬಿಎಂಪಿ ವ್ಯಾಪ್ತಿ ಪ್ರದೇಶ

14 ಜಿಲ್ಲೆಗಳಲ್ಲಿ ಸಡಿಲಿಕೆ ಏನೇನು?

- ಅಗತ್ಯ ವಸ್ತುಗಳ ಮಾರಾಟದ ಅಂಗಡಿಗಳು ಬೆಳಿಗ್ಗೆ 6ರಿಂದ ಮಧ್ಯಾಹ್ನ 2ರವರೆಗೆ ವಹಿವಾಟು.
- ಬೀದಿಬದಿ ವ್ಯಾಪಾರಿಗಳು ಬೆಳಿಗ್ಗೆ 6ರಿಂದ ಮಧ್ಯಾಹ್ನದ 2ರವರೆಗೆ ಮಾರಾಟ ಮಾಡಬಹುದು.
- ಆಟೊ ಮತ್ತು ಟ್ಯಾಕ್ಸಿಗಳಲ್ಲಿ ಇಬ್ಬರು ಪ್ರಯಾಣಿಕರಿಗೆ ಅವಕಾಶ.
- ಹೋಟೆಲ್, ಮದ್ಯದಂಗಡಿಗಳಲ್ಲಿ ಪಾರ್ಸೆಲ್‌ಗೆ ಮಾತ್ರ ಅವಕಾಶ.
- ಬೆಳಿಗ್ಗೆ 5ರಿಂದ 10 ಗಂಟೆಯವರೆಗೆ ಉದ್ಯಾನಗಳಲ್ಲಿ ವಾಯುವಿಹಾರ ಮಾಡಬಹುದು.
- ಎಲ್ಲ ಕಾರ್ಖಾನೆಗಳಲ್ಲಿ ಶೇ 50ರಷ್ಟು ಸಿಬ್ಬಂದಿ ಮತ್ತು ಗಾರ್ಮೆಂಟ್ಸ್‌ಗಳಲ್ಲಿ ಶೇ 30ರಷ್ಟು ಹಾಜರಾತಿಯೊಂದಿಗೆ ಕಾರ್ಯನಿರ್ವಹಿಸಬಹುದು.
- ಕಟ್ಟಡ ಮತ್ತು ಇತರ ನಿರ್ಮಾಣ ಕಾಮಗಾರಿ ನಡೆಸಲು ಅವಕಾಶ. ಅದಕ್ಕೆ ಪೂರಕವಾಗಿ ಉಕ್ಕು, ಸಿಮೆಂಟ್ ಮತ್ತಿತರ ಸಾಮಗ್ರಿಗಳನ್ನು ಮಾರಾಟ ಮಾಡಬಹುದು.

ಯಾವ ಜಿಲ್ಲೆಗಳು: ಹಾಸನ, ಉಡುಪಿ, ದಕ್ಷಿಣ ಕನ್ನಡ, ಶಿವಮೊಗ್ಗ, ಚಾಮರಾಜನಗರ, ಚಿಕ್ಕಮಗಳೂರು, ಬೆಂಗಳೂರು ಗ್ರಾಮಾಂತರ, ದಾವಣಗೆರೆ, ಕೊಡಗು, ಧಾರವಾಡ, ಬಳ್ಳಾರಿ, ವಿಜಯನಗರ, ಚಿತ್ರದುರ್ಗ, ವಿಜಯಪುರ

ರಾಜ್ಯ ಕೋವಿಡ್ ಅಂಕಿ–ಅಂಶ

28,01,936 ▲	ಒಟ್ಟು ಸೋಂಕಿತರು (27,96,121 ನಿನ್ನೆಯ ವಿವರ)
1,30,872 ▼	ಸಕ್ರಿಯ ಪ್ರಕರಣಗಳು
26,37,279 ▲	ಗುಣಮುಖರಾದವರು
33,763 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	5,815	▲
ಗುಣಮುಖ	11,832	▼
ಸಾವು	161	▼

ಆಧಾರ: ರಾಜ್ಯ ಆರೋಗ್ಯ ಇಲಾಖೆ ಪ್ರಜಾವಾಣಿ ಗ್ರಾಫಿಕ್ಸ್

ಒಳ ಪುಟಗಳು



ಮಿಲ್ಖಾಗೆ ಭಾರತರತ್ನ ಸಲ್ಲಬೇಕಿತ್ತು: ಕೆನೆತ್ 14

'₹2 ಸಾವಿರ ಕೋಟಿ ಕಿಕ್ ಬ್ಯಾಕ್: ಜಂಟಿ ಸದನ ಸಮಿತಿ ರಚಿಸಲಿ' 9

ಇಂದಿನ ಪಾಡ್‌ಕಾಸ್ಟ್ ವಿಶೇಷ

ವೈದ್ಯ ಮಿತ್ರ ಕಥಾ ಸಾಗರ

ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ

Prajavani.net/podcast

ಚಿನಕುರಳಿ

ಪ್ರಕಾಶ್ ಶೆಟ್ಟಿ

ಬಿಎಸ್‌ವೈ ದೆಹಲಿಗೆ ?

ಬೆಂಗಳೂರು: ರಾಜ್ಯ ಸರ್ಕಾರ ಹಾಗೂ ಬಿಜೆಪಿ ರಾಜ್ಯ ಘಟಕದಲ್ಲಿನ ಗೊಂದಲ– ನಾಯಕರಲ್ಲಿ ಎದ್ದಿರುವ ಅಸಮಾಧಾನದ ಬೆನ್ನಲ್ಲೇ, ಮುಂದಿನ ವಾರ ನವದೆಹಲಿಗೆ ಬರುವಂತೆ ಮುಖ್ಯಮಂತ್ರಿ ಯಡಿಯೂರಪ್ಪ ಅವರಿಗೆ ಪಕ್ಷದ ವರಿಷ್ಠರಿಂದ ಸೂಚನೆ ಬಂದಿದೆ ಎಂಬ ವದಂತಿ ಹಬ್ಬಿದೆ.

ಪಕ್ಷದಲ್ಲಿನ ರಾಜ್ಯದ ವಿದ್ಯಮಾನಗಳ ಬಗ್ಗೆ ವರದಿ ಪಡೆಯಲು ಉಸ್ತುವಾರಿ ಅರುಣ್ ಸಿಂಗ್ ಅವರನ್ನು ವರಿಷ್ಠರು ಕಳಿಸಿದ್ದರು. 'ಯಾವುದೇ ಭಿನ್ನಮತ ಇಲ್ಲ, ಅಶಿಸ್ತು ಸಹಿಸುವುದಿಲ್ಲ. ನಾಯಕತ್ವ ಬದಲಾವಣೆಯ ಪ್ರಶ್ನೆಯೇ ಇಲ್ಲ' ಎಂದು ಸಿಂಗ್ ಪದೇ ಪದೇ ಹೇಳಿದ್ದರು.

'ರಾಜ್ಯದಲ್ಲಿ ಸಿಂಗ್ ವಾಸ್ತವ್ಯ ಹೂಡಿದ್ದಾಗಲೇ ಸುದ್ದಿಗೋಷ್ಠಿ ನಡೆಸಿದ್ದ ಎಚ್. ವಿಶ್ವನಾಥ್, ಮುಖ್ಯಮಂತ್ರಿ ಕುಟುಂಬದ ವಿರುದ್ಧ ಭ್ರಷ್ಟಾಚಾರದ ಆರೋಪ ಮಾಡಿದ್ದರು. ಮತ್ತೊಬ್ಬ ಶಾಸಕ ಅರವಿಂದ ಬೆಲ್ಲದ ತಮ್ಮ ದೂರವಾಣಿ ಕದ್ದಾಲಿಕೆ ಆಗುತ್ತಿದೆ ಎಂದಿದ್ದರು. ಬಹುತೇಕ ಶಾಸಕರು ಅರುಣ್ ಸಿಂಗ್ ಭೇಟಿ ಮಾಡುವ ಗೋಜಿಗೆ ಹೋಗಿಲ್ಲ. ಪಕ್ಷದಲ್ಲಿ ಎಲ್ಲವೂ ಸರಿ ಇಲ್ಲ ಎಂಬುದಕ್ಕೆ ಇವೇ ಸಾಕ್ಷಿಯಾಗಿವೆ. ಈ ಎಲ್ಲ ಬೆಳವಣಿಗೆಗಳ ಮಾಹಿತಿ ಪಡೆದಿರುವ ವರಿಷ್ಠರು ನವದೆಹಲಿಗೆ ಬರುವಂತೆ ಯಡಿಯೂರಪ್ಪ ಅವರಿಗೆ ಸೂಚಿಸಿದ್ದಾರೆ' ಎಂಬ ಮಾತುಗಳು ಬಿಜೆಪಿಯಲ್ಲಿ ಹರಿದಾಡುತ್ತಿವೆ. ಯಡಿಯೂರಪ್ಪ ಬಣ ಹಾಗೂ ಅವರ ವಿರೋಧಿ ಬಣ ಇದನ್ನು ಖಚಿತ ಪಡಿಸಿಲ್ಲ.

ನಡ್ಡಾ ಜತೆ ಬಿಎಸ್‌ವೈ ಸಂವಾದ: ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ಭಾನುವಾರ (ಜೂ.20) ಬೆಳಿಗ್ಗೆ ನಡೆಸಲಿರುವ ವಿಡಿಯೊ ಸಂವಾದದಲ್ಲಿ ಯಡಿಯೂರಪ್ಪ ಪಾಲ್ಗೊಳ್ಳಲಿದ್ದಾರೆ.

ಕೋವಿಡ್ ನಿರ್ವಹಣೆ, ನಿಗ್ರಹದ ವಿಷಯದಲ್ಲಿ ಸರ್ಕಾರ ಕೈಗೊಂಡ ಕ್ರಮಗಳು, ಪರಿಹಾರದ ಪ್ಯಾಕೇಜ್‌ಗಳ ಕುರಿತು ಬಿಜೆಪಿ ಅಧಿಕಾರದಲ್ಲಿರುವ ರಾಜ್ಯಗಳ ಮುಖ್ಯಮಂತ್ರಿಗಳ ಜತೆ ನಡ್ಡಾ ಸಂವಾದ ನಡೆಸುತ್ತಿದ್ದು, ಅದರ ಭಾಗವಾಗಿ ಸಂವಾದ ನಡೆಯಲಿದೆ ಎಂದು ಮೂಲಗಳು ಹೇಳಿವೆ.

ನಿಮ್ಹಾನ್ಸ್‌ಗೆ ಡಾ. ಪ್ರತಿಮಾ ಮೂರ್ತಿ ನಿರ್ದೇಶಕಿ

ಬೆಂಗಳೂರು: ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಯ (ನಿಮ್ಹಾನ್ಸ್) ನಿರ್ದೇಶಕರನ್ನಾಗಿ ಡಾ. ಪ್ರತಿಮಾ ಮೂರ್ತಿ ಅವರನ್ನು ಕೇಂದ್ರ ಆರೋಗ್ಯ ಸಚಿವಾಲಯ ನೇಮಕ ಮಾಡಿದೆ.

ಮನೋವೈದ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿ ಅವರು ಕಾರ್ಯನಿರ್ವಹಿಸುತ್ತಿದ್ದರು. ನಿರ್ದೇಶಕರ ಅವಧಿ 5 ವರ್ಷ ಇರಲಿದ್ದು, ಪ್ರತಿಮಾ ಅವರು 2026ರ ಮಾರ್ಚ್‌ನಲ್ಲಿ ನಿವೃತ್ತಿ ಹೊಂದಲಿದ್ದಾರೆ. ಕಳೆದ ವರ್ಷ ಅ.4ರಂದು ಡಾ.ಬಿ.ಎನ್. ಗಂಗಾಧರ್ ನಿವೃತ್ತರಾದ ಬಳಿಕ ಸಂಸ್ಥೆಗೆ ಪೂರ್ಣಾವಧಿ ನಿರ್ದೇಶಕರು ಇರಲಿಲ್ಲ. ಸಂಸ್ಥೆಯ ಸಾಂಕ್ರಾಮಿಕ ರೋಗಶಾಸ್ತ್ರ ವಿಭಾಗದ ಹಿರಿಯ ಪ್ರಾಧ್ಯಾಪಕ ಡಾ.ಜಿ. ಗುರುರಾಜ್ ಅವರನ್ನು ಹಂಗಾಮಿ ನಿರ್ದೇಶಕರನ್ನಾಗಿ ನೇಮಕ ಮಾಡಲಾಗಿತ್ತು.

ಕೇಂದ್ರ ಆರೋಗ್ಯ ಸಚಿವಾಲಯವು ದೆಹಲಿಯ ಏಮ್ಸ್‌ನ (ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ) ನರವಿಜ್ಞಾನ ವಿಭಾಗದ ಮುಖ್ಯಸ್ಥರಾದ ಪ್ರೊ.ಎಂ.ವಿ. ಪದ್ಮಾ ಶ್ರೀವಾಸ್ತವ ಅವರನ್ನು ಪೂರ್ಣಾವಧಿ ನಿರ್ದೇಶಕರನ್ನಾಗಿ ನೇಮಿಸಿತ್ತು. ಅವರು ಅಧಿಕಾರ ವಹಿಸಿಕೊಂಡಿರಲಿಲ್ಲ. ಹೀಗಾಗಿ, ಗುರುರಾಜ್ ಅವರೇ ನಿರ್ದೇಶಕ ಹುದ್ದೆಯಲ್ಲಿ ಮುಂದುವರೆದಿದ್ದರು. ಕೆಲ ದಿನಗಳ ಹಿಂದೆ ಅವರು ನಿವೃತ್ತರಾಗಿದ್ದರಿಂದ ಹಂಗಾಮಿ ನಿರ್ದೇಶಕರ ಸ್ಥಾನಕ್ಕೆ ಡಾ. ಸತೀಶ್ ಚಂದ್ರ ಗಿರಿಮಾಜಿ ಅವರನ್ನು ನೇಮಕ ಮಾಡಲಾಗಿತ್ತು.

ರಾಜ್ಯದಲ್ಲಿ ಮುಂದುವರಿದ ಮಳೆಯ ಅಬ್ಬರ

ಜಲಾಶಯಗಳಲ್ಲಿ ಹೆಚ್ಚಿದ ಒಳಹರಿವು

ಪ್ರಜಾವಾಣಿ ವಾರ್ತೆ

ಧಾರವಾಡ ತಾಲ್ಲೂಕಿನ ಹಿರೇಕೆರೆ ಭರ್ತಿಯಾಗಿದ್ದು, ಕೋಡಿ ಹರಿಯಿತು

ಬೆಂಗಳೂರು: ರಾಜ್ಯದಲ್ಲಿ ಮುಂಗಾರು ಮಳೆಯ ಅಬ್ಬರ ಮುಂದುವರಿದಿದ್ದು, ನದಿಗಳಲ್ಲಿ ನೀರಿನ ಮಟ್ಟ ಹೆಚ್ಚಾಗಿದೆ. ಕೆಲವೆಡೆ ನದಿಗಳು ಅಪಾಯದ ಮಟ್ಟ ತಲುಪಿವೆ. ತುಂಗಭದ್ರಾ, ಭದ್ರಾ, ಕಬಿನಿ, ಆಲಮಟ್ಟಿ ಸೇರಿದಂತೆ ಪ್ರಮುಖ ಜಲಾಶಯಗಳಲ್ಲಿ ನೀರಿನ ಒಳಹರಿವು ಹೆಚ್ಚಾಗಿದೆ.

ನೆರೆಯ ಮಹಾರಾಷ್ಟ್ರ ಮತ್ತು ಬೆಳಗಾವಿಯ ಚಿಕ್ಕೋಡಿ ತಾಲ್ಲೂಕಿನ ಜಲಾನಯನ ಪ್ರದೇಶಗಳಲ್ಲಿ ಮಳೆ ಮುಂದುವರಿದಿದ್ದು, ಚಿಕ್ಕೋಡಿಯ ಕಲ್ಲೋಳ ಬಳಿ ಕೃಷ್ಣಾ ನದಿಗೆ 1.15 ಲಕ್ಷ ಕ್ಯುಸೆಕ್ ನೀರು ಶನಿವಾರ ಹರಿದು ಬಂದಿದೆ. ಘಟಪ್ರಭಾ ಜಲಾಶಯದ ನೀರಿನ ಮಟ್ಟ ಒಂದೇ ದಿನದಲ್ಲಿ 10 ಅಡಿ ಹೆಚ್ಚಾಗಿದೆ.

ನಿಪ್ಪಾಣಿ ತಾಲ್ಲೂಕಿನ ಸಿದ್ನಾಳ ಹತ್ತಿರ ವೇದಗಂಗಾ ನದಿಯಲ್ಲಿ ಸಿಲುಕಿದ್ದ ವ್ಯಕ್ತಿಯನ್ನು ಎನ್‌ಡಿಆರ್‌ಎಫ್ ತಂಡ ರಕ್ಷಿಸಿದೆ. ಸವದತ್ತಿ ತಾಲ್ಲೂಕಿನ ಯಕ್ಕುಂಡಿಯಲ್ಲಿ ಮೀನುಗಾರಿಕೆಗೆ ಹೋಗಿದ್ದಾಗ ತೆಪ್ಪ ಮಗುಚಿ ಶುಕ್ರವಾರ ನಾಪತ್ತೆಯಾಗಿದ್ದ ಕುಸುಮಾನಾ ಅತ್ತಾರ (52) ಎನ್ನುವವರ ಮೃತ ದೇಹ ಶನಿವಾರ ಪತ್ತೆಯಾಯಿತು. ಬೆಳಗಾವಿ ತಾಲ್ಲೂಕಿನ ಕಾಕತಿ ಬಳಿ ಮಾರ್ಕಂಡೇಯ ನದಿ ಪ್ರವಾಹದಲ್ಲಿ ಕೊಚ್ಚಿ ಹೋಗಿರುವ ವ್ಯಕ್ತಿಗಾಗಿ ಶೋಧ ಕಾರ್ಯ ಮುಂದುವರಿದಿದೆ.

ಕೃಷ್ಣಾ ಮತ್ತು ಉಪ ನದಿಗಳ ಹರಿವಿನಲ್ಲಿ ನಿರಂತರ ಏರಿಕೆ ಕಂಡುಬರುತ್ತಿದೆ. ದೂಧ್‌ಗಂಗಾ ನದಿಯಿಂದ 27,280 ಕ್ಯುಸೆಕ್ ಮತ್ತು ಮಹಾರಾಷ್ಟ್ರದ ರಾಜಾಪುರ ಬ್ಯಾರೇಜ್‌ನಿಂದ 88,500 ಕ್ಯುಸೆಕ್ ಸೇರಿದಂತೆ ಒಟ್ಟು 1,15,780 ಕ್ಯುಸೆಕ್ ನೀರು ಚಿಕ್ಕೋಡಿ ತಾಲ್ಲೂಕಿನ ಕಲ್ಲೋಳ ಬಳಿ ಕೃಷ್ಣೆಗೆ ಸೇರುತ್ತಿದೆ.

7ನೇ ಪುಟ ನೋಡಿ

ಸಿಂಘಾನಿಯಾ ಯೂನಿವರ್ಸಿಟಿ

(ಯುಜಿಸಿ ಆಕ್ಟ್, 1956ರ ಸೆಕ್ಷನ್ 2(ಎಫ್) ಅಡಿಯಲ್ಲಿ ಮಾನ್ಯತೆ ಪಡೆದಿದೆ)

ಪಚೇರಿ ಬಾರಿ, ಝುಂಝುನು, ರಾಜಸ್ಥಾನ (ಭಾರತ). ವೆಬ್‌ಸೈಟ್: www.singhaniauniversity.ac.in

ಧ್ಯೇಯ: ಸರ್ವರಿಗೂ ಶಿಕ್ಷಣ, ಆರೋಗ್ಯ ಆರೈಕೆ, ಉದ್ಯೋಗಾವಕಾಶ, ಭ್ರಷ್ಟಮುಕ್ತ, ಸ್ವಾಯುತ್ತ ಮತ್ತು ಬಹು ಶಿಸ್ತಿನ ಶಿಕ್ಷಣ ವ್ಯವಸ್ಥೆ

ಸಿಂಘಾನಿಯಾ ಯೂನಿವರ್ಸಿಟಿ ಪರಿಚಯಿಸುತ್ತಿದೆ

ಬಹು ಉದ್ಯೋಗಾವಕಾಶ, ವಿಭಿನ್ನ ಶಿಸ್ತುಗಳ ಮತ್ತು ವಿದ್ಯಾರ್ಥಿ ಕೇಂದ್ರಿತ ಆಯ್ಕೆ ಆಧಾರಿತ ಶಿಕ್ಷಣದ ಜೊತೆಗೆ ಏಕೀಕೃತ ವಿಶ್ವವಿದ್ಯಾಲಯ ಶಿಕ್ಷಣ ಮತ್ತು ಶಾಲಾ ಶಿಕ್ಷಣ

ಡ್ಯೂಯಲ್ ಡಿಗ್ರಿ ಮತ್ತು ನೂತನ ಶಿಕ್ಷಣ ನೀತಿ

- ಲೇಟರಲ್ ಎಂಟ್ರಿ: ವಿದೇಶದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಭಾರತದಲ್ಲಿ ತಮ್ಮ ಶಿಕ್ಷಣ ಪೂರ್ಣಗೊಳಿಸಿಕೊಳ್ಳಬಹುದು.
- ವೈದ್ಯಕೀಯ ವೃತ್ತಿನಿರತರು ಎಂಡಿ ಮತ್ತು ಎಂಎಸ್ ಗಳಲ್ಲಿ ಕ್ರೆಡಿಟ್ ಟ್ರಾನ್ಸ್‌ಫರ್ ಮೂಲಕ ಪ್ರವೇಶ ಪಡೆದುಕೊಳ್ಳಬಹುದು.
- ವಿದ್ಯಾರ್ಥಿಗಳು ಅರ್ಧ ಶುಲ್ಕ ಪಾವತಿಸಿ 2ನೇ ಪದವಿ/ಡಿಪ್ಲೋಮ ಕೋರ್ಸ್‌ಗಳಿಗೆ ಪ್ರವೇಶ ಪಡೆದುಕೊಳ್ಳಬಹುದು.

ಸಿಂಘಾನಿಯಾ ಯೂನಿವಸಿಟಿ ಆಸ್ಪತ್ರೆ ಮತ್ತು ಸಂಶೋಧನ ಕೇಂದ್ರ

ವೈದ್ಯಕೀಯ ಸಿಬ್ಬಂದಿ	ಸಂಬಂಧಿತ ಮತ್ತು ಆರೋಗ್ಯ ಆರೈಕೆ ವೃತ್ತಿನಿಪುಣರು
MBBS, MD (All Specialization), MS (All Specialization), D.Pharma, B.Pharma, M.Pharma, BAMS, BHMS, BDS, MDS, Diploma / PG Diploma in Healthcare Education, and other courses	B.Sc/M.Sc (Nursing), Medical Lab Technology (DMLT /BMLT), Radio Imaging Technology (DRIT / BRIT), Physiotherapy (BPT/MPT), Sonography, Dialysis Technician, X-Ray Technician

ಸಿಂಘಾನಿಯಾ ಯೂನಿವಸಿಟಿ ಸೆಕಂಡರಿ ಮತ್ತು ಸೀನಿಯರ್ ಸೆಕಂಡರಿ ಶಿಕ್ಷಣ ಮಂಡಳಿ

ಸೆಕಂಡರಿ/10ನೇ ಕ್ಲಾಸ್ — ಸೀನಿಯರ್ ಸೆಕಂಡರಿ/ಕ್ಲಾಸ್ 10 + 2/12ನೇ ಕ್ಲಾಸ್

ಬಹು ಶಿಕ್ಷಣ ಮತ್ತು ಬಹು ಉದ್ಯೋಗಾವಕಾಶ ಶಿಕ್ಷಣದ ಸಿಬ್ಬಂದಿ	ವೃತ್ತಿಪರ ಶಿಕ್ಷಣದ ಸಿಬ್ಬಂದಿ	ಸಂಶೋಧನಾ ಸಿಬ್ಬಂದಿ	ಸಾರ್ವಜನಿಕ ಮತ್ತು ಸರ್ಕಾರಿ ಕ್ಷೇತ್ರ ಶಿಕ್ಷಣದ ಸಿಬ್ಬಂದಿ
BA, MA, BSC, MSC, BCA, MCA, BBA, MBA, B.ED, M.ED, B.P.ED, M.P.ED, B.TECH, M.TECH,	LL.B/LL.M (HONS IN General practice, civil practice, criminal practice, litigation practice), Chartered Accountancy	PHD MPHIL and other courses	This department focus on the preparation for Public /Government sector jobs.

**ಸೂಚನೆ: ವಿದ್ಯಾರ್ಥಿಗಳು ತಮ್ಮ ಆಯ್ಕೆಯ ಡ್ಯೂಯಲ್ ಪದವಿಗಾಗಿ ಯಾವುದೇ ಎರಡು ಕೋರ್ಸ್‌ಗಳ ಕಾಂಬಿನೇಷನ್ ಆಯ್ದುಕೊಳ್ಳಬಹುದು.

ಅಧ್ಯಯನ ಮಾದರಿ: *ನೆರವು ಆಧಾರಿತ ಸ್ವಯಂ ಅಧ್ಯಯನ *ಸಮ್ಮಿಶ್ರ ಕಲಿಕೆ *ಸಾಂಪ್ರದಾಯಿಕ ಕಲಿಕಾ ಮಾದರಿ

ಎಲ್ಲಾ ಅಂಡರ್‌ಗ್ರಾಜುಯೇಟ್, ಪೋಸ್ಟ್ ಗ್ರಾಜುಯೇಟ್ ಮತ್ತು ಸಂಶೋಧನಾ ಕೋಸ್‌ಗಳು ಲಭ್ಯ. ವಿವರಗಳಿಗಾಗಿ ಯೂನಿವರ್ಸಿಟಿಯ ವೆಬ್‌ಸೈಟ್‌ಗೆ ಭೇಟಿ ಕೊಡಿ.

ನೇಮಕಾತಿ ಇವರುಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ (ನಿಮ್ಮ ಸಿ.ವಿ ರವಾನಿಸಿ – (Mail your CV at - hr@singhaniauniversity.ac.in)

- ಎಂಡಿ (ಜನರಲ್ ಮೆಡಿಸಿನ್/ಪೀಡಿಯಾಟ್ರಿಕ್ಸ್/ಆರ್ಥೋ/ರೇಡಿಯಾಲಜಿ & ಇತರೆ), ಎಂಎಸ್ (ಆಬ್ಸ್ & ಗೈನಾ) ಅಥವಾ ತತ್ಸಮಾನ
- ಜಾ. ರಜಿಸ್ಟ್ರಾರ್‌ಗೆ ವೃತ್ತಿನಿಪುಣರು (ಐಟಿ ಕೌಶಲ್ಯಗಳಲ್ಲಿ/ಸ್ಟ್ರಾಟಜಿ ಎಕ್ಸಿಕ್ಯೂಶನ್/ಆಡಳಿತಾತ್ಮಕ ಕಾರ್ಯಗಳಲ್ಲಿ ಪರಿಣಿತಿ)

ಕಾನೂನು ಅಭಿಪ್ರಾಯ – (ಸಾರ್ವಜನಿಕ ಹಿತಾಸಕ್ತಿಗಾಗಿ)

ಸಿಂಘಾನಿಯಾ ಯೂನಿವರ್ಸಿಟಿಯು, ಕಾನೂನಿನ ಅನ್ವಯ ಯುಜಿಸಿ ಆಕ್ಟ್‌ನ ಸೆಕ್ಷನ್ 2(ಎಫ್) ಅಡಿಯಲ್ಲಿ ಮಾನ್ಯತೆ ಪಡೆದಿರುವ ಸಂಸ್ಥೆಯಾಗಿದ್ದು, ಸದರಿ ಕಾಯ್ದೆಯು ಭಾರತದ ಸಂವಿಧಾನದ 7ನೇ ಅಧ್ಯಾಯದ 66ನೇ ಪ್ರವೇಶದ ಮೇರೆಗೆ ಸಂಸತ್‌ನಿಂದ ಹೊರಡಿಸಲಾದ ಒಂದು ಕೇಂದ್ರಿಯ ಕಾಯ್ದೆಯಾಗಿದೆ. ಯುಜಿಸಿ ಕಾಯ್ದೆ ಅಡಿಯಲ್ಲಿ ಮಾನ್ಯತೆ ಪಡೆದಿರುವ ವಿಶ್ವವಿದ್ಯಾಲಯಗಳು ಮಾತ್ರ ಡಿಪ್ಲೋಮಾ/ಪದವಿ ನೀಡಲು ಸಾಧ್ಯವಿರುತ್ತದೆ ಹೊರತು ಬೇರ್‍ಯಾರು ನೀಡಲಾಗುವುದಿಲ್ಲ. ಹೀಗಿರುವಾಗ ಸಿಂಘಾನಿಯಾ ಯೂನಿವರ್ಸಿಟಿ ನೀಡುವ ಪದವಿ/ಡಿಪ್ಲೋಮ ಕೋರ್ಸ್‌ಗಳಿಗೆ ಯುಜಿಸಿ ಕಾಯ್ದೆಯ ಸೆಕ್ಷನ್ 21 ಮತ್ತು 22ರ ಅಡಿಯಲ್ಲಿ ಮಾನ್ಯತೆ ಇರುತ್ತದೆ, ಅಂತೆಯೇ ಎನ್‌ಎಂಸಿ ಆಕ್ಟ್, ಫಾರ್ಮಸಿ ಆಕ್ಟ್, ಐಎನ್‌ಸಿ ಆಕ್ಟ್, ಎನ್‌ಸಿಟಿಇ ಆಕ್ಟ್, ಎಐಸಿಟಿಇ ಆಕ್ಟ್ ಮತ್ತು ಇನ್ನಿತರ ಆಕ್ಟ್‌ಗಳಿಗೆ ಸಂಬಂಧಿತ ವೃತ್ತಿಪರ ಪರಿಷತ್‌ಗಳ ಅಡಿಯಲ್ಲಿನ ಎಲ್ಲಾ ಉದ್ದೇಶಗಳಿಗೆ ಮತ್ತು ಧ್ಯೇಯಗಳಿಗೆ ಇವು ಮಾನ್ಯವಾಗಿರುತ್ತವೆ. ಸಿಂಘಾನಿಯಾ ಯೂನಿವರ್ಸಿಟಿಯು ಭಾರತದ ಸಂವಿಧಾನದ ಅಡಿಯಲ್ಲಿ ಸ್ಥಾಪಿತಗೊಂಡಿದೆ ಮತ್ತು ಮಾನ್ಯತೆ ಪಡೆದಿದೆ, ಹಾಗಾಗಿ, ಇದರ ಶಾಸನಬದ್ಧ ಸ್ಥಿತಿಗತಿಯು ಸಂವಿಧಾನಾತ್ಮಕ ನ್ಯಾಯಾಲಗಳು, ಚುನಾವಣಾ ಆಯೋಗ, ಸಿಎಜಿ, ರಾಜ್ಯ ಮತ್ತು ಕೇಂದ್ರ ಸರ್ಕಾರ ಇತ್ಯಾದಿಗಳಿಗೆ ಒಳಪಡುತ್ತದೆ ಮತ್ತು ಇದರ ಸ್ವಾಯುತ್ತತೆಗೆ ಭಾರತದ ಸಂವಿಧಾನದ ಅಧ್ಯಾಯ 7ರ ಪಟ್ಟಿ 1, ಪ್ರವೇಶ 44ರ ಅಡಿಯಲ್ಲಿ ಭದ್ರತೆ ಇರುತ್ತದೆ.

ಹೆಚ್ಚಿನ ಮಾಹಿತಿಗಾಗಿ, ನ್ಯಾಯಾಲಯದ ತೀರ್ಪುಗಳಿಗಾಗಿ ಮತ್ತು ಕಾನೂನು ಅಭಿಪ್ರಾಯಕ್ಕಾಗಿ ಯೂನಿವರ್ಸಿಟಿಯ ವೆಬ್‌ಸೈಟ್‌ನ್ನು ಪರಿಶೀಲಿಸಿರಿ ಮತ್ತು ಕಾನೂನು ಸಮಾಲೋಚನೆಗಾಗಿ, ಕಾನೂನು ಸಮಾಲೋಚನಾ ವಿಭಾಗ, ಸಿಂಘಾನಿಯಾ ಯೂನಿವರ್ಸಿಟಿ ಇವರಿಗೆ ಪತ್ರ ಬರೆಯಿರಿ (legal@singhaniauniversity.ac.in)

ಕೊಲ್ಯಾಬರೇಷನ್‌ಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ

ಆಸ್ಪತ್ರೆಗಳು/ವೈದ್ಯಕೀಯ ಮತ್ತು ಪ್ಯಾರಾ ಮೆಡಿಕಲ್ ಸಂಸ್ಥೆಗಳು/ಆರೋಗ್ಯ ಆರೈಕೆ ಸ್ಟಾರ್ಟ್‌ಅಪ್ಸ್: ಕ್ಲಿನಿಕಲ್ ತರಬೇತಿ, ಬಹು ಉದ್ಯೋಗಾವಕಾಶ ಮತ್ತು ಬಹು ಶಿಸ್ತಿನ ಶಿಕ್ಷಣ, ವೈದ್ಯಕೀಯ ಮೌಲ್ಯಮಾಪನ, ಆರೋಗ್ಯ ಆರೈಕೆ ಆವಿಷ್ಕಾರ, ಸಂಶೋಧನೆ ಇತ್ಯಾದಿಗಳಿಗಾಗಿ. ಸಂಸ್ಥೆಗಳು/ಕಾಲೇಜ್‌ಗಳು/ಶಾಲೆಗಳು: ಪ್ರವೇಶಾತಿಗಾಗಿ/ಉದ್ಯೋಗ ಆಧಾರಿತ ತರಬೇತಿಗಾಗಿ/ಮೌಲ್ಯಮಾಪನ ಇತ್ಯಾದಿಗಾಗಿ.

ಕೊಲ್ಯಾಬರೇಶನ್‌ಗೆ ಅರ್ಜಿ ಸಲ್ಲಿಸಲು ಮೇಲ್‌ಗೆ ರವಾನಿಸಿ: COLL@SINGHANIAUNIVERSITY.AC.IN

ಪ್ರವೇಶಾತಿಗಾಗಿ ಸಂಪರ್ಕಿಸಿ: 8448515516

ಅಥವಾ ಮೇಲ್ ರವಾನಿಸಿ: admission@singhaniauniversity.ac.in

ಎರಡು ತಿಂಗಳ ಬಾಡಿಗೆಯಷ್ಟು ಮುಂಗಡ ಮಾತ್ರ ಕೊಡಿ ಎಂದರೂ ಬರುತ್ತಿಲ್ಲ ಜನ ಬರುತ್ತಿಲ್ಲ

ಬಾಡಿಗೆ ಮನೆ–ಮಳಿಗೆ ಖಾಲಿ ಖಾಲಿ

ಪ್ರಜಾವಾಣಿ ವಾರ್ತೆ

'ಮನೆ ಬಾಡಿಗೆಗೆ ಇದೆ' ಎಂಬ ಫಲಕಗಳು ನಗರದಲ್ಲಿ ಇತ್ತೀಚೆಗೆ ಸಾಮಾನ್ಯವಾಗಿವೆ –ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಿಶೇಷ

ಬೆಂಗಳೂರು: ಸತತ ಎರಡನೇ ವರ್ಷವೂ ಮಹಾನಗರದಲ್ಲಿ 'ಮನೆ ಬಾಡಿಗೆಗೆ ಇದೆ' ಫಲಕಗಳು ಹೆಚ್ಚು ಕಾಣುತ್ತಿವೆ. ಮೊದಲ ಬಾರಿ ಲಾಕ್‌ಡೌನ್ ಆದಾಗಲೇ ಬೆಂಗಳೂರು ತೊರೆದವರ ಪೈಕಿ ಅನೇಕರು ಹಿಂದಿ ರುಗಿಲ್ಲ.

ಈ ವರ್ಷವೂ ಲಾಕ್‌ಡೌನ್ ಮಾಡಿದ ನಂತರವೂ ಅನೇಕರು ಬೆಂಗಳೂರಿನಿಂದ ದೂರವೇ ಉಳಿದ ಪರಿಣಾಮ ನಗರದಲ್ಲಿ ಬಾಡಿಗೆ ಮನೆಗಳು ಖಾಲಿ ಉಳಿದಿವೆ.

ಈ ನಡುವೆ, ಕೇಂದ್ರ ಸರ್ಕಾರ ಮಾದರಿ ಹಿಡುವಳಿ ಕಾಯ್ದೆಯನ್ನೂ (ಮಾಡೆಲ್ ಟೆನೆನ್ಸಿ ಆ್ಯಕ್ಟ್) ಜಾರಿಗೆ ತಂದಿದೆ. ವರ್ಷದ ಬದಲಿಗೆ ಎರಡು ತಿಂಗಳ ಬಾಡಿಗೆಯ ಮೊತ್ತವನ್ನು ಮಾತ್ರ ಮುಂಗಡವಾಗಿ ಪಡೆಯಬಹುದು. ಈ ಕಾಯ್ದೆ ಜಾರಿ ನಂತರವೂ ಬಾಡಿಗೆಗೆ ಬರುವವರ ಸಂಖ್ಯೆ ಹೆಚ್ಚಾಗಿಲ್ಲ.

'ವಸತಿ ಪ್ರದೇಶಗಳಲ್ಲಿ ಮುಖ್ಯವಾಗಿ ಒಂದು ಮತ್ತು ಎರಡು ಕೊಠಡಿಗಳ ಮನೆಗಳನ್ನು ಬಾಡಿಗೆ ನೀಡುವುದಕ್ಕೆ ಸಂಬಂಧಿಸಿದಂತೆ ಟೆನೆನ್ಸಿ ಕಾಯ್ದೆಯಲ್ಲಿರುವ ಅಂಶಗಳನ್ನುಮಾಲೀಕರು ಈಗಲೂ ಪಾಲಿಸುತ್ತಿಲ್ಲ. ಊರಿಗೆ ಮರಳಿರುವ ಕಾರ್ಮಿಕರು, ನೌಕರರಲ್ಲಿ ಬಹುತೇಕರು ಇನ್ನೂ ಮರಳಿ ಬಂದೇ ಇಲ್ಲ' ಎಂದು ಉದ್ಯಮಿ ಸುರೇಶ್ ಮಾನಂದಿ ಹೇಳಿದರು.

'ಹಲವು ಮಳಿಗೆಗಳನ್ನು ನಾನು ಬಾಡಿಗೆಗೆ ನೀಡಿದ್ದೇನೆ. ಆದರೆ, ಕಳೆದ ವರ್ಷದ ಬಾಡಿಗೆ ಹಣವನ್ನೇ ಕೆಲವರು ಇನ್ನೂ ನೀಡಿಲ್ಲ. ಲಾಕ್‌ಡೌನ್ ಅವಧಿ ಮುಗಿದು ಮತ್ತೆ ಅಂಗಡಿಗಳು ತೆರೆಯುವಂತಾದರೆ ಕಾರ್ಮಿಕರೆಲ್ಲ ವಾಪಸ್ ಬರಬಹುದು. ಅವರಬಳಿ ಹಣವೇ ಇಲ್ಲ. ಮನೆ ಅಥವಾ ಮಳಿಗೆಯಲ್ಲಿ ಜನ ಬಾಡಿಗೆಗೆ ಇದ್ದರೆ ಸಾಕು ಎಂಬ ಪರಿಸ್ಥಿತಿ ಇದ್ದು, ನಾನೂ ಬಾಡಿಗೆಗಾಗಿ ಒತ್ತಡ ಹೇರುತ್ತಿಲ್ಲ' ಎಂದು ಹೇಳಿದರು.

'ಮನೆ ಬಾಡಿಗೆ ದರವೇನೂ ಕಡಿಮೆಯಾಗಿಲ್ಲ. ಹೊಸ ಕಾಯ್ದೆ ಜಾರಿ ಬಗ್ಗೆಯೂ ಯಾರೂ ತಲೆ ಕೆಡಿಸಿಕೊಂಡಿಲ್ಲ. ಹೊಂದಾಣಿಕೆ–ನಂಬಿಕೆ ಮೇಲೆ ವ್ಯವಹಾರ ನಡೆಯುತ್ತಿದೆ. ಮನೆ ಮಾಲೀಕರು ಮುಂಗಡ ಹಣದಲ್ಲಿ ಸ್ವಲ್ಪ ಕಡಿಮೆ ತೆಗೆದುಕೊಳ್ಳುತ್ತಿದ್ದಾರೆಯೇ ವಿನಃ ಬಾಡಿಗೆ ಕಡಿಮೆ ಮಾಡುತ್ತಿಲ್ಲ' ಎಂದು ದಲ್ಲಾಳಿ ಶಿವು ಹೇಳಿದರು.

'ಹೊಸದಾಗಿ ಬಾಡಿಗೆಗೆ ಬರುತ್ತಿರುವವರು ಅಥವಾ ಹೊಸ ಅಗ್ರಿಮೆಂಟ್ ಮಾಡಿಕೊಳ್ಳುತ್ತಿರುವವರು ಟೆನೆನ್ಸಿ ಕಾಯ್ದೆ ಪಾಲನೆ ಮಾಡುತ್ತಿದ್ದಾರೆ. ಅವರಿಂದ 60 ದಿನಗಳ ಅವಧಿಯಷ್ಟು ಮಾತ್ರ ಮುಂಗಡ ಹಣ ತೆಗೆದುಕೊಳ್ಳುತ್ತಿದ್ದಾರೆ' ಎಂದು ರಿಯಲ್ ಎಸ್ಟೇಟ್ ಡೆವಲಪರ್‌ಗಳ ಸಂಘದ (ಕ್ರೆಡೈ) ರಾಜ್ಯ ಘಟಕದ ಉಪಾಧ್ಯಕ್ಷ ಪ್ರದೀಪ್ ರಾಯ್ಕರ್ ತಿಳಿಸಿದರು.

'ವಸತಿ ಉದ್ದೇಶದ ಕಟ್ಟಡಗಳಿಗಿಂತ, ವಾಣಿಜ್ಯ ಉದ್ದೇಶದ ಕಟ್ಟಡಗಳೇ ಹೆಚ್ಚು ಖಾಲಿ ಉಳಿದಿವೆ. ವಹಿವಾಟು ಕೂಡ ಹೆಚ್ಚು ನಡೆಯುತ್ತಿಲ್ಲ' ಎಂದೂ ಅವರು ಹೇಳಿದರು.

ಮನೆ ಖರೀದಿಗೆ ಉತ್ಸಾಹ

ಒಂದೆಡೆ ವಸತಿಯನ್ನು ಬಾಡಿಗೆಗೆ ಪಡೆಯುವವರ ಸಂಖ್ಯೆ ಕಡಿಮೆಯಾಗಿದ್ದರೆ, ಮನೆಯನ್ನು ಖರೀದಿ ಮಾಡುವವರ ಸಂಖ್ಯೆಯಲ್ಲಿ ತುಸು ಹೆಚ್ಚಳ ಕಂಡುಬಂದಿದೆ. ಜನರು ಸ್ವಂತ ಮನೆ ಹೊಂದುವುದಕ್ಕೆ ಉತ್ತೇಜನ ನೀಡಲು ಕೇಂದ್ರ ಸರ್ಕಾರ ಗೃಹಸಾಲದ ಮೇಲೆ ಸಬ್ಸಿಡಿಯನ್ನೂ ನೀಡುತ್ತಿದೆ.

'1 ಬಿಎಚ್‌ಕೆ ಮತ್ತು 2 ಬಿಎಚ್‌ಕೆಯ ಮನೆಗಳ ಖರೀದಿ ಚೆನ್ನಾಗಿಯೇ ನಡೆಯುತ್ತಿದೆ' ಎಂದು ಪ್ರದೀಪ್ ರಾಯ್ಕರ್ ತಿಳಿಸಿದರು.

ಕನ್ನಡ ಕಲಿಕೆ ಒಂದು ವರ್ಷಕ್ಕೆ ಸೀಮಿತ: ಖಂಡನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೂತನ ಶಿಕ್ಷಣ ನೀತಿ ಅನ್ವಯ, ನಾಲ್ಕು ವರ್ಷಗಳ ಪದವಿಯಲ್ಲಿ ಕನ್ನಡ ಭಾಷಾ ಕಲಿಕೆಯನ್ನು ಕೇವಲ ಒಂದು ವರ್ಷಕ್ಕೆ ಸೀಮಿತಗೊಳಿಸಿರುವ ಸರ್ಕಾರದ ನಿರ್ಧಾರವನ್ನು ಭಾರತ ಕಮ್ಯುನಿಸ್ಟ್ ಪಕ್ಷದ (ಮಾರ್ಕ್ಸ್‌ವಾದಿ) ರಾಜ್ಯ ಸಮಿತಿ ಕಾರ್ಯದರ್ಶಿ ಯು.ಬಸವರಾಜ ಖಂಡಿಸಿದ್ದಾರೆ.

'ರಾಜ್ಯ ಸರ್ಕಾರದ ಕ್ರಮವು ವಿದ್ಯಾರ್ಥಿ ಹಾಗೂ ಕನ್ನಡ ಭಾಷೆಯ ವಿರೋಧಿಯಾಗಿದ್ದು ಇದನ್ನು ತಕ್ಷಣವೇ ಹಿಂಪಡೆಯಬೇಕು' ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಬರೆದಿರುವ ಪತ್ರದಲ್ಲಿ ಒತ್ತಾಯಿಸಿದ್ದಾರೆ.

ಲಸಿಕೆ ಪಡೆಯಲು ಗ್ರಾಮೀಣರಿಗೆ ಮನವೊಲಿಸಿ: 'ಕೋವಿಡ್ ಲಸಿಕೆ ಪಡೆಯುವ ಕುರಿತು ಗ್ರಾಮೀಣ ಭಾಗದ ಜನರಲ್ಲಿ ಸಾಕಷ್ಟು ಆತಂಕವಿದೆ. ಇದನ್ನು ಪರಿ ಹರಿಸಲು ಸರ್ಕಾರ ಸೂಕ್ತ ಕ್ರಮ ಕೈಗೊಳ್ಳ ಬೇಕು. ಲಸಿಕೆ ಪಡೆಯುವಂತೆ ಜನರ ಮನವೊಲಿಸುವ ಕೆಲಸ ಆಗಬೇಕು. ಬಲವಂತದಿಂದ ಲಸಿಕೆ ನೀಡುವುದನ್ನು ಕೂಡಲೇ ನಿಲ್ಲಿಸಬೇಕು. ಹಾಗೇನಾದರು ಮಾಡಿದರೆ ಅದು ಮಾನವ ಹಕ್ಕುಗಳ ಉಲ್ಲಂಘನೆಯಾಗಲಿದೆ. ಇದರಿಂದ ಜನರಲ್ಲಿರುವ ಆತಂಕ ಮತ್ತಷ್ಟು ಹೆಚ್ಚಲಿದೆ' ಎಂದೂ ಯು. ಬಸವರಾಜ ಅವರು ಪತ್ರದಲ್ಲಿ ತಿಳಿಸಿದ್ದಾರೆ.

ಆಡಳಿತ ಪಕ್ಷದಲ್ಲಿ ಭ್ರಷ್ಟಾಚಾರದಲ್ಲೂ ಪೈಪೋಟಿ: ಸಿದ್ದರಾಮಯ್ಯ ಟೀಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿರುವ ಲೂಟಿಕೋರ ಬಿಜೆಪಿ ಸರ್ಕಾರದಲ್ಲಿ ಹಣ ದೋಚಲು ಆಡಳಿತ ಪಕ್ಷದವರ ನಡುವೆಯೇ ಕಿತ್ತಾಟ ನಡೆಯುತ್ತಿದೆ. ಜಿದ್ದಿಗೆ ಬಿದ್ದವರಂತೆ ಭ್ರಷ್ಟಾಚಾರದಲ್ಲೂ ಪೈಪೋಟಿಯಲ್ಲಿ ತೊಡಗಿದ್ದಾರೆ' ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಟೀಕಿಸಿದರು.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಜನ್ಮದಿನದ ಅಂಗವಾಗಿ ಅರ್ಚಕರು, ಆಟೊ ಚಾಲಕರು, ಆಶಾ ಕಾರ್ಯಕರ್ತರಿಗೆ ಪಡಿತರ ಕಿಟ್ ವಿತರಿಸಲು ಯುವ ಕಾಂಗ್ರೆಸ್ ವತಿಯಿಂದ ಮಲ್ಲೇಶ್ವರದಲ್ಲಿ ಶನಿವಾರ ಹಮ್ಮಿ ಕೊಂಡಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಆಡಳಿತ ಪಕ್ಷದವರೇ ಸರ್ಕಾರದ ಭ್ರಷ್ಟಾಚಾರದ ಕುರಿತು ಪರಸ್ಪರ ಆರೋಪ ಮಾಡಿಕೊಳ್ಳುತ್ತಿದ್ದಾರೆ. ಇಂತಹ ಬೇಜವಾಬ್ದಾರಿ ಸರ್ಕಾರವನ್ನು ಹಿಂದೆ ನೋಡಿರಲಿಲ್ಲ. ಇದು ಕುಡುಕರ ಸರ್ಕಾರ. ಲಾಕ್‌ಡೌನ್‌ನಲ್ಲೂ ಮದ್ಯದಂಗಡಿಗಳನ್ನು ತೆರೆದು, ಜನರಿಗೆ ಕುಡಿತದ ಕೆಲಸವನ್ನು ಚೆನ್ನಾಗಿ ನಿಭಾಯಿಸಿದೆ. ಇಲ್ಲದಿದ್ದರೆ, ಸರ್ಕಾರಕ್ಕೆ ಆದಾಯ ಎಲ್ಲಿಂದ ಬರಬೇಕು' ಎಂದು ಪ್ರಶ್ನಿಸಿದರು.

'ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ಬಡವರಿಗೆ ತಲಾ 7 ಕೆ.ಜಿ ಅಕ್ಕಿ ವಿತರಿಸಲಾಗುತ್ತಿತ್ತು. ಈಗಿನ ಬಿಜೆಪಿ ಸರ್ಕಾರ ಅಕ್ಕಿಯ ಪ್ರಮಾಣವನ್ನು ತಲಾ 2 ಕೆ.ಜಿ.ಗೆ ಇಳಿಸಿದೆ. ನೆರೆಯ ಕೇರಳ ₹20 ಸಾವಿರ ಕೋಟಿ ಪರಿಹಾರ ಹಾಗೂ ತಮಿಳುನಾಡಿ ನಲ್ಲಿ ₹4 ಸಾವಿರ ಕೋಟಿ ಪರಿಹಾರ ಘೋಷಿಸಲಾಗಿದೆ. ರಾಜ್ಯದ ಎಲ್ಲ ಬಡವರ ಖಾತೆಗಳಿಗೆ ತಲಾ ₹10 ಸಾವಿರ ಹಣ ಜಮಾ ಮಾಡಿದರೆ, ಅಂದಾಜು ₹13 ಸಾವಿರ ಕೋಟಿ ವೆಚ್ಚವಾಗಲಿದೆ. ಜನ ಸಂಕಷ್ಟದಲ್ಲಿದ್ದಾಗ ನೆರವಿಗೆ ಧಾವಿಸುವುದು ಸರ್ಕಾರದ ಜವಾಬ್ದಾರಿ' ಎಂದು ಹೇಳಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮಾತನಾಡಿ, 'ರಾಜ್ಯ ಜ್ವಲಂತ ಸಮಸ್ಯೆಗಳನ್ನು ಎದುರಿಸುತ್ತಿದೆ. ಗಂಭೀರ ವಿಷಯಗಳ ಚರ್ಚೆಗೆ ರಾಜ್ಯ ಸರ್ಕಾರ ತುರ್ತಾಗಿ ವಿಧಾನಮಂಡಲ ಅಧಿವೇಶನ ಕರೆಯಬೇಕು' ಎಂದು ಒತ್ತಾಯಿಸಿದರು.

'ಬಿಜೆಪಿಯವರು ಸರ್ಕಾರದ ಪಡಿತರ ಕಿಟ್‌ಗಳಿಗೆ ತಮ್ಮ ಭಾವಚಿತ್ರ ಹಾಕಿ ಹಂಚುತ್ತಿದ್ದಾರೆ. ಆದರೆ, ಕಾಂಗ್ರೆಸ್‌ನವರು ರಾಜ್ಯಕ್ಕೆ ಗೌರವ ತರುವ ಕೆಲಸ ಮಾಡುತ್ತಿದ್ದಾರೆ. ಸರ್ಕಾರ ಅಲ್ಪ ಪ್ರಮಾಣದ ಪರಿಹಾರ ಘೋಷಿಸಿದ್ದರೆ, ಅದು ಕಾಂಗ್ರೆಸ್ ಒತ್ತಡ ಹೇರಿದ್ದರಿಂದ' ಎಂದರು.

ಯುವ ಕಾಂಗ್ರೆಸ್ ಅಧ್ಯಕ್ಷ ಎಂ.ಎಸ್.ರಕ್ಷಾ ರಾಮಯ್ಯ, 'ರಾಜ್ಯದಲ್ಲಿ ಕೋವಿಡ್ ಎರಡನೇ ಅಲೆ ಕಾಣಿಸಿಕೊಂಡ ನಂತರ ಎರಡು ತಿಂಗಳಿನಿಂದ ಜನರಿಗೆ ನೆರವಾಗುವ ಹಲವಾರು ಕಾರ್ಯಕ್ರಮಗಳನ್ನು ಯುವ ಕಾಂಗ್ರೆಸ್ ಹಮ್ಮಿಕೊಂಡಿದೆ' ಎಂದು ಹೇಳಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ಅರ್ಚಕರು ಹಾಗೂ ಬಡವರಿಗೆ ದಿನಸಿ ಕಿಟ್ ವಿತರಿಸಿದರು.ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ರಾಜ್ಯಸಭಾ ಸದಸ್ಯ ಜಿ.ಸಿ.ಚಂದ್ರಶೇಖರ್, ಎಂ.ಆರ್‌.ಸೀತಾರಾಮ್, ಎಂ.ಎಸ್‌.ರಕ್ಷಾ ರಾಮಯ್ಯ ಇತರರು ಇದ್ದರು –ಪ್ರಜಾವಾಣಿ ಚಿತ್ರ

ಕಾಳಸಂತೆಗೆ ಪಡಿತರ ತಡೆಗೆ ತನಿಖಾ ದಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನ್ಯಾಯಬೆಲೆ ಅಂಗಡಿಗಳ ಮೂಲಕ ವಿತರಣೆಯಾಗುವ ಆಹಾರಧಾನ್ಯ ಕಾಳಸಂತೆಕೋರರ ಪಾಲಾಗುತ್ತಿರುವುದನ್ನು ತಡೆಯಲು ಆಹಾರ ಇಲಾಖೆಯ ಜಂಟಿ ನಿರ್ದೇಶಕ (ಐಟಿ ವಿಭಾಗ) ಕೆ. ರಾಮೇಶ್ವರಪ್ಪ ಅವರ ನೇತೃತ್ವದಲ್ಲಿ ರಾಜ್ಯ ಮಟ್ಟದ ತನಿಖಾ ದಳವನ್ನು ಸರ್ಕಾರ ರಚಿಸಿದೆ.

ಈ ದಳದ ಮುಖ್ಯಸ್ಥರಾಗಿ ರಾಮೇಶ್ವರಪ್ಪ ಕಾರ್ಯನಿರ್ವಹಿಸಲಿದ್ದು, ಇಲಾಖೆಯ ಉಪ ನಿಯಂತ್ರಕ (ಆಡಳಿತ), ಜಿಲ್ಲಾಮಟ್ಟದ ಜಂಟಿ ನಿರ್ದೇಶಕರು, ತಹಶೀಲ್ದಾರ್‌ಗಳು, ಸಹಾಯಕ ನಿರ್ದೇಶಕರು, ಆಹಾರ ಶಿರಸ್ತೆದಾರರು, ಆಹಾರ ನಿರೀಕ್ಷಕರು ತಂಡದ ಸದಸ್ಯರಾಗಿರುತ್ತಾರೆ.

ಪಡಿತರ ವಸ್ತುಗಳ ಅಕ್ರಮ ದಾಸ್ತಾನು, ಅವ್ಯವಹಾರ ಮತ್ತು ಕಾಳಸಂತೆ ವಹಿವಾಟು ನಡೆಯುವುದನ್ನು ತಡೆಗಟ್ಟಲು ಹಾಗೂ ಫಲಾನುಭವಿಗೆ ಪಡಿತರ ತಲುಪುವಂತೆ ಮಾಡಲು ರಾಷ್ಟ್ರೀಯ ಭದ್ರತಾ ಕಾಯ್ದೆ ಅನ್ವಯ ರಾಜ್ಯಮಟ್ಟದ ತನಿಖಾ ದಳ ರಚಿಸುವಂತೆ ಆಹಾರ ಆಯುಕ್ತರು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದ್ದರು.

ಇತ್ತೀಚೆಗೆ ಭಾರಿ ಪ್ರಮಾಣದಲ್ಲಿ ಪಡಿತರ ಅಕ್ಕಿ ಕಾಳಸಂತೆಯಲ್ಲಿ ಮಾರಾಟವಾಗುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಿದ್ದ ಆಹಾರ ಸಚಿವ ಉಮೇಶ ಕತ್ತಿ ಅವರು ತನಿಖಾ ದಳವನ್ನು ರಚಿಸುವಂತೆ ಸೂಚಿಸಿದ್ದರು.

ಲಂಚ ಪ್ರಕರಣ: ಬೆಸ್ಕಾಂ ಇ.ಇ ಬಂಧನ

ಬೆಂಗಳೂರು: 80 ಕೆ.ವಿ. ಸಾಮರ್ಥ್ಯದ ವಿದ್ಯುತ್ ಸಂಪರ್ಕ ನೀಡುವುದಕ್ಕೆ ಪರಿವರ್ತಕ ಅಳವಡಿಸುವುದಕ್ಕೆ ಮಂಜೂರಾತಿ ನೀಡಲು ₹ 2,500 ಲಂಚ ಪಡೆಯುತ್ತಿದ್ದ ಬೆಸ್ಕಾಂ ಎಂ.ಟಿ. ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ಜಗದೀಶ್ ಅವರನ್ನು ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಗುರುವಾರ ಬಂಧಿಸಿದೆ.

ಯಲಹಂಕ ನಿವಾಸಿಯಾದ ವಿದ್ಯುತ್ ಗುತ್ತಿಗೆದಾರರೊಬ್ಬರು ಖಾಸಗಿ ಉಗ್ರಾಣವೊಂದಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸುವ ಸಂಬಂಧ ಅರ್ಜಿ ಸಲ್ಲಿಸಿದ್ದರು.

ಈ ಕಡತ ಆರೋಪಿ ಅಧಿಕಾರಿ ಬಳಿ ತಲುಪಿತ್ತು. ಅನುಮೋದನೆ ನೀಡಲು ₹ 5,000 ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ನಂತರ ₹ 2,500 ನೀಡುವಂತೆ ಅರ್ಜಿದಾರರಿಗೆ ಸೂಚಿಸಿದ್ದರು. ಈ ಕುರಿತು ಗುತ್ತಿಗೆದಾರರು ಎಸಿಬಿ ಬೆಂಗಳೂರು ನಗರ ಘಟಕಕ್ಕೆ ದೂರು ನೀಡಿದ್ದರು. ಗುತ್ತಿಗೆದಾರನಿಂದ ಹಣ ಪಡೆಯುತ್ತಿದ್ದಾಗ ಗುರುವಾರ ದಾಳಿ ಮಾಡಿದ ಎಸಿಬಿ ಅಧಿಕಾರಿಗಳು, ಜಗದೀಶ್ ಅವರನ್ನು ಬಂಧಿಸಿದ್ದಾರೆ.

ನಗರದಲ್ಲಿ ಇಂದು

'ಜೈವಿಕ ಇಂಧನ -ಬಾಳಿಗೆ ನಂದನ' ಕುರಿತು ಉಪನ್ಯಾಸ: ಮಂಡ್ಯ ಜಿಲ್ಲಾ ಜೈವಿಕ ಇಂಧನ ಸಂಶೋಧನಾ ಕೇಂದ್ರದ ಮುಖ್ಯಸ್ಥ ಪ್ರಸನ್ನ ಕುಮಾರ್, ಅಧ್ಯಕ್ಷತೆ–ಪ್ರೊ.ಎ.ಎಸ್. ನಟರಾಜ್, ಭಾಗವಹಿಸುವವರು–ರಮೇಶ ಶಿವಮೊಗ್ಗ, ಆರ್. ನಾಗೇಶ್ ಅರಳಕುಪ್ಪೆ, ಎಚ್.ಸಿ.ಉಮೇಶ್, ಆಯೋಜನೆ–ಅಖಿಲ ಕರ್ನಾಟಕ ವಿಚಾರವಾದಿ ಟ್ರಸ್ಟ್, ಬೆಳಿಗ್ಗೆ 11 (ಆನ್‌ಲೈನ್ ಕಾರ್ಯಕ್ರಮ)

ವಿಶ್ವ ಸಂಗೀತ ದಿನದ ಅಂಗವಾಗಿ 'ನಕ್ಶ್–ಎ–ಯುವ' ಸಂಗೀತ ಸಂವಾದ: ಅತಿಥಿ–ಶ್ರದ್ಧಾ ಬೆಣಗಿ, ಸಂಗೀತಗಾರರು–ದೆಬ್ಲಿನಾ ಬ್ಯಾನರ್ಜಿ, ಮಧುರ್ ಶಿಂಧೆ, ಲಿಯೊನಾರ್ಡೊ ಡಾವಿನ್ಸಿ, ಆಯೋಜನೆ–ಗಂಗ್ರಾಮ ಸಂಗೀತ, ಸಹಕಾರ–ವಿಮೂವ್ ಫೌಂಡೇಷನ್, ಸಂಜೆ 7 (ಆನ್‌ಲೈನ್ ಕಾರ್ಯಕ್ರಮ)

ಕವಿ ಸಿದ್ಧಲಿಂಗಯ್ಯ, ಜರಗನಹಳ್ಳಿ ಶಿವಶಂಕರ್, ಕೋ.ವೆಂ.ರಾಮಕೃಷ್ಣೇಗೌಡ ಅವರಿಗೆ ನುಡಿ ಗೀತ ನಮನ: ಮೃತ್ಯುಂಜಯ ದೊಡ್ಡವಾಡ, ಸಂಗೀತಾ ಕಟ್ಟಿ ಭಾಗವಹಿಸುವವರು–ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ. ಸೋಮಶೇಖರ್, ಗಾಯಕ ವೈ.ಕೆ.ಮುದ್ದುಕೃಷ್ಣ, ಕವಿ ಎಸ್.ಜಿ. ಸಿದ್ದರಾಮಯ್ಯ, ಕಾ.ವೆಂ.ಶ್ರೀನಿವಾಸ ಮೂರ್ತಿ, ಆಯೋಜನೆ–ಸಂಗೀತಧಾಮ ಟ್ರಸ್ಟ್, ಬೆಳಿಗ್ಗೆ 11 (ಆನ್‌ಲೈನ್ ಕಾರ್ಯಕ್ರಮ)


ಸಂಗೀತಾ ಕಟ್ಟಿ

ಕನ್ನಡ ಕಡೆಗಣನೆ: ಲೋಕಸಭಾ ಸಚಿವಾಲಯದ ನಡೆಗೆ ಖಂಡನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾಷೆಗಳ ಕಲಿಕಾ ತರಬೇತಿಯಲ್ಲಿ ಕನ್ನಡವನ್ನು ಕಡೆಗಣಿಸಿರುವ ಲೋಕಸಭಾ ಸಚಿವಾಲಯದ 'ಪಾರ್ಲಿಮೆಂಟರಿ ರಿಸರ್ಚ್ ಆ್ಯಂಡ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್ ಫಾರ್ ಡೆಮಾಕ್ರಸಿ' (ಪ್ರೈಡ್) ಸಂಸ್ಥೆಯ ನಡೆಗೆ ಖಂಡನೆ ವ್ಯಕ್ತವಾಗಿದೆ.

ಸಂಸ್ಥೆಯು ಆನ್‌ಲೈನ್ ಮೂಲಕ ಇದೇ 22ರಿಂದ 6 ವಿದೇಶಿ ಭಾಷೆಗಳು, 6 ದೇಶಿಯ ಭಾಷೆಗಳ ಕಲಿಕಾ ತರಬೇತಿಯನ್ನು ಪ್ರಾರಂಭಿಸುತ್ತಿದೆ. ಇದರಲ್ಲಿ ಸಂಸತ್ತಿನ ಸದಸ್ಯರು, ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ಶಾಸಕರು ಹಾಗೂ ಅಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ. ವಿದೇಶಿ ಭಾಷೆಗಳಾದ ಫ್ರೆಂಚ್, ಜರ್ಮನ್, ಜಪಾನೀಸ್, ಪೋರ್ಚುಗೀಸ್, ರಷ್ಯನ್ ಮತ್ತು ಸ್ಪ್ಯಾನಿಷ್ ಭಾಷೆಗಳನ್ನು ಕಲಿಸಲಾಗುತ್ತಿದೆ. ಅದೇ ರೀತಿ, ದೇಶೀಯ ಭಾಷೆಗಳಾದ ಗುಜರಾತಿ, ಬಂಗಾಳಿ, ಮರಾಠಿ, ಒಡಿಯಾ, ತಮಿಳು ಮತ್ತು ತೆಲುಗು ಭಾಷೆಯು ಈ ಕಲಿಕೆಯ ಭಾಗವಾಗಿದೆ.

'ಕೇಂದ್ರ ಸರ್ಕಾರದಿಂದ ಶಾಸ್ತ್ರೀಯ ಭಾಷೆಯ ಸ್ಥಾನಮಾನ ಪಡೆದ ಕೆಲವೇ ಭಾಷೆಗಳಲ್ಲಿ ಕನ್ನಡ ಭಾಷೆಯೂ ಒಂದಾಗಿದೆ. ಸುದೀರ್ಘ ಇತಿಹಾಸ ಇರುವ ಕನ್ನಡ ಭಾಷೆಯನ್ನು ಲೋಕಸಭಾ ಸಚಿವಾಲಯ ಕಡೆಗಣಿಸಿರುವುದು ವಿಷಾದನೀಯ. ಈ ಬಗ್ಗೆ ಸಂಸ್ಥೆಯ ವಿರುದ್ಧ ಕ್ರಮಕೈಗೊಳ್ಳುವಂತೆ ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರವು ಒತ್ತಾಯಿಸಬೇಕು' ಎಂದು ಕನ್ನಡ ಪರ ಸಂಘಟನೆಗಳು ಆಗ್ರಹಿಸಿವೆ.

ಸಂಸದರು ಕಾರ್ಯನಿರತರಾಗಲಿ: 'ದೇಶದ ಅತ್ಯಂತ ಪ್ರಾಚೀನ ಮತ್ತು ಶ್ರೀಮಂತ ಪರಂಪರೆಯ ಶಾಸ್ತ್ರೀಯ ಭಾಷೆಯಾಗಿರುವ ಕನ್ನಡವನ್ನು ಭಾಷೆಗಳ ಕಲಿಕೆಯಲ್ಲಿ ಸೇರಿಸಿಲ್ಲ. ಲೋಕಸಭಾ ಸಚಿವಾಲಯದ ಈ ನಡೆಯು ಖಂಡನೀಯ. ಸ್ವಾತಂತ್ರ್ಯ ಬಂದ ನಂತರ ನಿರಂತರವಾಗಿ ಕೇಂದ್ರ ಸರ್ಕಾರವು ಕನ್ನಡದ ಬಗ್ಗೆ ಮಲತಾಯಿ ಧೋರಣೆಯನ್ನು ತೋರುತ್ತಿದೆ. ನಮ್ಮ ರಾಜ್ಯವನ್ನು ಪ್ರತಿನಿಧಿಸುವ ಎಲ್ಲ ಸಂಸದರು ಒಗ್ಗಟ್ಟಿನಿಂದ ಪ್ರಧಾನಮಂತ್ರಿ ಅವರನ್ನು ಭೇಟಿ ಮಾಡಿ, ಕೇಂದ್ರ ಸರ್ಕಾರವು ಕನ್ನಡದ ಬಗೆಗಿನ ಧೋರಣೆಯನ್ನು ಬದಲಾಯಿಸಿಕೊಳ್ಳುವಂತೆ ಆಗ್ರಹಿಸಬೇಕು' ಎಂದು ಕನ್ನಡ ಗೆಳೆಯರ ಬಳಗ ಒತ್ತಾಯಿಸಿದೆ.

'ಪ್ರೈಡ್‌ನ ಅಧಿಕಾರಿಗಳು ನಮ್ಮ ಭಾಷೆಯನ್ನು ಕಡೆಗಣಿಸಿ, ಕನ್ನಡಿಗರನ್ನು ಅವಮಾನಿಸಿದ್ದಾರೆ. ಭಾರತೀಯ ಭಾಷೆಗಳ ಆಯ್ಕೆಯ ಹಿಂದಿರುವ ತಾತ್ವಿಕತೆಯನ್ನು ಪ್ರಶ್ನಿಸುವ ಹಕ್ಕು ಎಲ್ಲ ಭಾರತೀಯರಿಗಿದ್ದು, ಕನ್ನಡಿಗರು ಸಾಮಾಜಿಕ ಜಾಲ ತಾಣಗಳ ಮೂಲಕ ಇದನ್ನು ಪ್ರಶ್ನಿಸಬೇಕಿದೆ' ಎಂದು ಬಳಗದ ಸಂಚಾಲಕ ರಾ.ನಂ. ಚಂದ್ರಶೇಖರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಭಾಷೆಯ ಆಯ್ಕೆಗೆ ಮಾನದಂಡ ಏನು'

ಟಿ.ಎಸ್. ನಾಗಾಭರಣ

'ಕನ್ನಡ ಭಾಷೆಯು 2 ಸಾವಿರ ವರ್ಷಗಳಿಗೂ ಮಿಗಿಲಾದ ಇತಿಹಾಸ ಹೊಂದಿದೆ. ಲೋಕಸಭಾ ಸಚಿವಾಲಯ ಕನ್ನಡವನ್ನು ಕಡೆಗಣಿಸಿರುವುದು ಅತ್ಯಂತ ಬೇಸರದ ಸಂಗತಿ. ಯಾವ ಮಾನದಂಡದಡಿ ಭಾಷೆಗಳನ್ನು ಆಯ್ಕೆ ಮಾಡಿಕೊಂಡಿದ್ದಾರೆ? ಈ ಕೂಡಲೇ ಕನ್ನಡ ಸೇರ್ಪಡೆಗೆ ಕೇಂದ್ರ ಸರ್ಕಾರವು ಕ್ರಮವಹಿಸಬೇಕು. ಇಲ್ಲವಾದರೇ ಇಲ್ಲಿನ ಸಂಸದರ ಸಹಕಾರದಲ್ಲಿ ಹೋರಾಟ ನಡೆಸಲಾಗುವುದು' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಎಚ್ಚರಿಕೆ ನೀಡಿದ್ದಾರೆ.

'ಭಾರತೀಯ ಭಾಷೆಗಳ ಆಯ್ಕೆಯನ್ನು ಪ್ರಶ್ನಿಸಬೇಕಿದೆ. ಈ ಬಗ್ಗೆ ನಮ್ಮ ಸಂಸದರು ಕೂಡ ಒಗ್ಗಟ್ಟಾಗಿ ಕೇಂದ್ರ ಸರ್ಕಾರವನ್ನು ಒತ್ತಾಯಿಸಬೇಕು. ಸಂವಿಧಾನದ ಎಂಟನೇ ಅನುಚ್ಛೇದಡಿ ಮಾನ್ಯತೆ ಪಡೆದ ಕನ್ನಡವನ್ನು ಕಲಿಕಾ ಕಾರ್ಯಕ್ರಮದ ಪಟ್ಟಿಯಲ್ಲಿ ಸೇರಿಸಬೇಕು' ಎಂದು ಆಗ್ರಹಿಸಿದ್ದಾರೆ.

ಸುದ್ದಿ 2 ನಿಮಿಷ

ಕವಿ ಸಿದ್ದಲಿಂಗಯ್ಯ ಸ್ಮರಣೆ ನಾಳೆ

ಬೆಂಗಳೂರು: ಡಾ. ಸಿದ್ದಲಿಂಗಯ್ಯ ಸ್ಮಾರಕ ಪ್ರತಿಷ್ಠಾನವು ಸೋಮವಾರ (ಜೂ.21) ಬೆಳಿಗ್ಗೆ 10 ಗಂಟೆಗೆ ಮಲ್ಲತ್ತಹಳ್ಳಿಯ ಕಲಾಗ್ರಾಮದಲ್ಲಿ ಸಿದ್ದಲಿಂಗಯ್ಯ ಅವರ ಸ್ಮರಣೆ ಹಾಗೂ ನುಡಿ ನಮನ ಕಾರ್ಯಕ್ರಮ ಹಮ್ಮಿಕೊಂಡಿದೆ.

ನುಡಿ ನಮನ ಕಾರ್ಯಕ್ರಮಕ್ಕೆ ಮಧ್ಯಾಹ್ನ 12.30ಕ್ಕೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಚಾಲನೆ ನೀಡಲಿದ್ದು, ಡಾ. ಸಿದ್ದಲಿಂಗಯ್ಯ ಅವರ ಸಮಗ್ರ ಕಾವ್ಯ 'ಬೋಧಿ ವೃಕ್ಷದ ಕೆಳಗೆ' ಕೃತಿಯನ್ನು ಲೋಕಾರ್ಪಣೆ ಮಾಡಲಿದ್ದಾರೆ. ಬೆಂಗಳೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಎಸ್. ಜಾಫೆಟ್ ಅಧ್ಯಕ್ಷತೆ ವಹಿಸಲಿದ್ದಾರೆ. ಕೃತಿಯ ಕುರಿತು ವಿಮರ್ಶಕ ಡಾ. ಬೈರಮಂಗಲ ರಾಮೇಗೌಡ ಮಾತನಾಡಲಿದ್ದಾರೆ.

ಮಧ್ಯಾಹ್ನ 3 ಗಂಟೆಗೆ ಕಾವ್ಯ ನಮನ ಕಾರ್ಯಕ್ರಮ ನಡೆಯಲಿದ್ದು, ಸಾಹಿತಿ ಅಗ್ರಹಾರ ಕೃಷ್ಣಮೂರ್ತಿ ಅಧ್ಯಕ್ಷತೆ ವಹಿಸಲಿದ್ದಾರೆ. ಸಂಜೆ 4 ಗಂಟೆಗೆ ಗೀತ ನಮನ ಕಾರ್ಯಕ್ರಮ ನಡೆಯಲಿದೆ. ಸಿದ್ದಲಿಂಗಯ್ಯ ಅವರ ಕವಿತೆಗಳ ಗಾಯನ ನಡೆಯಲಿದೆ. ಜಾನಪದ ಗಾಯಕ ಬಾನಂದೂರು ಕೆಂಪಯ್ಯ ಅಧ್ಯಕ್ಷತೆ ವಹಿಸಲಿದ್ದಾರೆ. ರಂಗಕರ್ಮಿ ಜನಾರ್ದನ್ (ಜನ್ನಿ) ಭಾಗವಹಿಸಲಿದ್ದಾರೆ. ಆನ್‌ಲೈನ್‌ನಲ್ಲಿ ಕಾರ್ಯಕ್ರಮದ ನೇರ ಪ್ರಸಾರ ಇರಲಿದೆ ಎಂದು ಪ್ರತಿಷ್ಠಾನದ ಅಧ್ಯಕ್ಷೆ ಡಾ.ಮಾನಸ ಸಿದ್ದಲಿಂಗಯ್ಯ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಕರ್ನಾಟಕ ಸರ್ಕಾರ' ಫಲಕ ತೆರವುಗೊಳಿಸಿ ದಂಡ

ಬೆಂಗಳೂರು: 'ಕರ್ನಾಟಕ ಸರ್ಕಾರ' ಎಂಬ ಫಲಕ ಅಳವಡಿಸಿಕೊಂಡು ಸಂಚರಿಸುತ್ತಿದ್ದ ವಾಹನಗಳಿಗೆ ನಗರದ ಸಂಚಾರ ಪೊಲೀಸರು ದಂಡ ವಿಧಿಸಿದ್ದಾರೆ.

ನಗರದ ಮಾಗಡಿ ರಸ್ತೆಯಲ್ಲಿ ವಿಶೇಷ ಕಾರ್ಯಾಚರಣೆ ನಡೆಸಿದ ಪೊಲೀಸರು, ವಾಹನಗಳ ಪರಿಶೀಲನೆ ನಡೆಸಿದರು.

'ವಾಹನಗಳ ಮೇಲೆ ನೋಂದಣಿ ಸಂಖ್ಯೆ ಫಲಕ ಮಾತ್ರ ಅಳವಡಿಸಬೇಕು. ಉಳಿದಂತೆ ಯಾವುದೇ ಬರಹವಿರಬಾರದು. ಆದರೆ, ಕೆಲವು ವಾಹನಗಳಲ್ಲಿ ಕರ್ನಾಟಕ ಸರ್ಕಾರ ಎಂಬ ಫಲಕ ಅಳವಡಿಸಿಕೊಂಡಿದ್ದ ಬಗ್ಗೆ ದೂರುಗಳು ಬಂದಿದ್ದವು. ಹೀಗಾಗಿ, ಕಾರ್ಯಾಚರಣೆ ನಡೆಸಲಾಯಿತು. 25ಕ್ಕೂ ಹೆಚ್ಚು ವಾಹನಗಳ ಫಲಕಗಳನ್ನು ಸ್ಥಳದಲ್ಲೇ ತೆರವುಗೊಳಿಸಿ ದಂಡ ವಿಧಿಸಲಾಗಿದೆ' ಎಂದೂ ಪೊಲೀಸರು ತಿಳಿಸಿದರು.

ಚಿತ್ರಾವಳಿ

ಎಐಡಿಎಸ್‌ಒ, ಎಐಎಂಎಸ್‌ಎಸ್ ಹಾಗೂ ಎಐಡಿವೈಒ ಸಹಯೋಗದಲ್ಲಿ ಶನಿವಾರ ಆನ್‌ಲೈನ್‌ನಲ್ಲಿ ಹಮ್ಮಿಕೊಂಡಿದ್ದ ಸ್ವಾತಂತ್ರ್ಯ ಹೋರಾಟಗಾರ ಎಚ್‌.ಎಸ್‌.ದೊರೆಸ್ವಾಮಿ ಶ್ರದ್ಧಾಂಜಲಿ ಸಭೆಯಲ್ಲಿ (ಎಡದಿಂದ) ಎಸ್‌ಯು.ಸಿ.ಐ (ಸಿ) ರಾಜ್ಯ ಕಾರ್ಯದರ್ಶಿ ಕೆ.ಉಮಾ, ಕಲ್ಯಾಣ್ ಕುಮಾರ್ ಹಾಗೂ ಎಸ್‌ಯು.ಸಿ.ಐ (ಸಿ) ಪಾಲಿಟ್ ಬ್ಯೂರೊ ಸದಸ್ಯ ಕೆ.ರಾಧಾಕೃಷ್ಣ ಇದ್ದರು.

ಬಕ್ರೀದ್ ಹಬ್ಬಕ್ಕೆ ತಿಂಗಳಿರುವಂತೆ, ಮಾರಲು ತಂದಿರುವ ಕುರಿ ಮರಿಗೆ ಬೆಂಗಳೂರಿನ ಚಾಮರಾಜಪೇಟೆಯ ಈದ್ಗಾ ಮೈದಾನದಲ್ಲಿ ಶನಿವಾರ ಸ್ನಾನ ಮಾಡಿಸುತ್ತಿರುವ ವ್ಯಾಪಾರಿಗಳು –ಪ್ರಜಾವಾಣಿ ಚಿತ್ರ/ಇರ್ಷಾದ್ ಮಹಮ್ಮದ್

ನೈಋತ್ಯ ರೈಲ್ವೆ

ಇ–ಟೆಂಡರ್ ಪ್ರಕಟಣೆ ಸಂಖ್ಯೆ 21/ಎಂವೈಎಸ್/2021

ದಿನಾಂಕ : 15–06–2021

ಭಾರತದ ರಾಷ್ಟ್ರಪತಿಗಳ ಪರವಾಗಿ, ಕೆಳಸಹಿದಾರರು, ಕೆಳಗಿನ ಕೆಲಸಗಳಿಗಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ.	ಕೆಲಸದ ವಿವರ	ಅಂದಾಜು ಮೌಲ್ಯ
1	ವಲಯ ಎ (ಮೈಸೂರು ನಿಲ್ದಾಣ ಮತ್ತು ವಿಭಾಗೀಯ ಕಛೇರಿ) ಯಲ್ಲಿ 01–07–2021 ರಿಂದ 30–06–2022ರ ಅವಧಿಗೆ ಸಿಮೆಂಟ್ ಮತ್ತು ಸ್ಟೀಲ್ ಸರಬರಾಜು ಒಳಗೊಂಡಂತೆ ಸಾಮಗ್ರಿಗಳ ಸರಬರಾಜು ಮತ್ತು ಕಾಮಗಾರಿಗಳನ್ನು ನಡೆಸಲು ವಲಯ ಗುತ್ತಿಗೆ.	ರೂ. 1,00,00,000/-
2	ವಲಯ ಎ–1 (ಮೈಸೂರು ರೈಲ್ವೆ ಕಾಲೋನಿಗಳು ಮತ್ತು ಆಸ್ಪತ್ರೆ) ಯಲ್ಲಿ 01–07–2021 ರಿಂದ 30–06–2022ರ ಅವಧಿಗೆ ಸಿಮೆಂಟ್ ಮತ್ತು ಸ್ಟೀಲ್ ಸರಬರಾಜು ಒಳಗೊಂಡಂತೆ ಸಾಮಗ್ರಿಗಳ ಸರಬರಾಜು ಮತ್ತು ಕಾಮಗಾರಿಗಳನ್ನು ನಡೆಸಲು ವಲಯ ಗುತ್ತಿಗೆ.	ರೂ. 1,50,00,000/-
3	ವಲಯ ಎ–2 (ಮೈಸೂರು ಚಾಮರಾಜನಗರ ಸೆಕ್ಷನ್) ಯಲ್ಲಿ 01–07–2021 ರಿಂದ 30–06–2022ರ ಅವಧಿಗೆ ಸಿಮೆಂಟ್ ಮತ್ತು ಸ್ಟೀಲ್ ಸರಬರಾಜು ಒಳಗೊಂಡಂತೆ ಸಾಮಗ್ರಿಗಳ ಸರಬರಾಜು ಮತ್ತು ಕಾಮಗಾರಿಗಳನ್ನು ನಡೆಸಲು ವಲಯ ಗುತ್ತಿಗೆ. **ಸಬ್‌ವರ್ಕ್ – 1 :** ಸೇವಾ ಕಟ್ಟಡದ ದುರಸ್ತಿ ಮತ್ತು ನಿರ್ವಹಣೆ. **ಸಬ್‌ವರ್ಕ್ – 2 :** ಸಿಬ್ಬಂದಿ ವಸತಿಗೃಹಗಳು ಮತ್ತು ಕ್ಷೇಮಾಭ್ಯುದಯ ಕಟ್ಟಡಗಳ ದುರಸ್ತಿ ಮತ್ತು ನಿರ್ವಹಣೆ.	ರೂ. 60,00,000/-
4	ವಲಯ ಎ–3 (ಎಪಿ ಕಾಲೋನಿಗಳು) ಯಲ್ಲಿ 01–07–2021 ರಿಂದ 30–06–2022ರ ಅವಧಿಗೆ ಸಿಮೆಂಟ್ ಮತ್ತು ಸ್ಟೀಲ್ ಸರಬರಾಜು ಒಳಗೊಂಡಂತೆ ಸಾಮಗ್ರಿಗಳ ಸರಬರಾಜು ಮತ್ತು ಕಾಮಗಾರಿಗಳನ್ನು ನಡೆಸಲು ವಲಯ ಗುತ್ತಿಗೆ.	ರೂ. 75,00,000/-
5	ವಲಯ ಎ–4 (ಮೈಸೂರು – ಎಲಿಯೂರು) ಯಲ್ಲಿ 01–07–2021 ರಿಂದ 30–06–2022ರ ಅವಧಿಗೆ ಸಿಮೆಂಟ್ ಮತ್ತು ಸ್ಟೀಲ್ ಸರಬರಾಜು ಒಳಗೊಂಡಂತೆ ಸಾಮಗ್ರಿಗಳ ಸರಬರಾಜು ಮತ್ತು ಕಾಮಗಾರಿಗಳನ್ನು ನಡೆಸಲು ವಲಯ ಗುತ್ತಿಗೆ. **ಸಬ್‌ವರ್ಕ್ – 1 :** ಸೇವಾ ಕಟ್ಟಡದ ದುರಸ್ತಿ ಮತ್ತು ನಿರ್ವಹಣೆ. **ಸಬ್‌ವರ್ಕ್ – 2 :** ಸಿಬ್ಬಂದಿ ವಸತಿಗೃಹಗಳು ಮತ್ತು ಕ್ಷೇಮಾಭ್ಯುದಯ ಕಟ್ಟಡಗಳ ದುರಸ್ತಿ ಮತ್ತು ನಿರ್ವಹಣೆ.	ರೂ. 60,00,000/-
6	ವಲಯ ಎ–5 (ಮೈಸೂರು – ಅರಸೀಕೆರೆ ಸೆಕ್ಷನ್) ಯಲ್ಲಿ 01–07–2021 ರಿಂದ 30–06–2022ರ ಅವಧಿಗೆ ಸಿಮೆಂಟ್ ಮತ್ತು ಸ್ಟೀಲ್ ಸರಬರಾಜು ಒಳಗೊಂಡಂತೆ ಸಾಮಗ್ರಿಗಳ ಸರಬರಾಜು ಮತ್ತು ಕಾಮಗಾರಿಗಳನ್ನು ನಡೆಸಲು ವಲಯ ಗುತ್ತಿಗೆ. **ಸಬ್‌ವರ್ಕ್ – 1 :** ಸೇವಾ ಕಟ್ಟಡದ ದುರಸ್ತಿ ಮತ್ತು ನಿರ್ವಹಣೆ. **ಸಬ್‌ವರ್ಕ್ – 2 :** ಸಿಬ್ಬಂದಿ ವಸತಿಗೃಹಗಳು ಮತ್ತು ಕ್ಷೇಮಾಭ್ಯುದಯ ಕಟ್ಟಡಗಳ ದುರಸ್ತಿ ಮತ್ತು ನಿರ್ವಹಣೆ.	ರೂ. 70,00,000/-
7	ವಲಯ ಎ–6 (ಹಾಸನ – ಕಂಕನಾಡಿ ಎರಡನ್ನೂ ಹೊರತುಪಡಿಸಿ) ಯಲ್ಲಿ ಮತ್ತು ವಲಯ ಎ–7 (ಸಕಲೇಶಪುರ – ಸುಬ್ರಹ್ಮಣ್ಯ ರಸ್ತೆ ಸೆಕ್ಷನ್) ಯಲ್ಲಿ 01–07–2021 ರಿಂದ 30–06–2022ರ ಅವಧಿಗೆ ಸಿಮೆಂಟ್ ಮತ್ತು ಸ್ಟೀಲ್ ಸರಬರಾಜು ಒಳಗೊಂಡಂತೆ ಸಾಮಗ್ರಿಗಳ ಸರಬರಾಜು ಮತ್ತು ಕಾಮಗಾರಿಗಳನ್ನು ನಡೆಸಲು ವಲಯ ಗುತ್ತಿಗೆ. **ಸಬ್‌ವರ್ಕ್ – 1 :** ಸೇವಾ ಕಟ್ಟಡದ ದುರಸ್ತಿ ಮತ್ತು ನಿರ್ವಹಣೆ (ಹೆಚ್‌ಎಂಆರ್‌ಡಿಸಿ ಗೆ ಖರ್ಚನ್ನು ವಿಧಿಸಲಾಗುವುದು) **ಸಬ್‌ವರ್ಕ್ – 2 :** ಸಿಬ್ಬಂದಿ ವಸತಿಗೃಹಗಳು ಮತ್ತು ಕ್ಷೇಮಾಭ್ಯುದಯ ಕಟ್ಟಡಗಳ ದುರಸ್ತಿ ಮತ್ತು ನಿರ್ವಹಣೆ.	ರೂ. 1,55,00,000/-
8	ಸಹಾಯಕ ವಿಭಾಗೀಯ ಇಂಜಿನಿಯರ್, ಶಿವಮೊಗ್ಗ ಟೌನ್ ಇವರ ಅಡಿಯಲ್ಲಿನ ವಲಯ ಬಿ–1 ಬೀರೂರು (ಹೊರತುಪಡಿಸಿ) – ತಾಳಗುಪ್ಪ ಮತ್ತು ಕಡೂರು (ಹೊರತುಪಡಿಸಿ) – ಚಿಕ್ಕಮಗಳೂರು ಸೆಕ್ಷನ್‌ನಲ್ಲಿ 01–07–2021 ರಿಂದ 30–06–2022ರ ಅವಧಿಗೆ ಸಿಮೆಂಟ್ ಮತ್ತು ಸ್ಟೀಲ್ ಸರಬರಾಜು ಒಳಗೊಂಡಂತೆ ಸಾಮಗ್ರಿಗಳ ಸರಬರಾಜು ಮತ್ತು ಕಾಮಗಾರಿಗಳನ್ನು ನಡೆಸಲು ವಲಯ ಗುತ್ತಿಗೆ. **ಸಬ್‌ವರ್ಕ್ – 1 :** ಸೇವಾ ಕಟ್ಟಡದ ದುರಸ್ತಿ ಮತ್ತು ನಿರ್ವಹಣೆ. **ಸಬ್‌ವರ್ಕ್ – 2 :** ಸಿಬ್ಬಂದಿ ವಸತಿಗೃಹಗಳು ಮತ್ತು ಕ್ಷೇಮಾಭ್ಯುದಯ ಕಟ್ಟಡಗಳ ದುರಸ್ತಿ ಮತ್ತು ನಿರ್ವಹಣೆ.	ರೂ. 1,35,00,000/-
9	ಸಹಾಯಕ ವಿಭಾಗೀಯ ಇಂಜಿನಿಯರ್, ಅರಸೀಕೆರೆ ಇವರ ಅಡಿಯಲ್ಲಿನ ವಲಯ ಬಿ–2 ಸಂಪಿಗೆ ರಸ್ತೆ (ಹೊರತುಪಡಿಸಿ) – ಬೀರೂರು (ಒಳಗೊಂಡು) ಸೆಕ್ಷನ್‌ನಲ್ಲಿ 01–07–2021 ರಿಂದ 30–06–2022ರ ಅವಧಿಗೆ ಸಿಮೆಂಟ್ ಮತ್ತು ಸ್ಟೀಲ್ ಸರಬರಾಜು ಒಳಗೊಂಡಂತೆ ಸಾಮಗ್ರಿಗಳ ಸರಬರಾಜು ಮತ್ತು ಕಾಮಗಾರಿಗಳನ್ನು ನಡೆಸಲು ವಲಯ ಗುತ್ತಿಗೆ. **ಸಬ್‌ವರ್ಕ್ – 1 :** ಸೇವಾ ಕಟ್ಟಡದ ದುರಸ್ತಿ ಮತ್ತು ನಿರ್ವಹಣೆ. **ಸಬ್‌ವರ್ಕ್ – 2 :** ಸಿಬ್ಬಂದಿ ವಸತಿಗೃಹಗಳು ಮತ್ತು ಕ್ಷೇಮಾಭ್ಯುದಯ ಕಟ್ಟಡಗಳ ದುರಸ್ತಿ ಮತ್ತು ನಿರ್ವಹಣೆ.	ರೂ. 90,00,000/-
10	ವಲಯ ಬಿ–4 (ಬೀರೂರು (ಹೊರತುಪಡಿಸಿ) – ಚಿಕ್ಕಜಾಜೂರು ಮತ್ತು ವಲಯ ಬಿ–7 ಚಿಕ್ಕಜಾಜೂರು – ರಾಯದುರ್ಗ (ಹೊರತುಪಡಿಸಿ) ನಲ್ಲಿ 01–07–2021 ರಿಂದ 30–06–2022ರ ಅವಧಿಗೆ ಸಿಮೆಂಟ್ ಮತ್ತು ಸ್ಟೀಲ್ ಸರಬರಾಜು ಒಳಗೊಂಡಂತೆ ಸಾಮಗ್ರಿಗಳ ಸರಬರಾಜು ಮತ್ತು ಕಾಮಗಾರಿಗಳನ್ನು ನಡೆಸಲು ವಲಯ ಗುತ್ತಿಗೆ. **ಸಬ್‌ವರ್ಕ್ – 1 :** ಸೇವಾ ಕಟ್ಟಡದ ದುರಸ್ತಿ ಮತ್ತು ನಿರ್ವಹಣೆ. **ಸಬ್‌ವರ್ಕ್ – 2 :** ಸಿಬ್ಬಂದಿ ವಸತಿಗೃಹಗಳು ಮತ್ತು ಕ್ಷೇಮಾಭ್ಯುದಯ ಕಟ್ಟಡಗಳ ದುರಸ್ತಿ ಮತ್ತು ನಿರ್ವಹಣೆ.	ರೂ. 1,15,00,000/-
11	ವಲಯ ಬಿ–5 (ಚಿಕ್ಕಜಾಜೂರು (ಹೊರತುಪಡಿಸಿ) – ಕರಜ್‌ಗಿ (ಹೊರತುಪಡಿಸಿ) ಮತ್ತು ವಲಯ ಬಿ–6 (ಕೊಟ್ಟೂರು (ಹೊರತುಪಡಿಸಿ) – ಅಮರಾವತಿ ಸೆಕ್ಷನ್) ನಲ್ಲಿ 01–07–2021 ರಿಂದ 30–06–2022ರ ಅವಧಿಗೆ ಸಿಮೆಂಟ್ ಮತ್ತು ಸ್ಟೀಲ್ ಸರಬರಾಜು ಒಳಗೊಂಡಂತೆ ಸಾಮಗ್ರಿಗಳ ಸರಬರಾಜು ಮತ್ತು ಕಾಮಗಾರಿಗಳನ್ನು ನಡೆಸಲು ವಲಯ ಗುತ್ತಿಗೆ. **ಸಬ್‌ವರ್ಕ್ – 1 :** ಸೇವಾ ಕಟ್ಟಡದ ದುರಸ್ತಿ ಮತ್ತು ನಿರ್ವಹಣೆ. **ಸಬ್‌ವರ್ಕ್ – 2 :** ಸಿಬ್ಬಂದಿ ವಸತಿಗೃಹಗಳು ಮತ್ತು ಕ್ಷೇಮಾಭ್ಯುದಯ ಕಟ್ಟಡಗಳ ದುರಸ್ತಿ ಮತ್ತು ನಿರ್ವಹಣೆ.	ರೂ. 1,15,00,000/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 07–07–2021 ರಂದು 11:00 ಗಂಟೆಯವರೆಗೆ

ಹೆಚ್ಚಿನ ವಿವರಗಳಿಗೆ www.ireps.gov.in ಗೆ ಲಾಗ್‌ಆನ್ ಮಾಡಿ.

ವಿಭಾಗೀಯ ರೈಲ್ವೆ ವ್ಯವಸ್ಥಾಪಕರು (ಕಾಮಗಾರಿಗಳು), ಮೈಸೂರು

ಪಿಯುಬಿ/74/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2021–22

ಬ್ಯಾಂಕ್ ಆಫ್ ಮಹಾರಾಷ್ಟ್ರ

ಬೆಂಗಳೂರು ವಲಯ ಕಚೇರಿ,

ನಂ. 15, ಪೊಲೀಸ್ ಸ್ಟೇಷನ್ ರಸ್ತೆ, ಬಸವನಗುಡಿ, ಬೆಂಗಳೂರು–560004. ಫೋನ್: 080–46561239.

ಬೆಂಗಳೂರಿನಲ್ಲಿ ರೆಸಿಡೆನ್ಷಿಯಲ್ ಫ್ಲ್ಯಾಟ್‌ಗಳ ಖರೀದಿ

ಬ್ಯಾಂಕ್ ಆಫ್ ಮಹಾರಾಷ್ಟ್ರ ಇವರು, ತಮ್ಮ ವಲಯ ಕಚೇರಿ, ಬಸವನಗುಡಿ, ಬೆಂಗಳೂರು 560004 ವಿಳಾಸದಿಂದ 10–12 ಕಿ.ಮೀ. ವ್ಯಾಸದೊಳಗೆ ಹನ್ನೊಂದು ರೆಸಿಡೆನ್ಷಿಯಲ್ ಫ್ಲ್ಯಾಟ್‌ಗಳನ್ನು (3 ಬಿಎಚ್‌ಕೆ–01, 2 ಬಿಎಚ್‌ಕೆ–06, 1 ಬಿಎಚ್‌ಕೆ–04) ಖರೀದಿಸಲು ದ್ವಿಬಿಡ್ ವ್ಯವಸ್ಥೆಯಡಿ ಮೊಹರಾದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಇದಕ್ಕೆ ಸಂಬಂಧಿತ ಟೆಂಡರ್ ದಸ್ತಾವೇಜುಗಳು ವಲಯ ಕಚೇರಿ, ಬಸವನಗುಡಿ, ಬೆಂಗಳೂರು 560004 ವಿಳಾಸದಲ್ಲಿ ಲಭ್ಯವಿರುತ್ತವೆ ಅಥವಾ ಬ್ಯಾಂಕ್‌ನ **www.bankofmaharashtra.in** ವೆಬ್‌ಸೈಟ್‌ನಲ್ಲಿರುವ **"ಟೆಂಡರ್"** ಲಿಂಕ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಬಿಡ್‌ಪೂರ್ವ ಸಭೆಯನ್ನು **21.06.2021** ರಂದು ಕೈಗೊಳ್ಳಲಾಗುತ್ತದೆ. ಟೆಂಡರ್‌ಗಳನ್ನು ಸಲ್ಲಿಸುವ ಅಂತಿಮ ದಿನಾಂಕ 06.07.2021 ರಂದು 1700 ಗಂಟೆ. ತಾಂತ್ರಿಕ ಬಿಡ್‌ಗಳನ್ನು **08.07.2021 ರಂದು 1130 ಗಂಟೆಗೆ ತೆರೆಯಲಾಗುತ್ತದೆ ಮತ್ತು** ಇದಕ್ಕಾಗಿ ಬಿಡ್‌ದಾರರು ಮೇಲ್ಕಾಣಿಸಿದ ವಿಳಾಸದಲ್ಲಿ ಹಾಜರು ಇರಬೇಕೆಂದು ವಿನಂತಿಸಲಾಗಿದೆ. ಬ್ರೋಕರ್‌ಗಳ ಆಫರ್‌ಗಳನ್ನು ಸ್ವೀಕರಿಸಲಾಗುವುದಿಲ್ಲ ಮತ್ತು ಬ್ರೋಕರೇಜ್ ನೀಡಲಾಗುವುದಿಲ್ಲ.

ದಿನಾಂಕ: 20.06.2021 **ವಲಯ ಪ್ರಬಂಧಕರು, ಬೆಂಗಳೂರು ವಲಯ. ಫೋನ್: 080–46561239**

Air Force School ASTE, Murugeshpalya

invites applications for the post of

PGT (Biology), **TGT** (English, Drawing), **PRT, NTT, Helpers** (Ayah & Watchman). Details of basic qualification can be checked on **www.afsaste.edu.in**. Hard copies of resume with attested testimonials should be submitted / posted to **Air Force School ASTE, NAL Wind Tunnel Road, Murugeshpalya, Bengaluru – 560 017 (last date of receipt is 05 July 2021 upto 1000 hrs).** Soft copies will not be accepted.

Contact No. 080-25272332 / 25276920

TIMKEN

ಟಿಮ್‌ಕೆನ್ ಇಂಡಿಯಾ ನಿಯಮಿತ

CIN - L29130KA1996PLC048230

ನೋಂದಣಿ ಕಛೇರಿ: 39–42, ಎಲೆಕ್ಟ್ರಾನಿಕ್ ಸಿಟಿ, ಫೇಸ್ II, ಹೊಸೂರು ರಸ್ತೆ, ಬೆಂಗಳೂರು–560 100

ದೂರವಾಣಿ : 080 41362000 ಫ್ಯಾಕ್ಸ್: 080 41362010 ಇ–ಮೇಲ್ : tilinvestor@timken.com

ವೆಬ್‌ಸೈಟ್ : www.timken.com/en-in

ಸೆಕ್ಯೂರಿಟಿಸ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯ ನಿಬಂಧನೆ 33 (ಲಿಸ್ಟಿಂಗ್ ಅನಿವಾರ್ಯತೆ ಹಾಗೂ ತೆರೆದ ದಾಖಲಾತಿ ಅವಶ್ಯಕತೆಗಳು) ರ ಅನ್ವಯ ನಿಬಂಧನೆ 2015 ರ ಆದೇಶದ ಅಡಿಯಲ್ಲಿ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ದಾಖಲಿಸಿದ ಮಾರ್ಚ್ 31, 2021ಕ್ಕೆ ಕೊನೆಗೊಂಡ ತ್ರೈಮಾಸಿಕ ಹಾಗೂ ವಾರ್ಷಿಕ ಅವಧಿಯ ಪರಿಶೋಧಿತವಾದ ಆರ್ಥಿಕ ಫಲಿತಾಂಶದ ಪ್ರತ್ಯೇಕವಾದ ಸಾರಾಂಶ

(ರೂ.ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ವಿವರಗಳು	31/03/2021 ಕ್ಕೆ ಕೊನೆಗೊಂಡ ತ್ರೈಮಾಸಿಕ (ಪರಿಶೋಧಿತವಾದ)	31/03/2021ಕ್ಕೆ ಪ್ರಸ್ತುತ ವರ್ಷಕ್ಕೆ ಕೊನೆಗೊಂಡ ವರ್ಷದಿಂದ ಇಲ್ಲಿಯವರೆಗಿನ ಅಂಕಿ ಅಂಶಗಳು (ಪರಿಶೋಧಿತವಾದ)	31/03/2020 ಕ್ಕೆ ಕೊನೆಗೊಂಡ ತ್ರೈಮಾಸಿಕ (ಪರಿಶೋಧಿತವಾದ)
1.	ಕಾರ್ಯಾಚರಣೆಯಿಂದ ಒಟ್ಟು ಆದಾಯ (ನಿವ್ವಳ)	48,322	1,43,012	41,281
2.	ನಿವ್ವಳ ಲಾಭ / (ನಷ್ಟ) ಈ ಅವಧಿಗೆ (ತೆರಿಗೆ, ಅಸಾಮಾನ್ಯವಾದ ಮತ್ತು / ಅಥವಾ ಅಸಾಧಾರಣ ಬಾಬ್ತುಗಳ ಮುನ್ನ)	7,466	19,506	8,238
3.	ನಿವ್ವಳ ಲಾಭ / (ನಷ್ಟ) ಈ ಅವಧಿಯ ತೆರಿಗೆ ಮುನ್ನ (ಅಸಾಮಾನ್ಯವಾದ ಮತ್ತು / ಅಥವಾ ಅಸಾಧಾರಣ ಬಾಬ್ತುಗಳ ನಂತರ #)	7,466	19,506	8,238
4.	ನಿವ್ವಳ ಲಾಭ / (ನಷ್ಟ) ಈ ಅವಧಿಯ ತೆರಿಗೆ ನಂತರ (ಅಸಾಮಾನ್ಯವಾದ ಮತ್ತು / ಅಥವಾ ಅಸಾಧಾರಣ ಬಾಬ್ತುಗಳ ನಂತರ #)	5,293	14,318	6,125
5.	ಈ ಅವಧಿಯ ಒಟ್ಟು ಸಮಸ್ತ ಆದಾಯ {ಲಾಭ/(ನಷ್ಟ) ಒಳಗೊಂಡಂತೆ ಈ ಅವಧಿಗೆ (ತೆರಿಗೆ ನಂತರ) ಹಾಗೂ ಇತರೆ ಸಮಸ್ತ ಆದಾಯ (ತೆರಿಗೆ ನಂತರ)}	5,426	14,286	6,179
6.	ಈಕ್ವಿಟಿ ಷೇರು ಬಂಡವಾಳ	7,522	7,522	7,521
7.	ಪ್ರತಿ ಷೇರಿನ ಗಳಿಕೆಗಳು (ಪ್ರತಿ ರೂ.10/–ರಂತೆ) (ನಿರಂತರ ಕಾರ್ಯಾಚರಣೆಗಳಿಗೆ) ಮೂಲತವಾದ ಹಾಗೂ ದುರ್ಬಲಗೊಳಿಸಿದ *ವಾರ್ಷಿಕವಲ್ಲದ	7.04*	19.03	8.14*

ಮೇಲೆ ತಿಳಿಸಿರುವ ಫಲಿತಾಂಶವು ಸೆಕ್ಯೂರಿಟಿಸ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯ ನಿಬಂಧನೆ 33 (ಲಿಸ್ಟಿಂಗ್ ಅನಿವಾರ್ಯತೆ ಹಾಗೂ ತೆರೆದ ದಾಖಲಾತಿ ಅವಶ್ಯಕತೆಗಳು) ರ ಅನ್ವಯ ನಿಬಂಧನೆ 2015 ರ ಆದೇಶದ ಅಡಿಯಲ್ಲಿ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ದಾಖಲಿಸಿದ ತ್ರೈಮಾಸಿಕ ಅವಧಿಯ ಪರಿಶೋಧಿತವಾದ ಆರ್ಥಿಕ ಫಲಿತಾಂಶದ ಸಂಪೂರ್ಣವಾದ ನಮೂನೆಯ ಪ್ರತ್ಯೇಕವಾದ ಸಾರಾಂಶ. ತ್ರೈಮಾಸಿಕ ಆರ್ಥಿಕ ಫಲಿತಾಂಶದ ಪೂರ್ಣ ನಮೂನೆಯು ಸ್ಟಾಕ್ ಎಕ್ಸ್‌ಚೇಂಜ್ ವೆಬ್‌ಸೈಟ್‌ಗಳಲ್ಲಿ ಲಭ್ಯವಿದೆ (BSE: www.bseindia.com & NSE: www.nseindia.com) ಮತ್ತು ಕಂಪನಿ ವೆಬ್‌ಸೈಟ್ www.timken.com/en-in ನಲ್ಲಿಯು ವೀಕ್ಷಿಸಬಹುದು.

ಮಂಡಳಿಯ ಆದೇಶದಂತೆ
ಸಹಿ/– ಅವಿಶ್ರಾಂತ್ ಕೇಶವ
ಪೂರ್ಣ–ಅವಧಿಯ ನಿರ್ದೇಶಕರು
DIN: 07292484

ಸ್ಥಳ: ಬೆಂಗಳೂರು
ದಿನಾಂಕ: 18 ಜೂನ್, 2021

ನಾಳೆಯಿಂದ ಮೆಟ್ರೊ ರೈಲು ಸೇವೆ ಪುನರಾರಂಭ ● ವಾರಾಂತ್ಯದಲ್ಲಿ ಇಲ್ಲ

ದಿನದಲ್ಲಿ 7 ತಾಸು ಸಂಚಾರಕ್ಕೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಸೋಮವಾರದಿಂದ (ಜೂನ್ 21) ಮೆಟ್ರೊ ರೈಲು ಸಂಚಾರ ಪುನರಾರಂಭಗೊಳ್ಳಲಿದ್ದು, ದಿನಕ್ಕೆ 7 ತಾಸು ಮಾತ್ರ ಸೇವೆ ಲಭ್ಯವಾಗಲಿದೆ. ವಾರಾಂತ್ಯ ಕರ್ಫ್ಯೂ ಜಾರಿಯಲ್ಲಿ ಇರುವುದರಿಂದ ಶನಿವಾರ-ಭಾನುವಾರ ಮೆಟ್ರೊ ರೈಲು ಸೇವೆ ಇರುವುದಿಲ್ಲ.

'ನಮ್ಮ ಮೆಟ್ರೊ'ದ ಹಸಿರು ಮತ್ತು ನೇರಳೆ ಮಾರ್ಗ ಎರಡರಲ್ಲಿಯೂ ಬೆಳಿಗ್ಗೆ 7ರಿಂದ 11ರವರೆಗೆ ಮತ್ತು ಮಧ್ಯಾಹ್ನ 3ರಿಂದ ಸಂಜೆ 6ರವರೆಗೆ ಐದು ನಿಮಿಷಗಳ ಅಂತರದಲ್ಲಿ ಮೆಟ್ರೊ ರೈಲುಗಳು ಸಂಚರಿಸಲಿವೆ. ಪ್ರಯಾಣಿಕರ ದಟ್ಟಣೆ ಹೆಚ್ಚಿದ್ದರೆ, ರೈಲುಗಳ ನಡುವಣ ಕಾರ್ಯಾಚರಣೆ ಅವಧಿಯ ಅಂತರವನ್ನು ತಗ್ಗಿಸಲಾಗುವುದು ಎಂದು ಬೆಂಗಳೂರು ಮೆಟ್ರೊ ರೈಲು ನಿಗಮ (ಬಿಎಂಆರ್‌ಸಿಎಲ್) ಹೇಳಿದೆ. ಸಂಜೆ 6ಗಂಟೆಗೆ ನಾಲ್ಕೂ ಟರ್ಮಿನಲ್‌ಗಳ ಕಡೆಗೆ ಏಕಕಾಲದಲ್ಲಿ ಕೊನೆಯ ಮೆಟ್ರೊ ರೈಲುಗಳು ಹೊರಡಲಿವೆ.

ಸ್ಮಾರ್ಟ್ ಕಾರ್ಡ್ ಇರಬೇಕು: ಜನ ಪರಸ್ಪರ ಸಂಪರ್ಕಕ್ಕೆ ಬರುವುದನ್ನು ಆದಷ್ಟು ಕಡಿಮೆ ಮಾಡುವ ಉದ್ದೇಶದಿಂದ ನಿಗಮವು ಟೋಕನ್ ವಿತರಿಸುತ್ತಿಲ್ಲ. ಸ್ಮಾರ್ಟ್ ಕಾರ್ಡ್ ಹೊಂದಿದವರಿಗೆ ಮಾತ್ರ ಪ್ರಯಾಣಕ್ಕೆ ಅವಕಾಶವಿದೆ. ಮೊಬೈಲ್ ಅಪ್ಲಿಕೇಷನ್ ಹಾಗೂ ಬಿಎಂಆರ್‌ಸಿಎಲ್ ವೆಬ್‌ಸೈಟ್ ಮೂಲಕವೂ ಸ್ಮಾರ್ಟ್ ಕಾರ್ಡ್ ಖರೀದಿ ಮತ್ತು ರಿಚಾರ್ಜ್ ಮಾಡಿಕೊಳ್ಳಬಹುದು ಎಂದೂ ಬಿಎಂಆರ್‌ಸಿಎಲ್ ಹೇಳಿದೆ. ನಿಲ್ದಾಣಗಳ ಕೌಂಟರ್‌ಗಳಲ್ಲಿ ನಗದು ನೀಡಿಯೂ ಹೊಸ ಸ್ಮಾರ್ಟ್ ಕಾರ್ಡ್‌ಗಳನ್ನು ಖರೀದಿಸಬಹುದಾಗಿದೆ.

ಶೇ 50ರಷ್ಟು ಅವಕಾಶ: ರೈಲುಗಳು ಶೇ 50ರಷ್ಟು ಆಸನಗಳು ಭರ್ತಿಯೊಂದಿಗೆ ಸಂಚರಿಸಲಿವೆ. ರೈಲಿನೊಳಗೆ ಮಾತ್ರವಲ್ಲದೆ, ಎಸ್ಕಲೇಟರ್‌ಗಳಲ್ಲಿ ಹೋಗುವಾಗಲೂ ಅಂತರ ಕಾಯ್ದುಕೊಳ್ಳಬೇಕು. ಲಿಫ್ಟ್‌ಗಳಲ್ಲಿ ಒಮ್ಮೆಗೆ ಗರಿಷ್ಠ ನಾಲ್ಕು ಜನ ಮಾತ್ರ ಹೋಗಬಹುದು ಎಂದು ನಿಗಮ ಹೇಳಿದೆ.

ನಿಲ್ದಾಣಗಳ ಪ್ರವೇಶ ದ್ವಾರಗಳಲ್ಲೇ ಪ್ರಯಾಣಿಕರ ದೇಹದ ಉಷ್ಣಾಂಶ ಪರೀಕ್ಷೆ ಮಾಡಲಾಗುವುದು. ಸ್ಯಾನಿಟೈಸರ್ ವ್ಯವಸ್ಥೆಯನ್ನೂ ಕಲ್ಪಿಸಲಾಗುತ್ತದೆ. ಆದರೂ, ಪ್ರಯಾಣಿಕರು ಸ್ವಂತ ಸ್ಯಾನಿಟೈಸರ್ ಹೊಂದುವುದು ಉತ್ತಮ. ಪ್ರಯಾಣಿಕರು ಕಡ್ಡಾಯವಾಗಿ ಮಾಸ್ಕ್ ಧರಿಸಿರಬೇಕು ಎಂದು ಬಿಎಂಆರ್‌ಸಿಎಲ್ ಪ್ರಕಟಣೆಯಲ್ಲಿ ಹೇಳಿದೆ.

ಸುರಂಗ ಕೊರೆಯಲು ಎಂಟು ಟಿಬಿಎಂ ಸಿದ್ಧ

ಬೆಂಗಳೂರು: 'ನಮ್ಮ ಮೆಟ್ರೊ'ದ ಎರಡನೇ ಹಂತದಲ್ಲಿ ಸುರಂಗ ಮಾರ್ಗ ನಿರ್ಮಾಣಕ್ಕಾಗಿ ಸದ್ಯ ಎಂಟು ಸುರಂಗ ಕೊರೆಯುವ ಯಂತ್ರಗಳು (ಟಿಬಿಎಂ) ಕಾರ್ಯಾಚರಣೆಗೆ ಇಳಿದಿವೆ.

ಎರಡನೇ ಹಂತದಲ್ಲಿ ಒಟ್ಟು 14 ಕಿ.ಮೀ. ಉದ್ದದ ಸುರಂಗ ಮಾರ್ಗ ನಿರ್ಮಾಣವಾಗಲಿದೆ. ಎಂಟನೆಯ 'ಭದ್ರಾ' ಯಂತ್ರವನ್ನು ಇತ್ತೀಚೆಗಷ್ಟೇ ನೆಲಕ್ಕಿಳಿಸಲಾಗಿದೆ. ಟ್ಯಾನರಿ ರಸ್ತೆಯಿಂದ ನಾಗವಾರ ನಡುವಿನ ವೆಂಕಟೇಶಪುರದ ನೆಲದಡಿಯ ನಿಲ್ದಾಣದಲ್ಲಿ ಈ ಟಿಬಿಎಂ ಕಾರ್ಯಾರಂಭ ಮಾಡಲಿದೆ ಎಂದು ಬೆಂಗಳೂರು ಮೆಟ್ರೊ ರೈಲು ನಿಗಮ (ಬಿಎಂಆರ್‌ಸಿಎಲ್) ಹೇಳಿದೆ.

ಸುಮಾರು 850 ಮೀಟರ್ ಉದ್ದದ ಈ ಮಾರ್ಗದಲ್ಲಿ ಟ್ಯಾನರಿ ರಸ್ತೆ, ವೆಂಕಟೇಶಪುರ, ಕಾಡುಗೊಂಡನಹಳ್ಳಿ ಮತ್ತು ನಾಗವಾರ ನಿಲ್ದಾಣಗಳು ನಿರ್ಮಾಣವಾಗಲಿವೆ.

ಜೂನ್ ತಿಂಗಳ ವಾರ್ತಾ ಪತ್ರಿಕೆಯನ್ನು ನಿಗಮವು ಶನಿವಾರ ಪ್ರಕಟಿಸಿದ್ದು, ಅದರಲ್ಲಿ ಈ ಮಾಹಿತಿ ನೀಡಿದೆ.

ಕಾಮಗಾರಿ ಪ್ರಗತಿ: ಡೇರಿ ವೃತ್ತದಿಂದ ಟ್ಯಾನರಿ ರಸ್ತೆ ನಡುವಿನ 9.28 ಕಿ.ಮೀ. ಮಾರ್ಗದಲ್ಲಿ ಸುರಂಗ ಕಾಮಗಾರಿ ವಿವಿಧ ಹಂತಗಳಲ್ಲಿ ನಡೆಯುತ್ತಿದೆ.

ಕಂಟೋನ್ಮೆಂಟ್- ಶಿವಾಜಿನಗರ ಮಧ್ಯೆ ಸುರಂಗ ನಿರ್ಮಿಸುತ್ತಿರುವ ಟಿಬಿಎಂ ಊರ್ಜಾ, 576 ರಿಂಗ್‌ಗಳ ಪೈಕಿ 319 ರಿಂಗ್‌ಗಳನ್ನು ನಿರ್ಮಿಸುವ ಕಾರ್ಯವನ್ನು ಪೂರ್ಣಗೊಳಿಸಿದೆ. ಇದೇ ಮಾರ್ಗದಲ್ಲಿ ಕಾರ್ಯಾಚರಣೆಗಿಳಿದಿರುವ 'ವಿಂಧ್ಯ' ಸುಮಾರು 254 ರಿಂಗ್‌ಗಳನ್ನು ಪೂರ್ಣಗೊಳಿಸಿದೆ.

ಅದೇ ರೀತಿ, ಶಿವಾಜಿನಗರ-ಎಂ.ಜಿ. ರಸ್ತೆ ಕಡೆಗೆ ಸಾಗುತ್ತಿರುವ 'ಅವನಿ' ಯಂತ್ರವು 337 ರಿಂಗ್‌ಗಳನ್ನು ಪೂರ್ಣಗೊಳಿಸಿದೆ. ಇದೇ ಮಾರ್ಗದಲ್ಲಿ ಕಾರ್ಯಾಚರಿಸುತ್ತಿರುವ 'ಲವಿ' ಯಂತ್ರ 126 ರಿಂಗ್‌ಗಳನ್ನು ಪೂರೈಸಿದೆ.

ವೆಲ್ಲಾರ ಜಂಕ್ಷನ್‌ನಿಂದ ಲ್ಯಾಂಗ್‌ಫೋರ್ಡ್ ರಸ್ತೆ ಮಧ್ಯೆ ಮಾರ್ಚ್‌ನಿಂದ ಸುರಂಗ ಕೊರೆಯುವ ಕಾರ್ಯ ಆರಂಭಿಸಿರುವ ಆರ್‌ಟಿ01 ಟಿಬಿಎಂ 429 ರಿಂಗ್‌ಗಳ ಪೈಕಿ 55 ರಿಂಗ್‌ಗಳನ್ನು (ಶೇ 13ರಷ್ಟು) ಪೂರ್ಣಗೊಳಿಸಿದೆ ಎಂದು ನಿಗಮವು ವಾರ್ತಾಪತ್ರದಲ್ಲಿ ತಿಳಿಸಿದೆ.

ಮೇ ಅಂತ್ಯದವರೆಗೆ ಸಿವಿಲ್ ಕಾಮಗಾರಿ ಪ್ರಗತಿ (ಶೇ ದಲ್ಲಿ)

ಮಾರ್ಗ	ಪ್ರಗತಿ
ಬೈಯಪ್ಪನಹಳ್ಳಿ- ವಿಶ್ವೇಶ್ವರಯ್ಯ ಕೈಗಾರಿಕೆ ಪ್ರದೇಶ	87
ವಿಶ್ವೇಶ್ವರಯ್ಯ ಕೈಗಾರಿಕೆ ಪ್ರದೇಶ -ವೈಟ್‌ಫೀಲ್ಡ್	99
ಮೈಸೂರು ರಸ್ತೆ-ಪಟ್ಟಣಗೆರೆ	96
ಪಟ್ಟಣಗೆರೆ-ಚಲ್ಲಘಟ್ಟ	95
ಹೆಸರಘಟ್ಟ ಕ್ರಾಸ್- ಬಿಐಇಸಿ	71
ಬೊಮ್ಮಸಂದ್ರ-ಹೊಸ ರಸ್ತೆ	83
ಹೊಸ ರಸ್ತೆ- ಬೊಮ್ಮನಹಳ್ಳಿ	92
ಬೊಮ್ಮನಹಳ್ಳಿ- ಆರ್.ವಿ. ರಸ್ತೆ	43
ಕಾಳೇನ ಅಗ್ರಹಾರ- ಸ್ವಾಗತ್ ಕ್ರಾಸ್ ರಸ್ತೆ	37

ವೆಂಕಟೇಶಪುರ ನಿಲ್ದಾಣದಲ್ಲಿ ಕಾರ್ಯಾಚರಣೆಗೆ ಇಳಿದಿರುವ ಟಿಬಿಎಂ ಭದ್ರಾ ಚಿತ್ರ: ಬಿಎಂಆರ್‌ಸಿಎಲ್

ಮುಖ್ಯಮಂತ್ರಿ ಆಗುವುದಲ್ಲ, ಪಕ್ಷ ಅಧಿಕಾರಕ್ಕೆ ತರುವುದೇ ಗುರಿ: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ಮುಖ್ಯಮಂತ್ರಿಯಾಗಲು ನನಗೆ, ಸಿದ್ದರಾಮಯ್ಯ, ಮಲ್ಲಿಕಾರ್ಜುನ ಖರ್ಗೆ, ಜಿ. ಪರಮೇಶ್ವರ ಹೀಗೆ ಇನ್ನೂ ಯಾರ‍್ಯಾರಿಗೊ ಆಸೆ ಇರಬಹುದು. ಆದರೆ, ನಮ್ಮ ಗುರಿ ಮುಖ್ಯಮಂತ್ರಿ ಆಗುವುದಲ್ಲ. ಪಕ್ಷವನ್ನು ಅಧಿಕಾರಕ್ಕೆ ತರುವುದು' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, 'ಸಾಮೂಹಿಕ ನಾಯಕತ್ವದಲ್ಲಿ ಕಾಂಗ್ರೆಸ್ ಪಕ್ಷ ಚುನಾವಣೆ ಎದುರಿಸಲಿದೆ. ಪಕ್ಷ ಮುಖ್ಯ. ವ್ಯಕ್ತಿ ಪೂಜೆ ಅಲ್ಲ' ಎಂದರು.

'ಮುಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ' ಎಂದು ಚಾಮರಾಜಪೇಟೆ ಶಾಸಕ ಜಮೀರ್ ಅಹ್ಮದ್ ಖಾನ್ ಪದೇ ಪದೇ ಹೇಳುತ್ತಿರುವ ಬಗ್ಗೆ ಪ್ರತಿಕ್ರಿಯಿಸಿದ ಶಿವಕುಮಾರ್, 'ಎಲ್ಲರೂ ಹದ್ದು-ಬಸ್ತಿನಲ್ಲಿರಬೇಕು ಎಂದು ನಾನೂ ಹೇಳಿದ್ದೇನೆ, ದೆಹಲಿ ನಾಯಕರೂ ಹೇಳಿದ್ದಾರೆ. ಕೆಲವರು ವೈಯಕ್ತಿಕ ಅಭಿಪ್ರಾಯ ಹೇಳಿರಬಹುದು. ಈ ವಿಚಾರವಾಗಿ ಕರೆದು ವಿವರಣೆ ಕೇಳಿದ್ದೇನೆ. ಪಕ್ಷದಲ್ಲಿ ಯಾವುದೇ ಗೊಂದಲಗಳಿಲ್ಲ. ಕೆಪಿಸಿಸಿ ಅಧ್ಯಕ್ಷನಾಗಿ ನಾನು ಇಲ್ಲಿದ್ದೇನೆ' ಎಂದರು.

ವ್ಯಾಕ್ಸಿನೇಟ್ ಕರ್ನಾಟಕ: 'ರಾಹುಲ್ ಗಾಂಧಿ ಜನ್ಮದಿನ (ಜೂನ್ 19) ಪ್ರಯುಕ್ತ ಪಕ್ಷದ ವತಿಯಿಂದ 'ವ್ಯಾಕ್ಸಿನೇಟ್ ಕರ್ನಾಟಕ' ಎಂಬ ಅಭಿಯಾನ ಆರಂಭಿಸಿದ್ದು, ಇದರಲ್ಲಿ 17 ವರ್ಷದೊಳಗಿನ ವಿದ್ಯಾರ್ಥಿಗಳು ಸೇರಿ ಎಲ್ಲರೂ ಲಸಿಕೆ ಪಡೆಯುವ ಬಗ್ಗೆ ಜಾಗೃತಿ ಮೂಡಿಸಲು ತಮ್ಮದೇ ಆದ ರೀತಿಯಲ್ಲಿ ಎರಡು ನಿಮಿಷದ ವಿಡಿಯೊ ಮಾಡಿ, ಜುಲೈ 1ರ ಒಳಗೆ ಅದನ್ನು www.vaccinatekarnataka.com ಗೆ ಅಪ್‌ಲೋಡ್ ಮಾಡಬಹುದು. ವಿಡಿಯೊಗಳನ್ನು ಹಾಡು, ನೃತ್ಯ, ಸಂಗೀತ, ಕಲೆ ಸೇರಿದಂತೆ ಸೃಜನಾತ್ಮಕವಾಗಿ ಮಾಡಬಹುದು. ಅತ್ಯುತ್ತಮ ವಿಡಿಯೊ ಮಾಡಿದ 100 ಮಂದಿಗೆ ಆಂಡ್ರಾಯ್ಡ್ ಟ್ಯಾಬ್ ಬಹುಮಾನವಾಗಿ ನೀಡಲಾಗುವುದು' ಎಂದರು.

ತೃತೀಯ ಲಿಂಗಿಗಳಿಗೆ ಶೇ 1ರಷ್ಟು ಮೀಸಲಾತಿ: ಹೈಕೋರ್ಟ್‌ಗೆ ಮಾಹಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಲಿ ಇರುವ ಸರ್ಕಾರಿ ಹುದ್ದೆಗಳಲ್ಲಿ ತೃತೀಯ ಲಿಂಗಿ ಸಮುದಾಯದವರಿಗೆ ಶೇ 1ರಷ್ಟು ಹುದ್ದೆ ಕಾಯ್ದಿರಿಸಲು ಕರ್ನಾಟಕ ನಾಗರಿಕ ಸೇವೆಗಳ ನಿಯಮಾವಳಿಗೆ ತಿದ್ದುಪಡಿ ತರಲು ಪ್ರಸ್ತಾಪಿಸಲಾಗಿದೆ ಎಂದು ಹೈಕೋರ್ಟ್‌ಗೆ ರಾಜ್ಯ ಸರ್ಕಾರ ಮಾಹಿತಿ ನೀಡಿದೆ.

ತೃತೀಯ ಲಿಂಗಿಗಳ ಪರ ಕೆಲಸ ಮಾಡುವ 'ಸಂಗಮ' ಸಂಘಟನೆ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ ಪ್ರತಿಕ್ರಿಯೆ ಸಲ್ಲಿಸಿದ ಸರ್ಕಾರ, ಈ ವಿವರ ನೀಡಿದೆ.

'ಉದ್ಯೋಗ, ಶಿಕ್ಷಣದಲ್ಲಿ ಮೀಸಲಾತಿ ಪಡೆಯುವುದು ತೃತೀಯ ಲಿಂಗಿಗಳ ಮೂಲಭೂತ ಹಕ್ಕು' ಎಂದು ಸುಪ್ರೀಂ ಕೋರ್ಟ್ ಆದೇಶಿಸಿದೆ. ಇದನ್ನು ಉಲ್ಲಂಘಿಸಿ ಪೊಲೀಸ್ ಇಲಾಖೆ 2,467 ಸಿಬ್ಬಂದಿ ನೇಮಕಕ್ಕೆ ಮುಂದಾಗಿದೆ. ಪುರುಷ ಮತ್ತು ಮಹಿಳೆಯರಿಗಷ್ಟೇ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿದೆ' ಎಂದು ಅರ್ಜಿದಾರರು ಆರೋಪಿಸಿದರು.

'ಸಾಮಾನ್ಯ, ಪರಿಶಿಷ್ಟ ಜಾತಿ ಮತ್ತು ಪಂಗಡ, ಹಿಂದುಳಿದ ವರ್ಗ ಸೇರಿ ಪ್ರತಿಯೊಂದು ವಿಭಾಗದಲ್ಲೂ ಶೇ 1ರಷ್ಟು ಹುದ್ದೆಯನ್ನು ತೃತೀಯ ಲಿಂಗಿಗಳ ಸಮುದಾಯಕ್ಕೆ ಮೀಸಲಿಡಲಾಗುವುದು. ಈ ಸಂಬಂಧ ಮೇ 13ರಂದು ಕರಡು ಅಧಿಸೂಚನೆ ಪ್ರಕಟಿಸಲಾಗಿದೆ. ಇದಕ್ಕೆ ಯಾರಿಂದಲೂ ಆಕ್ಷೇಪಣೆ ಬಂದಿಲ್ಲ' ಎಂದು ಸರ್ಕಾರದ ಪರ ವಕೀಲರು ವಿವರಿಸಿದರು.

'ಛಂದ ಪುಸ್ತಕ': ಹಸ್ತಪ್ರತಿ ಆಹ್ವಾನ

ಬೆಂಗಳೂರು: ಹೊಸ ಕತೆಗಾರರ ಪುಸ್ತಕಗಳನ್ನು ಪ್ರಕಟಿಸುತ್ತಿರುವ ಛಂದ ಪುಸ್ತಕವು ಈ ಸಾಲಿನ 'ಛಂದ ಪುಸ್ತಕ' ಬಹುಮಾನಕ್ಕೆ ಹಸ್ತಪ್ರತಿಗಳನ್ನು ಆಹ್ವಾನಿಸಿದೆ.

ಈವರೆಗೆ ಕಥಾಸಂಕಲನ ಹೊರತಂದಿರದ ಲೇಖಕರಿಗೆ ಮಾತ್ರ ಅವಕಾಶ ನೀಡಲಾಗಿದೆ. ಆದರೆ, ಸಾಹಿತ್ಯದ ಇತರ ಪ್ರಕಾರಗಳಲ್ಲಿ ಒಂದೆರಡು ಪುಸ್ತಕಗಳನ್ನು ಪ್ರಕಟಿಸಿದವರೂ ಹಸ್ತಪ್ರತಿಗಳನ್ನು ಕಳುಹಿಸಬಹುದು. ಆಯ್ಕೆಯಾದ ಕತೆಗಾರರಿಗೆ ₹ 30 ಸಾವಿರ ಬಹುಮಾನದ ಜತೆಗೆ ಅವರ ಕಥಾಸಂಕಲನವನ್ನು ಪ್ರಕಟಿಸಲಾಗುತ್ತದೆ. ಕತೆಗಳನ್ನು ಕೊರಿಯರ್ ಮೂಲಕ ಜು.10ರೊಳಗೆ ಛಂದ ಪುಸ್ತಕ, C/O ವಸುಧೇಂದ್ರ, ಐ-004, ಮಂತ್ರಿ ಪ್ಯಾರಡೈಸ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು–560 076 ಈ ವಿಳಾಸಕ್ಕೆ ಕಳುಹಿಸುವಂತೆ ಪ್ರಕಟಣೆ ಕೋರಿದೆ.

ಸಂಪರ್ಕಕ್ಕೆ: vas123u@rocketmail.com, ವಾಟ್ಸ್‌ಆ್ಯಪ್ ಸಂ: 98444 22782

ತಮಿಳುನಾಡು ಸೇರುತ್ತಿರುವ 396 ಟಿಎಂಸಿ ಅಡಿ ನೀರು: ಗಡಿ ಮತ್ತು ನದಿ ರಕ್ಷಣಾ ಆಯೋಗ ಪತ್ರ

'ಕಾವೇರಿ: ಹೆಚ್ಚುವರಿ ನೀರಿನ ಮೇಲೆ ಹಕ್ಕು ಮಂಡಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಳಕೆಯಾಗದೆ ಹರಿದು ಹೋಗುವ ಹೆಚ್ಚುವರಿ ನೀರಿನಲ್ಲಿ ಕರ್ನಾಟಕ ಸರ್ಕಾರ ಈವರೆಗೆ ಪಾಲು ಕೇಳದ ಕಾರಣ 46 ವರ್ಷಗಳಿಂದ ತಮಿಳುನಾಡಿಗೆ 396 ಟಿಎಂಸಿ ಅಡಿ ನೀರು ಹರಿದು ಹೋಗುತ್ತಿದೆ. ಹೆಚ್ಚುವರಿ ನೀರಿನಲ್ಲಿ ಕರ್ನಾಟಕ ಪಾಲು ಕೇಳಿ ಹಕ್ಕು ಮಂಡಿಸುವಂತೆ ಕರ್ನಾಟಕ ಗಡಿ ಮತ್ತು ನದಿ ರಕ್ಷಣಾ ಆಯೋಗ ರಾಜ್ಯ ಸರ್ಕಾರಕ್ಕೆ ಸಲಹೆ ನೀಡಿದೆ.

ಆಯೋಗದ ಅಧ್ಯಕ್ಷ ನ್ಯಾಯಮೂರ್ತಿ ಕೆ.ಎಲ್. ಮಂಜುನಾಥ್ ಅವರು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಬರೆದಿರುವ ಪತ್ರದಲ್ಲಿ ಈ ಸಲಹೆ ನೀಡಿದ್ದಾರೆ.

ಹಕ್ಕು ಮಂಡಿಸಿದರೆ ಕನಿಷ್ಠ 50ರಿಂದ 100 ಟಿಎಂಸಿ ಅಡಿ ನೀರು ರಾಜ್ಯಕ್ಕೆ ಸಿಗಲಿದೆ. ಆಗ ಬೆಂಗಳೂರಿನ ಕುಡಿಯುವ ನೀರಿನ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದು

ನ್ಯಾ. ಕೆ.ಎಲ್.ಮಂಜುನಾಥ್
ಕರ್ನಾಟಕ ಗಡಿ ಮತ್ತು ನದಿ ರಕ್ಷಣಾ ಆಯೋಗದ ಅಧ್ಯಕ್ಷ

ಪ್ರವಾಹ ಸಂದರ್ಭ ಮತ್ತು ವಾಡಿಕೆಗಿಂತ ಹೆಚ್ಚಿನ ಮಳೆಯಾಗುವ ವರ್ಷಗಳಲ್ಲಿ ನೀರು ಸಂಗ್ರಹ ಸಾಧ್ಯವಾಗದೆ ನದಿಗೆ ಹರಿ ಬಿಡಲಾಗುತ್ತಿದೆ. 1974–75ನೇ ಸಾಲಿನಿಂದ ಈವರೆಗೆ ಬಿಳಿಗುಂಡ್ಲು ಗೇಟ್‌ನಲ್ಲಿ ಹರಿದು ಹೋಗಿರುವ ನೀರಿನ ಪ್ರಮಾಣದ ಅಂಕಿ-ಅಂಶದ ಪಟ್ಟಿ ಗಮನಿಸಿದರೆ ವರ್ಷಕ್ಕೆ ಸರಾಸರಿ 396.201 ಟಿಎಂಸಿ ಅಡಿ ನೀರು ಹರಿದು ಹೋಗಿದೆ ಎಂದು ಅವರು ವಿವರಿಸಿದ್ದಾರೆ.

'ಕಾವೇರಿ ನದಿ ನೀರು ಹಂಚಿಕೆ ಕುರಿತ ಸುಪ್ರೀಂ ಕೋರ್ಟ್ ತೀರ್ಪಿನ ಪ್ರಕಾರ ವರ್ಷಕ್ಕೆ 177.25 ಟಿಎಂಸಿ ಅಡಿ ನೀರನ್ನು ತಮಿಳುನಾಡಿಗೆ ಕರ್ನಾಟಕದಿಂದ ಹರಿಸಬೇಕಾಗಿದೆ. ಎರಡು ಪಟ್ಟಿಗೂ ಹೆಚ್ಚಿನ ನೀರು ತಮಿಳುನಾಡಿಗೆ ಪ್ರತಿವರ್ಷ ಹರಿದು ಹೋಗುತ್ತಿದೆ.

'ಕರ್ನಾಟಕದಿಂದ ಹೆಚ್ಚುವರಿಯಾಗಿ ನೀರು ಹರಿದು ಬರುತ್ತಿದೆ ಎಂಬುದನ್ನು ತಮಿಳುನಾಡು ಸರ್ಕಾರವೇ ಸ್ವತಃ ಒಪ್ಪಿಕೊಂಡಿದೆ. ಕಾವೇರಿ ನೀರನ್ನು ಸೇಲಂ ಜಿಲ್ಲೆಯ ಎಡಪಾಡಿ, ಒಮಲೂರು, ಸಂಕರಿ, ಮೆಟ್ಟೂರು ಕಡೆಗೆ ತಿರುಗಿಸಲು ಯೋಜನೆಯೊಂದನ್ನು ತಮಿಳುನಾಡು ರೂಪಿಸಿದೆ. ಇದಕ್ಕೆ ಅಲ್ಲಿನ ಕಾವೇರಿ ನೀರು ಬಳಕೆದಾರ ರೈತರ ಸಂಘ ವಿರೋಧ ವ್ಯಕ್ತಪಡಿಸಿ 2020ರಲ್ಲಿ ಮದ್ರಾಸ್ ಹೈಕೋರ್ಟ್ ಮೆಟ್ಟಿಲೇರಿತ್ತು. ಕೋರ್ಟ್‌ಗೆ ಅಫಿಡವಿಟ್ ಸಲ್ಲಿಸಿರುವ ತಮಿಳುನಾಡು ಸರ್ಕಾರ, 'ಕರ್ನಾಟಕದಲ್ಲಿ ನೀರು ಸಂಗ್ರಹ ಸಾಮರ್ಥ್ಯ ಕಡಿಮೆ ಇರುವ ಕಾರಣ ಹೆಚ್ಚುವರಿ ನೀರು ಹರಿದು ಬರುತ್ತಿದೆ. ಅದನ್ನಷ್ಟೇ ಬೇರೆ ಕಡೆಗೆ ತಿರುಗಿಸಲು ಯೋಜನೆ ರೂಪಿಸಲಾಗಿದೆ. ಇಲ್ಲದಿದ್ದರೆ ನೀರು ಸಮುದ್ರಕ್ಕೆ ಪೋಲಾಗಿ ಹರಿದು ಹೋಗಲಿದೆ ಎಂದು ತಿಳಿಸಿದೆ.'

'ಈ ಅಫಿಡವಿಟ್ ಸಲ್ಲಿಸುವ ಮೂಲಕ ಕರ್ನಾಟಕದಿಂದ ಹೆಚ್ಚುವರಿ ನೀರು ಹರಿದು ಬರುತ್ತಿದೆ ಎಂಬುದನ್ನು ತಮಿಳುನಾಡು ಕೂಡ ಒಪ್ಪಿಕೊಂಡಿದೆ. ಹೀಗಾಗಿ, ಕರ್ನಾಟಕ ಸರ್ಕಾರ ಹೆಚ್ಚುವರಿಯಾಗಿ ಹರಿದು ಹೋಗುವ ನೀರಿನಲ್ಲಿ ಪಾಲು ಕೇಳಿ ಹಕ್ಕು ಮಂಡಿಸಬೇಕು. ಇಲ್ಲದಿದ್ದರೆ ವೈಗೈ-ಗುಂಡೂರು ನದಿಗಳಿಗೆ ಕಾವೇರಿ ನದಿ ನೀರನ್ನು ಜೋಡಿಸುವ ಯೋಜನೆಯನ್ನು ತಮಿಳುನಾಡು ಸರ್ಕಾರ ಜಾರಿಗೆ ತರಲಿದೆ. ಆ ಮೂಲಕ ನೀರು ಬಳಕೆಯ ಹಕ್ಕನ್ನು ಅವರು ಮುಂದಿನ ದಿನಗಳಲ್ಲಿ ಮಂಡಿಸುವ ಸಾಧ್ಯತೆ ಇದೆ' ಎಂದು ವಿವರಿಸಿದ್ದಾರೆ.

ಕೆನರಾ ಬ್ಯಾಂಕ್ केनरा बैंक Canara Bank
ಭಾರತ ಸರ್ಕಾರದ ಒಂದು ಉದ್ಯಮ | भारत सरकार का उपक्रम | A Government of India Undertaking
ಸಿಂಡಿಕೇಟ್ सिंडिकेट Syndicate
Together We Can

ಆಸ್ತಿ ಮತ್ತು ಭವನ ವಿಭಾಗ, ವೃತ್ತ ಕಚೇರಿ, ನಂ. 86, ಎಂ.ಜಿ. ರಸ್ತೆ, ಬೆಂಗಳೂರು – 560 001 ದೂ: 25310038

ಗುತ್ತಿಗೆಗಾಗಿ ಸ್ಥಳದ ಅವಶ್ಯಕತೆ

ಕೆಳಕಂಡ ಪ್ರದೇಶ/ಸ್ಥಳಗಳಲ್ಲಿ ಶಾಖೆಗಳಿಗೆ ನಮೂದಿಸಿರುವ ವಿದ್ಯುತ್ ಪ್ರಮಾಣ ಮತ್ತು ವಾಹನ ನಿಲುಗಡೆಗೆ ಸಾಕಾಗುವಷ್ಟು ಸ್ಥಳಾವಕಾಶವಿರುವ ವಾಣಿಜ್ಯ ಸ್ಥಳಕ್ಕಾಗಿ ಸ್ವತ್ತಿನ ಮಾಲೀಕರಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಸ್ಥಳ, ಜಿಲ್ಲಾ	ವಿದ್ಯುತ್ ಅವಶ್ಯಕತೆ	ಕಾರ್ಪೆಟ್ ಜಾಗ ಚ. ಅಡಿಗಳಲ್ಲಿ (ಅಂದಾಜು)
01	ಗೋಕುಲ, ಬೆಂಗಳೂರು	22 KW	2500 ಚ.ಅಡಿ
02	ವಿಜಯನಗರ, ಬೆಂಗಳೂರು	22 KW	2500 ಚ.ಅಡಿ
03	ಬಸವೇಶ್ವರ ರಸ್ತೆ, ಬೆಂಗಳೂರು	22 KW	2500 ಚ.ಅಡಿ
04	ಕಾಕ್ಸ್ ಟೌನ್, ಬೆಂಗಳೂರು	22 KW	2500 ಚ.ಅಡಿ
05	ತಿಂಡ್ಲು, ಬೆಂಗಳೂರು	22 KW	2500 ಚ.ಅಡಿ
06	ಕೆಂಗೇರಿ ಉಪನಗರ, ಬೆಂಗಳೂರು	22 KW	2500 ಚ.ಅಡಿ
07	ಸರಸ್ವತಿಪುರಂ, ಮೈಸೂರು	22 KW	2500 ಚ.ಅಡಿ
08	ರಾಬರ್ಟ್‌ಸನ್‌ಪೇಟ್ ಕೋಲಾರ ಗೋಲ್ಡ್ ಫೀಲ್ಡ್ಸ್, ಕೋಲಾರ	20 KW	2500 ಚ.ಅಡಿ
09	ಜೆ ಪಿ ನಗರ, ಮೈಸೂರು	22 KW	2500 ಚ.ಅಡಿ
10	ಕ್ಯಾತಸಂದ್ರ , ತುಮಕೂರು	15 KW	2200 ಚ.ಅಡಿ
11	ದಕ್ಷಿಣ ಕೈಗಾರಿಕಾ ಉಪನಗರ, ಮೈಸೂರು	15 KW	2200 ಚ.ಅಡಿ
12	ನಂಜನಗೂಡು, ಮೈಸೂರು	15 KW	2200 ಚ.ಅಡಿ
13	ಕೃಷ್ಣರಾಜಪೇಟೆ, ಮಂಡ್ಯ	15 KW	1900 ಚ.ಅಡಿ
14	ನಾಗಮಂಗಲ, ಮಂಡ್ಯ	15 KW	1900 ಚ.ಅಡಿ
15	ಕನಕಪುರ, ರಾಮನಗರ	22 KW	2500 ಚ.ಅಡಿ
16	ರಾಮನಗರಂ, ರಾಮನಗರ	15 KW	1900 ಚ.ಅಡಿ
17	ಹಾರೊಹಳ್ಳಿ, ರಾಮನಗರ	15 KW	1900 ಚ.ಅಡಿ
18	ಮುಳಬಾಗಿಲು, ಕೋಲಾರ	15 KW	2200 ಚ.ಅಡಿ
19	ಮಾದನಾಯಕನಹಳ್ಳಿ, ಬೆಂಗಳೂರು	15 KW	1900 ಚ.ಅಡಿ

ವಿವರಗಳನ್ನು ಬ್ಯಾಂಕಿನ ವೆಬ್‌ಸೈಟ್ : **https://www.canarabank.com** ನಲ್ಲಿ ಪ್ರಕಟಿಸಲಾಗಿದೆ. ಅಗತ್ಯವಿರುವ ಅರ್ಜಿ ನಮೂನೆಗಳನ್ನು ಮೇಲ್ಕಂಡ ಕಛೇರಿ ಅಥವಾ ಸಂಬಂಧಪಟ್ಟ ಶಾಖೆಗಳಿಂದ ಪಡೆಯಬಹುದು, ಇಲ್ಲವೆ ಬ್ಯಾಂಕಿನ ವೆಬ್‌ಸೈಟ್‌ನಿಂದ ಡೌನಲೋಡ್ ಮಾಡಿಕೊಳ್ಳಬಹುದು. ಅರ್ಜಿಗಳನ್ನು ಈ ಮೇಲ್ಕಂಡ ಕಛೇರಿಯಲ್ಲಿ ಸಲ್ಲಿಸಲು ಕೊನೆಯ **ದಿನಾಂಕ 05.07.2021. ಮಧ್ಯಾಹ್ನ 3.00 ಗಂಟೆಯೊಳಗೆ.** ಇತರೆ ತಿದ್ದುಪಡಿಗಳಿದ್ದಲ್ಲಿ / ಮಾರ್ಪಾಡುಗಳಿದ್ದಲ್ಲಿ, ಬ್ಯಾಂಕಿನ ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. **ಮಧ್ಯವರ್ತಿಗಳಿಗೆ ಅವಕಾಶವಿಲ್ಲ.**

ಸಹಿ/–
ಸಹಾಯಕ ಮಹಾ ಪ್ರಭಂದಕರು
ಬೆಂಗಳೂರು ವೃತ್ತ

ಸ್ಥಳ : ಬೆಂಗಳೂರು
ದಿನಾಂಕ : 20/06/2021

ಕರ್ನಾಟಕದ ಪ್ರಥಮ ಕಿಸಾನ್ ರೈಲು ಸೇವೆಗೆ ಚಾಲನೆ

ಪ್ರಜಾವಾಣಿ ವಾರ್ತೆ

ಚಿಂತಾಮಣಿ: ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳ ರೈತರು ಮತ್ತು ವ್ಯಾಪಾರಿಗಳ ಹಲವಾರು ವರ್ಷಗಳ ಬೇಡಿಕೆ ಕನಸಾಗಿದ್ದು, 250 ಟನ್ ಮಾವಿನ ಹಣ್ಣನ್ನು ಹೊತ್ತ ನೈರುತ್ಯ ರೈಲ್ವೆ ವಲಯದ ಹಾಗೂ ಕರ್ನಾಟಕದ ಮೊಟ್ಟ ಮೊದಲು ಕಿಸಾನ್ ರೈಲು ತಾಲ್ಲೂಕಿನ ದೊಡ್ಡನೆತ್ತ ರೈಲು ನಿಲ್ದಾಣದಿಂದ ಶನಿವಾರ ನವದೆಹಲಿಯ ಆದರ್ಶ ನಗರಕ್ಕೆ ಹೊರಟಿತು.

ದೊಡ್ಡನೆತ್ತ ರೈಲು ನಿಲ್ದಾಣದಲ್ಲಿ ಸಂಸದ ಎಸ್.ಮುನಿಸ್ವಾಮಿ, ಶಾಸಕ ಎಂ.ಕೃಷ್ಣಾರೆಡ್ಡಿ, ರೈಲ್ವೆ ಇಲಾಖೆಯ ಹಿರಿಯ ಅಧಿಕಾರಿಗಳ ಸಮ್ಮುಖದಲ್ಲಿ ಹಸಿರುನಿಶಾನೆ ತೋರುವ ಮೂಲಕ ಚಾಲನೆ ನೀಡಿದರು.

ಚಿಂತಾಮಣಿ ತಾಲ್ಲೂಕಿನ ದೊಡ್ಡನೆತ್ತ ರೈಲು ನಿಲ್ದಾಣದಲ್ಲಿ ಸಂಸದ ಎಸ್.ಮುನಿಸ್ವಾಮಿ ಶನಿವಾರ ಕಿಸಾನ್ ರೈಲಿಗೆ ಹಸಿರು ನಿಶಾನೆ ತೋರಿದರು

ಎರಡು ಜಿಲ್ಲೆಗಳ ರೈತರು ಟೊಮೆಟೊ, ಮಾವು, ತರಕಾರಿಯನ್ನು ಅಧಿಕವಾಗಿ ಬೆಳೆಯುತ್ತಾರೆ. ಹಣ್ಣು, ತರಕಾರಿಗೆ ಉತ್ತರ ಭಾರತದ ರಾಜ್ಯಗಳಲ್ಲಿ ಹೆಚ್ಚಿನ ಬೇಡಿಕೆ ಇದೆ. ಆದರೆ ರೈತರು ದೆಹಲಿ ಹಾಗೂ ಸುತ್ತಮುತ್ತಲ ರಾಜ್ಯಗಳಿಗೆ ಸಾಗಾಣಿಕೆ ಮಾಡಲು ತೊಂದರೆಯಾಗಿತ್ತು. ಕಿಸಾನ್ ರೈಲನ್ನು ಓಡಿಸುವಂತೆ ಹಲವಾರು ವರ್ಷಗಳಿಂದ ಮನವಿ ಸಲ್ಲಿಸಿ ಒತ್ತಾಯ ಮಾಡುತ್ತಿದ್ದರು. ಆ ಮನವಿ ಶನಿವಾರ ಈಡೇರಿದೆ.

ಸಂಸದ ಎಸ್.ಮುನಿಸ್ವಾಮಿ ಮಾತನಾಡಿದರು.

ಕೆಳದವಡೆಯಲ್ಲೂ ಕಪ್ಪು ಶಿಲೀಂಧ್ರ ಪತ್ತೆ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಇಲ್ಲಿಯ ಎಸ್‌ಜೆಎಂ ದಂತ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಶನಿವಾರ ರೋಗಿಯೊಬ್ಬರ ಕೆಳದವಡೆಯಲ್ಲಿ 'ಕಪ್ಪು ಶಿಲೀಂಧ್ರ' ಬೆಳೆದಿರುವ ಪ್ರಕರಣ ಪತ್ತೆಯಾಗಿದೆ.

'ಸಾಮಾನ್ಯವಾಗಿ ಕಪ್ಪು ಶಿಲೀಂಧ್ರ ಮೇಲಿನ ದವಡೆಯಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ಉಳಿದಂತೆ ಶೇ 3ರಷ್ಟು ರೋಗಿಗಳಲ್ಲಿ ಮಾತ್ರ ಕೆಳದವಡೆಯಲ್ಲಿ ರೋಗಲಕ್ಷಣ ಕಂಡುಬರುತ್ತದೆ. ಚಿತ್ರದುರ್ಗದಲ್ಲಿ ಪತ್ತೆಯಾದ ಮೊದಲ ಪ್ರಕರಣ ಇದಾಗಿದೆ' ಎಂದು ಮುಖದವಡೆ ಮತ್ತು ಬಾಯಿ ಶಸ್ತ್ರಚಿಕಿತ್ಸೆ ವಿಭಾಗದ ಮುಖ್ಯಸ್ಥ ಡಾ.ನಾಗರಾಜಪ್ಪ ತಿಳಿಸಿದ್ದಾರೆ.

'ಹಲ್ಲು ನೋವಿನಿಂದ ಬಳಲುತ್ತಿದ್ದ ರೋಗಿಯನ್ನು ತಪಾಸಣೆ ಮಾಡಿದ ಡಾ.ತನ್ವೀರ್ ಅಹಮದ್, ಡಾ.ಮಧುಮತಿ ಈ ಪ್ರಕರಣ ಪತ್ತೆ ಹಚ್ಚಿದ್ದಾರೆ. ಬಸವೇಶ್ವರ ಆಸ್ಪತ್ರೆಯಲ್ಲಿ ವೈದ್ಯರ ತಂಡವು ರೋಗಿಗೆ ಚಿಕಿತ್ಸೆ ನೀಡಲಿದೆ' ಎಂದು ಕಾಲೇಜಿನ ಪ್ರಾಂಶುಪಾಲರಾದ ಡಾ. ಗೌರಮ್ಮ ಅವರು ಮಾಹಿತಿ ನೀಡಿದ್ದಾರೆ.

ರಾಜಭವನ ಚಲೋ 26ರಂದು

ಮೈಸೂರು: ಸಂಯುಕ್ತ ಕರ್ನಾಟಕ ಕಿಸಾನ್ ಮೋರ್ಚಾ ವತಿಯಿಂದ ಜೂನ್ 26 ರಂದು 'ಕೃಷಿ ರಕ್ಷಿಸಿ, ಪ್ರಜಾಪ್ರಭುತ್ವ ಉಳಿಸಿ' ಘೋಷವಾಕ್ಯದಡಿ ರಾಜಭವನ ಚಲೋ ರ್‍ಯಾಲಿ ಹಮ್ಮಿಕೊಳ್ಳಲಾಗಿದೆ.

'ಕೇಂದ್ರ ಸರ್ಕಾರ ಜಾರಿಗೊಳಿಸಿರುವ ಮೂರು ಕೃಷಿ ಕಾಯ್ದೆಗಳನ್ನು ವಿರೋಧಿಸಿ ರೈತರು ನಡೆಸುತ್ತಿರುವ ಪ್ರತಿಭಟನೆಯನ್ನು ಬೆಂಬಲಿಸಿ ಎಲ್ಲ ರಾಜ್ಯಗಳಲ್ಲೂ ರಾಜ್ಯಪಾಲರ ಕಚೇರಿ ಮುಂದೆ ಧರಣಿ ನಡೆಸಿ, ರಾಷ್ಟ್ರಪತಿಗೆ ಮನವಿ ಸಲ್ಲಿಸಲು ಅಖಿಲ ಭಾರತ ಸಂಯುಕ್ತ ಕಿಸಾನ್ ಮೋರ್ಚಾ ಕರೆ ನೀಡಿದೆ. ಅದರಂತೆ ರಾಜ್ಯದಲ್ಲೂ ಧರಣಿ ನಡೆಯಲಿದೆ' ಎಂದು ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'26ರಂದು ಬೆಳಿಗ್ಗೆ 10.30ಕ್ಕೆ ಬೆಂಗಳೂರಿನ ಮೌರ್ಯ ವೃತ್ತದಿಂದ ಪಾದಯಾತ್ರೆಯಲ್ಲಿ ರಾಜಭವನಕ್ಕೆ ತೆರಳಿ, ರಾಜ್ಯಪಾಲರ ಮೂಲಕ ರಾಷ್ಟ್ರಪತಿಗೆ ಮನವಿ ಸಲ್ಲಿಸಲಾಗುವುದು. ರ್‍ಯಾಲಿಯಲ್ಲಿ ಒಟ್ಟು 42 ಸಂಘಟನೆಗಳ ಪ್ರತಿನಿಧಿಗಳು ಪಾಲ್ಗೊಳ್ಳಲಿದ್ದಾರೆ. ಅದೇ ದಿನ ರಾಜ್ಯದ ಎಲ್ಲ ಜಿಲ್ಲೆಗಳ ಜಿಲ್ಲಾಧಿಕಾರಿ ಕಚೇರಿ ಮತ್ತು ತಾಲ್ಲೂಕು ಕಚೇರಿಗಳ ಮುಂದೆ ಧರಣಿ ನಡೆಯಲಿದೆ' ಎಂದರು.

ಸುಳ್ಳು ಜಾತಿ ಪ್ರಮಾಣಪತ್ರ ವಿತರಣೆ ಪ್ರಕರಣ: ಹೈಕೋರ್ಟ್ ಆದೇಶ

ಅನ್ಯಾಯಕ್ಕೆ ಒಳಗಾದವರಷ್ಟೇ ದೂರು ಸಲ್ಲಿಸಲು ಅರ್ಹರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳ ವಿತರಣೆಗೆ ಸಂಬಂಧಿಸಿದ ವಿಷಯಗಳಲ್ಲಿ ಅನ್ಯಾಯಕ್ಕೆ ಒಳಗಾದ ವ್ಯಕ್ತಿ ಮಾತ್ರ ಉಪ ವಿಭಾಗಾಧಿಕಾರಿಗೆ ಮೇಲ್ಮನವಿ ಸಲ್ಲಿಸಬಹುದು ಎಂದು ಹೈಕೋರ್ಟ್ ಹೇಳಿದೆ.

ಕನ್ನಡ ಶಿಕ್ಷಕಿಯೊಬ್ಬರ ಜಾತಿ ಪ್ರಮಾಣ ಪತ್ರ ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿ ವಜಾಗೊಳಿಸಿದ ಸಂದರ್ಭದಲ್ಲಿ ನ್ಯಾಯಮೂರ್ತಿ ಬಿ.ವಿ. ನಾಗರತ್ನಾ ನೇತೃತ್ವದ ವಿಭಾಗೀಯ ಪೀಠ, ಈ ಆದೇಶ ಹೊರಡಿಸಿತು.

ಮೈಸೂರಿನ ಬಿ.ಆರ್.ಗೋಪಮ್ಮ ಎಂಬವರು ಪರಿಶಿಷ್ಟ ಜಾತಿ ಪ್ರಮಾಣ ಪತ್ರ ಸಲ್ಲಿಸಿ 1979ರಲ್ಲಿ ಜೆಎಸ್‌ಎಸ್ ಪ್ರೌಢಶಾಲೆಯಲ್ಲಿ ಕನ್ನಡ ಶಿಕ್ಷಕರಾಗಿ ಸೇರಿದ್ದರು. ಮೂಲತಃ ಒಕ್ಕಲಿಗ ಸಮುದಾಯಕ್ಕೆ ಸೇರಿ ಗೋಪಮ್ಮ, ಪರಿಶಿಷ್ಟ ಜಾತಿಯ ಗೋವಿಂದಯ್ಯ ಎಂಬುವರನ್ನು ಮದುವೆಯಾಗಿದ್ದರು.

ಗೋಪಮ್ಮ ಅವರು ಸುಳ್ಳು ಜಾತಿ ಪ್ರಮಾಣ ಪತ್ರ ಪಡೆದು ಶಿಕ್ಷಕಿ ಹುದ್ದೆ ಪಡೆದಿದ್ದಾರೆ ಎಂದು ಆರ್.ಎಸ್. ಮಹದೇವ್ 2011ರಲ್ಲಿ ದೂರು ಸಲ್ಲಿಸಿದ್ದರು. ಜಾತಿ ಪ್ರಮಾಣ ಪತ್ರವನ್ನು ಅವರು ನಿವೃತ್ತಿ ಹೊಂದುವ ಕೆಲ ದಿನಗಳ ಮುಂಚೆ ಅಧಿಕಾರಿಗಳು ರದ್ದುಪಡಿಸಿದ್ದರು.

ಇದನ್ನು ಪ್ರಶ್ನಿಸಿ ಗೋಪಮ್ಮ ಅವರು ಹೈಕೋರ್ಟ್ ಮೆಟ್ಟಿಲೇರಿದ್ದರು. ವಿಚಾರಣೆ ನಡೆಸಿದ ಏಕ ಸದಸ್ಯ ಪೀಠ, ಗೋಪಮ್ಮ ಅವರ ವಾದವನ್ನು ಪುರಸ್ಕರಿಸಿ ಅವರ ಎಲ್ಲಾ ಸವಲತ್ತುಗಳನ್ನು ವಿತರಿಸುವಂತೆ ಆದೇಶ ನೀಡಿತ್ತು. ಅಲ್ಲದೇ, ಮುಂದಿನ ದಿನಗಳಲ್ಲಿ ಪರಿಶಿಷ್ಟ ಜಾತಿ ಪ್ರಮಾಣ ಪತ್ರ ನೀಡಿ ಸವಲತ್ತು ಪಡೆಯಲು ಹಕ್ಕು ಪ್ರತಿಪಾದಿಸಬಾರದು ಎಂದು ತಿಳಿಸಿತ್ತು.

ಇದನ್ನು ಪ್ರಶ್ನಿಸಿ ಮಹದೇವ್ ಅವರು ಮತ್ತೆ ವಿಭಾಗೀಯ ಪೀಠಕ್ಕೆ ಮೇಲ್ಮನವಿ ಸಲ್ಲಿಸಿದ್ದರು. ಏಕ ಸದಸ್ಯ ಪೀಠದ ಆದೇಶವನ್ನೇ ವಿಭಾಗೀಯ ಪೀಠ ಎತ್ತಿ ಹಿಡಿಯಿತು. ಬುಡಕಟ್ಟು ಸಮುದಾಯದ ಪುರುಷನನ್ನು ಅನ್ಯ ಜಾತಿಯ ಮಹಿಳೆ ಮದುವೆಯಾದರೆ ಮತ್ತು ಆ ಸಮುದಾಯದ ಹಿರಿಯರು ಒಪ್ಪಿಕೊಂಡರೆ ಆಕೆಯೂ ಅದೇ ಜಾತಿಯ ಪ್ರಮಾಣ ಪತ್ರ ಪಡೆಯಲು ಅರ್ಹಳು ಎಂಬುದಾಗಿ ಸುಪ್ರೀಂ ಕೋರ್ಟ್ ಪ್ರಕರಣವೊಂದಕ್ಕೆ ಸಂಬಂಧಿಸಿ ಆದೇಶ ನೀಡಿತ್ತು.

ಅದರ ಪ್ರಕಾರ, ಗೋಪಮ್ಮ ಅವರು ಜಾತಿ ಪ್ರಮಾಣ ಪತ್ರ ಪಡೆದಿರುವುದು ತಪ್ಪಲ್ಲ. ಆದರೆ, ಈಗಿನ ಸುಪ್ರೀಂ ಕೋರ್ಟ್ ಆದೇಶ ಬೇರೆ ರೀತಿಯಲ್ಲಿ ಇರುವ ಕಾರಣ ಮುಂದಿನ ದಿನಗಳಲ್ಲಿ ಈ ಹಕ್ಕು ಪ್ರತಿಪಾದಿಸಬಾರದು ಎಂದು ತಿಳಿಸಿದೆ.

ಅಲ್ಲದೇ, ಗೋಪಮ್ಮ ಅವರು ಪರಿಶಿಷ್ಟ ಜಾತಿ ಪ್ರಮಾಣ ಪತ್ರ ಪಡೆದಿದ್ದರಿಂದ ಮಹದೇವ್ ಅವರಿಗೆ ಯಾವುದೇ ಅನ್ಯಾಯವಾಗಿಲ್ಲ. ಹೀಗಾಗಿ, ಅವರು ದೂರು ಸಲ್ಲಿಸಲು ಆಗುವುದಿಲ್ಲ ಎಂದೂ ಪೀಠ ಅಭಿಪ್ರಾಯಪಟ್ಟಿತು.

ಅಸ್ಸಾಂನಲ್ಲಿ ಎರಡು ಮಕ್ಕಳ ನೀತಿ ಜಾರಿ: ಮುಖ್ಯಮಂತ್ರಿ

ಗುವಾಹಟಿ (ಪಿಟಿಐ): ಅಸ್ಸಾಂನಲ್ಲಿ ಹಂತಹಂತವಾಗಿ ಎರಡು ಮಕ್ಕಳ ನೀತಿಯನ್ನು ಜಾರಿಗೆ ತರಲಾಗುವುದು. ರಾಜ್ಯ ಸರ್ಕಾರದ ನಿರ್ದಿಷ್ಟ ಯೋಜನೆಗಳ ಫಲಾನುಭವಿಯಾಗಲು ಈ ನಿಯಮ ಪಾಲಿಸುವುದನ್ನು ಕಡ್ಡಾಯಗೊಳಿಸಲಾಗುವುದು ಎಂದು ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಶನಿವಾರ ಪತ್ರಿಕಾ ಗೋಷ್ಠಿಯಲ್ಲಿ ಹೇಳಿದರು.

ಶಾಲೆ ಮತ್ತು ಕಾಲೇಜುಗಳಿಗೆ ಉಚಿತ ದಾಖಲಾತಿ, ಪ್ರಧಾನ ಮಂತ್ರಿ ಆವಾಸ ಯೋಜನೆ ಅಡಿ ಉಚಿತ ಮನೆ ಪಡೆಯುವುದು ಸೇರಿದಂತೆ ಕೇಂದ್ರದ ಯೋಜನೆಗಳಿಗೆ ಇದನ್ನು ಕಡ್ಡಾಯಗೊಳಿಸುವುದು ಸಾಧ್ಯವಾಗುವುದಿಲ್ಲ. ಆದರೆ ರಾಜ್ಯ ಸರ್ಕಾರದಿಂದ ಉಚಿತ ವಸತಿ ಯೋಜನೆ ಹಮ್ಮಿಕೊಂಡರೆ ಆಗ ಈ ನೀತಿಯನ್ನು ಜಾರಿ ಮಾಡಬಹುದು. ನಿಧಾನವಾಗಿ ರಾಜ್ಯ ಸರ್ಕಾರ ಎಲ್ಲಾ ಯೋಜನೆಗಳಿಗೂ ಎರಡು ಮಕ್ಕಳ ನೀತಿಯನ್ನು ಅಳವಡಿಸಲಾಗುವುದು ಎಂದು ಅವರು ವಿವರಿಸಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Agricultural Land

Tumkur

SALE TUMKUR 4acres developed agriculture land & 2acres of Industrial converted land. 7kms from Tumkur.Owner: 7204954110

Commercial Building

Electronic City

30X40, SOUTH, E katha, 29 Rooms Attached Bathroom, GETTING 1.75L. SALE 2.10Cr. Electronic City. 9980577227.

Vijayanagar

COMMERCIAL BUILDING FOR-SALE 20X30=600 sqft 3-Floors Price-90 lakhs. No.12/4, Padarayanapura main road, Opposite Indian Petrol-Bunk, Vijayanagar-9110432149.

BUILDING FOR SALE A-Khatha 3437/sqft Land 100 chadara construction Rental income Rs.1,40,000/- 3-FLOORS, 7-FLATS. Price-3 Crore. No.30, 13th Cross, Pipeline road, Vijayanagar-9110432149.

Commerical

Hennur

24,000 SQFT CORNER COMMERCIAL SITE SALE, Converted A Katha, Hennur Bagalur Road, 3,900/- Sqft. 9980577227.

Flat

Kanakapura Road

2-3-BHK FLAT Sale,Vastu Compliant, 41,00,000/- Onwards. Konankunte Near Junior Delhi Public School, Kanakapura Main Road. Contact:-9611144096/ 9343722162.

Malleshwaram

FLAT FOR SALE.1325 SQUARE. 2.5 BHK. FULLY FURNISHED. READY TO MOVE WITH CLOTHES.1.75 CR. 6th main 8th cross Malleshwaram Bangalore. only veg. contact owner 9620219486

Rajarajeshwari Nagar

3BHK FLATS, 56L, Opposite Gopalan Arcade, Metro Station. OC+CC, Canara Bank Approved. Contact: 9611374397

House

Hampinagar

HOUSE SALE Hampinagar 30x47 West Facing, 11th Cross, 5th Main, 2.00Cr. Contact: 9481473899

Sadashiva Nagar

2BHK GROUND & 3BHK 1st floor, building for Sale in Lower place orchards, Sadashivnagar, totally 1650 Sqft., North-East facing, Corner site, 25000/- Per Sqft (price negotiable). Contact: 9844253185 / 9164627086.

R T Nagar

R.T.NAGAR-THIMMAIAH GARDEN: East 1360sft Site 'A' Katha- GF,FF,SF- Each 2BHK Building Sale 2,00,00,000/-: 9060039732 Brokers Excuse.

Sahakarnagar

30X40 HOUSE for SALE, North East Corner, 'A' Khata, Amruthahalli, Near Arkavathi Layout, Rs. 9000 /sqft. 9980957743.

Residential/ Commercial

Mysore

BOOK A 2 BHK Apartment in a commercial cum residential Project near to Mysore and Get a Rental Income of Rs.40,000/- Per Month on 1000 SQFT Commercial space as Benefit for Promoter support. Very Good Location and Easy Drive Distance To Mysore Ring Road. Contact Land Owner and Promoter 7676770503

WANTED BUILDER of Good Financial capability to take up a new Commercial cum residential Project having Easy saleability and Market acceptance. Contact Owner and Promoter 9741019028

Sites

Arkavathi Layout

ARKAVATHI LAYOUT 18th Block 20X30 North-facing Site for Sale 6000per sq.ft. behind Bangalore International School, Hennur Road. Owner: 9945564769

Anjanapura

ANJANAPURA 10TH Block, 30x40 West Facing Site for Sale, good location, Dayananda Sagar School, Near 80 Feet Road. 9880812364

Banashankari

SALE BANASHANKARI 6th Stage 1st Block 40x60 East Facing Site 60 Feet Road Contact: 9845117825.

Bannerghatta Road

"50X80 RESIDENTIAL A-Katha Site for sale-in Akshayanagar, Bannerghatta Road, Good location. Genuine Buyers Contact: 9845791626"

Basaweshwaranagar

BDA SITES For Sale Basaveswara Nagar 4th Stage, 3rd Block, 40x60. Buyers Call: 9740652228/ 9108495835

Jakkur

BBMP DC_CONVERSION Sites For Sale, Each 30x40,4600/-Sft, Brigade Bricklane Apartment BackSide, Near Kogilu Cross, Direct Owner. 9980741687, 9591600488

Mysore Road

SUPER OFFER/BASE RATES BMRDA & RERA Approved 60x90 Villa Plots for Sale,Mysore Road,Near Big Banyan Tree, only 2 Sites left, Contact: 9880577955

Nagarabhavi

"32X45 NORTH-WEST Corner BDA-Site 40ft Road,@ NAGARABHAVI BDA Complex near Annapoorneshwari Temple. 9448432633"

Vishweshwariah Layout

WANTED AVAILABLE BDA Sites Vishweshwaraiah Layout, Kempegowda Layout 20x30, 30x40, 40x60,50x80.Contact Genuine Buyers/Sellers: 8892901567/ 9341733480

SMV 5TH BLOCK 30X40 EAST FACING SITE FOR SALE NEAR 60 FEET ROAD, PRICE 7500/- PER.SQFT: 9845488488

30X40 BDA Site Sale 1st Block Vishveshvaraiah North Face 40ft Road Near 100ft Road: 8310003509

BDA CORNER Site (Semi Commercial) for Sale 40x60 North East, 40 feet Road, at Rs. 9500 /sqft. Located at Vishweshwaraiah Layout 1st Block, Near to Shirke Apartments, Call: 8861773238

REAL ESTATE BUYING

Sites

J P Nagar

WANTED BDA, BBMP Sites BSK 6th Stage, J.P.Nagar, Vishweshwarya, Anjanapura, Arkavathi Layout For Immediate Settlement Call:9886673794

Sadashiva Nagar

SADASHIV NAGAR WANTED FOR PURCHASE 10,000 sqft or BIGGER LAND IMMEDIATE SETTLEMENT. CONTACT: 9980730296

Vishweshwariah Layout

WANTED/ AVAILABLE Sites Visveswaraiah, BSK 6th Stage, Kempegowda Layout 20x30, 30x40, 40x60, 50x60, Genuine Seller/ Buyers. Call: 9845488488

EDUCATION SPECIAL

DH Classifieds | PV Classifieds

We are coming out with special offer for Admission Notice, Education Success Congratulation Ads

For details contact:
Jerry: 9731810277 Vishal: 9845114560
Tanveer: 9886213331
E-mail: dhclassifieds@deccanherald.co.in

DH Classifieds

BUILDERS ESSENTIAL

Water Proofing Materials

LEAKAGE... LEAKAGE... Old/New-Building, Sump, Bathroom, Wallcrack, Skylight, Terrace Waterproofing done by New-Technology-9880916988

Water Proofing

WE-FIX LEAKING ROOF, TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY, CIVIL WORKS. 9448572697

Building Contractors

KANTHI CONSTRUCTIONS WE CONSTRUCT YOUR HOUSE. FREE:- SUMP, SOLAR, OVERHEADTANK. PER SQFT-1700/- 9880785589/ 9066487178

JOB OPPORTUNITIES

Accounts & Finance

ELCITA
ELECTRONICS CITY INDUSTRIAL TOWNSHIP AUTHORITY
No. 7 (P), West Phase, Electronics City, Bangalore : 560 100
Website : www.elcita.in
Phone : 080-4660 2222
Position : Accounts Officer
ELCITA invites applications from suitable candidates for the position of Accounts Officer. Candidate should be a B.Com / M.Com graduate with 5 or more years of work experience in handling accounts in Tally. Knowledge of GST, TDS, PF is mandatory.
Knowledge of Kannada is preferred.
For details refer to: www.elcita.in
Last date for receipt of applications with CV and supporting documents : 30-06-2021 before 5 PM
e-mail id : office.elcita@elcita.in

Call Centre

WANTED FEMALE TELE-CALLERS in Bangalore immediately, Food with Accommodation Available. Salary:15000 to 25000 Call:77605-70162

Cook

CONTINENTAL, INDIAN and Chinese Cooks, Captains, Cashier, Waiters, Washboys required for Hotel on Double Road, Bangalore. Call: 9844021722, 9243192072

CHEF FOR 5 member family, Kasturinagar, 20k, Ph: 9916420170

Engg/ Production Technical

URGENTLY REQUIRED
Technical Manpower on contract Basis at Electronic City. Qualification Diploma in E & C 60%, BE Computer Science, Information Technology & Electronic Communication with 70%+.
Forward resume to: aishwarya.facility22@gmail.com
Contact : 98861 77322/544

WANTED ELECTRICIANS having experience in washing-unit. Candidates preferred near by area.'EXECUTIVE APPAREL PROCESSORS', Gurguntepalya,Tumkur Road. Contact: 9845034556

Wanted

WANTED EXPERIENCED Tele- Callers & Field Executive for MNC Bank Collections, Attractive Salary/ Incentives. Contact: 9844725225/ 9632941112

WANTED IMMEDIATELY
FOR AN UPCOMING 100 BED HOSPITAL IN MARATHALLI, BANGALORE EAST.
1. A MEDICAL SUPERINTENDENT: with MBBS degree and an Experience of 5 years or more in a reputed Hospital, to look after the Day to Day Administration of the Hospital.
2. ACCOUNTS ASSISTANT : B.Com with 5 yrs experience in handling accounts, tenders, purchase orders, MIS etc. Experience in a similar hospital would be an added advantage.
3. ASST. PROJECT/ FACILITY MANAGER : Degree or Diploma in Mechanical and or Electrical Engineering around 5 yrs experience handling hospital project / facility. Should be familiar with all statutory requirements .
Salary commensurate with the qualification & Experience.
Send your Resume to: sevashramatrust@gmail.com

General

BANK JOB
WALK IN INTERVIEW
NEED FIELD EXECUTIVE
Salary + Incentive
AREA
• BANASHANKARI
• ELECTRONIC CITY
• WHITE FIELD
• KENGERI
• K. R. PURAM
• HEBBAL
• ALL THE AREA
TELE CALLERS: Salary + Incentives (Required Skill, Basic Computers)
QUALIFICATION SSLC, PUC, Any Degree
Banking Collections Fresh / Experience DRA
Call : 78921 41632 96774 95356
119/1, 2nd Floor, Srinidhi Complex, 11th Cross, Malleswaram, Bangalore-560 003

CAREER OPPORTUNITY for Unemployed Techies, Teachers, Retired Bankers, Homemakers on Fixed Income with Huge Incentives. Dial:9341838235

WANTED OFFICE ASSISTANTS (Male) H.S.R. Layout (Bangalore) Ph: 08025631755/ 25631756 Email: starsilks@gmail.com

Marketing & Sales

"WANTED IMMEDIATELY Marketing/ Office Executive, Age-25-35yrs with experience for-a manufacturing company located-in Bommanahalli, Hosur-Road, Bangalore-68. Send-resume with-expected salary-to: uppbangalore@gmail.com/ Contact: 9449817703.

Receptionist/ Secretary

VACANCY- 1) Stenographer with experience in taking steno dictation and computer typing. 2) Computer Typing, printing and operating and handling mail, downloading and printing with soft handling. The requirements for Advocate Office, knowledge of english is compulsory. Interested my contact: 080-26678443, 080-22426644, 9886117443, 9900270775, 9741325508

Teachers/ Professors

VIKAS HIGH SCHOOL, BSK 3rd Stage, Bangalore-85 Requires M.A., B.Ed ENGLISH TEACHER. Contact: 9448110651 between 9 & 1

WANTED: EXPERIENCED TEACHERS- B.A.B.Ed.(Kannada), BCA/MCA/BE (Computer), Attend with original certificates SREE-VENKATESHWARA SCHOOL & COLLEGE, Krishnarajapuram, Bangalore-560036. Contact: 080-25611873, 7411135627, 9036068144

WANTED TACHERS for immediate Appointment with D.Ed/B.Ed (Subjects: ENGLISH MATHS, SOCIAL SCIENCE and HINDI).Contact:St.YASH PUBLIC SCHOOL, Kempegowdanagar, Magadi-Main-road, Bangalore-91. Phone:7204347583/ 7204347584/ 9066242255

"ST. MARTIN'S HIGH SCHOOL" 7th Cross Behind Anjan Theatre,Magadi Road, Bengaluru-23 Requires: HM, Administrative Officer, Academic Supervisor, Librarian, Qualified and trained Teachers for Nursery, Primary and High School to teach all the subjects includingComputers, PT, and Drawing. PREFERABLY LADIES.Contact- Office-Phone:- 080-23101999 / 9591990199

REQUIRES LADY Teachers for English MA.BEd & BSc/MSc.BEd (Biology & Chemistry) Science faculty for State Board Walk-in Interview with the Secretary, Srikrishna International School, ITI-Layout, BSK 3rd Stage, Bangalore-85, Phone: 65365824

LADY TEACHERS Wanted for Maths, Science, CBZ, English, Social, Computer Science, Aya, Peon & Security Gaurd. Contact with Resume: CAMLIN ENGLISH SCHOOL, 6th 'C' Main, 4th Cross, Hampinagar, Bangalore-560104. Phone: 080-23301363

PT. JAWAHARLAL Nehru Memorial school ,chamrajpet ,near T.R Mills required B.SC, B.Ed(CBZ) M.A, B.Ed/ B.A ,B.Ed, hindi history, geography& English major, with 3 years experience and Fluent in English. Retd & freshers can also apply. Walk in interview with originals on 24/06/2021, 25/06/2021 and 30/06/2021. Timings:- 10:30AM To 1:00PM. CONTACT:- 9632315392 LANDLINE:- 080-26747725 (OFFICE TIME FROM 10:00AM To 2:00PM)

REQUIRED TEACHERS Good English-fluency, Experience in online and offline High-School: SCIENCE and SOCIAL Primary:ENGLISH.ROYAL PUBLIC SCHOOL. Jnanabharathi.9035033560, 8867569333

WANTED TRAINED LADY TEACHERS to teach ENGLISH in English Medium High school. Walk-in Interview on 21-6-2021 between 11.30AM and 12.30PM at 'PRATHIBHA SHIKSHANA SAMITHI', #9, 18th Main, BSK II Stage, B-70. Phone: 080-26710170/ 77833-77387

ST.BENEDICT'S GROUP of Institutions, Anchepalaya, Kengeri, Mysore Road, Bangalore. Required TEACHERS for Schools & LECTURES for Degree and College of Nursing, PT, Office-staff. Mail: jeromeosb@gmail.com

WANTED TEACHERS: English Medium Nursery, Primary, High School. RAJA RAJESHWARI ENGLISH SCHOOL, Nandini Layout. 9742231415.

BUSINESS

Business to Business

Construction And Maintenance

WE CONSTRUCT anytype of Commercial Buildings anywhere & also rent the same(T&C apply)call 7026375404 Bengaluru

Financial Services

LOANS FROM Bank/ Pvt.Fin, Anywhere Property. PL/BL/HL/LAP/ Mortgage. With/without Income. Low Int.Cibil/ Default Consider. Contact- 8310599653

MATRIMONIAL

Matrimonial Bureaus

MATRIMONIAL
Register Bride and Groom profiles of Kannada Smartha Brahmins in matrimony website
http://www.hoysalakarnatakabrahmins.com.
Contact: Suma Gopalakrishna on 9886908152

PERSONAL

Change of Name

I, SUBRAMANYA MUNISWAMY, Residing No.49/B, Nehru Street, 3rd Main, Tin Factory, Udayanagar, Bangalore-560016 have changed my name to SUBRAMANI SUBBARAYA MUNISWAMY Vide Affidavit dated 18-06-2021 before Meer Hassan, Notary

GNANAM SPOUSE of No.1371911P Ex.NK (Late) M.Murugan residing at No.8, Srihari Nilaya, 1st Street, Doorvanin Nagar, Bangalore-16 have changed my name from GNANAM to L GNANAMMAL vide affidavit dated 19.06.2021 before notary AR.Muneer Ahmed Bangalore.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ರಾಜ್ಯ ಸರ್ಕಾರಕ್ಕೆ ಡಾ.ದೇವಿಪ್ರಸಾದ್ ಶೆಟ್ಟಿ ನೇತೃತ್ವದ ತಜ್ಞರ ಸಮಿತಿಯ ಶಿಫಾರಸು

‘ಕೋವಿಡ್ 3ನೇ ಅಲೆ: ಉತ್ಕೃಷ್ಟತಾ ಕೇಂದ್ರ ರಚಿಸಿ’

• ಸುರಕ್ಷಾ ಪಿ.

ವಿವಿಧ ಊರುಗಳಿಂದ ನಗರಕ್ಕೆ ಬಂದವರಿಗೆ ನಗರದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಲ್ಲಿ ಬಿಬಿಎಂಪಿ ಆರೋಗ್ಯ ಸಿಬ್ಬಂದಿ ಶನಿವಾರ ಕೋವಿಡ್ ಪರೀಕ್ಷೆ ನಡೆಸಿದರು – ಪ್ರಜಾವಾಣಿ ಚಿತ್ರ

ಬೆಂಗಳೂರು: ಕೋವಿಡ್ ಮೂರನೆ ಅಲೆ ಸಂದರ್ಭದಲ್ಲಿ ಮಕ್ಕಳಲ್ಲಿ ಕಾಣಿಸಿಕೊಳ್ಳಬಹುದಾದ ಬಹು ಅಂಗಾಂಗ ಉರಿಯೂತ ಸಮಸ್ಯೆಗೆ (ಮಲ್ಟಿಸಿಸ್ಟಂ ಇನ್‌ಫ್ಲಮೇಟರಿ ಸಿಂಡ್ರೋಮ್–ಚಿಲ್ಡ್ರನ್) ಚಿಕಿತ್ಸೆ ನೀಡುವುದಕ್ಕಾಗಿ ಇಂದಿರಾ ಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ ಆವರಣದಲ್ಲಿ ಉತ್ಕೃಷ್ಟತಾ ಕೇಂದ್ರ (ಸೆಂಟರ್ ಆಫ್ ಎಕ್ಸಲೆನ್ಸ್) ಆರಂಭಿಸುವಂತೆ ಹೃದ್ರೋಗ ತಜ್ಞ ಡಾ.ದೇವಿ ಪ್ರಸಾದ್ ಶೆಟ್ಟಿ ನೇತೃತ್ವದ ತಜ್ಞರ ಸಮಿತಿ ಶಿಫಾರಸು ಮಾಡಿದೆ.

ಮೂರನೆ ಅಲೆಯ ಸಂದರ್ಭದಲ್ಲಿ ಮಕ್ಕಳ ಮೇಲೆ ಉಂಟಾಗಬಹುದಾದ ಪರಿಣಾಮಗಳ ಕುರಿತು ಅಧ್ಯಯನ ಹಾಗೂ ಕೋವಿಡ್ ನಿಯಂತ್ರಣ ಮತ್ತು ನಿರ್ವಹಣೆಗೆ ಸಲಹೆ ನೀಡಲು ನೇಮಿಸಿರುವ ಡಾ.ದೇವಿ ಪ್ರಸಾದ್ ಶೆಟ್ಟಿ ನೇತೃತ್ವದ 18 ಮಂದಿ ತಜ್ಞ ವೈದ್ಯರ ಸಮಿತಿ ಶನಿವಾರ ಪ್ರಾಥಮಿಕ ವರದಿ ಸಲ್ಲಿಸಿದೆ.

ಕೋವಿಡ್ ತಗುಲಿರುವ ಮಹಿಳೆಯರಿಗೆ ಜನಿಸಿದ ಹಾಗೂ ಸೋಂಕಿತರಾದ ನವಜಾತ ಶಿಶುಗಳಲ್ಲಿ ನಂತರದ ದಿನಗಳಲ್ಲಿ ಬಹು ಅಂಗಾಂಗ ಉರಿಯೂತ ಸಮಸ್ಯೆ ಉಲ್ಬಣಿಸುತ್ತಿರುವುದು ಕಂಡುಬಂದಿದೆ.

ಅದನ್ನು ಆಧರಿಸಿ ವಿಶೇಷ ಕೇಂದ್ರ ಸ್ಥಾಪನೆಗೆ ಶಿಫಾರಸು ಮಾಡಲಾಗಿದೆ. ಈ ಸಮಸ್ಯೆಗೆ ಪರಿಹಾರ ಹುಡುಕುವುದಕ್ಕಾಗಿ ತಜ್ಞರ ಸಮಿತಿಯೊಂದನ್ನು ನೇಮಿಸುವಂತೆಯೂ ಶಿಫಾರಸು ಮಾಡಲಾಗಿದೆ.

ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆ, ಬೆಂಗಳೂರಿನ ಬೌರಿಂಗ್ ಆಸ್ಪತ್ರೆ, ಗುಲ್ಬರ್ಗ, ಹಾಸನ ಮತ್ತು ಶಿವಮೊಗ್ಗ ವೈದ್ಯಕೀಯ ವಿಜ್ಞಾನ ಕಾಲೇಜುಗಳ ಆಸ್ಪತ್ರೆಗಳಲ್ಲಿ ಪ್ರಾದೇಶಿಕ ಕೋವಿಡ್–19 ಮಕ್ಕಳ ಚಿಕಿತ್ಸಾ ಉತ್ಕೃಷ್ಟತಾ ಕೇಂದ್ರಗಳ ಆರಂಭಕ್ಕೆ ಶಿಫಾರಸು ಮಾಡಲಾಗಿದೆ.

ಈ ಕೇಂದ್ರಗಳಲ್ಲಿ ತಲಾ 50 ಹಾಸಿಗೆಗಳ ತೀವ್ರ ನಿಗಾ ಘಟಕ, 100 ಹಾಸಿಗೆಗಳ ಎಚ್‌ಡಿಯು ವಾರ್ಡ್, 20 ಹಾಸಿಗಳ ನವಜಾತ ಶಿಶುಗಳ ಐಸಿಯು, 20 ಹಾಸಿಗೆಗಳ ತೀವ್ರ ತೊಂದರೆ ಎದುರಿಸುವ ನವಜಾತ ಶಿಶುಗಳ ಐಸಿಯು ಸೌಲಭ್ಯ ಕಲ್ಪಿಸುವಂತೆ ಸಮಿತಿ ಶಿಫಾರಸು ಮಾಡಿದೆ.

ಎಲ್ಲ ಸ್ವಾಯತ್ತ ಸಂಸ್ಥೆಗಳಲ್ಲಿ ಮಕ್ಕಳ ವಿಭಾಗ, ನವಜಾತ ಶಿಶುಗಳ ಚಿಕಿತ್ಸಾ ವಿಭಾಗ ಹಾಗೂ ಜನರಲ್ ಮೆಡಿಸಿನ್, ಅರವಳಿಕೆ, ರೇಡಿಯಾಲಜಿ, ಮೈಕ್ರೋಬಯಾಲಜಿ ಮತ್ತು ರೋಗಪತ್ತೆ ವಿಭಾಗಗಳಲ್ಲಿ ಖಾಲಿ ಇರುವ ಸಹಾಯಕ ಪ್ರಾಧ್ಯಾಪಕರ ಹುದ್ದೆ ಭರ್ತಿಗೆ ತ್ವರಿತವಾಗಿ ನೇಮಕಾತಿ ಮಾಡುವಂತೆ ಸಮಿತಿ ಸಲಹೆ ನೀಡಿದೆ.

ವೈದ್ಯಕೀಯ ಶಿಕ್ಷಣ ಇಲಾಖೆಯ ಮೂಲಕ ಏಕ ಗವಾಕ್ಷಿ ವ್ಯವಸ್ಥೆಯಡಿ ಈ ನೇಮಕಾತಿಗಳನ್ನು ನಡೆಸಬೇಕು. ಆಸ್ಪತ್ರೆಗಳಲ್ಲಿರುವ ಎಲ್ಲ ಹಾಸಿಗೆಗಳಿಗೂ ಆಮ್ಲಜನಕ ಪೂರೈಕೆ ಸಂಪರ್ಕ ಕಲ್ಪಿಸಬೇಕು ಎಂಬ ಶಿಫಾರಸು ಕೂಡ ವರದಿಯಲ್ಲಿದೆ.

ಲಸಿಕೆ ನೀತಿಗೆ ಸಲಹೆ

ಕೋವಿಡ್ ಲಸಿಕೆಗಳು ವ್ಯರ್ಥವಾಗುವುದನ್ನು ತಪ್ಪಿಸಲು ರಾಜ್ಯ ಮಟ್ಟದಲ್ಲಿ ಲಸಿಕಾ ನೀತಿ ರೂಪಿಸಬೇಕು. ಬಳಕೆಯಾಗದೆ ಉಳಿದ ಲಸಿಕೆಗಳನ್ನು ಆಸ್ಪತ್ರೆಗಳು ಹತ್ತು ದಿನಗಳೊಳಗೆ ಬೇರೊಂದು ಲಸಿಕಾ ಕೇಂದ್ರಕ್ಕೆ ವರ್ಗಾಯಿಸುವುದನ್ನು ಕಡ್ಡಾಯಗೊಳಿಸಬೇಕು. ಉಚಿತ ಲಸಿಕೆ ವಿತರಣೆ ಕೆಲಸಕ್ಕೆ ಖಾಸಗಿ ಆಸ್ಪತ್ರೆಗಳನ್ನೂ ಬಳಸಿಕೊಳ್ಳುವ ಮೂಲಕ ಜನದಟ್ಟಣೆ ಕಡಿಮೆ ಮಾಡಲು ಪ್ರಯತ್ನಿಸಬೇಕು ಎಂದು ಸಮಿತಿ ಸಲಹೆ ಮಾಡಿದೆ.

‘ಎಲ್ಲ ಆಸ್ಪತ್ರೆಗಳಲ್ಲಿ ಲಭ್ಯವಿರುವ ಮತ್ತು ನೀಡಲಾದ ಕೋವಿಡ್ ಲಸಿಕೆ ಕುರಿತು ವಾರ್‌ರೂಂನಲ್ಲಿ ಖಚಿತ ಅಂಕಿಅಂಶ ದೊರೆಯುವಂತಿರಬೇಕು. ಮೂರರಿಂದ ನಾಲ್ಕು ತಿಂಗಳೊಳಗೆ ರಾಜ್ಯದ ಎಲ್ಲರಿಗೂ ಲಸಿಕೆ ನೀಡಬೇಕು. ಇದಕ್ಕಾಗಿ ಲಭ್ಯವಿರುವ ಎಲ್ಲರನ್ನೂ ಬಳಸಿಕೊಳ್ಳಬೇಕು’ ಎಂದು ವರದಿಯಲ್ಲಿ ಹೇಳಲಾಗಿದೆ.

ಬೆಂಗಳೂರು ನಗರ ಜಿಲ್ಲಾ
ಕೋವಿಡ್ ಅಂಕಿ–ಅಂಶ

12,04,326 ▲ ಒಟ್ಟು ಸೋಂಕಿತರು

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
72,263 ▲	11,16,629 ▲	15,433 ▲

ಶನಿವಾರದ ಏರಿಕೆ

ಹೊಸ ಪ್ರಕರಣ	1,263 ▲
ಗುಣಮುಖ	2,821 ▼
ಸಾವು	23 ▼

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕೋವಿಡ್ ಅಂಕಿ–ಅಂಶ
ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	17.87 ಕೋಟಿ ▲	2.98 ಕೋಟಿ
ಸಕ್ರಿಯ ಪ್ರಕರಣ	1.15 ಕೋಟಿ	7.25 ಲಕ್ಷ ▼
ಗುಣಮುಖ	16.33 ಕೋಟಿ ▲	2.87 ಕೋಟಿ ▲
ಸಾವು	38.69 ಲಕ್ಷ ▲	3.86 ಲಕ್ಷ

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	4.01 ಲಕ್ಷ ▲	45,984 ▼
ಗುಣಮುಖ	4.17 ಲಕ್ಷ ▲	74,043 ▼
ಸಾವು	8,565 ▼	1,456 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಅರ್ಜೆಂಟಿನಾ	ಬ್ರೆಜಿಲ್	ಕೊಲಂಬಿಯಾ
20,363	98,135 ▲	28,790

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	ಬ್ರೆಜಿಲ್	ಅರ್ಜೆಂಟಿನಾ
51.00 ▼	11.66 ▲	3.10

(*ರಾತ್ರಿ 12 ಗಂಟೆಯ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು (ಒಟ್ಟು)

ಮಹಾರಾಷ್ಟ್ರ	1.17 ಲಕ್ಷ ▼
ದೆಹಲಿ	24,907 ▲
ತಮಿಳುನಾಡು	31,015 ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	59.63
ಕೇರಳ	27.85 ▲
ತಮಿಳುನಾಡು	24.14 ▲

ಪ್ರಜಾವಾಣಿ ಗ್ರಾಫಿಕ್ಸ್

₹ 5.5 ಕೋಟಿ ವೆಚ್ಚದಲ್ಲಿ ಕೇವಲ 20 ದಿನಗಳಲ್ಲಿ ನಿರ್ಮಾಣ

ಕೋವಿಡ್ ಆರೈಕೆ ಕೇಂದ್ರ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೋಯಿಂಗ್ ಸಂಸ್ಥೆಯು ಸೆಲ್ಕೊ ಹಾಗೂ ಡಾಕ್ಟರ್ಸ್ ಫಾರ್ ಯೂ ಸಹಯೋಗದೊಂದಿಗೆ ಯಲಹಂಕದಲ್ಲಿ ನಿರ್ಮಿಸಿರುವ 100 ಹಾಸಿಗೆಗಳ ಅತ್ಯಾಧುನಿಕ ಕೋವಿಡ್ ಆರೈಕೆ ಕೇಂದ್ರವನ್ನು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹಾಗೂ ಕೇಂದ್ರ ಸಚಿವ ಡಿ.ವಿ. ಸದಾನಂದ ಗೌಡ ಅವರು ಶನಿವಾರ ಉದ್ಘಾಟಿಸಿದರು.

ಈ ಕೇಂದ್ರವನ್ನು ₹5.5 ಕೋಟಿ ವೆಚ್ಚದಲ್ಲಿ ಕೇವಲ 20 ದಿನಗಳಲ್ಲಿ ನಿರ್ಮಿಸಲಾಗಿದೆ.

ಸೌರ ವಿದ್ಯುತ್ ಹಾಗೂ ತಾಪಮಾನ ನಿಯಂತ್ರಣ ವ್ಯವಸ್ಥೆ ಒಳಗೊಂಡಿರುವ ಈ ಕೇಂದ್ರದಲ್ಲಿ ಔಷಧಾಲಯ, ಪ್ರಯೋಗಾಲಯ, ವಿಶ್ರಾಂತಿ ಕೊಠಡಿ, ಶುಶ್ರೂಷಕಿ ಹಾಗೂ ತಾಯಂದಿರ ಆರೈಕೆ ಕೇಂದ್ರವೂ ಇದೆ. 10 ಐಸಿಯು ಹಾಗೂ 20 ಎಚ್‌ಡಿಯು ಹಾಸಿಗೆಗಳಿವೆ. ಉಳಿದ ಹಾಸಿಗೆಗಳು ವೈದ್ಯಕೀಯ ಆಮ್ಲಜನಕ ವ್ಯವಸ್ಥೆ ಹೊಂದಿವೆ.

ಮುಖ್ಯಮಂತ್ರಿ ಯಡಿಯೂರಪ್ಪ ನೂತನ ಕೋವಿಡ್ ಆರೈಕೆ ಕೇಂದ್ರದಲ್ಲಿನ ಸೌಲಭ್ಯಗಳನ್ನು ಪರಿಶೀಲಿಸಿದರು

ಆಸ್ಪತ್ರೆ ನಿರ್ಮಾಣಕ್ಕೆ ಕರ್ನಾಟಕ ವಿದ್ಯುತ್ ನಿಗಮವು ಅರ್ಧ ಎಕರೆ ಜಾಗ ಬಿಟ್ಟುಕೊಟ್ಟಿದೆ.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ‘ಕೋವಿಡ್ ಎರಡನೇ ಅಲೆಯ ನಿಯಂತ್ರಣ, ಚಿಕಿತ್ಸೆ ಹಾಗೂ ಲಸಿಕೆ ಕಾರ್ಯಕ್ರಮದಲ್ಲಿ ಸರ್ಕಾರದ ಜೊತೆ ಖಾಸಗಿ ಸಂಸ್ಥೆಗಳು ಕೈ ಜೋಡಿಸಿರುವುದು ಶ್ಲಾಘನೀಯ. ಬೋಯಿಂಗ್ ಸಂಸ್ಥೆ ಕಡಿಮೆ ಅವಧಿಯಲ್ಲಿ ಅತ್ಯಾಧುನಿಕ ಕೋವಿಡ್ ಆರೈಕೆ ಕೇಂದ್ರ ನಿರ್ಮಿಸಿರುವುದು ಸಂತಸದ ವಿಷಯ’ ಎಂದರು.

ಡಿ.ವಿ.ಸದಾನಂದ ಗೌಡ, ‘ಕೋವಿಡ್ ಸಾಂಕ್ರಾಮಿಕ ಆರಂಭವಾದಾಗಿನಿಂದಲೂ ರಾಜ್ಯ ಸರ್ಕಾರಗಳಿಗೆ ಕೇಂದ್ರವು ಎಲ್ಲ ರೀತಿಯ ಬೆಂಬಲ ನೀಡಿದ್ದು ಮುಂದೆಯೂ ಸಹಕಾರ ಮುಂದುವರಿಯಲಿದೆ’ ಎಂದು ಹೇಳಿದರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಸ್.ಆರ್.ವಿಶ್ವನಾಥ್, ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ, ರಾಜ್‌ಕುಮಾರ್ ಖತ್ರಿ, ಬೋಯಿಂಗ್ ಇಂಡಿಯಾ ಅಧ್ಯಕ್ಷ ಸಲೀಲ್ ಗುಪ್ತೆ, ‘ಡಾಕ್ಟರ್ಸ್ ಫಾರ್ ಯೂ’ ಸಂಸ್ಥೆಯ ಅಧ್ಯಕ್ಷ ರಜತ್ ಜೈನ್ ಇದ್ದರು.

ಸುದ್ದಿ 2 ನಿಮಿಷ

ಜಿಲ್ಲೆಗಳಲ್ಲೂ ತಜ್ಞರ ಸಮಿತಿ ಡಾ.ಕೆ. ಸುಧಾಕರ್

ಬೆಂಗಳೂರು: ಕೋವಿಡ್ ನಿಯಂತ್ರಣಕ್ಕಾಗಿ ರಾಜ್ಯ ಮಟ್ಟದ ತಜ್ಞರ ಸಮಿತಿಯ ಮಾದರಿಯಲ್ಲೇ ಎಲ್ಲ ಜಿಲ್ಲೆಗಳಲ್ಲೂ ತಜ್ಞರ ಸಮಿತಿ ನೇಮಿಸಲಾಗುವುದು ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ಆರೋಗ್ಯ ಸೌಧದಲ್ಲಿ ಶನಿವಾರ ಹಿರಿಯ ಅಧಿಕಾರಿಗಳು ಮತ್ತು ತಜ್ಞರ ಸಮಿತಿ ಸದಸ್ಯರ ಜತೆ ಸಭೆ ನಡೆಸಿದ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಕೋವಿಡ್ 3ನೇ ಅಲೆ ನಿಯಂತ್ರಿಸಲು ಸ್ಥಳೀಯ ಪರಿಸ್ಥಿತಿಗೆ ಅನುಗುಣವಾಗಿ ಕ್ರಮ ಕೈಗೊಳ್ಳಬೇಕಿದೆ. ಇದಕ್ಕಾಗಿ ಜಿಲ್ಲಾ ಮಟ್ಟದ ತಜ್ಞರ ಸಮಿತಿ ನೇಮಿಸಲಾಗುವುದು. ಈ ಸಮಿತಿಗಳು ಜಿಲ್ಲಾಡಳಿತಕ್ಕೆ ಸಲಹೆ ನೀಡಲಿವೆ’ ಎಂದರು.

ರಾಜ್ಯದಲ್ಲೂ ಡೆಲ್ಟಾ ತಳಿಯ ಕೊ ರೊ ನಾ ವೈರಾಣು ವೇಗವಾಗಿ ಹರಡುತ್ತಿದೆ. ಈ ಕಾರಣದಿಂದ ಡಿಸೆಂಬರ್ ಅಂತ್ಯದವರೆಗೂ ಪ್ರತಿ ದಿನ ಒಂದೂವರೆ ಲಕ್ಷ ಕೋವಿಡ್ ಪರೀಕ್ಷೆಗಳನ್ನು ನಡೆಸಲಾಗುವುದು ಎಂದು ತಿಳಿಸಿದರು.

7 ಲಕ್ಷ ಡೋಸ್ ಗುರಿ: ಸೋಮವಾರದಿಂದ ರಾಜ್ಯದಾದ್ಯಂತ ಕೋವಿಡ್ ಲಸಿಕಾ ಮೇಳ ಆರಂಭವಾಗಲಿದೆ. ಮೊದಲ ದಿನವೇ 7 ಲಕ್ಷ ಡೋಸ್ ಲಸಿಕೆ ನೀಡುವ ಗುರಿ ಹೊಂದಲಾಗಿದೆ ಎಂದರು.

ಈಗ ರಾಜ್ಯದಲ್ಲಿ 14 ಲಕ್ಷ ಡೋಸ್ ಕೋವಿಶೀಲ್ಡ್ ಲಸಿಕೆ ದಾಸ್ತಾನು ಇದೆ. 18ರಿಂದ 44 ವರ್ಷ ವಯಸ್ಸಿನವರು, 44 ವರ್ಷಕ್ಕಿಂತ ಮೇಲಿನವರು ಹಾಗೂ ಆರೋಗ್ಯ ಸಿಬ್ಬಂದಿಗೆ ಲಸಿಕೆ ನೀಡಲಾಗುವುದು ಎಂದರು.

ಮನೆಯಲ್ಲೇ ಯೋಗ ದಿನ: ಸೋಮವಾರ ವಿಶ್ವದಾದ್ಯಂತ ಯೋಗ ದಿನಾಚರಣೆ ನಡೆಯಲಿದೆ. ಅಂದು ಮುಖ್ಯಮಂತ್ರಿ ಅವರು ಮನೆಯಲ್ಲೇ ಯೋಗ ದಿನ ಆಚರಿಸಲಿದ್ದಾರೆ. ನಾನು ಕೂಡ ಪಾಲ್ಗೊಳ್ಳುವೆ. ಎಲ್ಲರೂ ತಮ್ಮ ಮನೆಗಳಲ್ಲೇ ಯೋಗಾಭ್ಯಾಸ ಮಾಡಿ, ಸಾಮಾಜಿಕ ಮಾಧ್ಯಮಗಳಲ್ಲಿ ವಿಡಿಯೊ ಹಂಚಿಕೊಳ್ಳಬೇಕು’ ಎಂದು ಹೇಳಿದರು.

ಹೋಟೆಲ್‌ಗಳಲ್ಲಿ ಸೇವೆಗೆ ಅವಕಾಶ:ಸ್ವಾಗತಾರ್ಹ

ಬೆಂಗಳೂರು:‘ಹೋಟೆಲ್‌ಗಳಲ್ಲಿ ಸೋಮವಾರದಿಂದ ಶೇ 50ರಷ್ಟು ಆಸನ ವ್ಯವಸ್ಥೆಯೊಂದಿಗೆ ಸಂಜೆ 5 ಗಂಟೆಯವರೆಗೆ ಸೇವೆಗೆ ಅವಕಾಶ ನೀಡಿರುವುದು ಸ್ವಾಗತಾರ್ಹ’ ಎಂದು ಬೃಹತ್ ಬೆಂಗಳೂರು ಹೋಟೆಲ್‌ಗಳ ಸಂಘದ ಅಧ್ಯಕ್ಷ ಪಿ.ಸಿ.ರಾವ್ ತಿಳಿಸಿದ್ದಾರೆ.

‘ಸರ್ಕಾರ ನಮ್ಮ ಮನವಿಗೆ ಸ್ಪಂದಿಸಿದೆ. ಹೋಟೆಲ್ ಸಿಬ್ಬಂದಿ ಹಾಗೂ ಕೆಲಸಗಾರರು ಕೋವಿಡ್ ಲಸಿಕೆ ಹಾಕಿಸಿಕೊಂಡಿದ್ದಾರೆ. ಗ್ರಾಹಕರ ಆರೋಗ್ಯ ದೃಷ್ಟಿಯಿಂದ ಹೋಟೆಲ್‌ಗಳಲ್ಲಿ ಕೋವಿಡ್ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುವುದು.’

‘ಗ್ರಾಹಕರು ಹೋಟೆಲ್‌ಗಳಲ್ಲಿ ಸಮಯ ವ್ಯರ್ಥ ಮಾಡಬಾರದು. ಅಂತರ ಕಾಯ್ದುಕೊಳ್ಳುವ ಮೂಲಕ ಸಹಕರಿಸಬೇಕು’ ಎಂದು ಅವರು ಮನವಿ ಮಾಡಿದ್ದಾರೆ.

ಮಾಗಡಿಯಲ್ಲಿ ಶಿವಕುಮಾರ ಶ್ರೀಗಳ ನೆನಪಿನಲ್ಲಿ ಸಾಂಸ್ಕೃತಿಕ ಕೇಂದ್ರ ನಿರ್ಮಾಣ

ಟೆಂಡರ್ ಕರೆಯದೆಯೇ ಕೆಆರ್‌ಐಡಿಎಲ್‌ಗೆ ಗುತ್ತಿಗೆ: ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರೀ ಶಿವಕುಮಾರ ಸ್ವಾಮೀಜಿಯವರ ಹುಟ್ಟೂರಾದ ಮಾಗಡಿ ತಾಲ್ಲೂಕು ವೀರಾಪುರ ಗ್ರಾಮದಲ್ಲಿ ಶ್ರೀಗಳ ನೆನಪಿಗಾಗಿ ₹25 ಕೋಟಿ ವೆಚ್ಚದಲ್ಲಿ ಅಂತರರಾಷ್ಟ್ರೀಯ ಸಾಂಸ್ಕೃತಿಕ ಹಾಗೂ ಪಾರಂಪರಿಕ ಕೇಂದ್ರ ನಿರ್ಮಿಸಲಾಗುತ್ತಿದೆ. ಇದರ ಕಾಮಗಾರಿಯನ್ನು ಟೆಂಡರ್ ಕರೆಯದೆಯೇ ನೇರವಾಗಿ ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮದ (ಕೆಆರ್‌ಐಡಿಎಲ್) ಮೂಲಕ ನಿರ್ವಹಿಸುವುದಕ್ಕೆ ಆಕ್ಷೇಪ ವ್ಯಕ್ತವಾಗಿದೆ.

ಮಾಗಡಿ ತಾಲ್ಲೂಕು ವೀರಾಪುರ ಗ್ರಾಮದಲ್ಲಿ ಶ್ರೀ ಶಿವಕುಮಾರ ಶ್ರೀಗಳ ನೆನಪಿಗಾಗಿ ಅಂತಾರಾಷ್ಟ್ರೀಯ ಸಾಂಸ್ಕೃತಿಕ ಹಾಗೂ ಪಾರಂಪರಿಕ ಕೇಂದ್ರ ನಿರ್ಮಾಣವಾಗಲಿರುವ ಸ್ಥಳ

ಪ್ರಜಾವಾಣಿ ವಿಶೇಷ

ರಾಜ್ಯ ಸರ್ಕಾರದ ಈ ನಡೆಗೆ ಸಾಮಾಜಿಕ ಕಾರ್ಯಕರ್ತರು ಹಾಗೂ ಗುತ್ತಿಗೆದಾರರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

‘ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ (ಕೆಟಿಪಿಪಿ) ಕಾಯ್ದೆಯ ಸೆಕ್ಷನ್ 4 (ಜಿ) ಅಡಿ ನೇರವಾಗಿ ಕೆಆರ್‌ಐಡಿಎಲ್‌ಗೆ ಕಾಮಗಾರಿ ಹೊಣೆ ನೀಡಲಾಗಿದೆ. ಕಾಯ್ದೆಗೆ ಇತ್ತೀಚೆಗೆ ತಂದಿರುವ ತಿದ್ದುಪಡಿ ಅನ್ವಯ, ₹2 ಕೋಟಿಯವರೆಗಿನ ಕಾಮಗಾರಿಯನ್ನು ಟೆಂಡರ್ ನೀಡದೆ ಕೊಡಬಹುದಾಗಿದೆ. ಆದರೆ, ಇದಕ್ಕಿಂತ ಸುಮಾರು 12 ಪಟ್ಟು ಹೆಚ್ಚು ಮೊತ್ತದ ಕಾಮಗಾರಿಯನ್ನು ನೀಡಿರುವುದು ಸರಿಯಲ್ಲ’ ಎಂದು ಸಾಮಾಜಿಕ ಕಾರ್ಯಕರ್ತ ಜಿ.ಆರ್. ಅನಿಲ್‌ಕುಮಾರ್ ದೂರಿದರು.

‘ಕೆಆರ್‌ಐಡಿಎಲ್‌ಗೆ ಕೆಟಿಪಿಪಿ ಕಾಯ್ದೆಯ 4(ಜಿ) ಸೆಕ್ಷನ್ ಅಡಿ ವಿನಾಯಿತಿ ನೀಡಿರುವುದನ್ನು ಪ್ರಶ್ನಿಸಿ ನ್ಯಾಯಾಲಯದ ಮೊರೆ ಹೋಗಿದ್ದೇನೆ. ಅಧಿಕೃತವಾಗಿ ಕಾಮಗಾರಿ ಆರಂಭಿಸಿ ರುವುದು ಶುಕ್ರವಾರ (ಜೂನ್ 18). ಆದರೆ, ಈಗಾಗಲೇ ಕಟ್ಟಡಕ್ಕೆ ಅಡಿಪಾಯ ಹಾಕಲಾಗಿದೆ ಎಂದು ಕೆಆರ್‌ಐಡಿಎಲ್ ಅಧಿಕಾರಿಗಳು ನ್ಯಾಯಾಲಯಕ್ಕೆ ತಪ್ಪು ಮಾಹಿತಿ ನೀಡಿದ್ದಾರೆ. ಕಾವಲುಗಾರರು ಇರುವುದಕ್ಕೆ ಒಂದು ಕೋಣೆ ನಿರ್ಮಿಸಿರುವುದು ಬಿಟ್ಟರೆ ಯಾವುದೇ ಕಾಮಗಾರಿಯೂ ಆಗ ಪ್ರಾರಂಭವಾಗಿರಲಿಲ್ಲ’ ಎಂದೂ ಅವರು ಹೇಳಿದರು.

‘ರಾಜ್ಯ ಸರ್ಕಾರದ ಅಡಿಯಲ್ಲಿ 35ಕ್ಕೂ ಹೆಚ್ಚು ನಿಗಮ, ಮಂಡಳಿಗಳು ಇವೆ. ಇವುಗಳಿಗೆಲ್ಲ ಹೀಗೆ ಟೆಂಡರ್ ಕರೆಯದೆ ಕೋಟ್ಯಂತರ ರೂಪಾಯಿ ಮೊತ್ತದ ಕಾಮಗಾರಿಯ ಗುತ್ತಿಗೆ ನೀಡಿದರೆ ಭ್ರಷ್ಟಾಚಾರಕ್ಕೆ ಎಡೆ ಮಾಡಿಕೊಟ್ಟಂತಾಗುವುದಿಲ್ಲವೇ’ ಎಂದೂ ಅವರು ಪ್ರಶ್ನಿಸಿದರು.

‘ಸಿ.ಟಿ. ರವಿ ಅವರು ಕನ್ನಡ ಮತ್ತು ಸಂಸ್ಕೃತಿ ಸಚಿವರಾಗಿದ್ದಾಗ ರೈಟ್ಸ್ ಸಂಸ್ಥೆಗೆ ಈ ಕಾಮಗಾರಿಯನ್ನು ನೀಡುವ ಬಗ್ಗೆ ತೀರ್ಮಾನಿಸಲಾಗಿತ್ತು. ಇದ್ದಕ್ಕಿದ್ದಂತೆ ಕೆಆರ್‌ಐಡಿಎಲ್‌ಗೆ ಗುತ್ತಿಗೆ ನೀಡಿರುವುದು ಅಚ್ಚರಿ ತಂದಿದೆ’ ಎಂದು ಹೆಸರು ಬಹಿರಂಗಪಡಿಸಲು ಬಯಸದ ಗುತ್ತಿಗೆದಾರರೊಬ್ಬರು ಹೇಳಿದರು.

‘ತುರ್ತು ಸಂದರ್ಭಗಳಲ್ಲಿ ಈ ರೀತಿ 4(ಜಿ) ಸೆಕ್ಷನ್ ಅಡಿ ವಿನಾಯಿತಿ ನೀಡಲು ರಾಜ್ಯ ಸರ್ಕಾರಕ್ಕೆ ಅಧಿಕಾರವಿದೆ. ಆದರೆ, ಅಂತಹ ಯಾವುದೇ ತುರ್ತು ಇಲ್ಲದಿದ್ದಾಗ ಹೀಗೆ ಟೆಂಡರ್ ಕರೆಯದೆ ಗುತ್ತಿಗೆ ನೀಡಿದ್ದು ತಪ್ಪು. ಕೆಆರ್‌ಐಡಿಎಲ್‌ಗೆ ಕಾಮಗಾರಿ ವಹಿಸಿರುವುದರ ಬಗ್ಗೆ ನಮ್ಮ ಆಕ್ಷೇಪವಿಲ್ಲ. ಆದರೆ, ಯಾವುದೇ ಗುತ್ತಿಗೆ ನೀಡುವಾಗ ಟೆಂಡರ್ ಆಹ್ವಾನಿಸಿಯೇ ನೀಡಬೇಕು ಎಂಬುದು ನಮ್ಮ ವಾದ’ ಎಂದು ಅವರು ಹೇಳಿದರು.

‘ಶಿವಕುಮಾರ ಶ್ರೀಗಳಂತಹ ಮೇರು ವ್ಯಕ್ತಿತ್ವದ ನೆನಪಿಗಾಗಿ ಕಟ್ಟುತ್ತಿರುವ ಈ ಕೇಂದ್ರದ ಕಾಮಗಾರಿಯಾದರೂ ಪಾರದರ್ಶಕವಾಗಿ ನಡೆಯಬೇಕು ಎಂಬ ಉದ್ದೇಶ ನಮ್ಮದು’ ಎಂದೂ ಅವರು ಹೇಳಿದರು.

ಈ ಬಗ್ಗೆ ಪ್ರತಿಕ್ರಿಯೆ ಪಡೆಯಲು ಕೆಆರ್‌ಐಡಿಎಲ್ ಅಧ್ಯಕ್ಷ ಎಂ. ರುದ್ರೇಶ್ ಅವರಿಗೆ ಹಲವು ಬಾರಿ ಕರೆ ಮಾಡಲಾಯಿತು. ಆದರೆ, ಅವರು ಸ್ವೀಕರಿಸಲಿಲ್ಲ.

ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ ಬೇಸರ

‘ಬಿಜೆಪಿಗೆ ಬಡ ಜನರ ಕಾಳಜಿಗಿಂತ ಅಧಿಕಾರವೇ ಮುಖ್ಯ’

ಪ್ರಜಾವಾಣಿ ವಾರ್ತೆ

ಬೊಮ್ಮನಹಳ್ಳಿ: ‘ಜವಾಬ್ದಾರಿಯುತ ಸರ್ಕಾರವು ಕೋವಿಡ್ ಮೂರನೇ ಅಲೆಯನ್ನು ತಡೆಯುವುದಕ್ಕೆ ಈಗಾಗಲೇ ಸಿದ್ಧತೆ ನಡೆಸಬೇಕಿತ್ತು. ಇದಕ್ಕೆ ತದ್ವಿರುದ್ಧವಾಗಿ ಬಿಜೆಪಿ ಮುಖಂಡರು ಒಳಜಗಳದಲ್ಲಿ ತೊಡಗಿದ್ದಾರೆ. ಅವರಿಗೆ ಬಡ ಜನರ ಕುರಿತ ಕಾಳಜಿಗಿಂತ ಅಧಿಕಾರವೇ ಮುಖ್ಯವಾಗಿದೆ’ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ ಬೇಸರ ವ್ಯಕ್ತಪಡಿಸಿದರು.

ಕೋವಿಡ್ ಸಂತ್ರಸ್ತರಿಗೆ ದಿನಸಿ ಕಿಟ್ ನೀಡುವ ಉದ್ದೇಶದಿಂದ ಬನ್ನೇರುಘಟ್ಟ ರಸ್ತೆ, ಅರಕೆರೆಯಲ್ಲಿ ಸ್ಥಳೀಯ ಕಾಂಗ್ರೆಸ್ ಘಟಕವು ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಹಲವು ಅಂತರರಾಷ್ಟ್ರೀಯ ಮಾಧ್ಯಮಗಳು ದೇಶದಲ್ಲಿ ಕೊರೊನಾದಿಂದ ಸತ್ತವರ ಸಂಖ್ಯೆ ಕುರಿತು ಸಂಶಯ ವ್ಯಕ್ತಪಡಿಸಿವೆ. ಇದಕ್ಕೆ ಪುಷ್ಟಿ ನೀಡುವಂತೆ ಸ್ಮಶಾನಗಳಲ್ಲಿ ಮೃತದೇಹ ಸುಡಲು ಜನ ದಿನಗಟ್ಟಲೇ ಸರತಿ ಸಾಲಿನಲ್ಲಿ ನಿಂತಿದ್ದ ದೃಶ್ಯಗಳನ್ನು ಮಾಧ್ಯಮಗಳು ವರದಿ ಮಾಡಿವೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮುಖ ಉಳಿಸಿಕೊಳ್ಳಲು ಸುಳ್ಳು ಲೆಕ್ಕ ನೀಡುತ್ತಿವೆ’ ಎಂದು ಆರೋಪಿಸಿದರು.

ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ದಿನಸಿ ಕಿಟ್ ವಿತರಿಸಿದರು. ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ, ಸ್ಥಳೀಯ ಕಾಂಗ್ರೆಸ್ ಮುಖಂಡ ಗೋಪಾಲ ರೆಡ್ಡಿ ಇದ್ದಾರೆ.

ಸ್ಥಳೀಯ ಕಾಂಗ್ರೆಸ್ ಮುಖಂಡ ಗೋಪಾಲರೆಡ್ಡಿ, ‘ಈ ಭಾಗದಲ್ಲಿ ಕಾಂಗ್ರೆಸ್ ಪಕ್ಷದ ವತಿಯಿಂದ 8 ಸಾವಿರ ಕುಟುಂಬಗಳಿಗೆ ದಿನಸಿ ಸಾಮಗ್ರಿ ನೀಡುತ್ತಿದ್ದೇವೆ. ಪ್ರತಿದಿನ 2 ಸಾವಿರ ಜನರಿಗೆ ಸಿದ್ಧ ಆಹಾರವನ್ನು ಪೂರೈಸುತ್ತಿದ್ದೇವೆ’ ಎಂದರು.

ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್, ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷ ಕೃಷ್ಣಪ್ಪ, ಪಕ್ಷದ ಮುಖಂಡ ಆರ್. ಕೆ.ರಮೇಶ್ ಇದ್ದರು.

ಉಡುಗೊರೆ ಆಮಿಷವೊಡ್ಡಿ ₹ 4.71 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದೇಶದಿಂದ ಉಡುಗೊರೆ ಬಂದಿರುವುದಾಗಿ ಹೇಳಿ ಕಸ್ಟಮ್ಸ್ ಅಧಿಕಾರಿಗಳ ಸೋಗಿನಲ್ಲಿ ಕರೆ ಮಾಡಿದ್ದ ವಂಚಕರು, ಶುಲ್ಕದ ಹೆಸರಿನಲ್ಲಿ ನಗರದ ಮಹಿಳೆಯೊಬ್ಬರಿಂದ ₹ 4.74 ಲಕ್ಷ ಪಡೆದು ವಂಚಿಸಿದ್ದಾರೆ.

‘ಯಲಹಂಕ ನ್ಯೂಟೌನ್ ನಿವಾಸಿಯಾಗಿರುವ 35 ವರ್ಷದ ಮಹಿಳೆ ವಂಚನೆ ಬಗ್ಗೆ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಈಶಾನ್ಯ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಮಹಿಳೆಗೆ ಕರೆ ಮಾಡಿದ್ದ ಆರೋಪಿಗಳು, ‘ನಿಮ್ಮ ಹೆಸರಿಗೆ ಇಂಗ್ಲೆಂಡ್‌ನಿಂದ ಉಡುಗೊರೆ ಬಂದಿದೆ. ಕರೆನ್ಸಿ ಹಾಗೂ ಬೆಲೆ ಬಾಳುವ ಚಿನ್ನದ ಆಭರಣಗಳಿವೆ. ಅದನ್ನು ನಿಮ್ಮ ವಿಳಾಸಕ್ಕೆ ಕಳುಹಿಸಲು ಕೆಲ ಶುಲ್ಕ ಹಾಗೂ ಜಿಎಸ್‌ಟಿ ಪಾವತಿ ಮಾಡಬೇಕು’ ಎಂದಿದ್ದರು. ಅದನ್ನು ನಂಬಿದ್ದ ಮಹಿಳೆ, ಆರೋಪಿ ನೀಡಿದ್ದ ಬ್ಯಾಂಕ್ ಖಾತೆಗಳಿಗೆ ಹಂತ ಹಂತವಾಗಿ ₹ 4.74 ಲಕ್ಷ ಹಾಕಿದ್ದರು. ಈ ಸಂಗತಿ ದೂರಿನಲ್ಲಿದೆ, ಹಣ ಪಡೆದ ನಂತರ ಆರೋಪಿ, ಯಾವುದೇ ಉಡುಗೊರೆ ಕಳುಹಿಸಿಲ್ಲ. ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ನಾಪತ್ತೆಯಾಗಿದ್ದಾನೆ’ ಎಂದು ಮೂಲಗಳು ಹೇಳಿವೆ.

ಮಾವು ಸಾಗಿಸುತ್ತಿದ್ದ ಟ್ರಕ್ ಸುಲಿಗೆ

ಬೆಂಗಳೂರು: ಕೋಲಾರದಿಂದ ಮಹಾರಾಷ್ಟ್ರಕ್ಕೆ ಮಾವಿನಹಣ್ಣು ಸಾಗಿಸುತ್ತಿದ್ದ ಟ್ರಕ್ ಸುಲಿಗೆ ಮಾಡಿದ್ದ ಆರೋಪದಡಿ ಸಾದಿಕ್ ಪಾಷಾ ಎಂಬಾತನನ್ನು ಕೆ.ಜಿ. ಹಳ್ಳಿ ಪೊಲೀಸರು ಬಂಧಿಸಿದ್ದಾರೆ.

‘ನಾಗವಾರ ನಿವಾಸಿ ಸಾದಿಕ್, ತನ್ನಿಬ್ಬರು ಸಹಚರರ ಜೊತೆ ಸೇರಿ ಕೃತ್ಯ ಎಸಗಿದ್ದ. ಆತನಿಂದ ಮಾರಕಾಸ್ತ್ರ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಟ್ರಕ್ ಚಾಲಕ ಶಿವಾಜಿ, ಕೋಲಾರದಲ್ಲಿ ಲಕ್ಷಾಂತರ ರೂಪಾಯಿ ಮೌಲ್ಯದ ಮಾವಿನಹಣ್ಣುಗಳನ್ನು ತುಂಬಿಸಿಕೊಂಡು ಮಹಾರಾಷ್ಟ್ರದತ್ತ ಹೊರಟಿದ್ದರು. ನಾಗವಾರ ಮುಖ್ಯರಸ್ತೆ ಸಮೀಪದಲ್ಲಿ ಆಟೊದಲ್ಲಿ ಬಂದಿದ್ದ ಆರೋಪಿಗಳು, ಟ್ರಕ್ ಅಡ್ಡಗಟ್ಟಿದ್ದರು. ಚಾಕು ತೋರಿಸಿ ಶಿವಾಜಿ ಮೇಲೆ ಹಲ್ಲೆ ಮಾಡಿದ್ದರು. ಕೈ ಕಾಲು ಕಟ್ಟಿಹಾಕಿ ಹಣ ಹಾಗೂ ಮೊಬೈಲ್ ಕಿತ್ತುಕೊಂಡಿದ್ದರು. ನಂತರ, ಟ್ರಕ್ ಸಮೇತ ಪರಾರಿಯಾಗಿದ್ದರು.’ ‘ಕೈ ಮತ್ತು ಕಾಲಿಗೆ ಕಟ್ಟಿದ್ದ ಹಗ್ಗ ಬಿಚ್ಚಿಕೊಂಡಿದ್ದ ಶಿವಾಜಿ, ಸ್ಥಳೀಯರೊಬ್ಬರ ನೆರವಿನಿಂದ ಠಾಣೆಗೆ ಬಂದು ದೂರು ನೀಡಿದ್ದರು. ತನಿಖೆ ಕೈಗೊಂಡಾಗ, ಆರೋಪಿಗಳು ಕೆ.ಆರ್. ಪುರ ಬಳಿ ಇರುವುದು ಗೊತ್ತಾಗಿತ್ತು. ಸ್ಥಳಕ್ಕೆ ಹೋಗಿ ಸಾದಿಕ್‌ನನ್ನು ಬಂಧಿಸಲಾಯಿತು. ಇನ್ನಿಬ್ಬರು ಪರಾರಿಯಾದರು’ ಎಂದೂ ಪೊಲೀಸರು ತಿಳಿಸಿದರು.

₹ 10 ರೀಚಾರ್ಜ್ ಮಾಡಿ ₹ 5.85 ಲಕ್ಷ ಕಳೆದುಕೊಂಡರು

ಬೆಂಗಳೂರು: ಏರ್‌ಟೆಲ್ ಕಂಪನಿ ಪ್ರತಿನಿಧಿ ಸೋಗಿನಲ್ಲಿ ಕರೆ ಮಾಡಿದ್ದ ವಂಚಕನ ಮಾತು ನಂಬಿದ್ದ ನಗರದ ನಿವಾಸಿಯೊಬ್ಬರು, ₹ 10 ರೀಚಾರ್ಜ್ ಮಾಡಿ ₹ 5.85 ಲಕ್ಷ ಕಳೆದುಕೊಂಡಿದ್ದಾರೆ.

ಈ ವಂಚನೆ ಬಗ್ಗೆ ಬ್ಯಾಂಕ್ ಉದ್ಯೋಗಿಯೊಬ್ಬರು ಈಶಾನ್ಯ ವಿಭಾಗದ ಸೈಬರ್ ಕ್ರೈಂ ಠಾಣೆಗೆ ದೂರು ನೀಡಿದ್ದಾರೆ.

‘ದೂರುದಾರರ ಮೊಬೈಲ್‌ಗೆ ಕರೆ ಮಾಡಿದ್ದ ವಂಚಕ, ‘ನಿಮ್ಮ ಏರ್‌ಟೆಲ್ ನಂಬರ್ ಸದ್ಯದಲ್ಲೇ ನಿಷ್ಕ್ರಿಯವಾಗಲಿದೆ. ಹೀಗಾಗಿ, ಗ್ರಾಹಕರ ಮಾಹಿತಿ (ಕೆವೈಸಿ) ನವೀಕರಿಸಬೇಕು. ಅದಕ್ಕಾಗಿ ಆ್ಯಪೊಂದನ್ನು ಇನ್‌ಸ್ಟಾಲ್ ಮಾಡಿ ₹10 ರೀಚಾರ್ಜ್ ಮಾಡಿಸಬೇಕು’ ಎಂದಿದ್ದ. ಅದನ್ನು ನಂಬಿದ್ದ ದೂರುದಾರ, ಆ್ಯಪ್ ಇನ್‌ಸ್ಟಾಲ್ ಮಾಡಿಕೊಂಡು ರೀಚಾರ್ಜ್ ಮಾಡಿಸಿದ್ದರು’. ‘ಅದಾದ ಕೆಲ ನಿಮಿಷಗಳಲ್ಲಿ ದೂರುದಾರರ 4 ಬ್ಯಾಂಕ್ ಖಾತೆಗಳಿಂದ ಹಂತ ಹಂತವಾಗಿ ₹ 5.85 ಲಕ್ಷ ಕಡಿತವಾಗಿದೆ. ಆರೋಪಿ ಮೊಬೈಲ್ ಸಹ ಸ್ವಿಚ್ ಆಫ್ ಆಗಿದೆ’ ಎಂದೂ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ವಕೀಲರನ್ನು ಒದಗಿಸುವುದಾಗಿ ವಂಚನೆ

‘ಮೊಕದ್ದಮೆಯೊಂದರಲ್ಲಿ ವಾದ ಮಂಡಿಸಲು ವಕೀಲರನ್ನು ಒದಗಿಸುವುದಾಗಿ ಹೇಳಿದ್ದ ವ್ಯಕ್ತಿಯೊಬ್ಬರು ಆನ್‌ಲೈನ್ ಮೂಲಕ ₹ 23,600 ಪಡೆದು ವಂಚಿಸಿ ದ್ದಾರೆ’ ಎಂದು ಆರೋಪಿಸಿ ಸಾಫ್ಟ್‌ವೇರ್ ಎಂಜಿನಿಯರೊಬ್ಬರು ಈಶಾನ್ಯ ವಿಭಾಗದ ಸೈಬರ್ ಕ್ರೈಂ ಠಾಣೆಗೆ ದೂರು ನೀಡಿದ್ದಾರೆ.

‘ವಕೀಲರಾಗಿ ಹುಡುಕಾಟ ನಡೆಸುತ್ತಿದ್ದೆ. ಮೈಅಡ್ವೊ ಡಾಟ್ ಇನ್ ಜಾಲ ತಾಣದ ಮೂಲಕ ಆರೋಪಿಯ ನಂಬರ್ ಪಡೆದುಕರೆ ಮಾಡಿದ್ದೆ. ಮೊಕದ್ದಮೆಯಲ್ಲಿ ವಾದಿಸಲು ವಕೀಲರನ್ನು ಒದಗಿ ಸುವುದಾಗಿ ಹಾಗೂ ದಾಖಲೆ ಸಿದ್ಧಪಡಿಸುವುದಾಗಿ ಹೇಳಿದ್ದ ಆರೋಪಿ, ಬ್ಯಾಂಕ್ ಖಾತೆ ಮೂಲಕ ಹಣ ಪಡೆದಿದ್ದ. ನಂತರ ನಾಪತ್ತೆಯಾಗಿದ್ದಾನೆ’ ಎಂದೂ ದೂರಿನಲ್ಲಿ ತಿಳಿಸಲಾಗಿದೆ.

₹ 1.15 ಲಕ್ಷ ಕಿತ್ತ ಆನ್‌ಲೈನ್ ವರ

ಬೆಂಗಳೂರು: ವೈವಾಹಿಕ ಜಾಲತಾಣದಲ್ಲಿ ಪರಿಚಯವಾಗಿದ್ದ ವ್ಯಕ್ತಿಯೊಬ್ಬ ನಗರದ ಯುವತಿಯೊಬ್ಬರಿಂದ ₹ 1.15 ಲಕ್ಷ ಪಡೆದು ವಂಚಿಸಿದ್ದು, ಈ ಬಗ್ಗೆ ಈಶಾನ್ಯ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಸಾಫ್ಟ್‌ವೇರ್ ಎಂಜಿನಿಯರ್ ಆಗಿರುವ 26 ವರ್ಷದ ಯುವತಿ ವಂಚನೆ ಬಗ್ಗೆ ದೂರು ನೀಡಿದ್ದಾರೆ. ಆರೋಪಿ ದುಗ್ಗಾ ವೆಂಕಟೇಶ್ವರ್ ರೆಡ್ಡಿ ಎಂಬಾತನ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಶಾದಿ ಡಾಟ್ ಕಾಮ್ ಜಾಲತಾಣದಲ್ಲಿ ಯುವತಿ ಖಾತೆ ತೆರೆದಿದ್ದರು. ಈ ಜಾಲತಾಣದಲ್ಲಿ ಯುವತಿಯನ್ನು ಸಂಪರ್ಕಿಸಿದ್ದ ಆರೋಪಿ, ನೆದರ್ಲೆಂಡ್‌ನಲ್ಲಿ ಸಿವಿಲ್ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದು, ಮದುವೆಯಾಗುವುದಾಗಿ ಹೇಳಿ ಚಾಟಿಂಗ್ ಮಾಡಿದ್ದ. ಇಬ್ಬರೂ ಪರಸ್ಪರ ಮೊಬೈಲ್ ನಂಬರ್ ಸಹ ವಿನಿಮಯ ಮಾಡಿಕೊಂಡಿದ್ದರು.’ ‘ಭಾರತಕ್ಕೆ ಬರಲು ಪ್ರಯತ್ನಿಸುತ್ತಿದ್ದು, ಕೋವಿಡ್ ಕಾರಣದಿಂದ ವಿಮಾನದ ಟಿಕೆಟ್ ಸಿಗುತ್ತಿಲ್ಲ. ಹೀಗಾಗಿ, ನನ್ನ ಲಗೇಜು ಮಾತ್ರ ಭಾರತಕ್ಕೆ ಕಳುಹಿಸುತ್ತಿದ್ದೇನೆ. ಅದರಲ್ಲಿ ಬೆಲೆಬಾಳುವ ವಸ್ತುಗಳಿವೆ. ತೆಗೆದುಕೊಳ್ಳಿ’ ಎಂದು ಆರೋಪಿ ತಿಳಿಸಿದ್ದ. ಮರುದಿನ ಕಸ್ಟಮ್ಸ್ ಅಧಿಕಾರಿಗಳ ಸೋಗಿನಲ್ಲಿ ಕರೆ ಮಾಡಿದ್ದ ವಂಚಕರು, ‘ನಿಮ್ಮ ಹೆಸರಿಗೆ ಲಗೇಜು ಬಂದಿದೆ. ಶುಲ್ಕ ಪಾವತಿಸಿ’ ಎಂದಿದ್ದರು. ಅದನ್ನು ನಂಬಿದ್ದ ಯುವತಿ, ₹ 1.15 ಲಕ್ಷ ಪಾವತಿಸಿದ್ದರು. ನಂತರ ಲಗೇಜು ಬಂದಿಲ್ಲ. ಆರೋಪಿಗಳೂ ನಾಪತ್ತೆಯಾಗಿದ್ದಾರೆ’ ಎಂದೂ ಮೂಲಗಳು ತಿಳಿಸಿವೆ.

ಶಿಕ್ಷಣ ನೀತಿ ಜಾರಿಗೆ ತಜ್ಞರ ಸಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಶಿಕ್ಷಣ ನೀತಿಯನ್ನು (ಎನ್‌ಇಪಿ) ಈ ವರ್ಷದಿಂದಲೇ ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರುವ ಉದ್ದೇಶದಿಂದ ಸರ್ಕಾರ ವಿಷಯವಾರು ತಜ್ಞರ ಸಮಿತಿ ರಚಿಸಿದೆ.

‘ನೀತಿಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಈ ಉದ್ದೇಶದಿಂದ ಇದೇ 30ರೊಳಗೆ ವರದಿ ಸಲ್ಲಿಸುವಂತೆ ಸಮಿತಿಗಳಿಗೆ ಸೂಚಿಸಲಾಗಿದೆ’ ಎಂದು ಉನ್ನತ ಶಿಕ್ಷಣ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.

ವಿಷಯವಾರು ತಜ್ಞರ ಸಮಿತಿ:

ಸಾಮಾಜಿಕ ವಿಜ್ಞಾನ: ತುಮಕೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ವೈ.ಎಸ್.ಸಿದ್ದೇಗೌಡ (ಅಧ್ಯಕ್ಷರು), ಪ್ರೊ.ಬಿ.ಪಿ.ವೀರಭದ್ರಪ್ಪ, ಪ್ರೊ.ಬಿ.ಕೆ. ತುಳಸೀಮಾಲಾ, ಪ್ರೊ.ಎನ್.ಆರ್. ಭಾನುಮೂರ್ತಿ, ಪ್ರೊ.ಹರೀಶ್ ರಾಮಸ್ವಾಮಿ, ಪ್ರೊ.ಜಿ.ಸರ್ವಮಂಗಳ, ಪ್ರೊ.ವಿ.ಎ.ಅಮಿನಾಭಾವಿ, ಪ್ರೊ.ಎ ರಾಮೇಗೌಡ, ಪ್ರೊ.ಸಂಗೀತಾ ಮಾನೆ, ಪ್ರೊ.ಎನ್.ನರಸಿಂಹಮೂರ್ತಿ, ಪ್ರೊ. ನಿರಂಜನ, ಪ್ರೊ.ಆರ್.ಆನ್. ಮನಗೊಳಿ (ಎಲ್ಲರೂ ಸದಸ್ಯರು).

ಭಾಷೆ ಮತ್ತು ಭಾಷಾಶಾಸ್ತ್ರ: ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಡಿ.ಬಿ.ನಾಯಕ್ (ಅಧ್ಯಕ್ಷರು), ಪ್ರೊ.ಎಸ್.ಸಿ.ರಮೇಶ್, ಪ್ರೊ.ಕೆ.ಇ.ದೇವನಾಥನ್, ಪ್ರೊ.ಲಿಂಗರಾಜ ಗಾಂಧಿ, ಪ್ರೊ.ರಚೇಲ್ ಕುರಿಯನ್, ಪ್ರೊ. ಗಂಗಾಧರಯ್ಯ (ಎಲ್ಲರೂ ಸದಸ್ಯರು).

ಲಲಿತ ಕಲೆ ಮತ್ತು ದೃಶ್ಯ ಮಾಧ್ಯಮ: ಸಂಗೀತ ಮತ್ತು ಕಲಾ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ನಾಗೇಶ್ ವಿ.ಬೆಟ್ಟಕೋಟೆ (ಅಧ್ಯಕ್ಷರು), ಪ್ರೊ.ಜಯಕುಮಾರ್ ರೆಡ್ಡಿ, ಪ್ರೊ.ಎಸ್.ಎನ್.ಸುಶೀಲ, ಪ್ರೊ. ಕೆ.ರಾಮಕೃಷ್ಣಯ್ಯ (ಎಲ್ಲರೂ ಸದಸ್ಯರು).

ವಿಜ್ಞಾನ ಮತ್ತು ಗಣಿತ: ಮೈಸೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಜಿ. ಹೇಮಂತ ಕುಮಾರ್ (ಅಧ್ಯಕ್ಷರು), ಪ್ರೊ.ಟಿ.ಡಿ.ಕೆಂಪರಾಜು, ಪ್ರೊ.ಎಸ್.ವಿ. ಹಲಸೆ, ಪ್ರೊ.ಸಿದ್ದು ಪಿ.ಹಲಗೂರು, ಪ್ರೊ..ಎಸ್.ಎಂ.ಶಿವಪ್ರಸಾದ್, ಪ್ರೊ. ಶ್ರೀಧರ್, ಪ್ರೊ.ಮಂಜುನಾಥ ಪಟ್ಟಾಭಿ, ಪ್ರೊ.ಯು.ಎಸ್.ಮಹಾಬಲೇಶ್ವರ್, ಪ್ರೊ. ಪಿ.ಎಂ.ಪಾಟೀಲ್, ಪ್ರೊ.ಪರಮೇಶ್ವರ್ ವಿ.ಪಂಡಿತ್ (ಎಲ್ಲರೂ ಸದಸ್ಯರು).

ರಾಸಾಯನಿಕ ಮತ್ತು ಜೀವವಿಜ್ಞಾನ: ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಕೆ.ಬಿ. ಗುಡಸಿ (ಅಧ್ಯಕ್ಷರು), ಪ್ರೊ.ಎಲ್.ಗೋಮತಿ ದೇವಿ, ಪ್ರೊ. ದಯಾನಂದ ಅಗಸರ್, ಪ್ರೊ.ಜಿ.ಆರ್. ನಾಯಕ್, ಪ್ರೊ.ವಿ.ಆರ್.ದೇವರಾಜ್, ಪ್ರೊ.ಬಾಲಕೃಷ್ಣ ಕಲ್ಲೂರಾಯ, ಪ್ರೊ. ಎಚ್.ಎಸ್.ಭೋಜನಾಯಕ್, ಪ್ರೊ. ಲಕ್ಷ್ಮೀ ಇನಾಂದಾರ್, ಪ್ರೊ.ವಿ.ಕೃಷ್ಣ (ಎಲ್ಲರೂ ಸದಸ್ಯರು).

ಭೂ ವಿಜ್ಞಾನ: ಕೆಬಿಎನ್ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎಂ.ಎಂ. ಪಠಾಣ್ (ಅಧ್ಯಕ್ಷರು), ಪ್ರೊ.ಅಶೋಕ್ ಅಂಜಗಿ, ಪ್ರೊ.ಪಿ.ಮಾದೇಶ್, ಪ್ರೊ. ಆಸ್ಫಾಕ್ ಅಹಮದ್, ಪ್ರೊ.ಎಸ್.ವಿ. ಕೃಷ್ಣಮೂರ್ತಿ, ಪ್ರೊ.ಎನ್.ನಂದಿನಿ (ಎಲ್ಲರೂ ಸದಸ್ಯರು).

ವಾಣಿಜ್ಯ ಮತ್ತು ನಿರ್ವಹಣೆ: ಮಂಗಳೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಪಿ.ಎಸ್. ಯಡಪಡಿತ್ತಾಯ (ಅಧ್ಯಕ್ಷರು), ಪ್ರೊ. ಎಂ.ರಾಮಚಂದ್ರಗೌಡ, ಪ್ರೊ.ಆರ್. ಎಲ್. ಹೈದರಾಬಾದ್, ಪ್ರೊ.ಎಚ್.ಎಸ್.ಅನಿತಾ, ಪ್ರೊ.ಡಿ.ಆನಂದ್, ಪ್ರೊ. ವಿಜಯ್ ಬೂತಪುರ್, ಪ್ರೊ. ಸಿಂಥಿಯಾ ಮೆನೇಜಸ್, ಪ್ರೊ. ಮುಸ್ತೈರಿ ಬೇಗಂ, ಪ್ರೊ.ಸುದರ್ಶನ್ ರೆಡ್ಡಿ, ಡಾ.ಅಲೋಯಿಸಿಸ್ ಎಡ್ವರ್ಡ್ (ಎಲ್ಲರೂ ಸದಸ್ಯರು).

ಎಂಜಿನಿಯರಿಂಗ್: ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಕರಿಸಿದ್ದಪ್ಪ (ಅಧ್ಯಕ್ಷರು), ಪ್ರೊ. ಕೆ. ಆರ್. ವೇಣುಗೋಪಾಲ್, ಪ್ರೊ.ಕೆ.ಎನ್.ಬಿ.ಮೂರ್ತಿ, ಪ್ರೊ.ಎಸ್. ವಿದ್ಯಾಶಂಕರ್, ಪ್ರೊ.ಪುಟ್ಟರಾಜು, ಪ್ರೊ. ಶ್ರೀನಿವಾಸ ಬಲ್ಲಿ (ಎಲ್ಲರೂ ಸದಸ್ಯರು).

ಎಲ್ಲ ಸಮಿತಿಗಳಿಗೆ ಉನ್ನತ ಶಿಕ್ಷಣ ಪರಿಷತ್ ಕಾರ್ಯನಿರ್ವಾಹಕ ನಿರ್ದೇಶಕ ಪ್ರೊ. ಗೋಪಾಲಕೃಷ್ಣ ಜೋಶಿ ಅವರು ಸದಸ್ಯ ಕಾರ್ಯದರ್ಶಿ ಆಗಿರುತ್ತಾರೆ.



ಅಪ್ಪನ ಜೊತೆ ಶ್ರೀದುರ್ಗಾ ಭವಾನಿ

ಅಪ್ಪನೇ ನನ್ನ ಪಾಲಿನ ಹೀರೊ...

ಬೆಂಗಳೂರು: ಅಪ್ಪ (ಶ್ರೀನಿವಾಸ್) ಮಿತ ಭಾಷಿ. ಸಹೃದಯಿ ಕೂಡ. ತಂಗಿ ಹಾಗೂ ನನ್ನನ್ನು ತುಂಬಾ ಅಕ್ಕರೆಯಿಂದ ನೋಡಿಕೊಳ್ಳುತ್ತಿದ್ದರು. ಏನನ್ನು ಕೇಳಿದರೂ ಇಲ್ಲ ಅಂದವರಲ್ಲ.

ನಾನು ಚಿತ್ರದುರ್ಗದ ಶ್ರೀ ರಾಘವೇಂದ್ರ ಆಯುರ್ವೇದಿಕ್ ಮೆಡಿಕಲ್ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ಕಾರಣ ಮನೆಯಿಂದ ದೂರ ಉಳಿಯಬೇಕಿದೆ. ಹೀಗಾಗಿ ರಜೆ ಸಿಕ್ಕಾಗಲೆಲ್ಲಾ ಆ್ಯಕ್ಟಿವಾ ಬೈಕ್‌ನಲ್ಲೇ ಬೆಂಗಳೂರಿನಿಂದ ಚಿತ್ರದುರ್ಗಕ್ಕೆ ಬಂದುಬಿಡುತ್ತಿದ್ದರು. ನಾನು ಬೇಡ ಅಂದರೂ ಕೇಳುತ್ತಿರಲಿಲ್ಲ. ಅಮ್ಮ ಮಾಡಿಕೊಟ್ಟ ತಿಂಡಿ ತಿನಿಸುಗಳನ್ನೂ ಜೊತೆಗೆ ತರುತ್ತಿದ್ದರು. ದಿನವಿಡೀ ಜೊತೆಯಲ್ಲೇ ಇದ್ದು ಕೇಳಿದ್ದನ್ನೆಲ್ಲಾ ಕೊಡಿಸಿ ಭಾರವಾದ ಮನಸ್ಸಿನಿಂದಲೇ ಹೋಗುತ್ತಿದ್ದರು.

ನಾನು ಬೆಂಗಳೂರಿಗೆ ಬಂದಾಗ ಗೊರಗುಂಟೆಪಾಳ್ಯದಲ್ಲಿ ಇಳಿದುಕೊಳ್ಳುತ್ತಿದ್ದೆ. ಎಷ್ಟೇ ಹೊತ್ತಾಗಿದ್ದರೂ ಸರಿ ಅಲ್ಲಿಗೆ ಬಂದು ನನಗೋಸ್ಕರ ಕಾಯುತ್ತಾ ನಿಂತಿರುತ್ತಿದ್ದರು. ಮನೆಯಲ್ಲಿ ಎಲ್ಲರೊಡನೆ ಆತ್ಮೀಯವಾಗಿ ಬೆರೆಯುತ್ತಿದ್ದರು. ಕೆಲವೊಮ್ಮೆ ಅವರೇ ಅಡುಗೆ ಮಾಡಿ ನಮಗೆಲ್ಲಾ ಬಡಿಸುತ್ತಿದ್ದರು. ರಜೆ ಸಿಕ್ಕಾಗಲೆಲ್ಲಾ ಪ್ರವಾಸಕ್ಕೆ ಹೋಗುತ್ತಿದ್ದೆವು. ಮಾರ್ಚ್‌ನಲ್ಲಿ ತಿರುಪತಿಗೆ ಕರೆದುಕೊಂಡು ಹೋಗಿದ್ದರು. ಅವರೊಂದಿಗೆ ನಾವು ಮಾಡಿದ ಕೊನೆಯ ಪ್ರವಾಸವದು.

ನನ್ನೆಲ್ಲಾ ಕನಸುಗಳಿಗೆ ಅಪ್ಪ ಬೆಂಬಲವಾಗಿದ್ದರು. ನಾನು ವೈದ್ಯಕೀಯ ಶಿಕ್ಷಣ ಪಡೆಯುವುದು ಯಾರಿಗೂ ಇಷ್ಟ ಇರಲಿಲ್ಲ. ಆದರೆ ಅಪ್ಪ ಬೆನ್ನೆಲುಬಾಗಿ ನಿಂತರು. 'ಎಷ್ಟೇ ಹಣ ಖರ್ಚಾದರೂ ಪರವಾಗಿಲ್ಲ; ನೀನು ಓದು' ಎಂದು ಧೈರ್ಯ ತುಂಬಿದ್ದರು. ಅಂತಹ ವ್ಯಕ್ತಿಯನ್ನು ಅಪ್ಪನಾಗಿ ಪಡೆಯಲು ನಿಜಕ್ಕೂ ಪುಣ್ಯ ಮಾಡಿದ್ದೆ. ನಮ್ಮ ಬಾಂಧವ್ಯ ಕಂಡು ಭಗವಂತನಿಗೂ ಹೊಟ್ಟೆಕಿಚ್ಚಾಗಿರಬೇಕು. ಹೀಗಾಗಿ ಅಪ್ಪನನ್ನು ಬೇಗ ಕರೆದುಕೊಂಡುಬಿಟ್ಟ. ಅವರು ಈಗ ನಮ್ಮ ಜೊತೆ ಇಲ್ಲ ಎಂಬುದನ್ನು ನಂಬುವುದಕ್ಕೆ ಆಗುತ್ತಿಲ್ಲ. ಪ್ರತಿ ಕ್ಷಣವೂ ಅವರ ನೆನಪು ಕಾಡುತ್ತಿದೆ.

–ಶ್ರೀದುರ್ಗಾ ಭವಾನಿ, ಹಳೆ ಮದ್ರಾಸ್ ರಸ್ತೆ, ಬೆಂಗಳೂರು.

ನಿರೂಪಣೆ: ಜಿ.ಶಿವಕುಮಾರ

'ಅಪ್ಪನಿಲ್ಲ, ಹೊರಗಡೆ ಕರೆದೊಯ್ಯುವವರಾರು?'

ಬೆಂಗಳೂರು: 'ಸೌದಿ ಅರೇಬಿಯಾದಲ್ಲಿ ಕೆಲಸ ಮಾಡುತ್ತಿದ್ದ ಅಪ್ಪ ಮನೆಗೆ ಬಂದು ಒಂದೂವರೆ ವರ್ಷವಾಗಿತ್ತು. ಅವರು ಹೊರಗಡೆ ಕರೆದೊಯ್ದು, ಇಷ್ಟವಾದ ತಿನಿಸು ಹಾಗೂ ವಸ್ತುಗಳನ್ನು ಕೊಡಿಸುತ್ತಿದ್ದರು. ಕೋವಿಡ್ ಕಾಯಿಲೆಯು ಅಪ್ಪನನ್ನು ನಮ್ಮಿಂದ ದೂರ ಮಾಡಿತು. ಈಗ ಹೊರಗಡೆ ಕರೆದೊಯ್ಯುವವರು ಯಾರು?'

ಇದು ಎಂಟೂವರೆ ವರ್ಷದ ಬಾಲಕಿಯ ಪ್ರಶ್ನೆ. ಮೂರನೇ ತರಗತಿಯಲ್ಲಿ ಓದುತ್ತಿರುವ ಪೂರ್ವಿಕಾ ಕಳೆದ ಏಪ್ರಿಲ್‌ನಲ್ಲಿ ತಂದೆಯನ್ನು ಕಳೆದುಕೊಂಡಿದ್ದಾಳೆ. ಅವಳ ತಾಯಿ ಶುಶ್ರೂಷಕಿಯಾಗಿದ್ದು, ರಾಜೀವ್‌ಗಾಂಧಿ ಎದೆರೋಗಗಳ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಆಸ್ಪತ್ರೆಗೆ ದಾಖಲಾದ ಹಲವಾರು ಕೊರೊನಾ ಸೋಂಕಿತರ ಆರೈಕೆ ಮಾಡಿದ್ದ ಅವರಿಗೆ, ಈ ಕಾಯಿಲೆಯಿಂದ ಪತಿಯನ್ನು ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ. ತಾಯಿ ಕೆಲಸಕ್ಕೆ ತೆರಳಿದಾಗ ಮನೆಯಲ್ಲಿ ಏಕಾಂಗಿಯಾಗುವ ಬಾಲಕಿಗೆ ಅಪ್ಪನ ಅಗಲುವಿಕೆ ಕಾಡಲಾರಂಭಿಸಿದೆ.

'ಮಗಳು ಚಿಕ್ಕವಳಾದ್ದರಿಂದ ಬಹಿರಂಗವಾಗಿ ದುಃಖವನ್ನು ತೋರ್ಪಡಿಸುತ್ತಿಲ್ಲ. ಆದರೆ, ಈಗ ಮನೆಯಲ್ಲಿ ಒಬ್ಬಂಟಿಯಾಗಿದ್ದಾಳೆ. ಅವಳು ಭಾವನೆಯನ್ನು ವ್ಯಕ್ತಪಡಿಸುತ್ತಿಲ್ಲ. ಮಗಳಿಗೆ 5 ವರ್ಷವಾದಾಗ ಪತಿ ಪ್ರಕಾಶ್ ಅವರು ಸೌದಿ ಅರೇಬಿಯಾಕ್ಕೆ ಉದ್ಯೋಗ ನಿಮಿತ್ತ ತೆರಳಿದ್ದರು. ಅಲ್ಲಿ ಎರಡು ವರ್ಷ ಕೆಲಸ ಮಾಡಿ, ಮರಳಿದ್ದರು. ಈ ಮಧ್ಯೆ ಒಂದು ವರ್ಷ ಮಗಳನ್ನು ಅಜ್ಜಿ ಮನೆಯಲ್ಲಿ ಬಿಟ್ಟಿದ್ದೆ. ಒಂದೂವರೆ ವರ್ಷದಿಂದ ಅಪ್ಪನ ಜತೆಗೆ ಸಂತೋಷದಿಂದ ಮಗಳು ಸಮಯ ಕಳೆದಿದ್ದಳು' ಎಂದು ತಾಯಿ ಪ್ರಿಯಾಂಕಾ ಜೆ.ಆರ್ ತಿಳಿಸಿದರು.

'ನನಗೆ, ಪತಿಗೆ, ಮಗಳಿಗೆ ಮತ್ತು ತಾಯಿಗೆ ಕಳೆದ ಏಪ್ರಿಲ್‌ನಲ್ಲಿ ಕೊರೊನಾ ಸೋಂಕು ತಗುಲಿತು. ನಮಗೆ ರೋಗ ಲಕ್ಷಣಗಳು ಗೋಚರಿಸಲಿಲ್ಲ. ಆದರೆ, ಪತಿ ಗಂಭೀರವಾಗಿ ಅಸ್ವಸ್ಥರಾಗಿ, ಚಿಕಿತ್ಸೆಗೆ ಸ್ಪಂದಿಸದೆಯೇ ಮೃತಪಟ್ಟರು. ಕೊನೆಯ ಬಾರಿ ತಂದೆಯ ಮುಖ ನೋಡಿದಾಗ ಮಗಳು ಭಾವುಕಳಾಗಿದ್ದಳು. ಮಗಳು ಉತ್ತಮ ನೃತ್ಯಗಾರ್ತಿ ಅಥವಾ ಕ್ರೀಡಾಪಟು ಆಗಬೇಕು ಎಂಬ ಆಸೆ ನನ್ನ ಪತಿಯದು' ಎಂದರು.

ನಿರೂಪಣೆ: ವರುಣ ಹೆಗಡೆ

ತಂದೆ ಪ್ರಕಾಶ್ ಜತೆಗೆ ಪೂರ್ವಿಕಾ

ಕೇಳಿದ್ದನ್ನೆಲ್ಲಾ ಕೊಡಿಸುತ್ತಿದ್ದ ಸಾಹುಕಾರ...

ಅಪ್ಪ ಶ್ರೀನಿವಾಸ ಮೂರ್ತಿ ಜೊತೆ ಮೋನಿಕಾ

ಬೆಂಗಳೂರು: ನಮ್ಮದು ತೀರಾ ಬಡ ಕುಟುಂಬ. ಅಪ್ಪ ಅಮ್ಮನಿಗೆ ನಾನೊಬ್ಬಳೇ ಮಗಳು. ಹೀಗಾಗಿ ತುಂಬಾ ಮುದ್ದಾಗಿ ಸಾಕಿದ್ದಾರೆ. ಅಪ್ಪ ಖಾಸಗಿ ಶಾಲೆಯೊಂದರಲ್ಲಿ ಸೆಕ್ಯೂರಿಟಿ ಗಾರ್ಡ್ ಕೆಲಸ ಮಾಡುತ್ತಿದ್ದರು. ಅವರಿಗೆ ಬರುತ್ತಿದ್ದ ಸಂಬಳದಲ್ಲಿ ಜೀವನ ನಿರ್ವಹಣೆಯೇ ಕಷ್ಟವಿತ್ತು. ಹಾಗಂತ ಅವರು ನನಗೇನು ಕಡಿಮೆ ಮಾಡಿರಲಿಲ್ಲ. ಏನೇ ಕೇಳಿದರೂ ಮರು ಮಾತನಾಡದೇ ಕೊಡಿಸುತ್ತಿದ್ದರು.

ನಾನು ಚೆನ್ನಾಗಿ ಓದಿ ದೊಡ್ಡ ಅಧಿಕಾರಿಯಾಗಬೇಕು ಎಂಬ ಆಸೆ ಅವರಿಗಿತ್ತು. ಅದನ್ನು ಅನೇಕ ಬಾರಿ ನನ್ನ ಬಳಿ ಹೇಳಿಕೊಂಡಿದ್ದರು. ತನ್ನ ಮನಸ್ಸಿನಲ್ಲಿ ಎಷ್ಟೇ ನೋವಿದ್ದರೂ ಅದನ್ನು ತೋರ್ಪಡಿಸದೆ ಸದಾ ನಗುತ್ತಲೇ ಇರುತ್ತಿದ್ದರು. ಹಬ್ಬ ಹರಿದಿನಗಳಿಗೆ ಕೇಳದಿದ್ದರೂ ಹೊಸ ಬಟ್ಟೆ ತಂದು ಕೊಡುತ್ತಿದ್ದರು. ರಜೆ ಇದ್ದಾಗ ಅಮ್ಮ ಹಾಗೂ ನನ್ನನ್ನು ಹೊರಗೆ ಕರೆದುಕೊಂಡು ಹೋಗುತ್ತಿದ್ದರು. ಇಷ್ಟದ ತಿನಿಸುಗಳನ್ನು ಕೊಡಿಸುತ್ತಿದ್ದರು. ಆಗಾಗ ದೇವಸ್ಥಾನಗಳಿಗೂ ಕರೆದೊಯ್ಯುತ್ತಿದ್ದರು.

ಕೋವಿಡ್‌ನಿಂದಾಗಿ ಹೋದ ತಿಂಗಳು ಅಪ್ಪ ತೀರಿಕೊಂಡರು. ಆ ಆಘಾತದಿಂದ ನಾನು ಇನ್ನೂ ಹೊರಬಂದಿಲ್ಲ. ಮನೆಯಲ್ಲಿ ಕುಂತರೂ, ನಿಂತರೂ ಅವರ ನೆನಪು ಕಾಡುತ್ತದೆ. ಅವರಿಲ್ಲ ಎಂಬುದನ್ನು ನೆನೆದಾಗ ಮನಸ್ಸು ಭಾರವಾಗುತ್ತದೆ. ಕಣ್ಣುಗಳು ತೇವಗೊಳ್ಳುತ್ತವೆ.

ಅಪ್ಪ ನನ್ನ ಬಳಿ ತುಂಬಾ ಆತ್ಮೀಯವಾಗಿದ್ದರು. ಅವರ ಹತ್ತಿರ ಮನಸ್ಸು ಬಿಚ್ಚಿ ಮಾತನಾಡುತ್ತಿದ್ದೆ. ಈಗ ಏಕಾಂಗಿ ಭಾವ ಕಾಡುತ್ತಿದೆ. ಮನೆಯಿಂದ ಹೊರಗೆ ಹೋಗಲು ಬೇಸರವಾಗುತ್ತಿದೆ. ಅವರ ಆಸೆಯಂತೆ ದೊಡ್ಡ ಅಧಿಕಾರಿಯಾಗಿ ಅವರನ್ನು ಚೆನ್ನಾಗಿ ನೋಡಿಕೊಳ್ಳಬೇಕು ಅಂದುಕೊಂಡಿದ್ದೆ. ಆದರೆ ವಿಧಿಯಾಟ ಬೇರೆಯದ್ದೇ ಆಗಿತ್ತು.

ಅಪ್ಪ ಎಲ್ಲೂ ಹೋಗಿಲ್ಲ. ಅವರು ನಮ್ಮ ಜೊತೆಗೇ ಇದ್ದಾರೆ. ಹೀಗಂದುಕೊಂಡೇ ದಿನಗಳನ್ನು ದೂಡಬೇಕಾಗಿದೆ. ಅದೀಗ ಅನಿವಾರ್ಯ ಕೂಡ.

ಮೋನಿಕಾ, ಸುಗ್ಗಟ್ಟ ನಿವಾಸಿ, ಬೆಂಗಳೂರು.

'ಅಕ್ಷತೆ ಹಾಕಲು ಅಪ್ಪನಿಲ್ಲ'



ತಂದೆ ಮಂಜುನಾಥ್ ಜೊತೆಗೆ ಪುತ್ರಿಯರಾದ ಶಿವಾಲಿ ಹಾಗೂ ಸೋನಾಲಿ.

ಬೆಂಗಳೂರು: 'ಮಗಳ ಮದುವೆ ಮಾಡುವುದು ಪ್ರತಿ ಅಪ್ಪನ ಕನಸು. ಅದರಂತೆ ನನ್ನ ಮದುವೆಯ ಸಿದ್ಧತೆಗಳೂ ಅಂತಿಮ ಹಂತ ತಲುಪಿದ್ದವು. ಎಲ್ಲ ಅಂದುಕೊಂಡಂತೆ ಆಗಿದ್ದರೆ, ಅಪ್ಪ (ಮಂಜುನಾಥ್) ನನ್ನ ಮದುವೆಯಲ್ಲಿ ಅಕ್ಷತೆ ಕಾಳು ಹಾಕಬೇಕಿತ್ತು. ಅದು, ನನಸಾಗುವ ಹೊತ್ತಿನಲ್ಲೇ ಕೋವಿಡ್ ಅವರನ್ನು ನಮ್ಮಿಂದ ಬರಸಿಡಿಲಿನಂತೆ ದೂರ ಮಾಡಿತು'.

'ಮೌನದಲ್ಲೇ ಕುಟುಂಬದ ಜವಾಬ್ದಾರಿ ಹೊತ್ತಿದ್ದ ಅಪ್ಪ, ಅವರ ಇಚ್ಛೆಯಂತೆ ಜವಾಬ್ದಾರಿಯುತ ವರನೊಂದಿಗೆ ಮದುವೆ ನಿಶ್ಚಯಿಸಿದ್ದರು. ಆದರೆ, ಮದುವೆ ಸಂಭ್ರಮದ ಕ್ಷಣಗಳನ್ನು ಕಳೆಯಲು ಅವರು ಈಗ ನಮ್ಮೊಂದಿಗೆ ಇಲ್ಲ.'

'ಕೆಲವರಿಗೆ ಅಪ್ಪ ಎಂದ ಕೂಡಲೇ ನೆನಪಾಗುವುದು ಸಿಡುಕತನ ಹಾಗೂ ಗಂಭೀರ ಸ್ವಭಾವ. ಇದನ್ನು ಅವರು ಜೀವಿಸಿದ್ದ ಅವಧಿಯಲ್ಲಿ ನಾನು ಕಂಡವಳೇ ಅಲ್ಲ. ಇಬ್ಬರು ಹೆಣ್ಣುಮಕ್ಕಳನ್ನೂ ತನ್ನ ಕಣ್ಣುಗಳಂತೆ ಜೋಪಾನ ಮಾಡಿದ್ದರು'.

'ನಮಗಾಗಿ ಅವರು ಎಷ್ಟೋ ಬಾರಿ ನಿದ್ರೆಯನ್ನು ಮರೆತಿದ್ದರು. ನಮ್ಮ ಜೀವನಕ್ಕೆ ಬುನಾದಿಯಾಗಲು ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದರು. ಅವರ ಮಾರ್ಗದರ್ಶನ ನಮ್ಮ ಜೀವನದ ಒಂದು ಘಟ್ಟವನ್ನು ಸರಾಗವಾಗಿ ತಲುಪಿಸಿದೆ'.

'ಭೌತಿಕವಾಗಿ ಅವರಿಲ್ಲದ ದಿನಗಳನ್ನು ಕಳೆಯುವುದು ಸವಾಲಾಗಿದೆ. ಆದರೆ, ಹೆಜ್ಜೆ ಮುಂದಕ್ಕೆ ಸಾಗಲೇಬೇಕು. ಅವರು ನಮ್ಮೊಂದಿಗೆ ಇದ್ದಾರೆ, ನಮ್ಮ ಜೊತೆಗೂಡುತ್ತಾರೆ ಎಂಬ ನಿರೀಕ್ಷಾ ಭಾವ, ಪ್ರತಿ ಹೆಜ್ಜೆಯಲ್ಲೂ ನಮಗೆ ಬಲ ನೀಡುತ್ತಿದೆ'.

'ಅವರಿದ್ದಾಗ ನಡೆದ ತಂಗಿ ಶಿವಾಲಿಯ ರಂಗಪ್ರವೇಶದ ದಿನ ಎಂದಿಗೂ ಮಾಸುವುದಿಲ್ಲ. ಅಪ್ಪನನ್ನು ಬಿಟ್ಟು ಒಂದು ದಿನವೂ ಇರಲಾರದ ನಮ್ಮಿಂದ ಅವರು ಬಲುದೂರ ಸಾಗಿದ್ದಾರೆ. ಅವರಿಗೆ ಅಪ್ಪಂದಿರ ದಿನವನ್ನು ಒಂದು ದಿನಕ್ಕೆ ಸೀಮಿತಗೊಳಿಸಲಾರೆ. ಅವರ ಜೀವಂತಿಕೆಯಲ್ಲಿ ನಮ್ಮ ಪಾಲಿಗೆ ಪ್ರತಿದಿನವೂ 'ಅಪ್ಪಂದಿರ ದಿನ'.

–ಸೋನಾಲಿ ಮಂಜುನಾಥ್, ರಾಜಾಜಿನಗರ, ಬೆಂಗಳೂರು

ನಿರೂಪಣೆ: ಮನೋಹರ್ ಎಂ.

ಲಕ್ಷದ್ವೀಪಕ್ಕೆ ನ್ಯಾಯ ಸಿಗುವವರೆಗೂ ಹೋರಾಟ –ಆಯೇಷಾ

ತಿರುವನಂತಪುರಂ (ಪಿಟಿಐ): ಲಕ್ಷದ್ವೀಪಕ್ಕೆ ನ್ಯಾಯ ದೊರೆಯುವವರೆಗೂ ಹೋರಾಟ ಮುಂದುವರಿಯಲಿದೆ ಎಂದು ಚಿತ್ರ ನಿರ್ಮಾಪಕಿ ಆಯೇಷಾ ಸುಲ್ತಾನಾ ಅವರು ಹೇಳಿದ್ದಾರೆ.

ಲಕ್ಷದ್ವೀಪದ ವಿಷಯದಲ್ಲಿ ಇವರ ವಿರುದ್ಧ ದೇಶದ್ರೋಹ ಪ್ರಕರಣ ದಾಖಲಾಗಿತ್ತು. 'ದೇಶಕ್ಕೆ ವಿರುದ್ಧವಾಗಿ ನಾನು ನಡೆದುಕೊಂಡಿಲ್ಲ' ಎಂದು ಶನಿವಾರ ಸುದ್ದಿಗಾರರಿಗೆ ಇಲ್ಲಿ ತಿಳಿಸಿದರು.

ಪ್ರಕರಣದ ಸಂಬಂಧ ಪೊಲೀಸರ ಎದುರು ವಿಚಾರಣೆಗೆ ತೆರಳುವ ಮೊದಲು ಮಾತನಾಡಿದ ಅವರು, 'ನನ್ನ ಜೊತೆಗೆ ವಕೀಲರೂ ಬರುತ್ತಿದ್ದಾರೆ. ವಿಚಾರಣೆಗೆ ಪೂರ್ಣವಾಗಿ ಸಹಕರಿಸಲಾಗುವುದು' ಎಂದು ತಿಳಿಸಿದರು.

'ನನ್ನ ಹೇಳಿಕೆಯನ್ನು ತಪ್ಪಾಗಿ ಅರ್ಥೈಸಲಾಗಿದೆ. ಈ ಬಗ್ಗೆ ನಾನು ವಿವರವಾಗಿ ಇತ್ತೀಚಿನ ಫೇಸ್‌ಬುಕ್ ಪೋಸ್ಟ್‌ನಲ್ಲಿ ತಿಳಿಸಿದ್ದೇನೆ' ಎಂದರು.

ದಾಸರಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಬಡವರಿಗೆ ದಿನಸಿ ಕಿಟ್ ವಿತರಣೆ

ಅಧಿವೇಶನ ಕರೆಯದಿದ್ದರೆ ಹೋರಾಟ: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಂದಿನ 15 ದಿನಗಳಲ್ಲಿ ವಿಧಾನಮಂಡಲ ಅಧಿವೇಶನ ಕರೆಯದಿದ್ದರೆ, ಜೆಡಿಎಸ್‌ನಿಂದ ಹೋರಾಟ ರೂಪಿಸಲಾಗುವುದು' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಎಚ್ಚರಿಸಿದರು.

ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ಶಾಸಕ ಆರ್. ಮಂಜುನಾಥ್ ಅವರು ರಾಜಗೋಪಾಲನಗರ, ಹೆಗ್ಗನಹಳ್ಳಿ, ಸುಂಕದಕಟ್ಟೆ ವಾರ್ಡ್ ಜನರಿಗೆ ದಿನಸಿ ಕಿಟ್ ವಿತರಿಸಲು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಜನರ ತೆರಿಗೆ ಹಣವನ್ನು ಸರ್ಕಾರ ಲೂಟಿ ಮಾಡುತ್ತಿದೆ. ಬಡ ಜನರಿಗೆ ಪ್ಯಾಕೇಜ್ ನೀಡಲು ಹಿಂದೇಟು ಹಾಕುತ್ತಿದೆ. ₹2 ಸಾವಿರ ಪರಿಹಾರ ಪಡೆದು ಜೀವನ ನಡೆಸಲು ಸಾಧ್ಯವಿದೆಯೇ' ಎಂದು ಪ್ರಶ್ನಿಸಿದರು.

'ರಾಜ್ಯದಲ್ಲಿ 1 ಕೋಟಿ ಜನರಿಗೆ ಕನಿಷ್ಠ ₹10 ಸಾವಿರ ಪರಿಹಾರ ನೀಡಿದ್ದರೆ, ₹10 ಸಾವಿರ ಕೋಟಿ ಖರ್ಚಾಗುತ್ತಿತ್ತು. ಸರ್ಕಾರಕ್ಕೆ ಇದು ದೊಡ್ಡ ಮೊತ್ತವಲ್ಲ. ಜನರ ಕೈಗೆ ಹಣ ಸೇರಿದ್ದರೆ ಅವರು ಖರ್ಚು ಮಾಡುತ್ತಿದ್ದರು. ಸರ್ಕಾರಕ್ಕೆ ಮತ್ತೆ ತೆರಿಗೆ ರೂಪದಲ್ಲಿ ಹಣ ವಾಪಸ್ ಬರುತ್ತಿತ್ತು' ಎಂದರು.

'ಜೆಡಿಎಸ್ ಕತೆ ಮುಗಿಯಿತು ಎಂದು ಹಲವರು ಭಾವಿಸಿದ್ದಾರೆ. ಆದರೆ, 2023ಕ್ಕೆ ಜೆಡಿಎಸ್ ಸ್ವತಂತ್ರವಾಗಿ ಅಧಿಕಾರಕ್ಕೆ ಬರುವುದು ನಿಶ್ಚಿತ. ರಾಜ್ಯದಲ್ಲಿ ಪಕ್ಷವನ್ನು ಉಳಿಸಿಕೊಳ್ಳಬೇಕು ಎಂದು ಹಂಬಲಿಸುತ್ತಿರುವ ಕಾರ್ಯಕರ್ತರಿದ್ದಾರೆ. ನಾನು ಬಡವರಲ್ಲಿ ದೇವರನ್ನು ಕಾಣುತ್ತೇನೆ. ಬಡವರಿಗೆ ಸಹಾಯ ಮಾಡುವುದನ್ನೇ ದೇವರ ಸೇವೆ ಎಂದು ನಂಬಿದ್ದೇನೆ. ನಿಮ್ಮ ಸಹಕಾರವೂ ನಮಗೆ ಮುಖ್ಯ' ಎಂದು ಹೇಳಿದರು.

'ಕಷ್ಟದಲ್ಲಿರುವ ಬಡವರಿಗೆ ನೆರವಾಗುವ ಮೂಲಕ ಶಾಸಕ ಆರ್. ಮಂಜುನಾಥ್ ಅವರು ನಿಸ್ವಾರ್ಥ ಸೇವೆಯಲ್ಲಿ ತೊಡಗಿದ್ದಾರೆ. ಮುಂದಿನ ಸರ್ಕಾರದಲ್ಲಿ ಅವರು ಮಂತ್ರಿ ಆಗುವುದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ' ಎಂದರು.

ಶಾಸಕ ಆರ್. ಮಂಜುನಾಥ್, 'ಕುಮಾರಸ್ವಾಮಿ ಅವರು ಮುಖ್ಯಮಂತ್ರಿ ಆಗಿದ್ದಾಗ ದಾಸರಹಳ್ಳಿ ಕ್ಷೇತ್ರಕ್ಕೆ ಸಾಕಷ್ಟು ಅನುದಾನ ನೀಡಿದ್ದರು. ಬಿಜೆಪಿ ಸರ್ಕಾರ ಅದನ್ನು ವಾಪಸ್ ಪಡೆಯಿತು. ಆದರೂ ನಾನು ಮನೆಯಲ್ಲಿ ಕುಳಿತುಕೊಳ್ಳದೇ ಜನರ ಕಷ್ಟಗಳಿಗೆ ಸ್ಪಂದಿಸುತ್ತಿದ್ದೇನೆ' ಎಂದು ಹೇಳಿದರು.

'ಜೆಡಿಎಸ್ ಸ್ವತಂತ್ರವಾಗಿ ಅಧಿಕಾರಕ್ಕೆ ಬಂದರೆ ಕುಮಾರಸ್ವಾಮಿ ಅವರ ಕಾಳಜಿ ಏನು ಎಂಬುದು ಗೊತ್ತಾಗುತ್ತದೆ. ಪಕ್ಷ ಆಡಳಿತಕ್ಕೆ ಬಂದರೆ ಕ್ಷೇತ್ರವನ್ನು ಹೇಗೆಲ್ಲ ಅಭಿವೃದ್ಧಿ ಮಾಡಬಹುದು ಎಂಬುದನ್ನು ತೋರಿಸಿಕೊಡುತ್ತೇನೆ' ಎಂದರು.

ಜೆ.ಕೆ.ಡಬ್ಲ್ಯು ಬಡಾವಣೆಯ ಮೈದಾನದಲ್ಲಿ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಎಚ್.ಡಿ. ಕುಮಾರಸ್ವಾಮಿ ಅವರು ದಿನಸಿ ಕಿಟ್ ವಿತರಿಸಿದರು. ಶಾಸಕ ಆರ್ ಮಂಜುನಾಥ್ ಇದ್ದಾರೆ –ಪ್ರಜಾವಾಣಿ ಚಿತ್ರ

4 ಸಾವಿರ ಕಿಟ್ ವಿತರಣೆ

'ಲಾಕ್‌ಡೌನ್‌ನಿಂದ ಸಂಕಷ್ಟಕ್ಕೆ ಸಿಲುಕಿರುವ 4 ಸಾವಿರ ಕುಟುಂಬಗಳಿಗೆ ಶನಿವಾರ ಕಿಟ್ ವಿತರಿಸಿದ್ದೇವೆ. ಎರಡು ವಾರಗಳಲ್ಲಿ 8 ಸಾವಿರ ಕುಟುಂಬಗಳಿಗೆ ಕಿಟ್ ನೀಡಲಾಗಿದೆ. ಇನ್ನೂ 10 ಸಾವಿರ ಕುಟುಂಬಗಳಿಗೆ ನೆರವಾಗುವ ಉದ್ದೇಶ ಇದೆ' ಎಂದು ಆರ್. ಮಂಜುನಾಥ್ ತಿಳಿಸಿದರು.

'ಗ್ರಾಮೀಣ ಪ್ರದೇಶದ 31 ಲಕ್ಷ ಮಕ್ಕಳ ಬಳಿ ಮೊಬೈಲ್ ಇಲ್ಲ'

ಆನ್‌ಲೈನ್ ಪಾಠಕ್ಕೆ ತೊಡಕಾಗುವ ಸಾಧ್ಯತೆ

ಪ್ರಜಾವಾಣಿ ವಾರ್ತೆ

ನಳಿನ್ ಅತುಲ್

ಕಲಬುರ್ಗಿ: ರಾಜ್ಯದ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಪ್ರಾಥಮಿಕ–ಪ್ರೌಢ ಶಾಲೆಗಳಲ್ಲಿ ಸುಮಾರು 1.5 ಕೋಟಿ ವಿದ್ಯಾರ್ಥಿಗಳು ಓದುತ್ತಿದ್ದು, ಆ ಪೈಕಿ 31.27 ಲಕ್ಷ ವಿದ್ಯಾರ್ಥಿಗಳಲ್ಲಿ ಮೊಬೈಲ್ ಇಲ್ಲ. ಇದು ಆನ್‌ಲೈನ್ ಪಾಠಕ್ಕೆ ತೊಡಕಾಗುವ ಸಾಧ್ಯತೆ ಇದೆ.

ರಾಜ್ಯ ಸರ್ಕಾರ ಆರಂಭಿಸಿದ 'ವಿದ್ಯಾರ್ಥಿ ಸಾಧನೆಯ ಟ್ರ್ಯಾಕಿಂಗ್ ವ್ಯವಸ್ಥೆ (ಎಸ್‌ಎಟಿಎಸ್)'ಯಲ್ಲಿ ಈ ಅಂಶ ಬೆಳಕಿಗೆ ಬಂದಿದೆ. ಇದರಲ್ಲಿ 93 ಲಕ್ಷ ಮಕ್ಕಳು ಮಾತ್ರ ನೋಂದಣಿ ಮಾಡಿಕೊಂಡಿದ್ದು, ಇನ್ನೂ 57 ಲಕ್ಷ ಮಕ್ಕಳು ಹೊರಗುಳಿದಿದ್ದಾರೆ.

ಈ ಬಗ್ಗೆ 'ಪ್ರಜಾವಾಣಿ'ಗೆ ಪ್ರತಿಕ್ರಿಯೆ ನೀಡಿದ ಸಾರ್ವಜನಿಕ ಶಿಕ್ಷಣ ಇಲಾಖೆಯ ಕಲಬುರ್ಗಿ ವಲಯದ ಹೆಚ್ಚುವರಿ ಆಯುಕ್ತ ನಳಿನ್ ಅತುಲ್, 'ಪ್ರಸಕ್ತ ವರ್ಷ ಮಕ್ಕಳಿಗೆ ಪಾಠ ಮಾಡಲು ಮೊಬೈಲ್‌ಗಿಂತ ಹೆಚ್ಚಾಗಿ ಟಿವಿಯನ್ನೇ ಸಾಧನವಾಗಿ ಬಳಸಿಕೊಳ್ಳಲು ನಿರ್ಧರಿಸಲಾಗಿದೆ. ಇದರಿಂದ ಶೇ 90ರಷ್ಟು ಮಕ್ಕಳನ್ನು ತಲುಪಲು ಸಾಧ್ಯವಿದೆ' ಎಂದರು.

'ಕೋವಿಡ್ ಮೂರನೇ ಅಲೆಯು ಹೆಚ್ಚಾಗಿ ಮಕ್ಕಳ ಮೇಲೆಯೇ ಪರಿಣಾಮ ಬೀರಲಿದೆ ಎಂದು ತಜ್ಞರು ಸೂಚನೆ ನೀಡಿದ್ದಾರೆ. ಹೀಗಾಗಿ, ಮಕ್ಕಳಿಗೆ ಈ ವರ್ಷವೂ ಆನ್‌ಲೈನ್ ಅಥವಾ ದೂರದರ್ಶನದ ಮೂಲಕ ಪಾಠ ಮಾಡುವುದು ಅನಿವಾರ್ಯವಾಗಿದೆ. ಮೊಬೈಲ್ ಹೊರತಾಗಿಯೂ ಚಂದನ ವಾಹಿನಿ, ಯೂ ಟ್ಯೂಬ್, ರೇಡಿಯೊಗಳಲ್ಲೂ ಪ್ರತಿ ದಿನ ಪಾಠ ಕೇಳಬಹುದು. ಕಳೆದ ವರ್ಷ ಇದೇ ರೀತಿ ಶೇ 90ರಷ್ಟು ಮಕ್ಕಳು ಪಾಠ ಆಲಿಸಿದ್ದಾರೆ. ಇದರೊಂದಿಗೆ ಮೂರನೇ ಅಲೆ ನಿಂತ ಮೇಲೆ 'ವಠಾರ ಶಾಲೆ'ಗಳನ್ನೂ ಆರಂಭಿಸುವ ಬಗ್ಗೆ ಚಿಂತನೆ ನಡೆದಿದೆ' ಎಂದರು.

ಕಾರ್ಯಾಚರಣೆಗೆ ಬಿಎಂಟಿಸಿ ಸಿದ್ಧತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಾಕ್‌ಡೌನ್ ಇನ್ನಷ್ಟು ಸಡಿಲಗೊಳಿಸಿ ಬಸ್ ಸಂಚಾರಕ್ಕೆ ಸರ್ಕಾರ ಅವಕಾಶ ನೀಡುವ ಸಾಧ್ಯತೆ ಇರುವ ಕಾರಣ ಕಾರ್ಯಾಚರಣೆ ಆರಂಭಿಸಲು ಬಿಎಂಟಿಸಿ ಸಿದ್ಧತೆ ನಡೆಸಿದೆ.

ಡಿಪೊಗಳಲ್ಲೇ ನಿಂತು ದೂಳು ಹಿಡಿದಿದ್ದ ಬಸ್‌ಗಳನ್ನು ತೊಳೆದು ಸುಸ್ಥಿತಿಯಲ್ಲಿ ಇಡುವ ಕೆಲಸವನ್ನು ಸಿಬ್ಬಂದಿ ಆರಂಭಿಸಿದ್ದಾರೆ. ಸರ್ಕಾರ ಅನುಮತಿ ನೀಡಿದರೆ ಸೋಮವಾರದಿಂದ ಮೊದಲ ಹಂತದಲ್ಲಿ 2,200 ಬಸ್‌ಗಳ ಕಾರ್ಯಾಚರಣೆ ಮಾಡಲು ಸಂಸ್ಥೆ ನಿರ್ಧರಿಸಿದೆ.

ಈ ಬಗ್ಗೆ ಮಾಹಿತಿ ನೀಡಿದ ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕಿ ಸಿ.ಶಿಖಾ, 'ಸರ್ಕಾರದ ಅನುಮತಿಗಾಗಿ ಕಾಯುತ್ತಿದ್ದೇವೆ. ಅನುಮತಿ ಸಿಕ್ಕರೆ ಶೇ 50ರಷ್ಟು ಸೀಟುಗಳ ಭರ್ತಿ ಆಧಾರದಲ್ಲಿ ಕಾರ್ಯಾಚರಣೆ ಮಾಡಲಾಗುವುದು' ಎಂದು ತಿಳಿಸಿದರು.

'ಮೊದಲ ಹಂತದಲ್ಲಿ ದಿನಕ್ಕೆ 2,200 ಬಸ್‌ಗಳ ಸೇವೆಯನ್ನು ಆರಂಭಿಸಲಿದ್ದೇವೆ. ನಂತರ ಪ್ರಯಾಣಿಕರ ದಟ್ಟಣೆ ನೋಡಿಕೊಂಡು ಕಾರ್ಯಾಚರಣೆ ಹೆಚ್ಚಿಸಲಾಗುವುದು. ಗೂಗಲ್ ಪೇ, ಫೋನ್ ಪೇ ಮೂಲಕ ಹಣ ಪಾವತಿಸಿ ಟಿಕೆಟ್ ಪಡೆಯುವ ವ್ಯವಸ್ಥೆಗೂ ಒತ್ತು ನೀಡಲಾಗುವುದು. ಪ್ರತಿ ಟ್ರಿಪ್ ಬಳಿಕ ಬಸ್‌ಗಳಿಗೆ ಸೋಂಕು ನಿವಾರಕ ದ್ರಾವಣ ಸಿಂಪಡಿಸಿ ಸ್ವಚ್ಛಗೊಳಿಸಲು ಕ್ರಮ ಕೈಗೊಳ್ಳಲಾಗಿದೆ' ಎಂದು ವಿವರಿಸಿದರು.

'ಕಾರ್ಯಾಚರನೆಗೆ ಕೋವಿಡ್ ಲಸಿಕೆ ಪಡೆದ ಸಿಬ್ಬಂದಿಯನ್ನು ಆದ್ಯತೆ ಮೇರೆಗೆ ಬಳಸಿಕೊಳ್ಳಲಾಗುವುದು. ಲಸಿಕೆ ಪಡೆದಿದ್ದವರು ಕೋವಿಡ್ ಪರೀಕ್ಷೆ ಮಾಡಿಸುವ ಅವಶ್ಯಕತೆ ಇಲ್ಲ. ಉಳಿದವರು ಕೋವಿಡ್ ಪರೀಕ್ಷೆ ಮಾಡಿಸಿಕೊಂಡು, ಸೋಂಕು ಇಲ್ಲದಿರುವುದನ್ನು ದೃಢಪಡಿಸಿದ ವರದಿ ಪಡೆದು ಕರ್ತವ್ಯಕ್ಕೆ ಹಾಜರಾಗಬೇಕಾಗುತ್ತದೆ' ಎಂದು ತಿಳಿಸಿದರು.

ಶಾಂತಿನಗರ ಡಿಪೊದಲ್ಲಿ ಸಿಬ್ಬಂದಿಯೊಬ್ಬರು ಶನಿವಾರ ಬಿಎಂಟಿಸಿ ಬಸ್ ಸ್ವಚ್ಛಗೊಳಿಸುವ ಕಾರ್ಯದಲ್ಲಿ ನಿರತರಾಗಿದ್ದರು –ಪ್ರಜಾವಾಣಿ ಚಿತ್ರ

ಕರ್ನಾಟಕ– ಮಹಾರಾಷ್ಟ್ರ ರಾಜ್ಯದ ಪ್ರವಾಹ ನಿಯಂತ್ರಣ ಮತ್ತು ನಿರ್ವಹಣಾ ಸಮಿತಿ ಸಭೆ

ನೀರು ಬಿಡುಗಡೆ: ಮಾಹಿತಿ ವಿನಿಮಯಕ್ಕೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಹಾರಾಷ್ಟ್ರ ಮತ್ತು ಕರ್ನಾಟಕ ರಾಜ್ಯಗಳ ನಡುವೆ ಮಳೆ ಪ್ರಮಾಣ, ಜಲಾಶಯಗಳಿಂದ ನೀರು ಬಿಡುಗಡೆ ಕುರಿತಂತೆ ಕ್ಷಣಕ್ಷಣದ (ರಿಯಲ್ ಟೈಮ್ ಡಾಟಾ) ಮಾಹಿತಿ ಹಂಚಿಕೊಳ್ಳಲು ತೀರ್ಮಾನಿಸಲಾಗಿದೆ' ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಿಳಿಸಿದರು.

ಮುಖ್ಯಮಂತ್ರಿ ನೇತೃತ್ವದಲ್ಲಿ ಕರ್ನಾಟಕ– ಮಹಾರಾಷ್ಟ್ರ ರಾಜ್ಯದ ಪ್ರವಾಹ ನಿಯಂತ್ರಣ ಮತ್ತು ನಿರ್ವಹಣಾ ಸಮಿತಿಯ ಸಭೆ ಶನಿವಾರ ನಡೆಯಿತು. ಮಹಾರಾಷ್ಟ್ರದ ಜಲ ಸಂಪನ್ಮೂಲ ಸಚಿವ ಜಯಂತ್ ಪಾಟೀಲ್ ಮತ್ತು ಹಿರಿಯ ಅಧಿಕಾರಿಗಳು ಸಭೆಯಲ್ಲಿದ್ದರು.

ಸಭೆಯ ಬಳಿಕ ಮಾತನಾಡಿದ ಯಡಿಯೂರಪ್ಪ, 'ಕೃಷ್ಣಾ ಮತ್ತು ಭೀಮಾ ನದಿಯ ಜಲಾನಯನ ಪ್ರದೇಶದಲ್ಲಿ ಪ್ರವಾಹವನ್ನು ಪರಿಣಾಮಕಾರಿಯಾಗಿ ನಿರ್ವಹಿಸುವುದೂ ಸೇರಿದಂತೆ ವಿವಿಧ ವಿಷಯಗಳ ಕುರಿತು ಚರ್ಚಿಸಲಾಯಿತು. ಎರಡೂ ರಾಜ್ಯಗಳ ನಡುವೆ ಸಚಿವರು, ಕಾರ್ಯದರ್ಶಿಗಳ ಹಂತ ಹಾಗೂ ಕೆಳಹಂತದ ಅಧಿಕಾರಿಗಳ ನಡುವೆ ಉತ್ತಮ ಸಂವಹನ, ಸಮನ್ವಯ ಸಾಧಿಸಲು ತೀರ್ಮಾನಿಸಲಾಯಿತು' ಎಂದರು.

'ಉಭಯ ರಾಜ್ಯಗಳ ಜಂಟಿ ಯೋಜನೆಯಾದ ದೂಧ್ ಗಂಗಾ ಯೋಜನೆ, ಅನೇಕ ವರ್ಷಗಳಿಂದ ನನೆಗುದಿಯಲ್ಲಿದೆ. ಈ ಯೋಜನೆಯನ್ನು ಎರಡು ವರ್ಷದೊಳಗೆ ಪೂರ್ಣಗೊಳಿಸಲು ಮಹಾರಾಷ್ಟ್ರ ಸರ್ಕಾರ ಒಪ್ಪಿದೆ' ಎಂದರು.

'ಬೇಸಿಗೆಯಲ್ಲಿ ಮಹಾರಾಷ್ಟ್ರದಿಂದ ಕರ್ನಾಟಕಕ್ಕೆ 4 ಟಿಎಂಸಿ ಅಡಿ ನೀರು ಹಾಗೂ ಮಳೆಗಾಲದಲ್ಲಿ ಮಹಾರಾಷ್ಟ್ರಕ್ಕೆ ರಾಜ್ಯದಿಂದ ಅಷ್ಟೇ ಪ್ರಮಾಣದ ನೀರು ಒದಗಿಸುವ ಕುರಿತು ಎರಡೂ ರಾಜ್ಯಗಳ ತಾಂತ್ರಿಕ ಸಮಿತಿ ರಚಿಸಲು ಕೂಡಾ ಸಭೆಯಲ್ಲಿ ತೀರ್ಮಾನಿಸಲಾಯಿತು' ಎಂದು ಯಡಿಯೂರಪ್ಪ ತಿಳಿಸಿದರು.

ಸಭೆಯಲ್ಲಿ ಭಾಗವಹಿಸಲು ಬಂದ ಮಹಾರಾಷ್ಟ್ರದ ಜಲಸಂಪನ್ಮೂಲ ಸಚಿವ ಜಯಂತ್ ಪಾಟೀಲ್ ಅವರನ್ನು ಮುಖ್ಯಮಂತ್ರಿ ಯಡಿಯೂರಪ್ಪ ಸ್ವಾಗತಿಸಿದರು. ಬಸವರಾಜ ಬೊಮ್ಮಾಯಿ ಇದ್ದರು

'ಅಂತಿಮ ಅಧಿಸೂಚನೆಗೆ ಜಂಟಿ ಪ್ರಯತ್ನ'

'ಕೃಷ್ಣಾ ನದಿ ನೀರು ಹಂಚಿಕೆ ಕುರಿತಂತೆ ಬ್ರಿಜೇಶ್ ಮಿಶ್ರಾ ನ್ಯಾಯಾಧೀಕರಣ ನೀಡಿರುವ ಐ ತೀರ್ಪಿನ ಕುರಿತು ಅಂತಿಮ ಅಧಿಸೂಚನೆ ಹೊರಡಿಸುವಂತೆ ಸುಪ್ರೀಂಕೋರ್ಟಿನಲ್ಲಿ ಜಂಟಿ ಹೋರಾಟಕ್ಕೆ ಕರ್ನಾಟಕ ಮತ್ತು ಮಹಾರಾಷ್ಟ್ರ ನಿರ್ಧರಿಸಿವೆ' ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಬಸವರಾಜ ಬೊಮ್ಮಾಯಿ ತಿಳಿಸಿದರು.

'ಅಂತಿಮ ಅಧಿಸೂಚನೆ ಪ್ರಕಟಗೊಳ್ಳಬೇಕು ಎಂಬುದು ಕರ್ನಾಟಕ – ಮಹಾರಾಷ್ಟ್ರ ರಾಜ್ಯಗಳ ನಿಲುವಾಗಿದೆ. ಹೀಗಾಗಿ, ಉಭಯ ರಾಜ್ಯಗಳು ಒಟ್ಟಿಗೆ ಕುಳಿತು ಚರ್ಚಿಸಿ, ಆದಷ್ಟು ಬೇಗ ಅಧಿಸೂಚನೆ ಹೊರಡಿಸುವ ಸಲುವಾಗಿ ಸುಪ್ರೀಂಕೋರ್ಟಿನಲ್ಲಿ ಜಂಟಿ ಪ್ರಯತ್ನ ಮಾಡಲು ನಿರ್ಧರಿಸಲಾಗಿದೆ' ಎಂದರು.

ಸುವರ್ಣವನಕ್ಕೆ ಜೀವ ವೈವಿಧ್ಯ ಮಂಡಳಿ ಅಧ್ಯಕ್ಷ ಅನಂತ ಹೆಗಡೆ ಆಶೀಸರ ಭೇಟಿ

'ಜೀವವೈವಿಧ್ಯ ಸಮಿತಿ ಬಲಪಡಿಸಲು ಆದ್ಯತೆ'

ಪ್ರಜಾವಾಣಿ ವಾರ್ತೆ

ನರಸಿಂಹರಾಜಪುರ: 'ರಾಜ್ಯದಲ್ಲಿ ನಗರ ಮತ್ತು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಜೀವವೈವಿಧ್ಯ ಸಮಿತಿ ರಚಿಸಿ, ಜೀವವೈವಿಧ್ಯ ದಾಖಲಾತಿಯನ್ನು ಮಾಡಿ ಪೂರ್ಣಗೊಳಿಸಲಾಗಿದೆ. ಪ್ರಸ್ತುತ ತಾಲ್ಲೂಕಿನ ವ್ಯಾಪ್ತಿಯ ಜೀವವೈವಿಧ್ಯ ಸಮಿತಿಗಳನ್ನು ಬಲಪಡಿಸುವ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳಲಾಗಿದೆ' ಎಂದು ಕರ್ನಾಟಕ ಜೀವವೈವಿಧ್ಯ ಮಂಡಳಿಯ ಅಧ್ಯಕ್ಷ ಅನಂತ ಹೆಗಡೆ ಆಶೀಸರ ತಿಳಿಸಿದರು.

ತಾಲ್ಲೂಕಿನ ಸೌತಿಕೆರೆ ಗ್ರಾಮದ ಸುವರ್ಣವನಕ್ಕೆ ಶನಿವಾರ ಭೇಟಿ ನೀಡಿ ಪರಿಶೀಲನೆ ಮಾಡಿದ ನಂತರ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

'ಜೀವವೈವಿಧ್ಯ ವ್ಯಾಪ್ತಿಯನಲ್ಲಿ ನದಿ, ಗುಡ್ಡ, ಬೆಟ್ಟ, ಕೆರೆಗಳು, ನದಿಮೂಲಗಳು ಬರುತ್ತವೆ. ಜೀವವೈವಿಧ್ಯ ಕಾಯ್ದೆಯ ಅನ್ವಯ ಇವುಗಳನ್ನು ಸಂರಕ್ಷಿಸಬೇಕಾಗಿದೆ. ನರಸಿಂಹರಾಜಪುರ ಭಾಗದಲ್ಲಿ ಉತ್ತಮವಾದ ಅರಣ್ಯ, ಭದ್ರಾ ಹಿನ್ನಿರುವ ಪ್ರದೇಶವಿದೆ. ಅರಣ್ಯವನ್ನು ಸಾಂಪ್ರದಾಯಿಕವಾಗಿ ರೈತರು ಸಂರಕ್ಷಿಸಿಕೊಂಡು ಬಂದಿದ್ದರು. ಕಳೆದ 28 ವರ್ಷಗಳಲ್ಲಿ ಅರಣ್ಯ ಒತ್ತುವರಿ ಮಾಡುವ ಪ್ರವೃತ್ತಿ ಹೆಚ್ಚಾಗಿ ಅರಣ್ಯಕ್ಕೆ ಬಹಳಷ್ಟು ಆತಂಕ ಬಂದಿದೆ. ವಿಶೇಷವಾಗಿ ನದಿಮೂಲಗಳು, ಕೆರೆಗಳು ಮತ್ತು ನದಿಕಣಿವೆಗಳಿಗೆ ಧಕ್ಕೆ ಬಂದಿದೆ' ಎಂದು ಅಭಿಪ್ರಾಯಪಟ್ಟರು.

'ಪಶ್ಚಿಮಘಟ್ಟದ ಹಸಿರು ಅರಣ್ಯಗಳನ್ನು ರಕ್ಷಣೆ ಮಾಡಲು ಏನೆಲ್ಲಾ ಸಾಧ್ಯತೆಗಳು ಇದೆ. ಸರ್ಕಾರದ ಇಲಾಖೆಗಳು ಹಾಗೂ ಜನರ ಸಹಭಾಗಿತ್ವ ತೆಗೆದುಕೊಂಡು ನೈಸರ್ಗಿಕ ಸಂಪತ್ತು ಸಂರಕ್ಷಿಸಲು ಕಾರ್ಯಕ್ರಮ ರೂಪಿಸಬೇಕಾಗಿದೆ' ಎಂದರು.

ನರಸಿಂಹರಾಜಪುರ ತಾಲ್ಲೂಕು ಸೌತಿಕೆರೆ ಗ್ರಾಮದಲ್ಲಿರುವ ಸುವರ್ಣವನಕ್ಕೆ ಕರ್ನಾಟಕ ಜೀವವೈವಿಧ್ಯ ಮಂಡಳಿಯ ಅಧ್ಯಕ್ಷ ಅನಂತ ಹೆಗಡೆ ಆಶೀಸರ ಶನಿವಾರ ಭೇಟಿ ನೀಡಿ ಪರಿಶೀಲಿಸಿದರು

ಜುಲೈ 1ರಿಂದ ಜಾಗೃತಿ ಅಭಿಯಾನ

'ಜೀವ ವೈವಿಧ್ಯ ಸಮಿತಿಗಳನ್ನು ಬಲಪಡಿಸಲು ಪಂಚಾಯತ್ ರಾಜ್ ವ್ಯವಸ್ಥೆಯ ಪೂರ್ಣ ಸಹಭಾಗಿತ್ವ ತೆಗೆದುಕೊಂಡು ಮುಂದುವರಿಸಲಾಗಿದೆ. ಅಂತರರಾಷ್ಟ್ರೀಯ ಜೀವವೈವಿಧ್ಯ ದಿನಾಚರಣೆ ಪ್ರತಿವರ್ಷ ಮೇ 22ರಂದು ಆಚರಿಸಲಾಗುತ್ತಿತ್ತು. ಈ ವರ್ಷ ಆಚರಿಸಲು ಕೋವಿಡ್‌ನಿಂದ ಸಾಧ್ಯವಾಗಿಲ್ಲ. ವಿವಿಧ ಸಂಘಸಂಸ್ಥೆಗಳ ಸಹಕಾರದಲ್ಲಿ ಜುಲೈ 1ರಿಂದ ಆಗಸ್ಟ್ 15ರ ವರೆಗೆ ಜೀವವೈವಿಧ್ಯ ಜಾಗೃತಿ ಅಭಿಯಾನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು' ಎಂದರು.

ಪೌರ ಕಾರ್ಮಿಕರಿಗೆ ಕಿಟ್ ವಿತರಣೆ

ಪ್ರಜಾವಾಣಿ ವಾರ್ತೆ

ಬೊಮ್ಮನಹಳ್ಳಿ: ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ಜನ್ಮ ದಿನದ ಅಂಗವಾಗಿ ಬೊಮ್ಮನಹಳ್ಳಿ ಬ್ಲಾಕ್ ಕಾಂಗ್ರೆಸ್ ವತಿಯಿಂದ ಎಚ್‌ಎಸ್‌ಆರ್ ಬಡಾವಣೆಯಲ್ಲಿ ಏರ್ಪಡಿಸಿದ್ದ ಸರಳ ಕಾರ್ಯಕ್ರಮದಲ್ಲಿ ಪೌರ ಕಾರ್ಮಿಕರಿಗೆ ದಿನಸಿ ಕಿಟ್ ವಿತರಿಸಲಾಯಿತು.

ಬೊಮ್ಮನಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಟಿ.ವಾಸುದೇವರೆಡ್ಡಿ, 'ದೇಶದಲ್ಲಿ ಕೊರೊನಾ ಸೋಂಕು ವ್ಯಾಪಕವಾಗಿ ಹರಡುವ ಮುನ್ನವೇ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಕೇಂದ್ರ ಸರ್ಕಾರವನ್ನು ಎಚ್ಚರಿಸಿದ್ದರು. ಇದನ್ನು ಗಂಭೀರವಾಗಿ ಪರಿಗಣಿಸದ ಪರಿಣಾಮ, ಇಡೀ ದೇಶವೇ ಸ್ಮಶಾನವಾಗಿ ಬದಲಾಗುವ ದುಸ್ಥಿತಿ ಬಂದಿದ್ದು ದುರದೃಷ್ಟಕರ' ಎಂದರು.

'ದೇಶವನ್ನು ಮುನ್ನೆಡೆಸುವ ಶಕ್ತಿ ಮತ್ತು ಯುಕ್ತಿ ರಾಹುಲ್ ಗಾಂಧಿಗೆ ಇದೆ. ಮಾನವೀಯ ಮೌಲ್ಯವನ್ನು ಮೈಗೂಡಿಸಿಕೊಂಡಿರುವ ಸಂವೇದನಾಶೀಲ ವ್ಯಕ್ತಿ ಅವರು. 56 ಇಂಚಿನ ಎದೆಯ ವ್ಯಕ್ತಿಯಿಂದ ದೇಶ 50 ವರ್ಷ ಹಿಂದಕ್ಕೆ ಹೋಗಿದೆ. ಪ್ರಪಾತಕ್ಕೆ ಬಿದ್ದಿರುವ ಅರ್ಥ ವ್ಯವಸ್ಥೆಯನ್ನು ಎತ್ತಿ ನಿಲ್ಲಿಸುವ ದೂರದೃಷ್ಟಿ ರಾಹುಲ್ ಗಾಂಧಿ ಅವರಿಗೆ ಇದೆ' ಎಂದರು.

ಪಕ್ಷದ ಮುಖಂಡರಾದ ಕವಿತಾ ರೆಡ್ಡಿ, ರಾಮಚಂದ್ರ ಹಾಗೂ ಯುವ ಕಾಂಗ್ರೆಸ್ ಅಧ್ಯಕ್ಷ ಅನಿಲ್ ರೆಡ್ಡಿ ಇದ್ದರು.

ಪೌರ ಕಾರ್ಮಿಕರಿಗೆ ದಿನಸಿ ಕಿಟ್ ವಿತರಿಸಿದ ಟಿ.ವಾಸುದೇವರೆಡ್ಡಿ. ಯುವ ಕಾಂಗ್ರೆಸ್ ಅಧ್ಯಕ್ಷ ಅನಿಲ್ ರೆಡ್ಡಿ ಇದ್ದಾರೆ.

ಎಸ್. ರಂಗಪ್ಪ ಬಿಡಿಎ ಕಾರ್ಯದರ್ಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ಶ್ರೇಣಿಯ ಆರು ಮಂದಿ ಕೆಎಎಸ್ ಅಧಿಕಾರಿಗಳನ್ನು ವರ್ಗಾವಣೆಗೊಳಿಸಿ ಶನಿವಾರ ಆದೇಶ ಹೊರಡಿಸಿದ್ದು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ ಎಸ್. ರಂಗಪ್ಪ ಅವರನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಕಾರ್ಯದರ್ಶಿ ಹುದ್ದೆಗೆ ನೇಮಿಸಲಾಗಿದೆ.

ಇತರ ವರ್ಗಾವಣೆ: ಡಾ.ವಾಸಂತಿ ಅಮರ್ ಬಿ.ವಿ.– ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ; ಶ್ರೀರೂಪ– ನಿಯಂತ್ರಕರು, ಕಾನೂನು ಮಾಪನ ಶಾಸ್ತ್ರ ಇಲಾಖೆ; ಪಾತರಾಜು ವಿ.– ಮುಖ್ಯ ಆಡಳಿತಾಧಿಕಾರಿ, ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮ; ಶೀಲವಂತ ಎಂ. ಶಿವಕುಮಾರ್– ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಮತ್ತು ಡಾ.ಡಿ.ಬಿ. ನಟೇಶ್– ಜಂಟಿ ನಿರ್ದೇಶಕರು (ಆಡಳಿತ), ಆಯುಕ್ತರ ಕಚೇರಿ, ಪಶುಪಾಲನೆ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ.

ಪ್ರಜಾವಾಣಿ LIVE

Prajavani.net Prajavani Prajavani

ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರ ಪ್ರಸಾರ

ಯೋಗದ ಜೊತೆಗೆ ಆರೋಗ್ಯ

ಡಾ.ಗುರುಬಸವರಾಜ್. ಯಲಗಚ್ಚಿನ
ಎಂ.ಡಿ. ಪಿ.ಎಚ್ ಡಿ.
ಆಯುರ್ವೇದ & ಯೋಗ ತಜ್ಞರು
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಮಹಾವಿದ್ಯಾಲಯ & ಆಸ್ಪತ್ರೆ, ಹಾಸನ

ಈ ಕೆಳಕಂಡ ವಿಷಯಗಳ ಬಗ್ಗೆ FB ಲೈವ್‌ನಲ್ಲಿ ಬಂದು ಮಾಹಿತಿ ನೀಡಲಿದ್ದಾರೆ,
ನಿಮ್ಮ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆದುಕೊಳ್ಳಿ.
ಆಯುರ್ವೇದ ಚಿಕಿತ್ಸಾ ಸಲಹೆ, ಮನೆಮದ್ದು, ಉಸಿರಾಟಕ್ಕೆ ಸಂಬಂಧಿಸಿದ ವ್ಯಾಯಾಮಗಳು, ವಿದ್ಯಾರ್ಥಿಗಳಿಗೆ ಓದುವ ಕ್ರಮ ಹಾಗು ಏಕಾಗ್ರತೆ ಹೆಚ್ಚಿಸುವ ಮಾಹಿತಿ, ಮನೆಯಿಂದಲೇ ಉದ್ಯೋಗ ನಿರತರಾಗಿರುವವರಿಗೆ ಆರೋಗ್ಯ & ಜೀವನಶೈಲಿ ಮಾರ್ಗದರ್ಶನ (ಸುಲಭ ಯೋಗಾಸನಗಳ ಮಾಹಿತಿ)

ಸೋಮವಾರ, 21ನೇ ಜೂನ್ 2021 ಬೆಳಿಗ್ಗೆ 7.30 ರಿಂದ 8.30

‘ನಮ್ಮಿಂದಲೇ ಅಧಿಕಾರ ಅನುಭವಿಸುತ್ತಿರೋದು’

ಪ್ರಜಾವಾಣಿ ವಾರ್ತೆ



ಎಚ್.ವಿಶ್ವನಾಥ್

ಹುಣಸೂರು (ಮೈಸೂರು): ‘ನಿಗಮ–ಮಂಡಳಿ ಅಧ್ಯಕ್ಷರು ಇದೀಗ ಅಧಿಕಾರ ಅನುಭವಿಸುತ್ತಿರುವುದು ಯಾರಿಂದ ಎಂಬುದನ್ನು ಅರ್ಥ ಮಾಡಿಕೊಂಡು ಮಾತನಾಡಬೇಕು’ ಎಂದು ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್, ತಮ್ಮ ವಿರುದ್ಧ ಟೀಕಾ ಪ್ರಹಾರ ನಡೆಸಿದ ನಿಗಮ–ಮಂಡಳಿ ಅಧ್ಯಕ್ಷರಿಗೆ ಶನಿವಾರ ಇಲ್ಲಿ ತಿರುಗೇಟು ನೀಡಿದರು.

‘ನಮ್ಮ ತ್ಯಾಗದಿಂದಲೇ ಇವರಿಗೆ ಅಧಿಕಾರ ಸಿಕ್ಕಿರುವುದು; ರಾಜ್ಯದಲ್ಲಿ ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ ರಚನೆಯಾಗಿರುವುದು. ಬಾಯಿಗೆ ಬಂದಂತೆ ಮಾತನಾಡಬಾರದು. ರಾಜ್ಯ ಉಸ್ತುವಾರಿ ಜೊತೆ ಮಾತನಾಡಿದ್ದನ್ನೇ ನಾನು ಮಾಧ್ಯಮದವರ ಬಳಿ ಹೇಳಿದ್ದೇನಷ್ಟೆ’ ಎಂದು ತಮ್ಮನ್ನು ಭೇಟಿಯಾದ ಮಾಧ್ಯಮದವರಿಗೆ ಪ್ರತಿಕ್ರಿಯಿಸಿದರು.

‘ಅಳಿಯನ ವಿಷಯದಲ್ಲಿ ಯಾವುದೇ ಲಾಬಿ ಮಾಡಿಲ್ಲ. ಚೀಫ್ ಎಂಜಿನಿಯರ್ ಆಗಿದ್ದ ಅಳಿಯನನ್ನು ವರ್ಗಾವಣೆ ಮಾಡಿದ ಸರ್ಕಾರ, 10 ತಿಂಗಳಿಂದ ಪರ್ಯಾಯ ಸ್ಥಳ ತೋರಿಸದೆ ಮನೆಯಲ್ಲೇ ಉಳಿಯುವಂತೆ ಮಾಡಿದೆ. ಈ ಬಗ್ಗೆ ಪ್ರಶ್ನಿಸುವುದರಲ್ಲಿ ತಪ್ಪೇನು? ಸರ್ಕಾರಿ ಅಧಿಕಾರಿಯನ್ನು ವರ್ಗ ಮಾಡುವ ಅಧಿಕಾರ ಸರ್ಕಾರಕ್ಕೆ ಇದ್ದ ಮೇಲೆ, ಪರ್ಯಾಯ ಸ್ಥಳ ನೀಡಬೇಕಾದ ಜವಾಬ್ದಾರಿಯೂ ಇದೆಯಲ್ಲವೇ? ಸರ್ಕಾರ ಈ ವಿಷಯದಲ್ಲಿ ಎಡವಿದೆ’ ಎಂದು ವಿಶ್ವನಾಥ್ ಕಿಡಿಕಾರಿದರು.

‘ಡಿಸೆಂಬರ್‌ವರೆಗೆ ಜಿ.ಪಂ., ತಾ.ಪಂ, ಚುನಾವಣೆ ಇಲ್ಲ’

ದಾವಣಗೆರೆ: ‘ಕೊರೊನಾ ಎರಡನೇ ಅಲೆ ಮುಕ್ತಾಯದ ಹಂತದಲ್ಲಿದ್ದು, ಮೂರನೇ ಅಲೆಯ ಭೀತಿ ಕೂಡ ಇದೆ. ಹಾಗಾಗಿ ಡಿಸೆಂಬರ್‌ವರೆಗೆ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳಿಗೆ ಚುನಾವಣೆ ನಡೆಸುವುದಿಲ್ಲ’ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಕೆ.ಎಸ್.ಈಶ್ವರಪ್ಪ ಸ್ಪಷ್ಟಪಡಿಸಿದರು.

‘ಸೋಮವಾರ ಸಂಜೆ ರಾಜ್ಯ ಸಚಿವ ಸಂಪುಟದ ಸಭೆ ನಡೆಯಲಿದೆ. ಅಲ್ಲಿ ಈ ಬಗ್ಗೆ ಸ್ಪಷ್ಟ ನಿರ್ಧಾರ ಕೈಗೊಳ್ಳಲಾಗುವುದು’ ಎಂದು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

‘ಟೆಂಡರ್ ಆರೋಪ ಮುಗಿದು ಹೋಗಿರೋದು. ಇಲಾಖೆಯ ಕಾರ್ಯದರ್ಶಿಗಳು, ಮುಖ್ಯಮಂತ್ರಿ ಸ್ಪಷ್ಟನೆ ನೀಡಿಯಾಗಿದೆ. ಈ ಬಗ್ಗೆ ಮತ್ತೆ ಕೇಳಬೇಡಿ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

‘ಬಿಜೆಪಿ ಒಂದು ಕುಟುಂಬ ಇದ್ದಂತೆ. ರಾಜಕೀಯ ಪಕ್ಷದಲ್ಲಿ ಸ್ವಾಭಾವಿಕವಾಗಿ ಸಣ್ಣಪುಟ್ಟ ಸಮಸ್ಯೆಗಳು ಇದ್ದೇ ಇರುತ್ತವೆ. ನಮ್ಮ ಪಕ್ಷದ ರಾಷ್ಟ್ರೀಯ ನಾಯಕರು ಇಲ್ಲಿ ಬಂದು ನಾಲ್ಕು ಗೋಡೆಗಳ ಮಧ್ಯೆ ಕುಳಿತು ಶಾಸಕರಲ್ಲಿ ಮಾತನಾಡಿ ಎಲ್ಲ ಸಮಸ್ಯೆಗಳನ್ನು ಪರಿಹರಿಸಿ ಹೋಗಿದ್ದಾರೆ’ ಎಂದು ಅವರು ತಿಳಿಸಿದರು.

ಧರ್ಮಸ್ಥಳ: ದರ್ಶನಕ್ಕೆ 21ರವರೆಗೆ ಅವಕಾಶವಿಲ್ಲ

ಉಜಿರೆ: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದೇ 21ರವರೆಗೆ ಲಾಕ್‌ಡೌನ್ ಇರುವುದರಿಂದ ಧರ್ಮಸ್ಥಳ ಕ್ಷೇತ್ರದಲ್ಲಿ ದೇವರ ದರ್ಶನ ಮತ್ತು ಸೇವೆಗೆ ಅವಕಾಶವಿಲ್ಲ ಎಂದು ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರ ಆಪ್ತ ಕಾರ್ಯದರ್ಶಿ ಎ.ವಿ. ಶೆಟ್ಟಿ ತಿಳಿಸಿದ್ದಾರೆ.

‘ಹರಕೆ ಮಂಡೆ’ ತೆರೆಯದಂತೆ ಗುತ್ತಿಗೆದಾರರಿಗೆ ತಿಳಿಸಲಾಗಿದೆ.

‘ಜಾತಿಗಳಲ್ಲಿರುವ ಬ್ರಾಹ್ಮಣ್ಯ ತೊಲಗಿಸಿ’

ಬೆಂಗಳೂರು: ‘ಬ್ರಾಹ್ಮಣ ಮತ್ತು ಬ್ರಾಹ್ಮಣ್ಯ ಬೇರೆ ಬೇರೆ. ಬ್ರಾಹ್ಮಣ್ಯ ಒಂದು ಸಾಮಾಜಿಕ ವ್ಯವಸ್ಥೆ. ಇದು ಎಲ್ಲಾ ಜಾತಿಗಳಿಗೂ ವ್ಯಾಪಿಸಿದೆ. ಇದನ್ನು ತೊಡೆದುಹಾಕುವ ಕೆಲಸ ಆಗಬೇಕು. ವೈಚಾರಿಕ ಭಿನ್ನಾಭಿಪ್ರಾಯಗಳನ್ನು ವೈಚಾರಿಕ ನೆಲೆಗಟ್ಟಿನಲ್ಲೇ ಬಗೆಹರಿಸಿಕೊಳ್ಳುವುದು ಸೂಕ್ತ . . .’ ‘ಪ್ರಜಾವಾಣಿ’ ಸಂವಾದದಲ್ಲಿ ಪಾಲ್ಗೊಂಡಿದ್ದ ಸಂಸ್ಕೃತಿ ಚಿಂತಕರು, ನಿವೃತ್ತ ನ್ಯಾಯಮೂರ್ತಿಗಳು ಹಾಗೂ ಲೇಖಕರು ಮಂಡಿಸಿದ ಅಭಿಪ್ರಾಯ ಇದು.

‘ವೈರಾಣುರೀತಿ ಆವರಿಸಿದೆ’

‘ಬ್ರಾಹ್ಮಣ್ಯವು ಮೂಲದಲ್ಲಿ ಧಾರ್ಮಿಕ ಶೋಷಣೆಯಾಗಿತ್ತು. ಆದರೆ ಈಗ ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಶೈಕ್ಷಣಿಕ ಕ್ಷೇತ್ರಗಳನ್ನೂ ಆವರಿಸಿದೆ. ಎಲ್ಲೆಡೆಯೂ ತನ್ನ ಪ್ರಭಾವ ಬೀರುವ ಮೂಲಕ ಪ್ರಗತಿಗೂ ಅಡ್ಡಿಯಾಗಿದೆ. ಸಮಾನತೆಗೆ ತೊಡಕಾಗಿರುವ ಕಾರಣ ನಟ ಚೇತನ್ ಅಹಿಂಸಾ ಇದನ್ನು ವಿರೋಧಿಸುತ್ತಿದ್ದಾರೆ. ಬ್ರಾಹ್ಮಣ್ಯವನ್ನು ನಾಶಮಾಡಬೇಕೆಂಬ ಕೂಗು ಅಂಬೇಡ್ಕರ್ ಕಾಲದಿಂದಲೂ ಇದೆ. ಬ್ರಾಹ್ಮಣ್ಯವು ವೈರಾಣುವಿನ ರೀತಿ ಎಲ್ಲಾ ಕ್ಷೇತ್ರಗಳನ್ನೂ ಆವರಿಸಿದೆ. ಇದೊಂದು ವ್ಯಸನ. ಜಾತಿ ಆಧಾರಿತ ತಾರತಮ್ಯಗಳನ್ನು ಜೀವಂತವಾಗಿಡುವುದೇ ಬ್ರಾಹ್ಮಣ್ಯ’

‘ಬ್ರಾಹ್ಮಣರು ನೇರವಾಗಿ ಏನನ್ನೂ ಮಾಡುವುದಿಲ್ಲ. ಬ್ರಾಹ್ಮಣ್ಯವು ಅವರಿಗೆ ಅವಕಾಶಗಳನ್ನು ಕಲ್ಪಿಸುತ್ತದೆ. ಅಧಿಕಾರ ಕೇಂದ್ರಗಳಲ್ಲಿ ಬ್ರಾಹ್ಮಣರ ಪ್ರಾಬಲ್ಯ ಹೆಚ್ಚಿದೆ. ಹೀಗಾಗಿ ಬ್ರಾಹ್ಮಣೇತರರು ಹಾಗೂ ಶೂದ್ರರಲ್ಲಿ ಸಹಜವಾಗಿಯೇ ಅಸಹನೆ ಮನೆ ಮಾಡಿದೆ. ಅವಕಾಶಗಳನ್ನು ನಿರಾಕರಣೆ ಮಾಡುವುದು ಬ್ರಾಹ್ಮಣ್ಯದ ಕೆಲಸ’.

‘ಶ್ರೇಣೀಕೃತ ಜಾತಿಯ ಸೃಷ್ಟಿ ಹಾಗೂ ಮೇಲು ಕೀಳಿನ ಪ್ರಜ್ಞೆಯಿಂದ ಸಮಾಜದಲ್ಲಿ ಅವಘಡಗಳು ನಡೆಯುತ್ತಿವೆ. ಇದನ್ನು ತಡೆಯಬೇಕಾದರೆ ಬ್ರಾಹ್ಮಣ್ಯ ನಾಶಪಡಿಸಬೇಕು ಎಂದು ಚೇತನ್ ಪ್ರತಿಪಾದಿಸುತ್ತಿದ್ದಾರೆ. ದಲಿತರಲ್ಲೂ ಬ್ರಾಹ್ಮಣ್ಯವಿದೆ. ಅದಕ್ಕೆ ಅವರ ಅಜ್ಞಾನವೇ ಕಾರಣ. ಬ್ರಾಹ್ಮಣ್ಯವನ್ನು ಪ್ರಶ್ನಿಸಿದವರ ಮೇಲೆ ದೂರು ದಾಖಲಿಸುವುದು ತಪ್ಪು. ಚೇತನ್ ಒಳ್ಳೆಯ ಪ್ರಶ್ನೆ ಎತ್ತಿದ್ದಾರೆ. ಅದನ್ನು ಪರಿಹರಿಸಲು ಇರುವ ಮಾರ್ಗಗಳ ಬಗ್ಗೆ ನಾವು ಆಲೋಚಿಸಬೇಕಿದೆ’.

–**ಮೂಡ್ನಾಕೂಡು ಚಿನ್ನಸ್ವಾಮಿ,** ಕವಿ, ಸಂಸ್ಕೃತಿ ಚಿಂತಕ

‘ಬ್ರಾಹ್ಮಣ್ಯಕ್ಕೆ ಪರ್ಯಾಯ ಪದ ಕಂಡುಕೊಳ್ಳಬೇಕು’

‘ಚೇತನ್ ಪ್ರಸ್ತಾಪಿಸಿರುವ ವಿಚಾರದ ಹಿಂದಿನ ಆಶಯಕ್ಕೆ ನಮ್ಮ ಬೆಂಬಲವಿದೆ. ಆದರೆ ಆಶಯವನ್ನು ಹೇಳಿದ ವಿಧಾನದಲ್ಲಿ ಸಮಸ್ಯೆ ಇದೆ. ಬ್ರಾಹ್ಮಣನಿಲ್ಲದೆ ಬ್ರಾಹ್ಮಣ್ಯ ಹೇಗೆ ಸಾಧ್ಯ ಎಂಬ ಪ್ರಶ್ನೆ ಈಗ ಎದುರಾಗಿದೆ. ಬ್ರಾಹ್ಮಣ ಎಂಬುದು ಒಂದು ವರ್ಣ. ಇದನ್ನೇ ಜಾತಿಯಾಗಿ ಪರಿವರ್ತಿಸಲಾಗಿದೆ’.

‘ಅಂಬೇಡ್ಕರ್ ಮತ್ತು ಗಾಂಧೀಜಿ ಅವರ ಕಾಲದಲ್ಲಿ ಸವರ್ಣೀಯರು ಮತ್ತು ಅವರ್ಣೀಯರು ಎಂಬ ವಿಂಗಡಣೆ ಇತ್ತು. ಲೋಹಿಯಾವಾದದ ಪ್ರವೇಶದ ಬಳಿಕ ಅಬ್ರಾಹ್ಮಣೀಯರ ವರ್ಗ ಹುಟ್ಟಿಕೊಂಡಿತು. ಈಗ ಸವರ್ಣೀಯ ಅಬ್ರಾಹ್ಮಣರ ಪ್ರತ್ಯೇಕ ಗುಂಪುಗಳು ಸೃಷ್ಟಿಯಾಗುತ್ತಾ ಹೋಗುತ್ತಿದೆ. ಹೀಗಾಗಿ ಬ್ರಾಹ್ಮಣ್ಯ ಎಂಬ ಕಲ್ಪನೆ ಜಾತಿ ಕೇಂದ್ರಿತವಾಗಿ ಅರ್ಥ ಮಾಡಿಕೊಳ್ಳಲ್ಪಡುತ್ತದೆ’.

‘ದೇಶದಲ್ಲಿ ಜಾತಿ ಆಧಾರದಲ್ಲಿ ಜನಸಂಖ್ಯೆಯನ್ನು ಲೆಕ್ಕ ಮಾಡಿ, ಎಲ್ಲಾ ಜಾತಿಗಳಿಗೂ ಶಾಸನ ಸಭೆಗಳಲ್ಲಿ ಪ್ರಾತಿನಿಧ್ಯ ನೀಡುವ ಕುರಿತು ನಿಯಮ ರೂಪಿಸಬೇಕು. ಅದು ಸಂಸತ್ತಿನ ಕೆಲಸ. ಬ್ರಾಹ್ಮಣ ಅಥವಾ ಇತರೆ ಯಾವುದೇ ಸಮುದಾಯದಿಂದ ಅದು ಸಾಧ್ಯವಿಲ್ಲ. ನಾವು ಒತ್ತಡ ಹೇರಬೇಕಿರುವುದು ಸಂಸತ್ತಿನ ಮೇಲೆಯೇ ಹೊರತು ಸಮುದಾಯದ ಮೇಲಲ್ಲ’.

‘ಸುಮಾರು 30 ಕೋಟಿ ಜನರ ಮೇಲಿರುವ ಅಸ್ಪೃಶ್ಯತೆಯ ತೂಗುಗತ್ತಿ ತೆಗೆಯುವುದು ಸವರ್ಣೀಯರ ಜವಾಬ್ದಾರಿ. ಅದನ್ನು ಬ್ರಾಹ್ಮಣರ ಮೇಲೆ ಹಾಕಿದಾಗ ಕೇವಲ 5 ಕೋಟಿಯಷ್ಟಿರುವ ಆ ಸಮುದಾಯದವರು ಸಮಸ್ಯೆ ಬಗೆಹರಿಸಲು ಸಾಧ್ಯವೇ. ಬ್ರಾಹ್ಮಣ್ಯ ಮತ್ತು ಬ್ರಾಹ್ಮಣವೆಂಬುದನ್ನು ಪ್ರತ್ಯೇಕವಾಗಿಟ್ಟುಕೊಂಡು ನೋಡಿದಾಗ ಬ್ರಾಹ್ಮಣ ಅಸಹನೆಗೆ ಈ ಬ್ರಾಹ್ಮಣ್ಯದ ಪರಿಕಲ್ಪನೆಯ ವಿವರಣೆಯೂ ಕಾರಣವಾಗಿರಬಹುದಲ್ಲ. ಅದರ ಬಗ್ಗೆಯೂ ಆಲೋಚಿಸಬೇಕಿದೆ. ಸಂಸತ್ತಿನಲ್ಲಿ ಮೇಲ್ಜಾತಿಯವರ ಸಂಖ್ಯೆ ಹೆಚ್ಚಿದೆ. ಆದರೆ ಬ್ರಾಹ್ಮಣರದ್ದಲ್ಲ. ಬ್ರಾಹ್ಮಣ ಮತ್ತು ಬ್ರಾಹ್ಮಣ್ಯ ಬೇರೆ ಬೇರೆ. ಈ ಬಗ್ಗೆ ಜನರಲ್ಲಿ ಗೊಂದಲವಿದೆ. ಹೀಗಾಗಿ ಬ್ರಾಹ್ಮಣ್ಯಕ್ಕೆ ಪರ್ಯಾಯವಾದ ಪದ ಕಂಡುಕೊಳ್ಳಬೇಕು’.

–**ಅರವಿಂದ ಚೊಕ್ಕಾಡಿ,** ಅಂಕಣಕಾರ, ಅಧ್ಯಾಪಕ

ಪ್ರಜಾವಾಣಿ ಸಂವಾದ

‘ಬ್ರಾಹ್ಮಣ್ಯ ಎಂಬುದು ಧರ್ಮತತ್ವ’

‘ಬ್ರಾಹ್ಮಣ್ಯ ಎಂಬುದು ಧರ್ಮತತ್ವ. ಸಾಮಾಜಿಕ ವ್ಯವಸ್ಥೆಯೊಂದನ್ನು ನಿಂದಿಸಿದರೆ ಅಥವಾ ಅದರ ವಿರುದ್ಧ ಭಿನ್ನ ಧ್ವನಿ ಎತ್ತಿದರೆ ಅದು ಅಪರಾಧವಾಗುವುದಿಲ್ಲ. ಬದಲಾದ ಪರಿಸ್ಥಿತಿಯಲ್ಲಿ ಅವಕಾಶ ವಂಚಿತರಿಗೆ ಅವಕಾಶ ನೀಡಲಾಗುತ್ತಿದೆ. ಉಳ್ಳವರಿಗೆ ಅವಕಾಶ ನಿರಾಕರಿಸಲಾಗುತ್ತಿದೆ. ಹೀಗಾಗಿ ಸಂಘರ್ಷ ಸಾಮಾನ್ಯ. ಈ ಸಂಘರ್ಷ ಜನರಲ್ಲಿ ದ್ವೇಷ ಬಿತ್ತುವಂತಿರಬಾರದು. ದೇಶದ ಎಲ್ಲಾ ಜಾತಿಯ ಜನರಿಗೂ ಈಗ ಮೀಸಲಾತಿ ಸಿಗುತ್ತಿದೆ. ಹೀಗಿದ್ದರೂ ಕೆಲ ಜಾತಿಗಳು ಮೀಸಲಾತಿ ವಿರೋಧಿಸುತ್ತಿವೆ. ಇದು ದುರದೃಷ್ಟಕರ. ಮೀಸಲಾತಿ ಬಡತನ ನಿವಾರಣಾ ಕಾರ್ಯಕ್ರಮವಲ್ಲ.’

‘ಎಸ್‌ಸಿ, ಎಸ್‌ಟಿ ಹಾಗೂ ಒಬಿಸಿಯವರಿಗೆ ಒಟ್ಟಾರೆ ಶೇ 50ರಷ್ಟು ಮೀಸಲಾತಿ ನೀಡಲಾಗಿದೆ. ಶೇ 23 ರಷ್ಟು ಜನಸಂಖ್ಯೆ ಇರುವವರಿಗೆ ಶೇ 10, ಶೇ 72ರಷ್ಟು ಜನಸಂಖ್ಯೆ ಇರುವವರಿಗೆ ಶೇ 52ರಷ್ಟು ಮೀಸಲಾತಿ ಕೊಟ್ಟಿರುವುದು ಯಾವ ನ್ಯಾಯ. ಬ್ರಾಹ್ಮಣ, ಜೈನ, ವೈಶ್ಯ, ಕ್ಷತ್ರಿಯ ಹೀಗೆ ಎಲ್ಲಾ ಸಮಾಜದವರಲ್ಲಿ ಬಡವರು ಇದ್ದಾರೆ. ಅಂತಹವರಿಗೆ ನ್ಯಾಯ ಸಿಗಬೇಕು. ಈ ಸಮುದಾಯಗಳಲ್ಲಿನ ಬಡತನ ನಿವಾರಣೆಗೆ ಸರ್ಕಾರ ಬೇರೆಯದ್ದೇ ಕಾರ್ಯಕ್ರಮ ಹಮ್ಮಿಕೊಳ್ಳಲಿ’.

‘ವಿವಿಧ ಜಾತಿಗಳಲ್ಲಿರುವ ಬ್ರಾಹ್ಮಣ್ಯವನ್ನು ನಾವು ವಿರೋಧಿಸಬೇಕು. ಅನೇಕ ಮಂದಿ ಪ್ರಜ್ಞಾವಂತ ಬ್ರಾಹ್ಮಣರು ಈ ಹೋರಾಟದ ಮುಂಚೂಣಿಯಲ್ಲಿದ್ದಾರೆ. ಮೀಸಲಾತಿಯನ್ನು ಅಪ್ರಸ್ತುತಗೊಳಿಸುವ ಹುನ್ನಾರ ನಡೆಯುತ್ತಿದೆ. ಇದನ್ನು ನಾವು ಖಂಡಿಸಬೇಕು. ಯಾರೂ ಕೂಡ ನಿರ್ದಿಷ್ಟ ಜಾತಿಯನ್ನು ನಿಂದಿಸಬಾರದು. ಅದು ಅಪರಾಧ. ಚೇತನ್ ಅವರದ್ದು ಒಂದು ಅಭಿಪ್ರಾಯವಷ್ಟೆ. ಅವರ ಮಾತಿನಲ್ಲಿ ಯಾರೊಬ್ಬರ ಧಾರ್ಮಿಕ ನಂಬಿಕೆಯನ್ನೂ ಘಾಸಿಗೊಳಿಸುವ ಉದ್ದೇಶ ಇಲ್ಲ. ಹಾಗಾಗಿ ಇದನ್ನು ಕಾನೂನಿನ ಚೌಕಟ್ಟಿನಡಿಯಲ್ಲಿ ತರುವುದಕ್ಕೆ ಅವಕಾಶವಿಲ್ಲ’.

–**ನ್ಯಾ. ಎಚ್.ಎನ್.ನಾಗಮೋಹನ್ ದಾಸ್,** ನಿವೃತ್ತ ನ್ಯಾಯಮೂರ್ತಿ, ಕರ್ನಾಟಕ ಹೈಕೋರ್ಟ್

ಪೂರ್ಣ ಸಂವಾದಕ್ಕೆ ನೋಡಿ: https://www.facebook.com/prajavani.net

ಮುಖ್ಯಮಂತ್ರಿ ಸ್ಥಾನ ಉತ್ತರ ಕರ್ನಾಟಕಕ್ಕೆ ನೀಡಲಿ: ಸ್ವಾಮೀಜಿ

ಪ್ರಜಾವಾಣಿ ವಾರ್ತೆ

ಬಸವಜಯ ಮೃತ್ಯುಂಜಯ ಸ್ವಾಮೀಜಿ

ಹರಿಹರ: ಬಿ.ಎಸ್. ಯಡಿಯೂರಪ್ಪ ಅವರನ್ನು ಬದಲಾಯಿಸುವ ಸ್ಥಿತಿ ನಿರ್ಮಾಣವಾದಲ್ಲಿ, ಉತ್ತರ ಕರ್ನಾಟಕದ ಲಿಂಗಾಯತ ಸಮುದಾಯದವರಿಗೆ ಆ ಸ್ಥಾನ ನೀಡಬೇಕು ಎಂದು ಕೂಡಲಸಂಗಮದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಆಗ್ರಹಿಸಿದರು.

ನಗರದ ಸಾರ್ವಜನಿಕ ಆಸ್ಪತ್ರೆ ಆವರಣದಲ್ಲಿ ತರಳಬಾಳು ಸೇವಾ ಸಮಿತಿಯಿಂದ ಆಯೋಜಿಸಿರುವ ನಿತ್ಯ ಅನ್ನ ದಾಸೋಹ ಕಾರ್ಯಕ್ರಮದ 34ನೇ ದಿನದ ಕಾರ್ಯಕ್ರಮದಲ್ಲಿ ಕೊರೊನಾ ವಾರಿಯರ್ಸ್ ಮತ್ತು ಸೋಂಕಿತರ ಸಂಬಂಧಿಗಳಿಗೆ ಅನ್ನ ಪ್ರಸಾದ ವಿತರಿಸಿದ ನಂತರ ಅವರು ಮಾತನಾಡಿದರು.

ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆಯ ವಿದ್ಯಮಾನಗಳು ಹಾಗೂ ಚರ್ಚೆಗಳು ನಡೆಯುತ್ತಿವೆ. ಮುಖ್ಯಮಂತ್ರಿ ಬದಲಾವಣೆ ಸ್ಥಿತಿ ನಿರ್ಮಾಣವಾದರೆ ಮುಖ್ಯಮಂತ್ರಿ ಸ್ಥಾನವನ್ನು ಉತ್ತರ ಕರ್ನಾಟಕಕ್ಕೆ ನೀಡಬೇಕು ಎಂಬ ಬಹುದಿನಗಳ ಬೇಡಿಕೆಯನ್ನು ಬಿಜೆಪಿ ಹೈಕಮಾಂಡ್ ಈಡೇರಿಸಬೇಕು ಎಂದು ಒತ್ತಾಯಿಸಿದರು.

ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿಗಾಗಿ ಮುಖ್ಯಮಂತ್ರಿ ಅವರು ಸೆ.15ರವರೆಗೆ ಕಾಲಾವಕಾಶ ಪಡೆದಿದ್ದಾರೆ. ಗಡುವಿನ ಅವಧಿಯೊಳಗೆ ಸರ್ಕಾರ ಮೀಸಲಾತಿ ಘೋಷಿಸುವ ವಿಶ್ವಾಸವಿದೆ ಎಂದರು.

ಕರ್ನಾಟಕ ಸರಕಾರ
ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ
ದೂರವಾಣಿ / ಫ್ಯಾಕ್ಸ್ ಸಂಖ್ಯೆ : 08372–297213,
ಇ–ಮೇಲ್: dsgadag@gmail.com
ಸಂ. ಗವೈವಿಸಂ/ಟೆಂಡರ/ಔ.ರ/23/2021–22 ದಿನಾಂಕ : 19.06.2021

ಇ–ಟೆಂಡರ ಪ್ರಕಟಣೆ

ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೋಧಕ ಆಸ್ಪತ್ರೆ ಗದಗ ಇಲ್ಲಿಗೆ ರೋಗಿಗಳ ಚಿಕಿತ್ಸೆಗಾಗಿ ಅಂದಾಜು ಮೊತ್ತ 1.80 ಕೋಟಿ ಮೊತ್ತದ ಮಾತ್ರೆಗಳ (ಔಷಧಿಗಳ) ಸರಬರಾಜಿಗಾಗಿ ಆಸಕ್ತಿಯುಳ್ಳ ಔಷಧ ತಯಾರಕರಿಂದ, ಅಧಿಕೃತ ಮಾರಾಟಗಾರರಿಂದ ಹಾಗೂ ಔಷಧ ಸಂಸ್ಥೆಗಳಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಪ್ರೋಕ್ಯೂರ್‌ಮೆಂಟ್ ಮೂಲಕ ಟೆಂಡರ ಕರೆಯಲಾಗಿದ್ದು, ದಿನಾಂಕ : 19.06.2021 ರಿಂದ ದಿನಾಂಕ : 23.07.2021 ರ ಸಾಯಂಕಾಲ 4:30 ಗಂಟೆವರೆಗೆ ಇ–ಪೋರ್ಟಲ್ ಸಂಖ್ಯೆ : ME/2021-22/IND3842 (http://www.eproc.karnataka.gov.in) ನಲ್ಲಿ ಟೆಂಡರ ಅಪ್‌ಲೋಡ್ ಮಾಡಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕರ್ತವ್ಯದ ದಿನಗಳಲ್ಲಿ ಕೆಳಗಡೆ ಸಹಿ ಮಾಡಿದವರ ಕಛೇರಿಗೆ ಸಂಪರ್ಕಿಸಬಹುದು. ಸಹಿ/– ನಿರ್ದೇಶಕರು,
ವಾಸಾಸಂಇ/ಗದಗ/ಎಂ.ಸಿ.ಎ/125/2021–22 ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ.

ಕರ್ನಾಟಕ ಸರ್ಕಾರ ಜಿಲ್ಲಾ ಪಂಚಾಯತ್, ದಾವಣಗೆರೆ.
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ, ದಾವಣಗೆರೆ ಜಿಲ್ಲೆ, ಎಸ್.ಎಸ್. ಹೈಟೆಕ್ ಆಸ್ಪತ್ರೆ ಹತ್ತಿರ, ಶ್ರೀ ರಾಮನಗರ ರಸ್ತೆ, ಎನ್.ಸಿ.ಸಿ ಕ್ಯಾಂಪ್ ಪಕ್ಕ. ದಾವಣಗೆರೆ.–577005
ದೂ: 08192 237833 e mail : dhodavangere@ gmail.com
ಸಂ:ಜಿಆದಾ:ಕೋವಿಡ್/19/17/2021–22 ದಿನಾಂಕ: 17.06.2021

ಟೆಂಡರ್ ಪ್ರಕಟಣೆ

2021–22ನೇ ಸಾಲಿನ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ ವ್ಯಾಪ್ತಿಯ ಹರಿಹರ ವಿಧಾನಸಭಾ ಕ್ಷೇತ್ರದ ಸಾರ್ವಜನಿಕ ಆಸ್ಪತ್ರೆ, ಹರಿಹರ ಇಲ್ಲಿಗೆ ಕೋವಿಡ್–19 ತಡೆಗಟ್ಟಲು ಅತಿ ಅವಶ್ಯಕವಾಗಿ ಬೇಕಾಗಿರುವ ವೈದ್ಯಕೀಯ ಪರಿಕರಗಳು ಹಾಗೂ ಉಪಕರಣಗಳನ್ನು ಪಾರದರ್ಶಕ ಅಧಿನಿಯಮದಡಿ ಖರೀದಿಸುವ ಸಂಬಂಧ ಇ–ಪ್ರಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಟೆಂಡರ್ ಆಹ್ವಾನಿಸಿದ್ದು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ 1999 ನಿಯಮ 2000ರಂತೆ ದ್ವಿ–ಲಕೋಟೆ ಪದ್ದತಿಯಲ್ಲಿ ಅಲ್ಪಾವಧಿ ಟೆಂಡರ್‌ನ್ನು ಈ ಕೆಳಕಂಡಂತೆ ಆಹ್ವಾನಿಸಲಾಗಿದೆ.

(1) ಟೆಂಡರ್ ವಿವರ:– MEDICAL EQUIPMENTS. (2) ಟೆಂಡರ್ ಮೊತ್ತ:– 49,70,500/– (3) ಟೆಂಡರ್ ಇಎಂಡಿ ಮೊತ್ತ:– 1,24,263/– (ವಿನಾಯಿತಿ ನೀಡಲಾಗಿರುತ್ತದೆ) (4) ಟೆಂಡರ್ ಪ್ರಾರಂಭ ದಿನಾಂಕ: 17.06.2021. (5) ಟೆಂಡರ್ ದಾಖಲೆಗಳನ್ನು ಅಪ್‌ಲೋಡ್ ಮಾಡಲು ಅಂತಿಮ ದಿನಾಂಕ: 25.06.2021 ಸಂಜೆ 4.00 ಗಂಟೆಯವರೆಗೆ. (6) ಷರಾ:– ಇ–ಪ್ರಕ್ಯೂರ್‌ಮೆಂಟ್ ಮೂಲಕ http://eproc.karnataka.gov.in ನಲ್ಲಿ ಸಂಪೂರ್ಣ ವಿಳಾಸದೊಂದಿಗೆ ಟೆಂಡರ್‌ದಾರರು ಟೆಂಡರ್‌ನಲ್ಲಿ ಭಾಗವಹಿಸಬಹುದು

ವಾಸಾಇ/ಡಿವಿಜಿ/162/ಎಂಸಿಎ/2020–21 ಸಹಿ/– ಜಿಲ್ಲಾ ಆರೋಗ್ಯ ಮತ್ತು ಕು.ಕ.ಅಧಿಕಾರಿಗಳು, ದಾವಣಗೆರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಯೋಜನಾ ವಿಭಾಗ, ರಾಜಾರಾಜೇಶ್ವರಿ ನಗರ ವಲಯ, ಬಿಬಿಎಂಪಿ ಕಚೇರಿ ಕಟ್ಟಡ, 2ನೇ ಮಹಡಿ, ನೆಹರೂ ರಸ್ತೆ, ಬಿಇಎಂಎಲ್ ಬಡಾವಣೆ, ಬೆಂಗಳೂರು-560 098.
ಸಂಖ್ಯೆ:ಬೃಬೆಂಮಪಾ/ಕಾಅ/ಯೋ/ಟೆಂಡರ್/04/2/2021-22 ದಿನಾಂಕ: 19-06-2021

ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿ ಲಕೋಟೆ ಪದ್ಧತಿ)
(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಕಾರ್ಯಪಾಲಕ ಅಭಿಯಂತರರು, ಯೋಜನಾ ವಿಭಾಗ, ರಾಜರಾಜೇಶ್ವರಿ ನಗರ ವಲಯ, ಬೃಬೆಂಮಪಾ, ಬೆಂಗಳೂರು ಇವರು ಅರ್ಹ ಹೆಸರಾಂತ ಸಲಹಾ ಸಂಸ್ಥೆಗಳಿಂದ ವಿವರವಾದ ಯೋಜನಾ ವರದಿ ಸಲಹೆ ಸೇವೆಗಳನ್ನು ಕೆಳಕಂಡ ಕಾಮಗಾರಿಗೆ ಒದಗಿಸಲು ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕೆಲಸದ ಹೆಸರು	ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ)
1)	ವಾರ್ಡ್ ನಂ.17 ಜೆಪಿ ಪಾರ್ಕ್ (ಕಲ್ಪನಾ ರಸ್ತೆ) ಯಲ್ಲಿ ರಾಜರಾಜೇಶ್ವರಿ ಶಾಲೆಯ ನಿರ್ಮಾಣ ಕಾಮಗಾರಿ.	990.00

ಟೆಂಡರ್‌ನ ಕಾರ್ಯಸೂಚಿ: 1. ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ದಿನಾಂಕ: 21-06-2021 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2. ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 28-06-2021ರ ಸಂಜೆ 4:00 ಗಂಟೆಯವರೆಗೆ. 3. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 29-06-2021ರ ಸಂಜೆ 4:00 ಗಂಟೆಗೆ ಅಥವಾ ಮುಂದಿನ ಕೆಲಸದ ದಿನದಂದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಅಥವಾ https://eproc.karnataka.gov.in ಇಲ್ಲಿಗೆ ಲಾಗಿನ್‌ಮಾಡಿ ಪಡೆಯಬಹುದು.

ಸಹಿ/-, ಕಾರ್ಯಪಾಲಕ ಅಭಿಯಂತರರು, ಯೋಜನಾ ವಿಭಾಗ, ರಾಜಾರಾಜೇಶ್ವರಿ ನಗರ ವಲಯ, ಬೃಬೆಂಮಪಾ.

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ಆಯುಕ್ತರ ಕಛೇರಿ, 2ನೇ ಮಹಡಿ,
ಕೆ.ಹೆಚ್.ಬಿ. ಕಟ್ಟಡ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–560009
ಸಂ: ಗ್ರಾಕುನೀ&ನೈಇ/25/ಡಬ್ಲುಎಸ್‌ಎಸ್‌ಓ/ಐಇಸಿ-2/2019–20/ಭಾ-3 ದಿನಾಂಕ: 19–06–2021

ಅರ್ಹ ಸಂಸ್ಥೆಗಳಿಂದ ಆಸಕ್ತಿ ವ್ಯಕ್ತಪಡಿಸುವಿಕೆ

ಸಮುದಾಯ ರೇಡಿಯೋ ಸೇವೆ ಸಲ್ಲಿಸುವ ಅರ್ಹ–ಅನುಭವಿ ಸಂಸ್ಥೆಗಳನ್ನು ಎಂಪ್ಯಾನೆಲ್ ಮಾಡಿಕೊಳ್ಳುವ ಬಗ್ಗೆ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ವತಿಯಿಂದ ಸಮುದಾಯ ರೇಡಿಯೋ ಸೇವೆಗಳನ್ನು ಒದಗಿಸುವ ಅರ್ಹ–ಅನುಭವಿ ಸಂಸ್ಥೆಗಳಿಂದ ಆಸಕ್ತಿ ವ್ಯಕ್ತಪಡಿಸುವಿಕೆಯನ್ನು ಆಹ್ವಾನಿಸಿದೆ. ಇದಕ್ಕೆ ಸಂಬಂಧಿಸಿದ ಅರ್ಹತೆ ಮತ್ತು ಇತರ ವಿವರಗಳನ್ನು ಇಲಾಖೆಯ ವೆಬ್‌ಸೈಟ್: https://swachhamevajayate.org/ & https://rdpr.karnataka.gov.in ನಲ್ಲಿ ಪಡೆಯಬಹುದಾಗಿರುತ್ತದೆ. ಭರ್ತಿ ಮಾಡಿದ ಪ್ರಸ್ತಾವನೆಗಳನ್ನು ಸೂಕ್ತ ದಾಖಲೆಗಳೊಂದಿಗೆ ದಿನಾಂಕ:20.07.2021, ಸಂಜೆ 5:00 ಗಂಟೆಯೊಳಗೆ ಆಯುಕ್ತರ ಕಛೇರಿ, 2ನೇ ಮಹಡಿ, "ಇ" ಬ್ಲಾಕ್, ಕೆ.ಹೆಚ್.ಬಿ. ಕಟ್ಟಡ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–560009 ಇವರಿಗೆ ಸಲ್ಲಿಸಬೇಕು. ಹೆಚ್ಚಿನ ವಿವರಗಳಿಗೆ ಈ ಕಛೇರಿಯ ಕಾರ್ಯಾವಧಿಯಲ್ಲಿ ಮೊಬೈಲ್ ಸಂಖ್ಯೆ: 8277299042 / 9448396560 ಗೆ ಸಂಪರ್ಕಿಸಿ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ.

ಸಹಿ/–
ಆಯುಕ್ತರು
ಗ್ರಾ.ಕು.ನೀ & ನೈ ಇಲಾಖೆ

ವಾ.ಸಂ.ಇ/ಬೆಂ.ನಗರ/RO. No. 594/2021–22

ಕೋವಿಡ್–19 ಆತಂಕ ಬೇಡ: ಮುನ್ನೆಚ್ಚರಿಕೆ ಇರಲಿ
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಅಭಿಯಂತರ ಕಚೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಾಗಲಕೋಟ
ನಂ:ಗ್ರಾಕುನೀಮತ್ತುನೈವಿ/ಬಾಗಲಕೋಟ/ಪಿಬಿ-1,2&3/ಟೆಂಡರ್/2020–21/673 ದಿನಾಂಕ:18–06–2021

ಅಲ್ಪಾವಧಿ ಇ-ಪ್ರೋಕ್ಯೂರಮೆಂಟ್-ಟೆಂಡರ ಪ್ರಕಟಣೆ

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರ, **ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ,** ಬಾಗಲಕೋಟ ರವರಿಂದ ಕುಡಿಯುವ ನೀರು ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದ್ದು, ವಿವರ ಈ ಕೆಳಗಿನಂತಿದೆ.

1) ಕಾಮಗಾರಿಯ ವಿವರ: ಬಾಗಲಕೋಟೆ ಜಿಲ್ಲೆ
1) Indent No-**32248(KULALI)** -APT-115.94 CALL-6
2) Indent No-**32002(Sorgoan)** -APT-58.55 CALL-5

2) ಲೆಕ್ಕ ಶಿರ್ಷಿಕೆ: ಜಲ ಜೀವನ ಮೀಷನ್–2020–21
3) ಗುತ್ತಿಗೆದಾರರ ಅರ್ಹತೆ: 3 ನೇ ದರ್ಜೆ ಹಾಗೂ ಮೇಲ್ಪಟ್ಟ
4) ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಮ್ ಡಿ ಮೊತ್ತ ಇ–ಪ್ರೋಕ್ಯೂರಮೆಂಟ್ ಪ್ರಕಾರ
5) ಟೆಂಡರ್ ಫಾರಂ ಸಲ್ಲಿಸುವ ಅಂತಿಮ ದಿನಾಂಕ: **25–06–2021 ಸಾಯಂಕಾಲ 5.30 ಗಂಟೆಯ ವರೆಗೆ**
6) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 28–06–2021 ಮಧ್ಯಾಹ್ನ 11.00 ಗಂಟೆಯ ನಂತರ**
7) ಆರ್ಥಿಕ ಬಿಡ್ ತೆರೆಯುವ **ದಿನಾಂಕ: 30–06–2021 11.00 ಗಂಟೆಯ ನಂತರ**
8) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ ಕಾರ್ಯನಿರ್ವಾಹಕ ಇಂಜಿನೀಯರ, **ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಾಗಲಕೋಟ**

ಟಿಪ್ಪಣಿ:- 1) ಟೆಂಡರ ಮೊತ್ತಕ್ಕಿಂತ ಕಡಿಮೆ ದರವನ್ನು ನಮೂದಿಸಿದಲ್ಲಿ ಒಟ್ಟು ವ್ಯತ್ಯಾಸ ಮೊತ್ತದ DD/FDR ನ್ನು ಕಾರ್ಯನಿರ್ವಾಹಕ ಇಂಜಿನೀಯರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಾಗಲಕೋಟ ಇವರ ಹೆಸರಿನಲ್ಲಿ ಪಡೆದು ಸ್ಕ್ಯಾನ್ ಮಾಡಿ ಆನ್‌ಲೈನ್ ಮುಖಾಂತರ ಟೆಂಡರ ಜೊತೆಗೆ ಅಪ್‌ಲೋಡ್ ಮಾಡಬೇಕು. ಟೆಂಡರ ಅನುಮೋದನೆಗಿಂತ ಮುಂಚಿತವಾಗಿ ಈ ಕಛೇರಿಗೆ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಅಂತಹ ಟೆಂಡರರನ್ನು ಪರಿಗಣಿಸಲಾಗುವುದಿಲ್ಲ.
2) ಗುತ್ತಿಗೆ ಮೊತ್ತಕ್ಕೆ 12% GST ಯನ್ನು ಸೇರಿಸಿ ಕೆಲಸದ ಆದೇಶ ನೀಡಲಾಗುವುದು.

ಸಹಿ/–
ಕಾರ್ಯನಿರ್ವಾಹಕ ಇಂಜಿನೀಯರರು
ಗ್ರಾ.ಕು.ನೀ ಮತ್ತು ನೈ.ವಿಭಾಗ, ಬಾಗಲಕೋಟ
ವಾ.ಸಾ.ಇ/ಬಾಗಲಕೋಟೆ/125/2021–22/ದೇಶಪಾಂಡೆಪಬ್ಲಿಸಿಟಿ

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನೀಯರರವರ ಕಛೇರಿ
ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಯಾದಗಿರಿ
ಸಂಖ್ಯೆ:ಕಾಪಾಅ/ಗ್ರಾನೀಸಮತ್ತುನೈ/ವಿಯಾ/ಟೆ.ಪ್ರ/ಪಿ.ಬಿ/JJM/2020–21/335 ದಿನಾಂಕ:18–06–2021

ಅಲ್ಪಾವಧಿ ಟೆಂಡರ ಪ್ರಕಟಣೆ (ದ್ವಿ ಲಕೋಟೆ) “ಇ–ಪ್ರೊಕ್ಯೂರ್‌ಮೆಂಟ್” ಮೂಲಕ–3ನೇ ಕರೆ

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನೀಯರರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಯಾದಗಿರಿ ರವರಿಂದ ಕುಡಿಯುವ ನೀರು ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ ಅಹ್ವಾನಿಸಲಾಗಿದ್ದು ವಿವರ ಈ ಕೆಳಗಿನಂತಿದೆ.
1) ಕಾಮಗಾರಿಯ ವಿವರ: 1) RAMASAMUDRA - Est Cost Rs.313.00 lakhs- Indent No.32755 & 2) HALIGERA- Est Cost Rs.259.00 lakhs- Indent No.27532 in YADGIR TQ, 2) ಲೆಕ್ಕ ಶಿರ್ಷಿಕೆ: Jal Jeevan Mission-2020-21 3) ಗುತ್ತಿಗೆದಾರರ, ಅರ್ಹತೆ : 3ನೇ ಹಾಗೂ ಮೇಲ್ಪಟ್ಟ ದರ್ಜೆ, 4) ಟೆಂಡರ ಫಾರಂ ಪಡೆಯುವ ದಿನಾಂಕ: 21–06–2021 ರಿಂದ 29–06–2021. 5) ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಂ.ಡಿ ಮೊತ್ತ : ಇ–ಪ್ರೊಕ್ಯೂರ್‌ಮೆಂಟ್ ಪ್ರಕಾರ. 6) Pre Bid Meeting Date: 24-06-2021 & Address: Office of the Executive Engineer, RDW&S Division Yadgir at 11.00 am, 7) ಟೆಂಡರ್ ಫಾರಂ ಸಲ್ಲಿಸುವ ಅಂತಿಮ ದಿನಾಂಕ: 29–06–2021 ಸಾಯಂಕಾಲ 4.30 ಗಂಟೆವರೆಗೆ. 8) ತಾಂತ್ರಿಕ ಬಿಡ್ಡ್ ತೆರೆಯುವ ದಿನಾಂಕ: 30–06–2021 ಸಾಯಂಕಾಲ 5.00 ಗಂಟೆಯ ನಂತರ. 9) ಆರ್ಥಿಕ ಬಿಡ್ಡುಗಳನ್ನು ತೆರೆಯುವ ದಿನಾಂಕ: 02–07–2021 ಬೆಳಿಗ್ಗೆ 11.00 ಗಂಟೆಯ ನಂತರ 10) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ: ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ರೈಲ್ವೇ ನಿಲ್ದಾಣದ ಹತ್ತಿರ ಯಾದಗಿರ. 11) ಅಂತರ್ಜಾಲ ತಾಣದ ವಿಳಾಸ: **www.eproc.karnataka.gov.in.**

ಸಹಿ/– ಕಾರ್ಯಪಾಲಕ ಇಂಜಿನೀಯರರು,
ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಯಾದಗಿರಿ.
ವಾ.ಸಾ.ಸಂ.ಇ/ಯಾದಗಿರಿ/71/ಎಂಸಿ&ಎ/2021–22

ಕರ್ನಾಟಕ ಸರ್ಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ, ಇಲಾಖೆ, ವಿಭಾಗ, ರಾಯಚೂರು, ದೂರವಾಣಿ ಸಂಖ್ಯೆ : 08532–225778 & 234747

ಇ–ಪ್ರೊಕ್ಯುರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಡಬ್ಲ್ಯೂ– 3 & 4)

1) ಪ್ರಕಟಣೆ ಸಂಖ್ಯೆ ಮತ್ತು ದಿನಾಂಕ : ಲೋಇ/ರಾವಿ/ತಾಂಶಾ–4/ಟೆಂಪ್ರ/2020–21/652 ದಿನಾಂಕಃ 15–06–2021, 2) ಕಾಮಗಾರಿ ಹೆಸರು : ರಾಯಚೂರು ಜಿಲ್ಲೆಯ ಒಟ್ಟು 05 ಕಾಮಗಾರಿಗಳು. ರಾಯಚೂರು ತಾಲೂಕು ವಿವಿದೆಡೆ ವಿವಿಧ ರಸ್ತೆ, ಕಟ್ಟಡ ಹಾಗೂ ಇನ್ನಿತರೆ ಕಾಮಗಾರಿಗಳ ನಿರ್ಮಾಣ. ಮತ್ತು ಅಭಿವೃದ್ಧಿ ಕಾಮಗಾರಿ. 3) ಕಾಮಗಾರಿಯ ಮೊತ್ತ : ಕನಿಷ್ಠ ರೂ. 8848406.58, ಗರಿಷ್ಠ ರೂ. 22123224.2, 4) ಕಾಲಾವಧಿ (ಮಳೆಗಾಲ ಸೇರಿ) : ಕನಿಷ್ಠ 6 (ಆರು) ತಿಂಗಳು, ಗರಿಷ್ಠ 6 (ಆರು) ತಿಂಗಳು, 5) ಟೆಂಡರ್ ಸ್ವೀಕರಿಸುವ ಅಂತಿಮ ದಿನಾಂಕ : **05–07–2021 ಸಂಜೆ 4.00 ಗಂಟೆಯವರೆಗೆ,** 6) ಟೆಂಡರ್ ತೆರೆಯುವ ದಿನಾಂಕ : **06–07–2021 ಸಂಜೆ 4.30 ಗಂಟೆಯವರೆಗೆ.** ಹೆಚ್ಚಿನ ವಿವರಗಳು ವೆಬ್‌ಸೈಟ್ https://www.eproc.karnataka.gov.in ಮುಖಾಂತರ ನೋಡಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ವಾ.ಸಾ.ಸಂ.ಇ/ರಾಯಚೂರು/137/ಎಂ.ಸಿ.&ಎ/2021–22 ಲೋಕೋಪಯೋಗಿ ಇಲಾಖೆ, ವಿಭಾಗ ರಾಯಚೂರು.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
2ನೇ ಮಹಡಿ, ಕೆ.ಹೆಚ್.ಬಿ ಕಾಂಪ್ಲೆಕ್ಸ್, ಕಾವೇರಿ ಭವನ, ಬೆಂಗಳೂರು–560 009
ಇ–ಮೇಲ್: sbmkarnataka1@gmail.com
ಕಡತ ಸಂಖ್ಯೆ: RDWSD/JJM/ISA/03/CB-SA/2020-21 ದಿನಾಂಕ: 19.06.2021

ಪ್ರಕಟಣೆ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಜಲ ಜೀವನ ಮಿಷನ್ ಹಾಗೂ ಸ್ವಚ್ಛ ಭಾರತ್ ಮಿಷನ್ (ಗ್ರಾಮೀಣ) ಯೋಜನೆಯಡಿ ಜಿಲ್ಲಾ ಪಂಚಾಯಿತಿಗಳಲ್ಲಿ ಖಾಲಿಯಿರುವ ತಾತ್ಕಾಲಿಕ ಹುದ್ದೆಗಳಿಗೆ ಗುತ್ತಿಗೆ/ಹೊರಗುತ್ತಿಗೆ ಆಧಾರದ ಮೇಲೆ ಸಮಾಲೋಚಕರನ್ನು ನೇಮಿಸಿಕೊಳ್ಳಲು ಅರ್ಜಿ ಕರೆಯಲಾಗಿದೆ.
ಹುದ್ದೆಗಳ ವಿವರಗಳು, ವಿದ್ಯಾರ್ಹತೆ ಹಾಗೂ ಕಾರ್ಯಾನುಭವದ ವಿವರಗಳನ್ನು ಕೆಳಕಂಡಂತೆ ನೀಡಲಾಗಿದೆ.

ಕ್ರ. ಸಂ.	ಹುದ್ದೆಯ ವಿವರ	ಹುದ್ದೆಗಳ ಸಂಖ್ಯೆ	ವಿದ್ಯಾರ್ಹತೆ ಮತ್ತು ಅನುಭವ	ಮಾಸಿಕ ಸಂಭಾವನೆ
			ಜಿಲ್ಲಾ ಪಂಚಾಯಿತಿ ಕಛೇರಿ – ಜಲ ಜೀವನ ಮಿಷನ್	
1.	ಜಿಲ್ಲಾ MIS ಸಮಾಲೋಚಕರು	05	M.C.A./Statistics, M.Sc. Computer Science/ BE Computer Science from a recognized university only. 3-5 years of relevant experience in data management, data research preferably in the developmental sectors. **(Vacant Divisions: Harapanahalli, Bangaluru Urban, Chikkaballapura, Kolar & Kodagu)**	Rs.22,000/- to Rs.25,000/-
			ಜಿಲ್ಲಾ ಪಂಚಾಯಿತಿ ಕಛೇರಿ – ಸ್ವಚ್ಛ ಭಾರತ್ ಮಿಷನ್ (ಗ್ರಾಮೀಣ)	
1.	ಮಾಹಿತಿ ಶಿಕ್ಷಣ ಹಾಗೂ ಸಂವಹನ ಸಮಾಲೋಚಕರು (IEC) Consultant	01	Post Graduate in Mass Communication / Journalism from a recognized university only. Minimum 3 years experience in relevant field and should have worked in development sectors preferably in water, sanitation and rural development. **(Vacant District: Chikkaballapura)**	Rs.22,000/- to Rs.25,000/-
2.	ನೈರ್ಮಲ್ಯ ಹಾಗೂ ಶುಚಿತ್ವ ಸಮಾಲೋಚಕರು (SH)	01	Graduate degree in Engineering/ Social Science/ Public health / Rural Management or other relevant fields from a recognized university only. Minimum 3 years experience in relevant field and candidate should have worked in development sectors preferably in water, sanitation, health and rural development. **(Vacant District: Chikkaballapura)**	Rs.22,000/- to Rs.25,000/-

1) **ವಯೋಮಾನ:** ಪ್ರಕಟಣೆ ಹೊರಡಿಸಿದ ದಿನಾಂಕಕ್ಕೆ 45 ವರ್ಷಗಳು ಮೀರಿರಬಾರದು.
2) ನಿಗದಿತ ಅರ್ಜಿ ನಮೂನೆಯಲ್ಲಿ ಮಾಹಿತಿಯನ್ನು ತುಂಬಿ, ಅರ್ಜಿ ಜೊತೆಗೆ ವಯಸ್ಸಿನ ದೃಢೀಕರಣ, ವಿದ್ಯಾರ್ಹತೆ, ಅನುಭವ, ಪ್ರಮುಖ ಸಾಮರ್ಥ್ಯಗಳು & Resume ಅನ್ನು **ಆಯುಕ್ತರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, 2ನೇ ಮಹಡಿ, ಕೆ.ಹೆಚ್.ಬಿ ಕಟ್ಟಡ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು 5600–009 ಈ ವಿಳಾಸಕ್ಕೆ ಅರ್ಜಿಯ ಹಾರ್ಡ್‌ಪ್ರತಿಯನ್ನು ದಿನಾಂಕ 05.07.2021ರ ಸಂಜೆ 5:30 ಗಂಟೆಯೊಳಗೆ ಸಲ್ಲಿಸಬೇಕು. ನಂತರ ಬಂದಂತಹ ಯಾವುದೇ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ.** (ಅರ್ಜಿಯ ನಮೂನೆಯು RDPR website: **https://rdpr.karnataka.gov.in** ಮತ್ತು **https://swachhamevajayate.org** (ನೇಮಕಾತಿ ಲಿಂಕ್)ನಲ್ಲಿ ಲಭ್ಯವಿರುತ್ತದೆ).
3) ವಿದ್ಯಾರ್ಹತೆ, ಕಾರ್ಯಾನುಭವ ಹಾಗೂ ಅರ್ಜಿದಾರರ ಷರತ್ತು ಮತ್ತು ನಿಬಂಧನೆಗಳನ್ನು ಮೇಲ್ಕಂಡ ವೆಬ್‌ಸೈಟ್ ನಲ್ಲಿ ವಿವರಿಸಲಾಗಿದ್ದು, ಅರ್ಜಿ ಸಲ್ಲಿಸುವ ಮೊದಲು ವಿವರವಾಗಿ ಓದಿಕೊಂಡು ಅರ್ಜಿ ಸಲ್ಲಿಸುವುದು.

ಸಹಿ/– ಆಯುಕ್ತರು
DIPR/DDU/BCPL/597/2021-22 ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ಇಲಾಖೆ

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಮಯೂರ
ಜುಲೈ 2021 ಸಂಚಿಕೆಯಲ್ಲಿ
ಸುಮಧುರ ಬರಹಗಳ ಗುಚ್ಛ

ಮಾತು–ಕತೆ
ಕಾದಂಬರಿ: ಏಕಾಂತ ಲೋಕಾಂತಗಳ ಸಂವಾದ
ಟರ್ಕಿಯ ನೊಬೆಲ್ ಪುರಸ್ಕೃತ ಲೇಖಕ ಫೆರಿಟ್ ಒರ್ಹಾನ್ ಪಮುಕ್ ಸಂದರ್ಶನವನ್ನು ಅನುವಾದಿಸಿದ್ದಾರೆ ಹೇಮಾ ಎಸ್.

ಕತೆಗಳು
• ಸದಾನಂದ ಆರ್.
• ನಾಗರಾಜ ವಸ್ತಾರೆ
• ಬಿ. ಪ್ರಭಾಕರ ಶಿಶಿಲ
• ಕೃಷ್ಣಮೂರ್ತಿ ಹನೂರು
• ನೀತಾ ರಾವ್
• ಕೆ.ವಿ. ರಾಜಲಕ್ಷ್ಮಿ
• ಪಿ.ಪಿ. ಉಪಾಧ್ಯ
• ವಸುಮತಿ ಉಡುಪ

ನೀಳ್ಗತೆ
ಅಬ್ದುಲ್ ರಶೀದ್

ಅನುವಾದಿತ ಕತೆ
ಹೊರ್ಹೆ ಲೂಯಿಸ್ ಬೋರ್ಹೆಸ್‌ನ ಕತೆಯನ್ನು ಕನ್ನಡಕ್ಕೆ ತಂದಿದ್ದಾರೆ ಎಸ್. ದಿವಾಕರ್

ನನ್ನ ಓದು
ಕೆ. ಶ್ರೀನಾಥ್ ಅನುವಾದಿಸಿರುವ ದಾಸ್ತೋವ್‌ಸ್ಕಿ ಕಾದಂಬರಿ ‘ಕರಮಜೋವ್ ಸಹೋದರರು’ ಕುರಿತು ಎಸ್. ಗಂಗಾಧರಯ್ಯ ವಿಮರ್ಶೆ

ನಂದಾದೀಪ
ಸಾಹಿತ್ಯಯಾನದ ಒಬ್ಬಂಟಿ ಪಯಣಿಗ
ಎಸ್.ಎಫ್. ಯೋಗಪ್ಪನವರ ವ್ಯಕ್ತಿತ್ವ ಮತ್ತು ಸಾಹಿತ್ಯವನ್ನು ಪರಿಚಯಿಸಿದ್ದಾರೆ ಚನ್ನಪ್ಪ ಕಟ್ಟಿ

₹15 ನಿಮ್ಮ ಪ್ರತಿಗಳಿಗೆ ಏಜೆಂಟರನ್ನು ಸಂಪರ್ಕಿಸಿ
editormy@mayura.co.in /mayuramonthly
mayuraezine.com 080-45557333/264

ಪ್ರೀತಿ ಉಣಿಸಿ ನೆನಪ ಉಳಿಸಿದ ಅಪ್ಪ

ಇಂದು ವಿಶ್ವ ಅಪ್ಪಂದಿರ ದಿನ



ಮೃತ ರಫೀಕ್ ಅಹಮದ್ ಅವರೊಂದಿಗೆ ಮಗಳು ರಿಜ್ವಾನಾ ಆರ್. ನದಾಫ್

ಶಿಕ್ಷಣವೇ ಆಸ್ತಿ ಎಂದಿದ್ದ ಅಪ್ಪ

ದಾವಣಗೆರೆ: 'ಮನೆ, ಹಣ, ಬಂಗಾರಕ್ಕಿಂತ ಶಿಕ್ಷಣವೇ ಬಹುದೊಡ್ಡ ಆಸ್ತಿ ಎಂದು ನಂಬಿದ್ದರು ಅಪ್ಪ. ಅಂತೆಯೇ ಮೂರೂ ಹೆಣ್ಣುಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಿದ್ದರು. ಸ್ವತಂತ್ರವಾಗಿ ಬದುಕುವುದನ್ನು ಕಲಿಸಿದ್ದರು. ನನಗಿಂದು ಗೌರವ ಸಿಗುತ್ತಿದೆಯೆಂದರೆ ಅದಕ್ಕೆ ಅಪ್ಪನೇ ಕಾರಣ...'

ದಾವಣಗೆರೆ ನಗರದ ಯೂರೊ ಶಾಲೆಯಲ್ಲಿ ಸಂಯೋಜಕಿಯಾಗಿ ಕೆಲಸ ನಿರ್ವಹಿಸುತ್ತಿರುವ ರಿಜ್ವಾನಾ ಆರ್.ನದಾಫ್ ಅವರ ಆತ್ಮವಿಶ್ವಾಸದ ಮಾತಿದು.

ಐದು ವರ್ಷಗಳ ಹಿಂದೆ ಅಪಘಾತದಲ್ಲಿ ಒಬ್ಬ ಸಹೋದರಿಯನ್ನು ಕಳೆದುಕೊಂಡಿರುವ ರಿಜ್ವಾನಾ ಅವರಿಗೆ ಈಗ ತಂದೆ ರಫೀಕ್ ಅಹಮದ್ ಅವರು ಕೋವಿಡ್‌ನಿಂದ ಮೃತಪಟ್ಟಿರುವುದು ದೊಡ್ಡ ಆಘಾತವನ್ನೇ ಉಂಟುಮಾಡಿದೆ.

'ಜಾಲಿನಗರದ ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಅಪ್ಪ ಮುಖ್ಯಶಿಕ್ಷಕರಾಗಿದ್ದರು. ಶಾಲೆಯಲ್ಲಿ ಮಕ್ಕಳಿಗೆ ಕಲಿಸಿದ್ದನ್ನೇ ನಮಗೂ ಹೇಳಿಕೊಟ್ಟರು. ನಮಗೆ, ಇದುವರೆಗೂ ನಿವೇಶನವಾಗಲಿ, ಮನೆಯಾಗಲಿ ಇಲ್ಲ. ಬಾಡಿಗೆ ಮನೆಯಲ್ಲಿದ್ದೇವೆ. ದೊಡ್ಡ ಅಕ್ಕ ಮೆಕ್ಯಾನಿಕಲ್ ಎಂಜಿನಿಯರಿಂಗ್ ಪದವೀಧರೆ. ಎರಡನೇ ಅಕ್ಕ ಎಂ.ಎ (ಬಿಇಡಿ., ಎಂಫಿಲ್) ಮಾಡಿದ್ದರು. ನಾನು ಬಿ.ಕಾಂ ಮುಗಿಸಿದ್ದೇನೆ. ತಮ್ಮ ಹತ್ತನೇ ತರಗತಿ. ದೊಡ್ಡಕ್ಕನಿಗೆ ಮದುವೆಯಾಗಿದೆ. ಎರಡನೇ ಅಕ್ಕ ಮತ್ತು ಅಪ್ಪ ಇಲ್ಲದ ಕಾರಣ ಕುಟುಂಬದ ಜವಾಬ್ದಾರಿ ನನ್ನ ಮೇಲಿದೆ. ಕೆಲಸ ನಿರ್ವಹಿಸುವುದು ಅನಿವಾರ್ಯವಾಗಿದೆ' ಎನ್ನುತ್ತಾರೆ ರಿಜ್ವಾನಾ.

'ನಾವು ಮೂರು ಮಂದಿ ಹೆಣ್ಣಮಕ್ಕಳು ಒಬ್ಬರಾದ ಮೇಲೆ ಒಬ್ಬರಂತೆ ಹುಟ್ಟಿದಾಗ ಕೆಲ ಸಂಬಂಧಿಕರು ಹೀಯಾಳಿಸಿದ್ದರಂತೆ. ಅಪ್ಪ ಅದಕ್ಕೆಲ್ಲ ತಲೆಕೆಡಿಸಿಕೊಳ್ಳದೆ ಹೆಣ್ಣುಮಕ್ಕಳನ್ನು ಗಂಡುಮಕ್ಕಳಂತೆ ಬೆಳೆಸಿದರು. ಒಂದು ಹೆಣ್ಣುಮಗು ನೂರು ಗಂಡುಮಕ್ಕಳಿಗೆ ಸಮ ಎಂದು ಯಾವಾಗಲೂ ಹೇಳುತ್ತಿದ್ದರು. ಯಾವುದಕ್ಕೂ ಅಂಜದೆ, ಹಿಂಜರಿಯದೆ ಸ್ವಾಭಿಮಾನಿಗಳಾಗಿ ಬದುಕುವುದನ್ನು ಕಲಿಸಿದರು. ಅಪ್ಪ ಕಲಿಸಿದ್ದ ಪಾಠದಿಂದ ನೋವನ್ನು ಒತ್ತಿಹಿಡಿದು ಮುನ್ನುಗ್ಗುತ್ತಿದ್ದೇನೆ' ಎನ್ನುತ್ತಾರೆ ಅವರು.

ನಿರೂಪಣೆ: ಅನಿತಾ ಹೆಚ್.

ಅಪ್ಪನ ಜೊತೆಯಲ್ಲಿ...

ಮಕ್ಕಳಿಗೆ ತಂದೆಯ ಪ್ರೀತಿ...
–ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ನನಗೆ ಸಲ್ಯೂಟ್ ಮಾಡಲು ಕಾಯುತ್ತೇನೆ ಅಂತಿದ್ದರು ಅಪ್ಪ

'ಯವ್ವಾ ನೀ ಐಎಎಸ್ ಆಫೀಸರ್ ಆಗಬೇಕು, ಸರ್ಕಾರಿ ಕಾರಿನ್ಯಾಗ ಬರೂದನ್ನ ನಾ ಕಣ್ತುಂಬ ನೋಡಬೇಕು. ಇಷ್ಟು ವರ್ಷ ಯಾರ‍್ಯಾರಿಗೋ ಸೆಲ್ಯೂಟ್ ಹೊಡದೇನಿ. ನನ್ನ ಮಗಳಿಗೆ ನಾನೇ ಒಮ್ಮೆ ಸಲ್ಯೂಟ್ ಹೊಡಿಬೇಕು. ಅದಕ್ಕಾಗಿ ಕಾಯ್ಲಾತೇನಿ...'

ನಾಗಮೂರ್ತಿ ಪತ್ತಾರ

ಅಪ್ಪ ನಿಧನರಾಗುವ ಕೆಲವೇ ದಿನಗಳ ಹಿಂದೆ ಹೇಳಿದ ಮಾತಿದು. ಕಣ್ಣು- ಮುಚ್ಚಿ ತೆರೆದಾಗಲೆಲ್ಲ ಇದೇ ಮಾತು ನೆನಪಿಗೆ ಬರುತ್ತದೆ. ನನ್ನನ್ನು ಯವ್ವಾ ಯವ್ವಾ... ಎಂದು ಕರೆಯುತ್ತಿದ್ದ ಅವರ ಮಾತಿನಲ್ಲಿ ಅಪ್ಪಟ ಅಕ್ಕರೆ ಇತ್ತು.

ಕಲಬುರ್ಗಿ ಜಿಲ್ಲಾ ಪಂಚಾಯಿತಿಯಲ್ಲಿ ಡಿ- ದರ್ಜೆ ನೌಕರರಾಗಿದ್ದ ಅಪ್ಪ ನಾಗಮೂರ್ತಿ ಪತ್ತಾರ; ಪಡೆಯುತ್ತಿದ್ದ ಸಂಬಳ ಅತ್ಯಲ್ಪ. ಮೂವರು ಹೆಣ್ಣುಮಕ್ಕಳು, ಒಬ್ಬ ಮಗ, ಅವ್ವ ಸೇರಿ ಐವರ ಕುಟುಂಬದ ಭಾರ ಹೊತ್ತಿದ್ದರು. ನಮಗೆ ಕಷ್ಟದ ಅನುಭವ ಆಗದಂತೆ ನೋಡಿಕೊಂಡರು. ಮೂವರು ಹೆಣ್ಣುಮಕ್ಕಳಿದ್ದಾರೆ ಬೇಗ ಮದುವೆ ಮಾಡಿ ಕಳಿಸಬೇಕು ಎಂದು ಗಡಿಬಿಡಿ ಮಾಡಲಿಲ್ಲ. ನಮ್ಮನ್ನು ಓದಿಸಿದರು.

ಎಂಜಿನಿಯರಿಂಗ್ ಓದುತ್ತೇನೆ ಎಂದಾಗ ಅಪ್ಪ ಸಾಲ ಮಾಡಿ ಪ್ರವೇಶ ಕೊಡಿಸಿದರು. 2020ರಲ್ಲಿ ಎಂಜಿನಿಯರಿಂಗ್ ಮುಗಿಸಿ ಒಂದು ವರ್ಷ ಮನೆಯಲ್ಲಿ ಖಾಲಿ ಕುಳಿತೆ; ಆಗಲೂ ಅಪ್ಪ ಬೇಸರಿಸಲಿಲ್ಲ. 'ಚಿಂತೆ ಬೇಡ ಮಗಳೆ ನಾನಿದ್ದೇನಲ್ಲ' ಎನ್ನುವ ಅವರ ಮಾತು ಶಕ್ತಿ ತುಂಬುತ್ತಿತ್ತು.

ನಾಲ್ಕು ತಿಂಗಳ ಹಿಂದೆ ಹೈದರಾಬಾದ್‌ನ ಕಂಪನಿಯೊಂದರಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿ ಸೇರಿದೆ. ಮೂರು ತಿಂಗಳು ತರಬೇತಿ ಪಡೆದ ನಂತರವೇ ಸಂಬಳ. ನಾಲ್ಕನೇ ತಿಂಗಳಿಂದ ನಾನು ಸಂಬಳ ಪಡೆಯಲು ಶುರು ಮಾಡಿದ್ದೆ. ಈ ಖುಷಿಯನ್ನು ಅಪ್ಪನೊಂದಿಗೆ ಹಂಚಿಕೊಳ್ಳಬೇಕಿತ್ತು. ಆದರೆ, ಅವರು ಕೇಳಿಸದಷ್ಟು ದೂರ ಹೋದರು. ಕೋವಿಡ್‌ನಿಂದ ಅಪ್ಪ ಸತ್ತರು. ನನಗೆ ಇಷ್ಟೆಲ್ಲ ಮಾಡಿದ ಅಪ್ಪನಿಗೆ ಖುಷಿಪಡಿಸಲು ಏನಾದರೂ ಉಡುಗೊರೆ ಕೊಡಿಸಬೇಕು ಎಂಬ ನನ್ನ ಪುಟ್ಟ ಕನಸು ಕನಸಾಗೇ ಉಳಿಯಿತು.

ಕಾಳಿಕಾ ನಾಗಮೂರ್ತಿ ಪತ್ತಾರ,
ಸಾಫ್ಟ್‌ವೇರ್ ಎಂಜಿನಿಯರ್, ಕಲಬುರ್ಗಿ

ನಿರೂಪಣೆ: ಸಂತೋಷ ಈ. ಚಿನಗುಡಿ



ತಂದೆ ಕೆಂಪರಾಮು ಜೊತೆ ಕೆ.ಹರೀಶ್‌ಕುಮಾರ್

ಅಪ್ಪನಲ್ಲ; ನನ್ನ ಆಪ್ತ ಗೆಳೆಯ...

ತಿಂಗಳ ಹಿಂದಷ್ಟೇ (ಮೇ 18) ಕೋವಿಡ್–19 ನನ್ನಪ್ಪನನ್ನು ಬಲಿ ತೆಗೆದುಕೊಂಡಿತು. 74ರ ಹರೆಯದಲ್ಲೂ ಬತ್ತದ ಉತ್ಸಾಹ ಅವರದ್ದು.

ಅಪ್ಪನಿಲ್ಲದೇ ಇರುವುದನ್ನು ಊಹಿಸಿಕೊಳ್ಳಲು ಆಗುತ್ತಿಲ್ಲ. ಒಂದೊಂದು ದಿನ ಕಳೆಯೋದೂ ಕಷ್ಟವಾಗಿದೆ. ನನಗೆ 35 ವರ್ಷವಾದರೂ ಕಾಳಜಿ ಮಾಡುತ್ತಿದ್ದರು. ಆಫೀಸ್‌ನಿಂದ ಮನೆಗೆ ಬರುವುದು ಸ್ವಲ್ಪ ತಡವಾದರೂ ಮೊಬೈಲ್‌ಗೆ ಕರೆ ಮಾಡಿ ವಿಚಾರಿಸಿಕೊಳ್ಳುತ್ತಿದ್ದರು.

ನಿತ್ಯವೂ ಸಂಜೆಯಿಂದ ರಾತ್ರಿ 11ರವರೆಗೆ ನಮ್ಮದೇ ಲೋಕವಾಗಿತ್ತು. ಕಚೇರಿಯಿಂದ ಬಂದೊಡನೆ, ಲೋಕಾಭಿರಾಮದ ಮಾತುಕತೆ ನಡೆಯುತ್ತಿತ್ತು. ಈಚೆಗಿನ ದಿನಗಳಲ್ಲಿ,ಕೋವಿಡ್ ಜಾಗೃತಿ ಮಾತನ್ನು ಅಪ್ಪ ಹೇಳುತ್ತಿದ್ದರು.

'ನೀನು ಹೊರಗೆ ಓಡಾಡುವವನು. ಸದಾ ಎಚ್ಚರಿಕೆಯಿಂದ ಇರಬೇಕು' ಎಂದು ನಿತ್ಯವೂ ಕಿವಿಮಾತು ಹೇಳೋರು. ಇದರ ನಡುವೆಯೇ ತಾತ-ಮೊಮ್ಮಗನ (ನನ್ನ ಮಗ) ಆಟ ಕಣ್ತುಂಬಿ ಕೊಳ್ಳುವುದೇ ನನಗೆ ಮಹದಾನಂದವಾಗಿತ್ತು. ರಾತ್ರಿಯ ಊಟವನ್ನು ಒಟ್ಟಿಗೇ ಮಾಡುತ್ತಿದ್ದೆವು. ಒಂದು ದಿನವೂ ಇದು ತಪ್ಪಿರಲಿಲ್ಲ.

ನಾನು ಮತ್ತು ನನ್ನ ಪತ್ನಿ, ಕೆಲಸಕ್ಕಾಗಿ ಮನೆಯಿಂದ ಹೊರಗೆ ಹೋಗಲೇಬೇಕು. ಆಗ ನಮ್ಮ ಒಂದು ಮುಕ್ಕಾಲು ವರ್ಷದ ಮಗನಿಗೆ ತಾತನೇ ಪ್ರಪಂಚ. ದಿನವಿಡೀ ಅವರೊಂದಿಗೆ ಆಟವಾಡಿಕೊಂಡಿರುತ್ತಿದ್ದ. ಕೋವಿಡ್‌ನಿಂದ ನನ್ನಪ್ಪ ಹೋಗಿಬಿಟ್ಟರು. ಇದೀಗ ನನ್ನ ಮಗ, ನನ್ನಮ್ಮನ ಮಡಿಲಲ್ಲಿದ್ದರೂ 'ತಾತ, ತಾತ' ಎಂಬ ತೊದಲು ನುಡಿಯಲ್ಲಿ ಮನೆಯ ಎಲ್ಲೆಡೆ ನನ್ನಪ್ಪನನ್ನು ಹುಡುಕುತ್ತಾನೆ. ಆಗ ನನ್ನ, ನನ್ನಮ್ಮನ ಕರುಳು ಕಿತ್ತು ಬರುತ್ತೆ...

ಈಗಷ್ಟೇ ನಮ್ಮ ಬದುಕು ಹಳಿಗೆ ಬರುತ್ತಿತ್ತು. ಮೂವರು ಅಕ್ಕಂದಿರ ಜೀವನವೂ ಸುಸ್ಥಿತಿಯಲ್ಲಿತ್ತು. ನನ್ನ ಭವಿಷ್ಯವನ್ನು ಅಪ್ಪನ ಮಾರ್ಗದರ್ಶನದಲ್ಲೇ ಕಟ್ಟಿಕೊಳ್ಳುವ ಕನಸನ್ನು ಕೋವಿಡ್ ಕಮರಿಸಿಬಿಟ್ಟಿದೆ. ಅಪ್ಪನಿಲ್ಲ ಎಂಬುದನ್ನು ನನ್ನ ಮನಸ್ಸು ಇನ್ನೂ ಒಪ್ಪಿಕೊಳ್ಳುತ್ತಿಲ್ಲ.

ಕೆ.ಹರೀಶ್‌ಕುಮಾರ್, ಜನತಾ ನಗರ, ಮೈಸೂರು

ನಿರೂಪಣೆ: ಡಿ.ಬಿ.ನಾಗರಾಜ

ತಂದೆಯನ್ನು ಸ್ಮರಿಸಿದ ವೈದ್ಯ

ಸ್ನೇಹಿತರಂತೆ ಇದ್ದೆವು

ತಂದೆ ಕೆ.ಎನ್.ರಮೇಶ್ ಅವರೊಂದಿಗೆ ಪುತ್ರ ಡಾ.ಅಂಜನಾಮೂರ್ತಿ

ಚಿತ್ರದುರ್ಗ: 'ಗ್ರಾಮೀಣ ಪ್ರದೇಶದಲ್ಲಿರುವ ಅಪ್ಪ–ಮಕ್ಕಳಂತೆ ನಮ್ಮ ಸಂಬಂಧವೂ ಇತ್ತು. ಮಾತು ಕಡಿಮೆ, ಮೌನದಲ್ಲೇ ಸಂವಹನ. ತಂದೆ ಎಂಬ ಬಿಗುಮಾನ ಅವರಲ್ಲಿ ಇರಲಿಲ್ಲ. ಆಪ್ತ ಸ್ನೇಹಿತರಂತೆ ಬದುಕು ಕಟ್ಟಿಕೊಂಡಿದ್ದೆವು...' ಎನ್ನುವಾಗ ಡಾ.ಅಂಜನಾಮೂರ್ತಿ ಅವರ ಧ್ವನಿ ಗದ್ಗದಿತವಾಯಿತು.

ಹೊಸದುರ್ಗ ತಾಲ್ಲೂಕಿನ ದೊಡ್ಡಕಿಟ್ಟದಹಳ್ಳಿಯ ಕೆ.ಎನ್. ರಮೇಶ್ (55) ತಿಂಗಳ ಹಿಂದೆ ಕೋವಿಡ್‌ನಿಂದ ಮೃತಪಟ್ಟರು. ತಂದೆಯ ಅಗಲಿಕೆಯ ನೋವಿನಿಂದ ಹೊರಬರಲು ಪುತ್ರನಿಗೆ ಸಾಧ್ಯವಾಗುತ್ತಿಲ್ಲ. ತಂದೆಯ ಅನುಪಸ್ಥಿತಿಯಲ್ಲಿ ಬದುಕು ಮುನ್ನಡೆಸಲು ಅವರದೊಂದು ಉಂಗುರವನ್ನು ಜೊತೆಗೆ ಇಟ್ಟುಕೊಂಡಿದ್ದಾರೆ.

'ಹುಟ್ಟಿ, ಬೆಳೆದಿದ್ದು ಹಳ್ಳಿಯಲ್ಲಿ. ತಂದೆಯ ಕೆಲಸದ ಕಾರಣಕ್ಕೆ ಹೊಸದುರ್ಗ ಪಟ್ಟಣ ಸೇರಿದೆವು. ಚಿಕ್ಕಂದಿನಲ್ಲಿ ಬದುಕು ತೀರಾ ಕಷ್ಟದಲ್ಲಿತ್ತು. ವೈದ್ಯಕೀಯ ಸೌಲಭ್ಯದ ಕೊರತೆಯ ಕಾರಣಕ್ಕೆ ಕಿರಿಯ ಸಹೋದರ ಚಿಕ್ಕಂದಿನಲ್ಲೇ ಅಗಲಿದ. ಬೇರೊಬ್ಬರಿಗೆ ಇಂತಹ ಕಷ್ಟ ಬರಬಾರದು ಎಂಬ ಉದ್ದೇಶದಿಂದ ವೈದ್ಯನಾಗುವಂತೆ ತಂದೆ ಸ್ಫೂರ್ತಿ ತುಂಬಿದರು. ಅವರ ಆಸೆಯಂತೆ ಹೋಮಿಯೋಪಥಿ ವೈದ್ಯನಾದೆ. ಆದರೆ ತಂದೆಯನ್ನು ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ' ಎಂದರು.

ಸದೃಢ ಆರೋಗ್ಯ ಹೊಂದಿದ್ದ ರಮೇಶ್ ಅವರು ಅದೊಂದು ದಿನ ರಾತ್ರಿ ಇದ್ದಕ್ಕಿದ್ದಂತೆ ನಿಶ್ಶಕ್ತರಾದರು. ವಿಪರೀತ ಚಳಿಯಿಂದ ಬಳಲುತ್ತಿದ್ದ ಅವರನ್ನು ಕುಟುಂಬದ ಸದಸ್ಯರು ಆಸ್ಪತ್ರೆಗೆ ಕರೆದೊಯ್ದರು. ಶ್ವಾಸಕೋಶಕ್ಕೆ ಹಾನಿಯಾಗಿ ಆಮ್ಲಜನಕದ ಅಗತ್ಯವಿದ್ದರಿಂದ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ದಾಖಲಿಸಲಾಯಿತು. ಆದರೂ, ಅವರು ಬದುಕಿ ಬರಲಿಲ್ಲ. ಈ ಕೊರಗು ಪುತ್ರನನ್ನು ಕಾಡುತ್ತಿದೆ.

'ಎಐಯುಟಿಯುಸಿ ಕಾರ್ಮಿಕ ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದ ತಂದೆ ಕೆಲವು ಮೌಲ್ಯಗಳನ್ನು ಕಲಿಸಿದ್ದಾರೆ. ಬಡಜನರ ನೋವಿಗೆ ಸ್ಪಂದಿಸುವಂತೆ ಅರಿವು ಮೂಡಿಸಿದ್ದಾರೆ. ಅವರ ಆದರ್ಶಗಳನ್ನು ಸದಾ ಮೆಲುಕು ಹಾಕುತ್ತಿದ್ದೇನೆ. ಅದೇ ದಾರಿಯಲ್ಲಿ ಸಾಗಲು ನಿಶ್ಚಯಿಸಿದ್ದೇನೆ' ಎನ್ನುತ್ತಾರೆ ಅಂಜನಾಮೂರ್ತಿ.

ನಿರೂಪಣೆ: ಜಿ.ಬಿ.ನಾಗರಾಜ್

ನಮಗೆ ಅಮ್ಮನೇ ಆಗಿದ್ದ ಅಪ್ಪ

ಐದು ವರ್ಷಗಳ ಹಿಂದೆಯೇ ಅಮ್ಮ ತೀರಿಕೊಂಡರು. ಅದಾದ ಬಳಿಕ ಅಪ್ಪನೇ ನಮಗೆ ಸರ್ವಸ್ವವಾಗಿದ್ದರು. ನನಗೀಗ ಹದಿನಾಲ್ಕು ವರ್ಷ. ಹೊನ್ನವಳ್ಳಿಯ ಹೇಮಾವತಿ ಪ್ರೌಢಶಾಲೆಯ 9ನೇ ತರಗತಿಯಲ್ಲಿ ಓದುತ್ತಿದ್ದೇನೆ. ತಮ್ಮನಿಗೀಗ 10 ವರ್ಷ. ತಿಂಡಿ ತಿನಿಸುವುದು, ಊಟ ಮಾಡಿಸುವುದು, ನಿತ್ಯ ಶಾಲೆಗೆ ಬಿಡುವುದು, ಕರೆದುಕೊಂಡು ಬರುವುದು–ಹೀಗೆ ಎಲ್ಲವನ್ನೂ ಅಪ್ಪನೇ ಮಾಡುತ್ತಿದ್ದರು. ಅಮ್ಮನಿಲ್ಲದ ಕೊರಗು ಕಾಡದಂತೆ ನೋಡಿಕೊಂಡ ಅಪ್ಪ ಈಗ ನೆನಪಷ್ಟೇ.

ನನ್ನಪ್ಪ ಕುಮಾರ್, ಖಾಸಗಿ ಶಿಕ್ಷಣ ಸಂಸ್ಥೆಯಲ್ಲಿ ಗುಮಾಸ್ತರಾಗಿದ್ದರು. ನಮಗೆ ಆರೋಗ್ಯ ಕೆಟ್ಟಾಗ ಆಸ್ಪತ್ರೆಗೆ ಕರೆದೊಯ್ದು ಔಷಧಿ ಕೊಡಿಸಿ, ಕೆಲಸಕ್ಕೆ ರಜೆ ಹಾಕಿ ಆರೈಕೆ ಮಾಡುತ್ತಿದ್ದರು. ತಪ್ಪು ಮಾಡಿದಾಗ ಬೈದು, ಸರಿ ದಾರಿಯಲ್ಲಿ ಸಾಗುವಂತೆ ಬುದ್ಧಿ ಹೇಳುತ್ತಿದ್ದರು. ಏನೇ ಕಷ್ಟ ಬಂದರೂ ನಮ್ಮ ಬಳಿ ಹೇಳಿಕೊಳ್ಳುತ್ತಿರಲಿಲ್ಲ. ಯಾವುದಕ್ಕೂ ಕೊರತೆಯಾಗದಂತೆ ನೋಡಿಕೊಳ್ಳುತ್ತಿದ್ದರು.

ಅರಕಲಗೂಡಿನ ದೊಡ್ಡಮ್ಮನ ಜಾತ್ರೆಗೆ ಪ್ರತಿ ವರ್ಷ ಕರೆದುಕೊಂಡು ಹೋಗುತ್ತಿದ್ದರು. ಆಟಿಕೆ, ಸಿಹಿ ತಿಂಡಿ ಕೊಡಿಸುತ್ತಿದ್ದರು. ತಿಂಗಳ ಹಿಂದೆ ಅಪ್ಪನಿಗೆ ಕೊರೊನಾ ಸೋಂಕು ತಗುಲಿತು. ಆಸ್ಪತ್ರೆಗೆ ದಾಖಲಾದರು. ಆಸ್ಪತ್ರೆಯಲ್ಲಿದ್ದಾಗಲೂ, 'ನಾನು ಸತ್ತರೂ ಹೆದರಬೇಡ. ಚೆನ್ನಾಗಿ ಓದಿ, ತಮ್ಮನನ್ನು ವಿದ್ಯಾವಂತನನ್ನಾಗಿ ಮಾಡು' ಎಂದು ಧೈರ್ಯ ಹೇಳಿದ್ದರು. ಈಗ ಅವರೂ ಇಲ್ಲ. ಅಪ್ಪನ ಆಸೆಯಂತೆ ನಾನು ಚೆನ್ನಾಗಿ ಓದಿ ಐಎಎಸ್ ಪಾಸ್ ಮಾಡುತ್ತೇನೆ. ತಮ್ಮ ಧನುಷ್ಯನ ಜವಾಬ್ದಾರಿಯೂ ನನ್ನ ಮೇಲಿದೆ. ಅವನ ಆಸೆಯಂತೆ, ಅವನನ್ನು ವಿಜ್ಞಾನಿಯನ್ನಾಗಿ ಮಾಡುತ್ತೇನೆ. ನನ್ನ ಬದುಕಿಗೆ ಶಕ್ತಿ, ಸ್ಫೂರ್ತಿ ಅಪ್ಪನೇ.

ಸದ್ಯ ಹಾಸನದಲ್ಲಿ, ಸೋದರ ಮಾವನ ಆಶ್ರಯದಲ್ಲಿದ್ದೇವೆ. ಅಪ್ಪ ಕಲಿಸಿದ ಪಾಠದಿಂದ ಉತ್ತಮ ಭವಿಷ್ಯ ರೂಪಿಸಿಕೊಳ್ಳುತ್ತೇನೆ. ಅವರನ್ನು ಮರೆಯಲು ಆಗುತ್ತಿಲ್ಲ..

ಧನ್ಯಾ, ಹೊನ್ನವಳ್ಳಿ, ಅರಕಲಗೂಡು ತಾಲ್ಲೂಕು, ಹಾಸನ

ನಿರೂಪಣೆ: ಕೆ.ಎಸ್.ಸುನಿಲ್

ಮುಂದುವರಿದ ಮಳೆ: ಕೋಡಿಬಿದ್ದ ಕೆರೆಗಳು

ಭರ್ತಿಯಾದ ಕದ್ರಾ ಜಲಾಶಯ • ಮುಂಡಗೋಡು– ಟಿಬೆಟನ್ ಕ್ಯಾಂಪ್ ರಸ್ತೆ ಜಲಾವೃತ

ಪ್ರಜಾವಾಣಿ ವಾರ್ತೆ

ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡದ ಟಿಬೆಟನ್ ಕ್ಯಾಂಪ್ –ಯಲ್ಲಾಪುರ ರಾಜ್ಯ ಹೆದ್ದಾರಿ ಮೇಲೆ ನೀರು ತುಂಬಿಕೊಂಡು ಶನಿವಾರ ವಾಹನ ಸಂಚಾರ ಸ್ಥಗಿತಗೊಂಡಿತ್ತು

ಹುಬ್ಬಳ್ಳಿ/ಮೈಸೂರು/ಶಿವಮೊಗ್ಗ: ರಾಜ್ಯದ ಉತ್ತರ ಕರ್ನಾಟಕ, ಮಲೆನಾಡು ಭಾಗದಲ್ಲಿ ಶನಿವಾರವೂ ಮುಂಗಾರು ಅಬ್ಬರ ಹೆಚ್ಚಾಗಿತ್ತು. ಕರಾವಳಿಯ ಕೆಲ ಭಾಗಗಳಲ್ಲಿ ಮಳೆಯ ಪ್ರಮಾಣ ಕಡಿಮೆಯಾಗಿದ್ದರೆ, ಕೆಲವೆಡೆ ಮಳೆ ಬಿಡುವು ನೀಡಿದೆ.

ಧಾರವಾಡ ಜಿಲ್ಲೆಯಲ್ಲಿ ಕೆಲವು ಕೆರೆಗಳು ಕೋಡಿ ಬಿದ್ದಿವೆ. ಧಾರವಾಡದ ಸಾಧನಕೆರೆ ಮತ್ತು ನರೇಂದ್ರ ಗ್ರಾಮದ ಹಿರೇಕೆರೆಗಳು ಭರ್ತಿಯಾಗಿದೆ. ನವಲಗುಂದ ಹಾಗೂ ಕುಂದಗೋಳ ಭಾಗದಲ್ಲೂ ಮಳೆ ಹೆಚ್ಚಾಗಿದ್ದು ಈ ಭಾಗದ ಬೆಣ್ಣಿಹಳ್ಳ ಮೈದುಂಬಿ ಹರಿಯುತ್ತಿದೆ. ಅಲ್ಲಲ್ಲಿ ಹಳ್ಳ ಉಕ್ಕಿದ ಪರಿಣಾಮ ಹೊಲಗಳ ಮೇಲೆ ಹರಿದು ಬಿತ್ತಿದ ಬೆಳೆ ನಷ್ಟವಾಗಿದೆ.

ಕದ್ರಾ ಜಲಾಶಯ ಭರ್ತಿ: ಕಾರವಾರ ನಗರವೂ ಸೇರಿದಂತೆ ಜಿಲ್ಲೆಯ ವಿವಿಧೆಡೆ ಧಾರಾಕಾರ ಮಳೆಯಾಗಿದೆ. ತಾಲ್ಲೂಕಿನ ಕದ್ರಾ ಜಲಾಶಯ ಭರ್ತಿಯಾಗಿದ್ದು, ಮೂರು ಕ್ರೆಸ್ಟ್‌ಗೇಟ್‌ಗಳಿಂದ 5,500 ಕ್ಯುಸೆಕ್ ನೀರನ್ನು ಕಾಳಿ ನದಿಗೆ ಹರಿಸಲಾಯಿತು.

34.50 ಮೀಟರ್ ಗರಿಷ್ಠ ಮಟ್ಟದ ಜಲಾಶಯದಲ್ಲಿ 32.50 ಮೀಟರ್ ನೀರು ಸಂಗ್ರಹಿಸಲಾಗುತ್ತದೆ. ಶನಿವಾರ ಮಧ್ಯಾಹ್ನ 1.45ರ ಸುಮಾರಿಗೆ ಜಲಾಶಯದ ಮಟ್ಟವು 31.50 ಮೀಟರ್‌ಗೆ ತಲುಪಿತ್ತು.

ರಸ್ತೆ ಜಲಾವೃತ: ಮುಂಡಗೋಡದಿಂದ ಟಿಬೆಟನ್ ಕ್ಯಾಂಪ್‌ಗೆ ಹೋಗುವ ರಸ್ತೆ ಸಂಪೂರ್ಣ ಜಲಾವೃತವಾಗಿತ್ತು. ಸತತ ಮಳೆಯಿಂದ ಭತ್ತದ ಗದ್ದೆಗಳಲ್ಲಿ ನೀರು ತುಂಬಿದೆ. ಗೋವಿನಜೋಳ ಬಿತ್ತಿದ ರೈತರಲ್ಲಿ ಆತಂಕ ಮನೆ ಮಾಡಿದೆ.

ಅಂಕೋಲಾದ ವಾಸರಕುದ್ರಿಗಿ ಗ್ರಾ.ಪಂ ವ್ಯಾಪ್ತಿಯ ಕುದ್ರಗಿ ಮಜಿರೆಯಲ್ಲಿ ಮನೆ ಮೇಲೆ ತೆಂಗಿನ ಮರ ಬಿದ್ದಿದೆ. ವಿವಿಧೆಡೆ 21 ವಿದ್ಯುತ್ ಕಂಬಗಳು ಮತ್ತು ಒಂದು ವಿದ್ಯುತ್ ಪರಿವರ್ತಕ ಕೆಟ್ಟುಹೋಗಿವೆ.

ಜೊಯಿಡಾದಲ್ಲಿ ರಸ್ತೆ ಪಕ್ಕ ಕಂದಕ ಉಂಟಾಗಿರುವ ಕಾರಣ ಉಳವಿ- ಕುಂಬಾರವಾಡ ರಸ್ತೆಯನ್ನು ತಾತ್ಕಾಲಿಕವಾಗಿ ಮುಚ್ಚಲಾಗಿದೆ.

ತಗ್ಗು ಪ್ರದೇಶಗಳಲ್ಲಿ ಕಟ್ಟೆಚ್ಚರ (ಶಿವಮೊಗ್ಗ ವರದಿ): ಶಿವಮೊಗ್ಗ ಜಿಲ್ಲೆ ವ್ಯಾಪ್ತಿಯಲ್ಲಿ ಶುಕ್ರವಾರ ಬಿಡುವು ನೀಡಿದ್ದ ಮಳೆ ಶನಿವಾರ ಬೆಳಿಗ್ಗೆಯಿಂದಲೇ ಚುರುಕುಗೊಂಡಿದ್ದು, ಜಲಾಶಯಗಳಲ್ಲಿ ನೀರಿನ ಮಟ್ಟ ಹೆಚ್ಚಾಗಿದೆ. ತುಂಗಾ ಜಲಾಶಯದಿಂದ 33,069 ಕ್ಯೂಸೆಕ್ ನೀರು ಹರಿಸಲಾಗುತ್ತಿದ್ದು, ನದಿ ತುಂಬಿ ಹರಿಯುತ್ತಿದೆ. ಪ್ರವಾಹದ ಮುನ್ನೆಚ್ಚರಿಕೆಯಾಗಿ ನದಿ ಪಾತ್ರದ ತಗ್ಗು ಪ್ರದೇಶಗಳಲ್ಲಿ ಕಟ್ಟೆಚ್ಚರ ವಹಿಸಲಾಗಿದೆ.

ಬಲಮುರಿ ಕಿರುಸೇತುವೆ ಜಲಾವೃತ (ಮೈಸೂರು ವರದಿ): ಕೊಡಗು ಜಿಲ್ಲೆಯಾದ್ಯಂತ ಉತ್ತಮ ಮಳೆಯಾಗಿದೆ. ವಾರದಿಂದ ಸುರಿದ ಧಾರಾಕಾರ ಮಳೆಯಿಂದ ಕಾವೇರಿ ನದಿಯಲ್ಲಿ ನೀರಿನ ಮಟ್ಟ ಏರಿಕೆಯಾಗಿದ್ದು, ನಾಪೋಕ್ಲು ಸಮೀಪದ ಬಲಮುರಿ ಕಿರುಸೇತುವೆ ಜಲಾವೃತಗೊಂಡಿದೆ. ಭಾಗಮಂಡಲದ ತ್ರಿವೇಣಿ ಸಂಗಮದಲ್ಲಿ ಅಪಾರ ಪ್ರಮಾಣದ ನೀರು ಸಂಗ್ರಹವಾಗಿದೆ.

ಹಾಸನ ಜಿಲ್ಲೆಯ ಬಹುತೇಕ ಭಾಗಗಳಲ್ಲಿ ಮಳೆ ಬಿಡುವು ನೀಡಿದೆ. ಆದರೆ ಜಲಾನಯನ ಪ್ರದೇಶಗಳಲ್ಲಿ ಬಿರುಸಿನ ಮಳೆಯಾಗುತ್ತಿರುವುದರಿಂದ ಹೇಮಾವತಿ, ಯಗಚಿ, ವಾಟೆಹೊಳೆ ಜಲಾಶಯಗಳ ನೀರಿನ ಮಟ್ಟದಲ್ಲಿ ಏರಿಕೆಯಾಗಿದೆ. ಸಕಲೇಶಪುರ, ಆಲೂರು ಪ್ರದೇಶಗಳಲ್ಲಿ ಜಿಟಿಜಿಟಿ ಮಳೆಯಾಗುತ್ತಿದೆ.

ತಗ್ಗಿದ ಮಳೆ (ಮಂಗಳೂರು ವರದಿ): ಕರಾವಳಿ ಜಿಲ್ಲೆಗಳು ಹಾಗೂ ಚಿಕ್ಕ-ಮಗಳೂರಿನಲ್ಲಿ ಮಳೆಯ ಪ್ರಮಾಣ ಕಡಿಮೆಯಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನಲ್ಲಿ ಮೂರು ಮನೆಗಳಿಗೆ ಹಾನಿಯಾಗಿದೆ.

ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನಲ್ಲಿ ಐದಾರು ವಿದ್ಯುತ್ ಕಂಬಗಳು ನೆಲಕ್ಕುರುಳಿವೆ. ಮಾಸ್ತಿಖಾನ್ ಬಳಿ ದಿಬ್ಬದ ಮಣ್ಣು ರಸ್ತೆಗೆ ಕುಸಿದು ಸಂಚಾರಕ್ಕೆ ತೊಡಕಾಗಿತ್ತು. ಬಾನಹಳ್ಳಿಯಲ್ಲಿ ಮನೆಯೊಂದು ಕುಸಿದಿದೆ. ಕೊಪ್ಪ ತಾಲ್ಲೂಕಿನ ಗುಬ್ಬಗದ್ದೆಯಲ್ಲಿ ಕೊಟ್ಟಿಗೆಯೊಂದು ನೆಲಸಮವಾಗಿದೆ.

ಉಡುಪಿ ಜಿಲ್ಲೆಯಲ್ಲಿ ಬಿರುಗಾಳಿ ಸಹಿತ ಮಳೆ ಸುರಿಯಿತು. ಕರ್ಕಡ, ಹಾವಂಜೆ, ಇನ್ನಾ, ನಾವುಂದ, ಕಾಲ್ತೋಡು, ಬಿಜೂರು, ತೆಂಕನಿಡಿಯೂರು ಗ್ರಾಮಗಳಲ್ಲಿ ಮನೆಗಳಿಗೆ ಹಾನಿಯಾಗಿದೆ. ಉಡುಪಿಯ ಮಠದ ಬೆಟ್ಟು ಕಾಲು ಸೇತುವೆ ಕುಸಿದಿದೆ. ಪರ್ಕಳದಲ್ಲಿ ಬಿರುಗಾಳಿಗೆ ಹಲವು ಮನೆಗಳ ಹೆಂಚು, ತಗಡಿನ ಶೀಟ್‌ಗಳು ಹಾರಿಹೋಗಿವೆ.

ಬೀದರ್‌ನಲ್ಲಿ ಮಳೆ: ಬೀದರ್ ನಗರ ಸೇರಿದಂತೆ ಜಿಲ್ಲೆಯ ಚಿಟಗುಪ್ಪ ತಾಲ್ಲೂಕಿನಲ್ಲಿ ಮತ್ತು ಕಲಬುರ್ಗಿ ಜಿಲ್ಲೆಯ ಯಡ್ರಾಮಿ ತಾಲ್ಲೂಕಿನಲ್ಲಿ ಮಳೆಯಾಯಿತು.

7 ಜಿಲ್ಲೆಗಳಲ್ಲಿ 'ಆರೆಂಜ್ ಅಲರ್ಟ್'

ಬೆಂಗಳೂರು: ರಾಜ್ಯದಲ್ಲಿ ಮುಂಗಾರು ಚುರುಕುಗೊಂಡಿರುವುದರಿಂದ ಜೂ.20 ಮತ್ತು 21ರಂದು ಗುಡುಗು, ಸಿಡಿಲು ಸಹಿತ ಧಾರಾಕಾರ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

'ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು, ಹಾಸನ, ಕೊಡಗು, ಶಿವಮೊಗ್ಗ ಜಿಲ್ಲೆಗಳಲ್ಲಿ ಭಾನುವಾರ (ಜೂ.20) ಭಾರಿ ಮಳೆಯಾಗುವ ಮುನ್ಸೂಚನೆ ಇರುವುದರಿಂದ 'ಆರೆಂಜ್ ಅಲರ್ಟ್' ಮುಂದುವರಿಸಲಾಗಿದೆ'.

'ಬೆಳಗಾವಿ, ಧಾರವಾಡ ಹಾಗೂ ಹಾವೇರಿಯಲ್ಲಿ 'ಯೆಲ್ಲೊ ಅಲರ್ಟ್' ನೀಡಲಾಗಿದೆ. ಕರಾವಳಿ ಜಿಲ್ಲೆಗಳಲ್ಲಿ ಸೋಮವಾರದವರೆಗೆ ಮಳೆ ಮುಂದುವರಿಯಲಿದೆ. ಕರಾವಳಿಯಲ್ಲಿ ಗಂಟೆಗೆ 50 ಕಿ.ಮೀ ವೇಗದಲ್ಲಿ ಗಾಳಿ ಬೀಸುತ್ತಿದ್ದು, 3.9 ಮೀಟರ್‌ನಷ್ಟು ಎತ್ತರದ ಅಲೆಗಳು ಏಳುತ್ತಿರುವುದ-ರಿಂದ ಮೀನುಗಾರರು ಕಡಲಿಗೆ ಇಳಿಯಬಾರದು' ಎಂದು ಇಲಾಖೆ ಎಚ್ಚರಿಸಿದೆ.

ಗರಿಷ್ಠ ಮಳೆ	ಸೆಂ.ಮೀಗಳಲ್ಲಿ
ಚಿಕ್ಕಮಗಳೂರು	
ಹೊಸಕೆರೆ	17.2
ಜಾವಳಿ	11.9
ಕೆರೆಕಟ್ಟೆ	11.4
ಕೊಟ್ಟಿಗೆಹಾರ	11.3
ಉಡುಪಿ	
ಕೊಲ್ಲೂರು	10
ದಕ್ಷಿಣ ಕನ್ನಡ	
ಕೊಕ್ಕಡ	8.2
ಬೆಳಗಾವಿ	
ಕಣಕುಂಬಿ	13.30
ಜಾಂಬೋಟಿ	13.06
ಉತ್ತರ ಕನ್ನಡ	
ಕೊಡಸಳ್ಳಿ	10

ಗರಿಷ್ಠ ಮಳೆ	ಸೆಂ.ಮೀಗಳಲ್ಲಿ
ಕದ್ರಾ	9.5
ಯಲ್ಲಾಪುರ	8.7
ಶಿವಮೊಗ್ಗ	
ಹುಲಿಕಲ್	10.8
ಮಾಸ್ತಿಕಟ್ಟೆ	10.3
ಆಗುಂಬೆ	7.2
ಕೊಡಗು	
ಭಾಗಮಂಡಲ	11
ವಿರಾಜಪೇಟೆ	9
ನಾಪೋಕ್ಲು	6.5
ಹಾಸನ ಜಿಲ್ಲೆ	
ಮಾರನಹಳ್ಳಿ	6
ಶುಕ್ರವಾರಸಂತೆ	6.5

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	90.40	18,556	2,164
ಹಾರಂಗಿ	2,859	2,834.68	1,265	80
ಕಬಿನಿ	2284	2,274.67	16,200	5,000
ಹೇಮಾವತಿ	2,922	2,899.54	15,364	200
ಲಿಂಗನಮಕ್ಕಿ	1,819	1,782.80	29,473	1,906.28
ಸೂಪಾ (ಮೀ)	564	537.80	3,0375	2.412
ಮಾಣಿ	594.36	572.89	7,117	-
ತುಂಗಭದ್ರಾ	1,633	1,593.19	21,169	233
ಮಲಪ್ರಭಾ	2079.50	2,053.00	17,208	194
ಘಟಪ್ರಭಾ	2,175	2,110.80	39,515	98
ಭದ್ರಾ	186	148.6	17,885	73
ಆಲಮಟ್ಟಿ (ಮೀ)	519.60	511.59	1,18,193	451
ನಾರಾಯಣಪುರ	492.25ಮೀ	488.72ಮೀ	606	107

* ನೆಲಮಟ್ಟದಿಂದ

20 ಜಿಲ್ಲಾಧಿಕಾರಿಗಳ ಜತೆ ಸಂವಾದ

ಪ್ರವಾಹ ಎದುರಿಸಲು ಸನ್ನದ್ಧರಾಗಿರಿ: ಬಿಎಸ್‌ವೈ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರವಾಹ ಪೀಡಿತ ಗ್ರಾಮಗಳನ್ನು ಗುರುತಿಸಿ, ಪ್ರವಾಹ ಪರಿಸ್ಥಿತಿ ಎದುರಿಸಲು ಸಿದ್ಧತೆ ಮಾಡಿಕೊಳ್ಳಬೇಕು' ಎಂದು ಜಿಲ್ಲಾ-ಧಿಕಾರಿಗಳಿಗೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸೂಚಿಸಿದರು.

ರಾಜ್ಯದ ಉತ್ತರ ಒಳನಾಡು, ಮಲೆನಾಡು ಹಾಗೂ ಕರಾವಳಿ ಪ್ರದೇಶ-ಗಳಲ್ಲಿ ಮುಂಗಾರು ಮಳೆ ಆರಂಭವಾ-ಗುತ್ತಿರುವುದರಿಂದ ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಕುರಿತು ಆ ಭಾಗಗಳ 20 ಜಿಲ್ಲಾಧಿಕಾರಿಗಳ ಜೊತೆ ಮುಖ್ಯಮಂತ್ರಿ ಶನಿವಾರ ವಿಡಿಯೊ ಸಂವಾದ ನಡೆಸಿದರು.

'ರಾಜ್ಯದಲ್ಲಿ 1,710 ಪ್ರವಾಹ ಪೀಡಿತ ಗ್ರಾಮಗಳನ್ನು ಗುರುತಿಸಲಾಗಿದೆ. ಗ್ರಾಮ ಪಂಚಾಯಿತಿ ಮಟ್ಟದ ವಿಪತ್ತು ನಿರ್ವಹಣೆ ಕ್ರಿಯಾ ಯೋಜನೆ ಸಿದ್ಧಪಡಿ-ಸಲಾಗಿದ್ದು, ಅದನ್ನು ಅನುಷ್ಠಾನಗೊಳಿ-ಸಲು ತರಬೇತಿ ನೀಡಲಾಗಿದೆ. ವಿಪತ್ತು ನಿರ್ವಹಣೆಗೆ ಜಿಲ್ಲಾಧಿಕಾರಿಗಳ ಬಳಿ ಸುಮಾರು ₹ 1,000 ಕೋಟಿ ಲಭ್ಯವಿದೆ' ಎಂದು ಯಡಿಯೂರಪ್ಪ ತಿಳಿಸಿದರು.

'ಜಿಲ್ಲೆ ಮತ್ತು ತಾಲ್ಲೂಕು ಮಟ್ಟಗಳಲ್ಲಿ ಸಹಾಯವಾಣಿ ಸ್ಥಾಪನೆ, ದೂರವಾಣಿ ಮತ್ತಿತರ ಸಂಪರ್ಕ ಸಾಧನಗಳನ್ನು ಸುಸ್ಥಿತಿಯಲ್ಲಿ ಇರಿಸಿಕೊಂಡು, ತುರ್ತು ನಿರ್ವಹಣೆಗೆ ಬೇಕಾದ ಸಾಮಗ್ರಿಗಳನ್ನು ಖರೀದಿಸಬೇಕು. ಪ್ರವಾಹ ಸಂದರ್ಭದಲ್ಲಿ ಜನರ ರಕ್ಷಣೆ, ಕಾಳಜಿ ಕೇಂದ್ರಗಳು, ವೈದ್ಯಕೀಯ ಸೌಲಭ್ಯ ಒದಗಿಸಲು ಸಿದ್ಧತೆ ಮಾಡಿಕೊಳ್ಳಬೇಕು. ಪ್ರವಾಹ ಕಾರಣಕ್ಕೆ ಸ್ಥಳಾಂತರಿಸಿದ ಕೆಲವು ಗ್ರಾಮಗಳಿಗೆ ತೆರಳಲು ಹಿಂದೇಟು ಹಾಕುತ್ತಿರುವ ಗ್ರಾಮಸ್ಥರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸ್ಥಳಾಂತರಿಸ-ಬೇಕು' ಎಂದು ಸಲಹೆ ನೀಡಿದರು.

ಸುದ್ದಿಗಾರರ ಜತೆ ಮಾತನಾಡಿದ ಯಡಿಯೂರಪ್ಪ, 'ರಾಜ್ಯ ಮಟ್ಟದಲ್ಲಿ ಕಂದಾಯ ಇಲಾಖೆಯ (ವಿಪತ್ತು ನಿರ್ವಹಣೆ) ಹೆಚ್ಚುವರಿ ಪ್ರಧಾನ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರ ನೇತೃತ್ವದಲ್ಲಿ ಪ್ರತಿ 15 ದಿನಗಳಿಗೊಮ್ಮೆ ಹವಾಮಾನ ಪರಿಸ್ಥಿತಿ ಅವಲೋಕನ ಸಭೆ ನಡೆಸಲಾಗುತ್ತಿದೆ. ರಾಜ್ಯದಲ್ಲಿ ಮೊದಲ ಬಾರಿಗೆ ರಾಜ್ಯ ಪ್ರವಾಹ ನಿರ್ವಹಣಾ ಕ್ರಿಯಾ ಯೋಜನೆ–2021 ಸಿದ್ಧಪಡಿಸಲಾಗಿದೆ' ಎಂದರು.

'ಪ್ರವಾಹ ಪರಿಸ್ಥಿತಿ ನಿರ್ವಹಣೆಗೆ ಕಾರ್ಯಪಡೆ, ಕಾರ್ಯಾಚರಣೆ ತಂಡ, ವಾಟ್ಸ್‌ಆ್ಯಪ್ ಗ್ರೂಪ್ ರಚಿಸಲಾಗಿದೆ. ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದಲ್ಲಿ ಪ್ರವಾಹ ಮುನ್ಸೂಚನೆ ಕೋಶ ಸ್ಥಾಪಿಸಲಾಗಿದೆ. ರಕ್ಷಣಾ ಕಾರ್ಯಾಚರಣೆಗೆ ರಾಯಚೂರು, ಕೊಡಗು, ಬೆಳಗಾವಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರಾಷ್ಟ್ರೀಯ ವಿಪತ್ತು ಸ್ಪಂದನಾ ತಂಡ (ಎನ್‌ಡಿಆರ್‌ಎಫ್) ನಿಯೋಜಿಸಲಾಗಿದೆ. ರಾಜ್ಯ ವಿಪತ್ತು ಸ್ಪಂದನಾ ತಂಡವನ್ನೂ (ಎಸ್‌ಡಿಆರ್‌ಎಫ್) ಸನ್ನದ್ಧಗೊಳಿಸಲಾಗಿದೆ' ಎಂದೂ ವಿವರಿಸಿದರು.

ಬೆಲ್ಲದಗೆ ಕರೆ: ಜೈಲು ಅಧಿಕಾರಿಗಳಿಂದ ಮಾಹಿತಿ ಕೋರಿಕೆ

ಬೆಂಗಳೂರು: ಬಿಜೆಪಿ ಶಾಸಕ ಅರವಿಂದ ಬೆಲ್ಲದ ಮೊಬೈಲ್‌ಗೆ ಜೈಲಿನಿಂದ ಕರೆ ಬಂದಿದ್ದ ಪ್ರಕರಣದ ವಿಚಾರಣೆ ಚುರು-ಕುಗೊಳಿಸಿರುವ ಕಬ್ಬನ್‌ಪಾರ್ಕ್ ಉಪವಿಭಾಗದ ಎಸಿಪಿ ನೇತೃತ್ವದ ತಂಡ, ನಗರದ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಅಧಿಕಾರಿಗಳಿಂದ ಮಾಹಿತಿ ಕೋರಿದ್ದಾರೆ.

'ನನ್ನ ಕರೆ ಕದ್ದಾಲಿಕೆ ಮಾಡಲಾಗುತ್ತಿದೆ. ಜೈಲಿನಿಂದಲೂ ಅಪರಿಚಿತನೊಬ್ಬ ಕರೆ ಮಾಡಿದ್ದ' ಎಂದು ಆರೋಪಿಸಿರುವ ಬೆಲ್ಲದ ಅವರನ್ನು ಎಸಿಪಿ ಯತಿರಾಜ್ ನೇತೃತ್ವದ ತಂಡ ಶನಿವಾರ ಭೇಟಿಯಾಯಿತು. ಪ್ರಕರಣ ಸಂಬಂಧ ವಿಸ್ತೃತ ಹೇಳಿಕೆ ಪಡೆದುಕೊಂಡಿತು. ಕೆಲ ಪುರಾವೆಗಳನ್ನೂ ಸಂಗ್ರಹಿಸಿತು.

ಹೇಳಿಕೆ ಆಧರಿಸಿ ವಿಚಾರಣೆ ಮುಂದುವರಿಸಿರುವ ತಂಡ, ಜೈಲು ಅಧಿಕಾರಿಗಳನ್ನು ಪತ್ರದ ಮೂಲಕ ಸಂಪರ್ಕಿಸಿದೆ.

ವಂಚನೆ ಪ್ರಕರಣದಲ್ಲಿ ಸಿಸಿಬಿ ಪೊಲೀಸರು ಬಂಧಿಸಿರುವ ಆರೋಪಿ ಯುವರಾಜ್ ಅಲಿಯಾಸ್ ಸೇವಾಲಾಲ್ ಸ್ವಾಮೀಜಿ ಸದ್ಯ ಜೈಲಿನಲ್ಲಿದ್ದಾರೆ. ಆತನ ದಿನಚರಿ ಬಗ್ಗೆಯೂ ಮಾಹಿತಿ ನೀಡುವಂತೆ ಎಸಿಪಿ ನೇತೃತ್ವದ ತಂಡ ಕೋರಿರುವುದಾಗಿ ತಿಳಿದುಬಂದಿದೆ.

ಜಲಾಶಯಗಳಲ್ಲಿ ಹೆಚ್ಚಿದ ಒಳಹರಿವು

ಒಂದನೇ ಪುಟದಿಂದ...

9 ಸೇತುವೆಗಳು ಮುಳುಗಡೆ: ಚಿಕ್ಕೋಡಿ ತಾಲ್ಲೂಕಿನ 3, ನಿಪ್ಪಾಣಿ ತಾಲ್ಲೂಕಿನ 6 ಸೇರಿ ಒಂಬತ್ತು ಕೆಳಮಟ್ಟದ ಸೇತುವೆಗಳು ಕೃಷ್ಣಾ, ದೂಧ್‌ಗಂಗಾ ಮತ್ತು ವೇದಗಂಗಾ ನದಿ ನೀರಿನಲ್ಲಿ ಮುಳುಗಡೆಯಾಗಿದ್ದು, ಸಂಪರ್ಕ ಕಡಿತಗೊಂಡಿದೆ. ಪರ್ಯಾಯ ಮಾರ್ಗಗಳಿವೆ. ಆದರೆ, ಮಳೆ ಮುಂದುವರಿದಿರುವುದರಿಂದ ಪ್ರವಾಹ ಭೀತಿ ಎದುರಾಗಿದೆ. ಚಿಕ್ಕೋಡಿಯ ಯಡೂರ ಗ್ರಾಮದಲ್ಲಿ ಎನ್‌ಡಿಆರ್‌ಎಫ್ ತಂಡ ಬೀಡು ಬಿಟ್ಟಿದೆ.

ಗೋಕಾಕ-ಶಿಂಗಳಾಪೂರ ಸಂಪರ್ಕ ಕಲ್ಪಿಸುವ ಬ್ರಿಜ್ ಕಂ ಬ್ಯಾರೇಜ್ ಘಟಪ್ರಭಾ ಪ್ರವಾಹದಲ್ಲಿ ಮುಳುಗಿದೆ. ಜನರು ಮೂರು ಕಿ.ಮೀ ದೂರದ ಲೋಳಸೂರ ಸೇತುವೆ ಮೂಲಕ ಸಂಚ-ರಿಸುತ್ತಿದ್ದಾರೆ.

ಆಲಮಟ್ಟಿಗೆ 10.18 ಟಿಎಂಸಿ ಅಡಿ ನೀರು: ವಿಜಯಪುರ ಜಿಲ್ಲೆಯ ಆಲಮಟ್ಟಿ ಜಲಾಶಯಕ್ಕೆ ಶನಿವಾರ ಒಂದೇ ದಿನ 10.18 ಟಿಎಂಸಿ ಅಡಿ ನೀರು ಹರಿದು ಬಂದಿದ್ದು, ಈ ವರ್ಷದಲ್ಲಿ ಒಂದೇ ದಿನ ಹರಿದು ಬಂದ ಗರಿಷ್ಠ ಒಳಹರಿವು ಇದಾಗಿದೆ.

ಶಿವಮೊಗ್ಗ ಜಿಲ್ಲೆಯ ಭದ್ರಾ ಜಲಾಶಯದ ನೀರಿನ ಮಟ್ಟ 24 ಗಂಟೆಗಳಲ್ಲಿ 2 ಅಡಿ ಏರಿಕೆಯಾಗಿದೆ. ಲಿಂಗನಮಕ್ಕಿ ಜಲಾಶಯಕ್ಕೆ 29 ಸಾವಿರ ಕ್ಯುಸೆಕ್ ನೀರು ಹರಿದು ಬರುತ್ತಿದೆ.

ಮೈಸೂರು ಜಿಲ್ಲೆಯ ಎಚ್.ಡಿ.ಕೋಟೆ ತಾಲ್ಲೂಕಿನ ಬೀಚನಹಳ್ಳಿ ಗ್ರಾಮದಲ್ಲಿರುವ ಕಬಿನಿ ಜಲಾಶಯದ ಕ್ರಸ್ಟ್ ಗೇಟ್ ಮೂಲಕ, ನದಿಗೆ ಶನಿವಾರ 5 ಸಾವಿರ ಕ್ಯುಸೆಕ್ ನೀರು ಬಿಡಲಾಗಿದೆ. ಕೇರಳದ ವಯನಾಡಿನಲ್ಲಿ ಭಾರಿ ಮಳೆ-ಯಾಗುತ್ತಿದ್ದು, ಜಲಾಶಯಕ್ಕೆ 16,200 ಕ್ಯುಸೆಕ್ ನೀರು ಹರಿದು ಬರುತ್ತಿದೆ.

ಅಲ್ಲಿ ಮಳೆ ತೀವ್ರಗೊಂಡರೆ, ರಾತ್ರಿಯ ವೇಳೆಗೆ ಒಳಹರಿವಿನ ಪ್ರಮಾಣವೂ ಮತ್ತಷ್ಟು ಹೆಚ್ಚಲಿದ್ದು, ಹೊರ ಹರಿವನ್ನೂ ಹೆಚ್ಚಿಸಲಾಗುವುದು ಎಂದು ಜಲಾಶಯದ ಕಾರ್ಯನಿರ್ವಾ-ಹಕ ಎಂಜಿನಿಯರ್ ಸುರೇಶ್ ಬಾಬು ತಿಳಿಸಿದರು.

ನಿಂದನೆ, ಬೆದರಿಕೆಗೆ ಅಂಜಿದೊಡೆಂತಯ್ಯ?

ಪ್ರಜಾವಾಣಿ ವಾರ್ತೆ

ಮೈಸೂರು: ಕೋವಿಡ್ ಸಂಕಷ್ಟದ ಸಮಯದಲ್ಲಿ ಮನೆ–ಮನೆಗೆ ತೆರಳಿ ಲಸಿಕೆ ಹಾಕಿಸಿಕೊಳ್ಳುವಂತೆ ತಿಳಿ ಹೇಳುವ ಆಶಾ ಹಾಗೂ ಆರೋಗ್ಯ ಕಾರ್ಯಕರ್ತೆಯರನ್ನು ಬೆದರಿಸುವ, ಅವಾಚ್ಯ ಪದಗಳಿಂದ ನಿಂದಿಸುವ ಹಾಗೂ ಅವರೊಂದಿಗೆ ಜಗಳಕ್ಕೆ ನಿಲ್ಲುವ ಪ್ರಕರಣಗಳು ರಾಜ್ಯದ ವಿವಿಧ ಭಾಗದ ಗ್ರಾಮೀಣ ಪ್ರದೇಶದಲ್ಲಿ ವರದಿಯಾಗುತ್ತಲೇ ಇವೆ.

‘ಊರೂರು ಸುತ್ತಿ ಬರುವ ನಿಮ್ಮಿಂದಲೇ ನಮಗೆ ಸೋಂಕು ಬರುತ್ತದೆ. ನೀವು ನಮ್ಮಲ್ಲಿಗೆ ಬರಲೇಬೇಡಿ’ ಎಂದು ಬುಡಕಟ್ಟು ಜನರು, ಆರೋಗ್ಯ ಕಾರ್ಯಕರ್ತೆಯರ ಮೇಲೆ ಹರಿಹಾಯುತ್ತಿದ್ದಾರೆ.

ಹುಣಸೂರು ತಾಲ್ಲೂಕಿನ ಹೆಬ್ಬಾಳ ಹಾಡಿಯ ಜನರು, ಕಳೆದ ತಿಂಗಳು ಸುಮಾರು 15 ದಿನಗಳ ಕಾಲ ಆಶಾ ಕಾರ್ಯಕರ್ತೆಯರನ್ನು ತಮ್ಮ ಹಾಡಿಯ ಒಳಗೆ ಬಿಟ್ಟುಕೊಂಡಿರಲಿಲ್ಲ. ಕೊನೆಗೆ, ತಹಶೀಲ್ದಾರ್ ನೇತೃತ್ವದಲ್ಲಿ ಅಧಿಕಾರಿಗಳ ತಂಡ ಹಾಡಿ ಪ್ರವೇಶಿಸಿ, ಸಭೆ ನಡೆಸಿತು. ಜನರ ಮನವೊಲಿಕೆಗೆ ಇನ್ನಿಲ್ಲದ ಕಸರತ್ತು ನಡೆಸಿತು. ಆದರೂ, ಇಲ್ಲಿಯ 513 ಮಂದಿಯ ಪೈಕಿ 42 ಮಂದಿಗೆ ಮಾತ್ರ ಲಸಿಕೆ ಪಡೆದಿದ್ದಾರೆ.

ಈ ಕುರಿತು ನೋವು ತೋಡಿಕೊಳ್ಳುವ ಸ್ಥಳೀಯ ಆಶಾ ಕಾರ್ಯಕರ್ತೆ ಮಾದಮ್ಮ, ‘ಎಷ್ಟೇ ಹೇಳಿದರೂ ಇಲ್ಲಿನ ಜನರು ಕೇಳುವುದಿಲ್ಲ. ಜನಸಂಖ್ಯೆ ಕಡಿಮೆ ಮಾಡುವುದಕ್ಕಾಗಿ ಸರ್ಕಾರವೇ ಈ ಲಸಿಕೆ ಹಾಕುತ್ತಿದೆ. ಇದರಿಂದ ಮೂರು ವರ್ಷದಲ್ಲಿ ಜನರು ಸಾಯುತ್ತಾರೆ. ಅದಕ್ಕಾಗಿಯೇ ನೀವು ಬರುತ್ತೀರಿ ಎನ್ನುತ್ತಾರೆ. ಇವರ ನಂಬಿಕೆ ಬದಲಿಸಲಾಗುತ್ತಿಲ್ಲ’ ಎಂದು ಅಸಹಾಯಕತೆ ವ್ಯಕ್ತಪಡಿಸುತ್ತಾರೆ.

ಲಸಿಕೆ ತೆಗೆದುಕೊಳ್ಳುವಂತೆ ಹೇಳಿದರೆ ಹಿಗ್ಗಾಮುಗ್ಗಾ ಬೈಯ್ಯುತ್ತಾರೆ ಎಂದು ಬೇಸರಿಸುವ ಆಶಾ ಕಾರ್ಯಕರ್ತೆಯರು, ಕಮಿಷನ್ ಆಸೆಗೆ ಬರುತ್ತಾರೆ ಎಂಬ ನಿಂದನೆಯಿಂದ ನೊಂದಿದ್ದಾರೆ. ಆದರೂ ಕೋವಿಡ್–19 ನಿಯಂತ್ರಣದ ಕಾರ್ಯದಲ್ಲಿ ತೊಡಗಿದ್ದಾರೆ. ಗ್ರಾಮಸ್ಥರ ಗಲಾಟೆ ಅತಿರೇಕಕ್ಕೆ ಹೋದಾಗ, ಪೊಲೀಸರು ಮಧ್ಯ ಪ್ರವೇಶಿಸಿದ ಸಂದರ್ಭಗಳೂ ಸಾಕಷ್ಟಿವೆ.

‘ನೇರಳಕುಪ್ಪೆಯಿಂದ ಬಿ.ಆರ್.ಕಾವಲು ಹಾಡಿಗೆ 8 ಕಿ.ಮೀ.ವರೆಗೂ ಕಾಲ್ನಡಿಗೆಯಲ್ಲಿ ಹೋಗುತ್ತೇವೆ. ‘ಒಂದು ಲಸಿಕೆ ನೀಡಿದರೆ ನಿಮಗೆ ಇಂತಿಷ್ಟು ಹಣ ಸಿಗುತ್ತದೆ. ಹಾಗಾಗಿ, ನಮಗೆ ಒತ್ತಾಯ ಮಾಡುತ್ತೀರಿ’ ಎಂದು ಜನರು ಹೇಳುತ್ತಾರೆ. ಅವಾಚ್ಯ ಶಬ್ದಗಳಿಂದ ನಿಂದಿಸುತ್ತಾರೆ. ಹೇಗೋ ಒಂದಿಬ್ಬರ ಮನವೊಲಿಸಿದರೆ, ಅವರು ಕೂಡ ‘ನಾವು ಸತ್ತರೆ ನೀವೇ ಹೊಣೆ’ ಎಂದು ಹೇಳಿಯೇ ಹಾಕಿಸಿಕೊಳ್ಳುತ್ತಾರೆ’ ಎಂದು ಆಶಾ ಕಾರ್ಯಕರ್ತೆ ಕಲಾವತಿ ಅಳಲು ತೋಡಿಕೊಳ್ಳುತ್ತಾರೆ.

‘ನೇರಳಕುಪ್ಪೆ ಬಿ.ಹಾಡಿಯಲ್ಲಿ ಇರುವ 200 ಮಂದಿಯಲ್ಲಿ, ಇದುವರೆಗೆ ಒಬ್ಬರೂ ಲಸಿಕೆ ತೆಗೆದುಕೊಂಡಿಲ್ಲ. ಮನವೊಲಿಕೆಗೆ ಎಲ್ಲ ಬಗೆಯ ಕಸರತ್ತು ಮಾಡಿಯಾಯಿತು’ ಎನ್ನುತ್ತಾರೆ ಇಲ್ಲಿನ ಆಶಾ ಕಾರ್ಯಕರ್ತೆ ನೇತ್ರಾವತಿ.

ಹಾಸನ ಜಿಲ್ಲೆಯ ಹೆತ್ತೂರು, ಯಸಳೂರು, ಶುಕ್ರವಾರಸಂತೆ ಸೇರಿದಂತೆ ಹಲವು ಭಾಗಗಳಲ್ಲಿ ಒಂಟಿ ಮನೆಗಳು ಜಾಸ್ತಿ. ಕಾಡಾನೆ ಹಾವಳಿಯೂ ಇದೆ. ಲಾಕ್‌ಡೌನ್‌ನಿಂದಾಗಿ, ಸಾರಿಗೆ ಸಂಪರ್ಕವೂ ಇಲ್ಲ. ಆಶಾ ಕಾರ್ಯಕರ್ತೆಯರು ನಡೆದುಕೊಂಡೇ ಹೋಗಬೇಕಿದ್ದು, ಒಂದೊಂದು ಮನೆಗೆ 1ರಿಂದ 2 ಕಿ.ಮೀ.ವರೆಗೆ ಕ್ರಮಿಸಬೇಕಿದೆ.

ಆರೋಗ್ಯ ಇಲಾಖೆ ಅಧಿಕಾರಿಗಳು ಹಾಡಿಗೆ ತೆರಳಿ ಅಭಿಯಾನ ನಡೆಸಿದ ಬಳಿಕ, ಕೊಡಗು ಜಿಲ್ಲೆಯಲ್ಲಿ ಲಸಿಕೆ ಹಾಕಿಸಿಕೊಳ್ಳಲು ಜನರು ಆಸಕ್ತಿ ವಹಿಸಿದ್ದಾರೆ.

ಮಾಹಿತಿ: ಕೆ.ಎಸ್.ಗಿರೀಶ, ಸೂರ್ಯನಾರಾಯಣ ವಿ, ಎಂ.ಎನ್.ಯೋಗೇಶ್, ಕೆ.ಎಸ್.ಸುನಿಲ್, ಆದಿತ್ಯ ಕೆ.ಎ

ನಿಂದಿಸಿದ ಕುಟುಂಬದ ಪಡಿತರ ಚೀಟಿ ರದ್ದತಿಗೆ ಆದೇಶ

ರಾಯಚೂರು ತಾಲ್ಲೂಕಿನ ದುಗನೂರ ಗ್ರಾಮದ ಯೇಸು ಆನಂದಪ್ಪ ಅವರ ಮನೆಗೆ ಜೂನ್ 17ರಂದು ತೆರಳಿದ್ದ ಅಂಗನವಾಡಿ ಕಾರ್ಯಕರ್ತೆ ರಾಧಾವೇಣಿ ಮತ್ತು ಆಶಾ ಕಾರ್ಯಕರ್ತೆ ನಾಗಲಕ್ಷ್ಮೀ ಅವರು, ಆ ಕುಟುಂಬದ 45 ವರ್ಷದ ಸುಶೀಲಮ್ಮ ಅವರಿಗೆ ಲಸಿಕೆ ಹಾಕಿಸಿಕೊಳ್ಳುವಂತೆ ಮನವಿ ಮಾಡಿದರು. ಆದರೆ, ಲಸಿಕೆ ಹಾಕಿಸಿಕೊಳ್ಳಲು ಸಮ್ಮತಿಸದೇ ಮನೆಯಲ್ಲಿದ್ದವರು ಇವರನ್ನು ನಿಂದಿಸಿದರು ಎಂಬ ಕಾರಣಕ್ಕೆ ಯೇಸು ಆನಂದಪ್ಪ ಕುಟುಂಬದ ಪಡಿತರ ಚೀಟಿ ರದ್ದು ಪಡಿಸಲು ಮತ್ತು ಅವರ ಮನೆಯ ವಿದ್ಯುತ್ ಸಂಪರ್ಕ ಕಡಿತಗೊಳಿಸಲು ಉಪ ವಿಭಾಗಾಧಿಕಾರಿ ಸಂತೋಷ ಕಾಮಗೌಡ ಆದೇಶಿಸಿದ್ದು, ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಲಾಗಿದೆ.

ಈ ಘಟನೆಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯಿತಿ ಸದಸ್ಯರಾದ ಮಲ್ಲೇಶ ಹಾಗೂ ರಂಗಪ್ಪ ಅವರಿಗೂ ನೋಟಿಸ್ ನೀಡಿದ್ದಾರೆ. ‘ಕೋವಿಡ್ ನಿಯಂತ್ರಣದ ಗ್ರಾಮೀಣ ಕಾರ್ಯಪಡೆ ಸದಸ್ಯರಾದ ನೀವು ಕೊರೊನಾ ವಾರಿಯರ್ಸ್‌ಗಳ ನೆರವಿಗೆ ಬಂದಿಲ್ಲ. ಕರ್ತವ್ಯ ನಿರ್ವಹಣೆಯಲ್ಲಿ ಅಸಡ್ಡೆ ತೋರಿದ್ದು, ಗ್ರಾಮ ಪಂಚಾಯಿತಿ ಸದಸ್ಯತ್ವ ರದ್ದತಿಗೆ ಏಕೆ ಕ್ರಮ ಕೈಗೊಳ್ಳಬಾರದು’ ಎಂಬುದಕ್ಕೆ ವಿವರಣೆ ನೀಡುವಂತೆ ಸೂಚಿಸಿದ್ದಾರೆ.

ಬೆಳಗಾವಿ ಜಿಲ್ಲೆಯ ಹಂದಿಗುಂದದಲ್ಲಿ ಶಾಲಾ ಮಕ್ಕಳು ಕೋವಿಡ್ ಲಸಿಕೆಯ ಬಗ್ಗೆ ಜಾಗೃತಿ ಜಾಥಾ ನಡೆಸಿದರು

ಸಮೂಹ ಶಕ್ತಿಗೆ ‘ಲಸಿಕೆ’ ಅಸ್ತ್ರ!

ಸಮುದಾಯದ ಶೇ 18ರಷ್ಟು ಮಂದಿಯಲ್ಲಿ ಮಾತ್ರ ಪ್ರತಿರೋಧ ಶಕ್ತಿ ವೃದ್ಧಿ

• ವರುಣ ಹೆಗಡೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಲಸಿಕೆ ನೀಡುವ ಅಭಿಯಾನ ಪ್ರಾರಂಭವಾಗಿ ಐದು ತಿಂಗಳು ಕಳೆದರೂ 45 ವರ್ಷ ಮೇಲ್ಪಟ್ಟವರಲ್ಲಿ ಎರಡು ಡೋಸ್ ಲಸಿಕೆ ಪೂರೈಸಿದವರ ಸಂಖ್ಯೆ ಶೇ 20ರ ಗಡಿಯನ್ನೂ ದಾಟಿಲ್ಲ. ಇದರಿಂದಾಗಿ ‘ಸಮೂಹ ರೋಗ ನಿರೋಧಕ ಶಕ್ತಿ’ (ಹರ್ಡ್ ಇಮ್ಯುನಿಟಿ) ವೃದ್ಧಿಯಾಗಿಲ್ಲ ಎನ್ನುತ್ತಾರೆ ವೈದ್ಯಕೀಯ ತಜ್ಞರು.

ರಾಜ್ಯದಲ್ಲಿ ಕಳೆದ ಜ.16ರಿಂದಲೇ ಲಸಿಕೆ ವಿತರಣೆ ಅಭಿಯಾನ ಪ್ರಾರಂಭವಾಗಿದೆ. ಅಡ್ಡ ಪರಿಣಾಮದ ಭಯ, ಹಿಂಜರಿಕೆ ಸೇರಿದಂತೆ ವಿವಿಧ ಕಾರಣಗಳಿಂದ ಪ್ರಾರಂಭದ ದಿನಗಳಲ್ಲಿ ಆರೋಗ್ಯ ಕಾರ್ಯಕರ್ತರು, ಮುಂಚೂಣಿ ಕಾರ್ಯಕರ್ತರು ಸೇರಿದಂತೆ ಗುರುತಿಸಲಾದ ಫಲಾನುಭವಿಗಳು ಲಸಿಕೆ ಪಡೆಯಲು ಹಿಂದೇಟು ಹಾಕಿದರು. ಇದರಿಂದಾಗಿ ಸಮೂಹ ರೋಗ ನಿರೋಧಕ ಶಕ್ತಿ ವೃದ್ಧಿಗೆ ಕೂಡ ಹಿನ್ನಡೆಯಾಯಿತು.

ಆರೋಗ್ಯ ಇಲಾಖೆಯ ಮಾಹಿತಿ ಪ್ರಕಾರ, ಈವರೆಗೆ ಲಸಿಕೆ ಪಡೆದವರಲ್ಲಿ ಶೇ 0.017 ಮಂದಿಯಲ್ಲಿ ಮಾತ್ರ ಅಡ್ಡ ಪರಿಣಾಮ ಕಾಣಿಸಿಕೊಂಡಿದೆ. ಅಂದರೆ, ಇಬ್ಬರಲ್ಲಿ ತೀವ್ರ ಸ್ವರೂಪದ ಅಡ್ಡ ಪರಿಣಾಮ ಹಾಗೂ 23 ಮಂದಿಯಲ್ಲಿ ಗಂಭೀರ ಸ್ವರೂಪದ ಅಡ್ಡ ಪರಿಣಾಮಗಳು ಗೋಚರಿಸಿವೆ.

ಶೇ 18ರಷ್ಟು ಪ್ರತಿಕಾಯ: ರಾಜ್ಯದಲ್ಲಿ ಈವರೆಗೆ ಎರಡು ಹಂತದಲ್ಲಿ ಸೆರೋ ಸಮೀಕ್ಷೆಯನ್ನು ನಡೆಸಲಾಗಿದೆ. ಈ ಸಮೀಕ್ಷೆಯು ಎಷ್ಟು ಮಂದಿಯಲ್ಲಿ ಪ್ರತಿಕಾಯ ಅಭಿವೃದ್ಧಿಯಾಗಿದೆ ಎಂದು ತಿಳಿಯಲು ಸಹಕಾರಿ. ಸೆರೋ ಸಮೀಕ್ಷೆ ಹಾಗೂ ವೈದ್ಯಕೀಯ ತಜ್ಞರ ಪ್ರಕಾರ ಸಮುದಾಯದ ಶೇ 18ರಷ್ಟು ಮಂದಿಯಲ್ಲಿ ಮಾತ್ರ ಪ್ರತಿಕಾಯ ಅಭಿವೃದ್ಧಿಯಾಗಿದೆ. ಈ ಪ್ರಮಾಣ ಶೇ 75ರಿಂದ 80ಕ್ಕೆ ಏರಿಕೆಯಾದಾಗ ಸೋಂಕನ್ನು ನಿಯಂತ್ರಿಸಬಹುದು. ಅದು ಲಸಿಕೆಯಿಂದ ಮಾತ್ರ ಸಾಕಾರವಾಗಲಿದೆ.

ಮೊದಲ ಹಂತದ ಸೆರೋ ಸಮೀಕ್ಷೆಯು 2020ರ ಸೆಪ್ಟೆಂಬರ್ 3ರಿಂದ 16ರವರೆಗೆ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ನಡೆದಿತ್ತು. 16,585 ಜನರ ಮಾದರಿಗಳನ್ನು ಪಡೆದು ಪರೀಕ್ಷೆ ಮಾಡಲಾಗಿತ್ತು. ಅದರಲ್ಲಿ ಶೇ 16ರಷ್ಟು ಜನರಲ್ಲಿ ಕೋವಿಡ್ ಪ್ರತಿಕಾಯ ಇರುವುದು ತಿಳಿದುಬಂದಿತ್ತು. ಎರಡನೇ ಹಂತದ ಸಮೀಕ್ಷೆಯನ್ನು ಜನವರಿ ಅಂತ್ಯಕ್ಕೆ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ನಡೆಸಲಾಗಿತ್ತು. ಪ್ರತಿ ಜಿಲ್ಲೆಯಿಂದ ಸುಮಾರು 1,100 ಮಾದರಿಗಳನ್ನು ಸಂಗ್ರಹಿಸಲಾಗಿತ್ತು.

ಎರಡನೇ ಅಲೆ ಬಳಿಕ ಸಮುದಾಯದ ಎಷ್ಟು ಮಂದಿಯಲ್ಲಿ ಪ್ರತಿಕಾಯ ವೃದ್ಧಿಯಾಗಿದೆ ಎಂಬುದನ್ನು ನಿಖರವಾಗಿ ತಿಳಿಯಬೇಕಾದರೆ ಮೂರನೇ ಹಂತದ ಸೆರೋ ಸಮೀಕ್ಷೆ ನಡೆಸಬೇಕು ಎನ್ನುತ್ತಾರೆ ವೈದ್ಯಕೀಯ ತಜ್ಞರು.

‘ಕೋವಿಡ್ ಲಸಿಕೆ ಸುರಕ್ಷಿತ’

‘ಸದ್ಯ ನೀಡಲಾಗುತ್ತಿರುವ ‘ಕೋವಿಶೀಲ್ಡ್’, ‘ಕೋವ್ಯಾಕ್ಸಿನ್ ಹಾಗೂ ‘ಸ್ಪುಟ್ನಿಕ್ ವಿ’ ಲಸಿಕೆಗಳು ಪೂರ್ಣ ಪ್ರಮಾಣದಲ್ಲಿ ಸುರಕ್ಷಿತವಾಗಿವೆ. ಈ ಲಸಿಕೆಗಳಿಗೆ ಹಂದಿ ಅಥವಾ ದನದ ಕೊಬ್ಬಿನ ಅಂಶವನ್ನು ಸೇರಿಸಲಾಗಿದೆ ಎನ್ನುವುದು ಸತ್ಯಕ್ಕೆ ದೂರವಾದ ಸುದ್ದಿ. ಇಂತಹ ವಂದತಿಗಳಿಗೆ ಕಿವಿಗೊಡಬಾರದು. ಸಾಮಾಜಿಕ ಜಾಲತಾಣಗಳಲ್ಲಿ ಈ ರೀತಿಯ ಸಂದೇಶಗಳಿಗೆ ಕಡಿವಾಣ ಹಾಕಬೇಕಿದೆ. ಅಡ್ಡ ಪರಿಣಾಮದ ಬಗ್ಗೆಯೂ ಭಯ ಪಡಬೇಕಾಗಿಲ್ಲ.

‘ಕೋವಿಡ್ ನಿಯಂತ್ರಿಸಬಲ್ಲ ಸಮೂಹ ರೋಗ ನಿರೋಧಕ ಶಕ್ತಿ ಇನ್ನೂ ವೃದ್ಧಿಯಾಗಿಲ್ಲ. ಹಲವರು ಈಗಾಗಲೇ ಸೋಂಕಿತರಾಗಿ ಚೇತರಿಸಿಕೊಂಡರೂ ಅವರ ದೇಹದಲ್ಲಿ ವೃದ್ಧಿಯಾಗುವ ಪ್ರತಿಕಾಯಗಳು ಗರಿಷ್ಠ ಆರು ತಿಂಗಳು ಮಾತ್ರ ಇರಲಿವೆ. ಲಸಿಕೆಯ ಮೂಲಕ ವೃದ್ಧಿಯಾಗುವ ರೋಗ ನಿರೋಧಕ ಶಕ್ತಿಯು ನೈಸರ್ಗಿಕ ರೋಗ ನಿರೋಧಕ ಶಕ್ತಿಗಿಂತ ಹೆಚ್ಚು ಕಾಲ ಇರುತ್ತದೆ.

‘ಲಸಿಕೆ ಪಡೆದ ಬಳಿಕ ಸೋಂಕಿತರಾದರೂ ಅದರ ತೀವ್ರತೆ ಕಡಿಮೆ ಇರಲಿದೆ. ಹಾಗಾಗಿ, ಮೂರನೇ ಅಲೆ ಕಾಣಿಸಿಕೊಳ್ಳುವ ಮುನ್ನ ಈಗಾಗಲೇ ಗುರುತಿಸಲಾದ ಎಲ್ಲ ಫಲಾನುಭವಿಗಳೂ ಲಸಿಕೆ ಪಡೆದುಕೊಳ್ಳಬೇಕು’



ಡಾ. ವಿ. ರವಿ,
ವೈರಾಣು ತಜ್ಞ ಹಾಗೂ ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಸದಸ್ಯ

ಕೋವಿಡ್ ಲಸಿಕೆ: ಏಕೆ ಹಿಂಜರಿಕೆ?

ಒಂದನೇ ಪುಟದಿಂದ...

ಲಸಿಕೆಯಲ್ಲಿ ಧಾರ್ಮಿಕ ಭಾವನೆಗೆ ಪೆಟ್ಟು ಬೀಳುವಂಥ ಅಂಶಗಳಿವೆ ಎನ್ನುವ ಕಾರಣಕ್ಕೂ ಕೆಲವು ಧರ್ಮದವರು ಲಸಿಕೆ ಹಾಕಿಸಿಕೊಳ್ಳುವುದಕ್ಕೆ ಹಿಂದೇಟು ಹಾಕುತ್ತಿದ್ದಾರೆ ಎಂಬ ವರದಿಗಳು ಪ್ರಕಟವಾಗಿದ್ದವು.

‘ಲಸಿಕೆ ಪಡೆದುಕೊಂಡರೆ ಹೆಣ್ಣು ಮಕ್ಕಳಲ್ಲಿ ತಲೆಕೂದಲು ಉದುರಲು ಶುರುವಾಗುತ್ತದೆ ಎನ್ನುವ ಕಾರಣಕ್ಕೆ ಹಲವು ಮಹಿಳೆಯರು ಲಸಿಕೆ ಹಾಕಿಸಿಕೊಳ್ಳಲು ಹಿಂದೇಟು ಹಾಕುತ್ತಿದ್ದಾರೆ. ಲಸಿಕೆ ಹಾಕಿಸಿಕೊಳ್ಳುವುದರಿಂದಲೇ ಕಾಯಿಲೆ ಜಾಸ್ತಿ ಆಗುತ್ತದೆ ಎಂದು ಕೆಲವರು ಹೇಳುತ್ತಿದ್ದಾರೆ. ಇದು ಬರಿ ಕೆಮ್ಮು–ನೆಗಡಿ ಅಷ್ಟೇ, ನೀವು ಸುಮ್ಮನೆ ಪಾಸಿಟಿವ್ ವರದಿ ನೀಡುತ್ತೀರಿ, ಇದರಿಂದ ನಿಮಗೆ ಕಮಿಷನ್ ಸಿಗುತ್ತದೆ. ನಾವು ಮನೆಯಲ್ಲಿಯೇ ಕಷಾಯ ಕುಡಿಯುತ್ತೇವೆ, ನಮಗೆ ಲಸಿಕೆ ಬೇಡ ಎನ್ನುತ್ತಾರೆ ಹಲವರು’ ಎಂದು ಸಮಸ್ಯೆಯನ್ನು ಬಿಚ್ಚಿಟ್ಟವರು ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ, ತುಮರಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಕೃಪಾ ಎಚ್.ವಿ.

ಸರ್ಕಾರವು ಹಣ, ಔಷಧಿ ಕೊಟ್ಟರೆ ಮಾತ್ರ ಲಸಿಕೆ ಹಾಕಿಸಿಕೊಳ್ಳುವುದಾಗಿ ಬೀದರ್ ಜಿಲ್ಲೆಯ ಔರಾದ್ ಮತ್ತು ಕಮಲನಗರ ತಾಲ್ಲೂಕಿನ ಕೆಲ ತಾಂಡಾಗಳ ಜನರು ಹೇಳುತ್ತಾರೆ. ಲಸಿಕೆ ಹಾಕಿಸುವುದರಿಂದ ಸರ್ಕಾರಕ್ಕೆ ಲಾಭವಿದೆ ಎಂಬ ಭಾವನೆ ಅವರಲ್ಲಿದೆ.

‘ನಾವು ಹೊಲದಲ್ಲಿ ಕೆಲಸ ಮಾಡುವವರು. ನಮ್ಮ ದೇಹದಲ್ಲಿ ರೋಗನಿರೋಧಕ ಶಕ್ತಿ ಹೆಚ್ಚಾಗಿಯೇ ಇದೆ. ನಮಗೆ ಲಸಿಕೆಯ ಅಗತ್ಯವಿಲ್ಲ. ನಾವು ನಗರ ಪ್ರದೇಶಗಳಿಗೆ ಹೋಗುವುದೇ ಇಲ್ಲವಾದ್ದರಿಂದ ಕೊರೊನಾ ಸೋಂಕು ನಮಗೆ ಬರುವುದೂ ಇಲ್ಲ’ ಎನ್ನುತ್ತಾರೆ ರಾಯಚೂರು ಜಿಲ್ಲೆಯ ಕೊತ್ತದೊಡ್ಡಿ ಗ್ರಾಮದ ಹನುಮಂತರಾಯ.

‘ಲಸಿಕೆ ಪಡೆದರೂ ಅದರ ಪ್ರಭಾವ 6–8 ತಿಂಗಳು ಇರುತ್ತದಷ್ಟೆ. ನಮ್ಮ ಆಹಾರ ಪದ್ಧತಿ ಚೆನ್ನಾಗಿಯೇ ಇದೆ. ಮನೆಯಲ್ಲಿಯೇ ತುಳಸಿ ಕಷಾಯ ಮಾಡಿಕೊಳ್ಳುತ್ತೇವೆ’ ಎನ್ನುತ್ತಾರೆ ವಿಜಯಪುರ ಜಿಲ್ಲೆಯ ಹಂಚಿನಾಳದ ಗ್ರಾಮಸ್ಥರೊಬ್ಬರು.

‘ಕೆಲವು ಗ್ರಾಮಗಳಲ್ಲಿ ಲಸಿಕೆ ಪಡೆದ ಕೆಲವು ಹಿರಿಯರು ತೀರಿಕೊಂಡರು. ಲಸಿಕೆಯಿಂದಲೇ ತೀರಿಕೊಂಡಿದ್ದು ಎನ್ನುವುದಕ್ಕೆ ವೈದ್ಯಕೀಯ ಸಾಕ್ಷ್ಯಗಳಿಲ್ಲ. ಆದರೆ, ಈ ಘಟನೆಗಳು ಜನರನ್ನು ಗಾಢವಾಗಿ ಆವರಿಸಿದೆ’ ಎನ್ನುತ್ತಾರೆ ವಿಜಯಪುರ ಜಿಲ್ಲೆಯ ಬಸವನಬಾಗೇವಾಡಿ ತಾಲ್ಲೂಕಿನ ಮನಗೂಳಿಯ ಮಲ್ಲು ಬಿರಾದಾರ.

ಬೇರೆ ಸಮಸ್ಯೆಗಳೂ ಇವೆ: ಈಗ ರೈತರಿಗೆ ಮುಂಗಾರು ಕೆಲಸಗಳ ಕಾಲ. ಬೆಳಿಗ್ಗೆಯೇ ಎದ್ದು ರೈತರು ಹೊಲಗಳಿಗೆ ಹೋಗುವುದರಿಂದ ಲಸಿಕೆ ಕೇಂದ್ರಗಳಿಗೆ ಬರಲು ಸಾಧ್ಯವಾಗುವುದಿಲ್ಲ. ಮಲೆನಾಡು ಭಾಗದ ಗುಡ್ಡಗಾಡು ಪ್ರದೇಶಗಳಲ್ಲಿ ಲಸಿಕಾ ಕೇಂದ್ರಗಳು ಹಲವು ಕಿ.ಮೀ ದೂರ ಇರುತ್ತವೆ. ಸಾರಿಗೆ ವ್ಯವಸ್ಥೆ ಇಲ್ಲದವರು ಲಸಿಕಾ ಕೇಂದ್ರ ತಲುಪುವುದೇ ಸಾಹಸ. ‘ಲಸಿಕೆ ಪಡೆಯಲು ಆನ್‌ಲೈನ್ ಮೂಲಕ ನೋಂದಣಿ ಮಾಡಿಕೊಳ್ಳಬೇಕು. ಇದು ಕುಗ್ರಾಮಗಳ ಜನರಿಗೆ ಕಿರಿಕಿರಿಯಾಗಿ ಪರಿಣಮಿಸಿದೆ. ಗ್ರಾಮೀಣ ಭಾಗದಲ್ಲಿ ನೆಟ್‌ವರ್ಕ್ ಸಮಸ್ಯೆ ಇದೆ. ಜೊತೆಗೆ ಹಲವರಲ್ಲಿ ಸ್ಮಾರ್ಟ್ ಫೋನ್‌ಗಳಿಲ್ಲ; ಹಲವರಿಗೆ ಸ್ಮಾರ್ಟ್ ಫೋನ್ ಬಳಕೆಯ ಬಗ್ಗೆ ಮಾಹಿತಿಯೂ ಇಲ್ಲ. ಇದು ಸಹ ಸಮಸ್ಯೆಯಾಗಿದೆ’ ಎಂದರು ಡಾ. ಕೃಪಾ.

ಜಾಗೃತಿ ಕಾರ್ಯಕ್ರಮ ಎಲ್ಲೆಡೆ ಒಂದೇ ರೀತಿ ಆಗುತ್ತಿಲ್ಲ ಎಂದೂ ಹೇಳಲಾಗುತ್ತಿದೆ. ‘ಕೋವಿಡ್ ಬಂದಾಗಿನಿಂದಲೂ ಆರೋಗ್ಯ ಸಿಬ್ಬಂದಿ, ಆಶಾ ಕಾರ್ಯಕರ್ತೆ ಯಾರೂ ನಮ್ಮ ಮನೆಗೆ ಬಂದಿಲ್ಲ’ ಎನ್ನುತ್ತಾರೆ ಶಿವಮೊಗ್ಗದ ಸಾಗರ ತಾಲ್ಲೂಕಿನ ಕುಗ್ವೆ ಗ್ರಾಮದ ನಿವಾಸಿಯೊಬ್ಬರು.

ಸಚಿವರು ಬರುವ ಮುನ್ನವೇ ಕಾಲ್ಕಿತ್ತ ಸೋಲಿಗರು!

ಒಂದನೇ ಪುಟದಿಂದ...

ಕೊನೆಗೆ, ‘ಜಿಲ್ಲಾ ಉಸ್ತುವಾರಿ ಸಚಿವರ ಸಮ್ಮುಖದಲ್ಲೇ ಲಸಿಕೆ ಅಭಿಯಾನ ನಡೆಸೋಣ’ ಎಂಬ ಜಿಲ್ಲಾಡಳಿತದ ಪ್ರಯತ್ನವೂ ಯಶ ಕಾಣದೇ ಹೋಯಿತು.

ಸ್ವತಃ ಸಚಿವರು, ಶಾಸಕರು ಹಲವು ಮನೆಗಳಿಗೆ ಭೇಟಿ ನೀಡಿ ಮನವೊಲಿಸಲು ಯತ್ನಿಸಿದರು. ಸ್ಥಳೀಯ ನಿವಾಸಿಯೊಬ್ಬರು, ‘ಗ್ರಾಮ ಪಂಚಾಯಿತಿ ಅಧ್ಯಕ್ಷೆ ರಂಗಮ್ಮ ಮತ್ತು ಸದಸ್ಯರು ಇನ್ನೂ ಲಸಿಕೆ ಪಡೆದಿಲ್ಲ. ಇವರು ನಮ್ಮನ್ನು ಮಾತ್ರ ಚುಚ್ಚುಮದ್ದು ಪಡೆಯುವಂತೆ ಒತ್ತಾಯಿಸುತ್ತಾರೆ. ಈಗಾಗಲೇ, ಲಸಿಕೆ ಪಡೆದವರೊಬ್ಬರಿಗೆ ಕಣ್ಣು ಮಂಜಾಗಿದೆ. ನಮಗ ಇಂಥ ತೊಂದರೆ ಕಾಡಬಹುದು. ಹಾಗಾಗಿ ನಾವು ಲಸಿಕೆ ಪಡೆದಿಲ್ಲ’ ಎಂದು ನೇರವಾಗಿಯೇ ಸಚಿವರಿಗೆ ತಿಳಿಸಿದರು.

140 ರಷ್ಟು ಜನರು ಇರುವ ಪೋಡಿಯಲ್ಲಿ, ಶುಕ್ರವಾರ ಏಳು ಮಂದಿ ಮಾತ್ರ ಲಸಿಕೆ ಹಾಕಿಸಿಕೊಂಡರು.

ಜಿಲ್ಲೆಯಲ್ಲಿನ 146 ಪೋಡಿಗಳ ಪೈಕಿ, ಆರು ಪೋಡಿಗಳಲ್ಲಿ ಕೋವಿಡ್ ಪ್ರಕರಣಗಳು ವರದಿಯಾಗಿವೆ. ಗುಂಡ್ಲುಪೇಟೆ ಹಾಗೂ ಹನೂರು ತಾಲ್ಲೂಕಿನಲ್ಲಿ ತಲಾ ಒಬ್ಬರು ಕೋವಿಡ್‌ನಿಂದ ಮೃತಪಟ್ಟಿದ್ದಾರೆ.

‘ಅರಿವು ಮೂಡಿಸುವುದೇ ಸವಾಲಾಗಿತ್ತು’

ಕಲಬುರ್ಗಿ/ಬೀದರ್: ಲಸಿಕೆಗಳ ಬಗ್ಗೆ ಜನರ ಅಪನಂಬಿಕೆ ಇಂದು ನಿನ್ನೆಯದಲ್ಲ. ಇಂಥ ಅಭಿಯಾನಗಳಿಗೆ ಆರಂಭದ ದಿನಗಳಲ್ಲಿ ಜನರು ಹಿಂಜರಿಕೆ ತೋರುವುದು ಸಾಮಾನ್ಯ. ಹಿಂದೆಲ್ಲ ಧಾರ್ಮಿಕ ಕಾರಣ, ಮೌಢ್ಯ ಅಥವಾ ಭಯದಿಂದ ಜನರು ಹಿಂಜರಿಯುತ್ತಿದ್ದರೆ, ಈಗ ತಪ್ಪು ಮಾಹಿತಿಗಳು ಜನರನ್ನು ಹಿಂಜರಿಯುವಂತೆ ಮಾಡುತ್ತಿವೆ.

20 ವರ್ಷದ ಹಿಂದೆ ಜನರಿಗೆ ಲಸಿಕೆ ಹಾಕಿಸುವುದಿರಲಿ, ಅವರನ್ನು ಸಂಪರ್ಕಿಸಿ ಅರಿವು ಮೂಡಿಸುವುದೇ ಸವಾಲಾಗಿತ್ತು. ಪೋಲಿಯೊ, ಕ್ಷಯ ಮತ್ತು ದಡಾರ ಹರಡುವಿಕೆ ನಿಯಂತ್ರಿಸಲು ನಗರ, ಪಟ್ಟಣ ಮತ್ತು ಗ್ರಾಮೀಣ ಪ್ರದೇಶದಲ್ಲಿ ಮನೆಮನೆಗೆ ತೆರಳಿ ಲಸಿಕೆ ಹಾಕಬೇಕಿತ್ತು.

‘1985ರ ಅವಧಿಯಲ್ಲಿ ‘ಬರ್ಡ್’ ಎಂಬ ಸ್ವಯಂ–ಸೇವಾ ಸಂಸ್ಥೆಯು ಬೀದರ್ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿತ್ತು. ಸಂಸ್ಥೆಯ ಪ್ರತಿನಿಧಿಗಳು ಜಿಲ್ಲೆಯಾದ್ಯಂತ ಸಂಚರಿಸಿ ತಳ ಸಮುದಾಯದ ಮತ್ತು ಮೌಢ್ಯಾಚರಣೆ ಮಾಡುವ ಸಮುದಾಯದವರನ್ನು ಭೇಟಿಯಾಗುತ್ತಿದ್ದರು. ಆರೋಗ್ಯ ರಕ್ಷಣೆಗೆ ಲಸಿಕೆ ಹಾಕಿಸಿಕೊಳ್ಳುವುದು ಅಗತ್ಯವೆಂದು ಜಾಗೃತಿ ಮೂಡಿಸುತ್ತಿದ್ದರು. ನಂತರ ಆರೋಗ್ಯ ಇಲಾಖೆಯ ಸಿಬ್ಬಂದಿ ಆಯಾ ಗ್ರಾಮಗಳಿಗೆ ತೆರಳಿ, ಜನರಿಗೆ ಲಸಿಕೆ ಹಾಕುತ್ತಿದ್ದರು’ ಎಂದು ಬೀದರ್‌ನ ಆರೋಗ್ಯ ಮೇಲ್ವಿಚಾರಕ ಮಲ್ಲಿಕಾರ್ಜುನ ಸದಾಶಿವ ಹೇಳಿದರು.

‘25 ವರ್ಷಗಳ ಹಿಂದೆ ಆರೋಗ್ಯ ಸಹಾಯಕನಾಗಿದ್ದ ನಾನು ಗ್ರಾಮಸ್ಥರೊಂದಿಗೆ ಸಂವಾದ ನಡೆಸಿ, ಅವರಿಗೆ ತಿಳಿ ಹೇಳುತ್ತಿದ್ದೆ. ಗ್ರಾಮಸ್ಥರು ಕೇಳುತ್ತಿದ್ದ ಆತಂಕ ಮತ್ತು ಭೀತಿಯ ಪ್ರಶ್ನೆಗಳಿಗೆ ಸಮಾಧಾನದಿಂದ ಉತ್ತರಿಸಿ, ಲಸಿಕೆ ಹಾಕಿಸಬೇಕಾಗುತ್ತಿತ್ತು’ ಎಂದು ಅವರು ಸ್ಮರಿಸಿದರು.

‘15 ವರ್ಷಗಳ ಹಿಂದೆ ಆಸ್ಪತ್ರೆಗಳಲ್ಲಿ ಲಸಿಕೆ ಹಾಕುವ ಪದ್ಧತಿ ಸಂಪೂರ್ಣವಾಗಿ ಅನುಷ್ಠಾನಕ್ಕೆ ಬಂದಿರಲಿಲ್ಲ. ವೈದ್ಯರ ಮಾರ್ಗದರ್ಶನದಲ್ಲಿ ಗ್ರಾಮಗಳಿಗೆ ತೆರಳಿ ಕುಟುಂಬ ಸದಸ್ಯರ ಸಮೀಕ್ಷೆ ನಡೆಸಿ, ಮಕ್ಕಳಿಗೆ ಪೋಲಿಯೊ ಲಸಿಕೆ ಹಾಕುತ್ತಿದ್ದೆವು. ತಿಂಗಳ ಮೊದಲ ಅಥವಾ ಕೊನೆಯ ವಾರ ನಿಗದಿಪಡಿಸಿಕೊಂಡು ಹೋಗುತ್ತಿದ್ದೆವು’ ಎಂದು ಕಲಬುರ್ಗಿ ಜಿಲ್ಲೆಯ ಸೇಡಂನ ಆರೋಗ್ಯ ಸಹಾಯಕಿ ಶಶಿಕಲಾ ಹೇಳಿದರು.

‘ಪೋಲಿಯೊ ಲಸಿಕೆ ಸಕಾಲಕ್ಕೆ ಹಾಕಿಸಿಕೊಳ್ಳದಿದ್ದರೆ, ಅಂಗವೈಕಲ್ಯ ಸಮಸ್ಯೆ ಕಾಡುತ್ತದೆ ಎಂಬುದನ್ನು ತಿಳಿ ಹೇಳುವುದರ ಜೊತೆಗೆ ಆರೋಗ್ಯ ರಕ್ಷಿಸಿಕೊಳ್ಳುವ ಕುರಿತು ತಿಳಿ ಹೇಳಬೇಕಿತ್ತು. ನಂತರ ಪೋಷಕರು ಮಕ್ಕಳಿಗೆ ನಿರಾತಂಕವಾಗಿ ಲಸಿಕೆ ಹಾಕಿಸುತ್ತಿದ್ದರು’ ಎಂದರು.

ವರ್ಷಗಳು ಕಳೆದಂತೆ ಆಯಾ ಗ್ರಾಮೀಣ ಪ್ರದೇಶಗಳಲ್ಲಿ ಜಾಗೃತಿ ಶಿಬಿರಗಳನ್ನು ಆಯೋಜಿಸಿ, ಅಂಗನವಾಡಿ ಕಾರ್ಯಕರ್ತೆಯರ ನೆರವು ಪಡೆದು ಆಸ್ಪತ್ರೆಗಳಲ್ಲಿ ಲಸಿಕೆ ಹಾಕುವ ಪ್ರಕ್ರಿಯೆ ನಡೆಯಿತು. ಶಾಲಾ ಶಿಕ್ಷಕರು ಮತ್ತು ಮಕ್ಕಳು ನಗರ, ಪಟ್ಟಣ ಮತ್ತು ಗ್ರಾಮಗಳಲ್ಲಿ ಮೆರವಣಿಗೆ ನಡೆಸಿ, ಲಸಿಕೆ ಹಾಕಿಸಿಕೊಳ್ಳುವಂತೆ ಜನರಲ್ಲಿ ಜಾಗೃತಿ ಮೂಡಿಸುವಂತಹ ಹಲವು ಕಾರ್ಯಕ್ರಮಗಳು ನಡೆದವು.

ಪೂರಕ ಮಾಹಿತಿ:
ರಾಹುಲ ಬೆಳಗಲಿ, ಚಂದ್ರಕಾಂತ ಮಸಾನಿ

ಪ್ರಸಾದ ಸಿಕ್ಕರಷ್ಟೇ ಲಸಿಕೆ

ಚಿತ್ರದುರ್ಗ: ಚಳ್ಳಕೆರೆ ತಾಲ್ಲೂಕಿನ ಖಂಡನೇಹಳ್ಳಿ ಗೊಲ್ಲರಹಟ್ಟಿ ಜನರು ಕೋವಿಡ್ ಲಸಿಕೆ ಹಾಕಿಸಿಕೊಳ್ಳಲು ದೇವರ ಅಪ್ಪಣೆ ಪಡೆಯುತ್ತಾರೆ. ಸಾಣಿಕೆರೆಯ ಕೆರೆ ಅಂಗಳದಲ್ಲಿ ದೇವರಿಗೆ ಹರಕೆ ಕಟ್ಟಿಕೊಂಡು ಕೂರುತ್ತಾರೆ. ದೇವರು ಬಲ ಭಾಗಕ್ಕೆ ಹೂ ಪ್ರಸಾದ ನೀಡಿದರೆ ಮಾತ್ರ ಲಸಿಕೆ ಪಡೆಯುತ್ತಾರೆ.

ಪ್ರತಿ ಸೋಮವಾರ ಇಲ್ಲಿ ದೇವರ ಹರಕೆ ಪೂಜೆ ನಡೆಯುತ್ತದೆ. ಸುತ್ತಲಿನ ಗ್ರಾಮಸ್ಥರು ಇಲ್ಲಿಗೆ ಬರುತ್ತಾರೆ. ನಿರೀಕ್ಷೆಯಂತೆ ಪ್ರಸಾದ ಸಿಕ್ಕರಷ್ಟೇ ಲಸಿಕೆ ಹಾಕಿಸಿಕೊಳ್ಳುತ್ತಾರೆ.

‘ಲಸಿಕೆ ಹಾಕಿಸಿಕೊಳ್ಳಲು ದೇವರು ಇನ್ನೂ ಹೇಳಿಕೆ ನೀಡಿಲ್ಲ. ಮುಂದಿನ ಅಮಾವಾಸ್ಯೆಗೆ ಬರುವಂತೆ ಪೂಜಾರಿ ಸೂಚಿಸಿದ್ದಾರೆ. ದೇವರು ಬಲಗಡೆ ಹೂ ನೀಡಿದರಷ್ಟೇ ಲಸಿಕೆ ಹಾಕಿಸಿಕೊಳ್ಳುತ್ತೇವೆ...’ ಎನ್ನುತ್ತಾರೆ ಖಂಡನೇಹಳ್ಳಿ ಗೊಲ್ಲರಹಟ್ಟಿ ಶಾಂತಮ್ಮ. ಚಳ್ಳಕೆರೆ ಹಾಗೂ ಮೊಳಕಾಲ್ಮುರು ತಾಲ್ಲೂಕಿನ ಹಲವೆಡೆ ಇಂತಹ ಮೂಢನಂಬಿಕೆ ಬಲವಾಗಿವೆ.

ಗುಂಡಣ್ಣ

25 ವರ್ಷಗಳ ಹಿಂದೆ — ಗುರುವಾರ, 20-6-1996

• **ಕಾಶ್ಮೀರ: ಚರ್ಚೆಗೆ ಬೆನಜೀರ್ ಒಲವು**

ಇಸ್ಲಾಮಾಬಾದ್, ಜೂನ್ 19 (ಪಿಟಿಐ)– ಪಾಕಿಸ್ತಾನವು ಇಂದು ಮತ್ತೆ ತನ್ನ ನಿಲುವನ್ನು ಬದಲಿಸಿದೆ. ‘ಕಾಶ್ಮೀರ ಸಮಸ್ಯೆ ಕುರಿತು ಭಾರತ ಮತ್ತು ಪಾಕಿಸ್ತಾನದ ನಡುವೆ ದ್ವಿಪಕ್ಷೀಯ ಮಾತುಕತೆ ನಡೆದರೆ ಶೀಘ್ರ ಪರಿಹಾರ ಕಂಡು ಹಿಡಿಯಬಹುದು’ ಎಂದು ಪಾಕಿಸ್ತಾನದ ಪ್ರಧಾನಿ ಬೆನಜೀರ್ ಭುಟ್ಟೊ ಅವರು ಇಂದು ಹೇಳಿದ್ದಾರೆ.

‘ಭಾರತ–ಪಾಕಿಸ್ತಾನ ನಡುವೆ ಹಿಂದೆ ನಡೆದ ಮಾತುಕತೆಗಳು ವಿಫಲವಾಗಿವೆ. ಆದರೆ ನಾವು ಒಳ್ಳೆಯ ಉದ್ದೇಶ ಹೊಂದಿದ್ದೇವೆ. ಭಾರತದ ಹೊಸ ಸರ್ಕಾರವೂ ತನ್ನ ಇತ್ತೀಚಿನ ಪತ್ರದಲ್ಲಿ ಉತ್ತಮ ಪ್ರತಿಕ್ರಿಯೆ ತೋರಿದೆ’ ಎಂದೂ ಹೇಳಿದ್ದಾರೆ.

50 ವರ್ಷಗಳ ಹಿಂದೆ — ಭಾನುವಾರ, 20-6-1971

• **ಆಗಸ್ಟ್ 30ರಿಂದ ತಮಿಳುನಾಡಿನಲ್ಲಿ ಪಾನನಿರೋಧ ರದ್ದು**

ಚೆನ್ನೈ, ಜೂನ್ 19–ತಮಿಳುನಾಡಿನಾದ್ಯಂತ ಆಗಸ್ಟ್ 30ರಿಂದ ಪಾನ ನಿರೋಧ ರದ್ದಾಗುವುದು. ಇನ್ನು ರಾಷ್ಟ್ರದಲ್ಲಿ ಪಾನ ನಿರೋಧ ಜಾರಿಯಲ್ಲಿರುವ ಏಕೈಕ ರಾಜ್ಯವೆಂದರೆ ಗುಜರಾತ್.

ತಮಿಳುನಾಡು ವಿಧಾನಸಭೆಯಲ್ಲಿ ಇಂದು ಈ ವಿಷಯವನ್ನು ತಿಳಿಸಿದ ಮುಖ್ಯಮಂತ್ರಿ ಶ್ರೀ ಕರುಣಾನಿಧಿ ಅವರು, ‘ಪಾನ ನಿರೋಧವನ್ನು ದೇಶದಾದ್ಯಂತ ರಾಷ್ಟ್ರೀಯ ನೀತಿಯಾಗಿ ಕೇಂದ್ರ ಸರ್ಕಾರ ಜಾರಿಗೆ ತರುವವರೆಗೆ ಅದು ರಾಜ್ಯದಲ್ಲಿ ರದ್ದಾಗಿರುವುದು. ಪಾನ ನಿರೋಧ ಜಾರಿಯಿಂದ ಆದಾಯದಲ್ಲಿ ಬಹಳ ನಷ್ಟ ಉಂಟಾಗಿದೆ’ ಎಂದೂ ಹೇಳಿದರು.

ದಿನ ಭವಿಷ್ಯ

ಭಾನುವಾರ ಜೂನ್ 20, 2021

ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ಜ್ಯೇಷ್ಠ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಮೃಗಶಿರ ದಶಮೀ ಗಂ. 15-39 (ಹ. 12-17) ಭಾನುವಾರ ನಿತ್ಯ ನಕ್ಷತ್ರ ಚಿತ್ತೆ ಗಂ. 23-53 (ಹ. 3-35) ಪರಿಘ ನಾಮ ಯೋಗ ಗಂ. 31-666 ಗರಜ ಕರಣ ಗಂ. 15-39 ವಿಷ ಗಂ. 37-0 ಅಮೃತ ಗಂ. 8-24 ಪುನರಮೃತ ಗಂ. 59-31 : ರಾಹುಕಾಲ: ಮ. ಗಂ. 4-30 ರಿಂದ 6-00 ಗುಳಿಕ ಮ. ಕಾಲ ಗಂ 3-00ರಿಂದ 4-30 ಯಮಗಂಡ ಕಾಲ ಮ. ಗಂ 12-00 ರಿಂದ 1-30 ಸೂರ್ಯೋದಯ: 5-58 ಸೂರ್ಯಾಸ್ತ: 6-44 ಅದೃಷ್ಟ ಸಂಖ್ಯೆ 3

ಮೇಷ: ಪ್ರತಿಭೆಗೆ ತಕ್ಕ ಅವಕಾಶಗಳು ಒದಗಿಬರಲಿವೆ. ಹೊಸ ಕೆಲಸಗಳನ್ನು ಕೈಗೆತ್ತಿಕೊಳ್ಳುವ ಸಲುವಾಗಿ ಮನೆಯವರೊಂದಿಗೆ ಚರ್ಚಿಸಲಿದ್ದೀರಿ. ಕೃಷಿ ಕಾರ್ಯದಲ್ಲಿ ಪ್ರಗತಿ. ಗೃಹ ಕಲಹ ತಡೆಯಲು ಗ್ರಹಿಣಿಯರು ತಾಳ್ಮೆ ವಹಿಸಿ.

ವೃಷಭ: ಮುಂದಾಲೋಚನೆಯಿಂದಾಗಿ ಉದ್ಯೋಗ ಕ್ಷೇತ್ರದಲ್ಲಿನ ಸಮಸ್ಯೆಗಳಿಗೆ ಪರಿಹಾರ ಕಂಡುಬರುವುದು. ಸಂತೃಪ್ತಿಯ ದಾಂಪತ್ಯ ಜೀವನ ನಿಮ್ಮದಾಗುವುದು. ಮಂಗಳ ಕಾರ್ಯಕ್ರಮದಲ್ಲಿ ಭಾಗಿ.

ಮಿಥುನ: ಸಹೋದರರ ನಡುವೆ ಭಿನ್ನಾಭಿಪ್ರಾಯ ಉಂಟಾಗುವ ಸಾಧ್ಯತೆ. ಹಿರಿಯರ ಮಧ್ಯಸ್ಥಿಕೆಯಿಂದ ಸಮಸ್ಯೆಗಳು ಪರಿಹಾರ. ಹೊಸ ವಸ್ತು ಖರೀದಿಯ ಬಗ್ಗೆ ಎಚ್ಚರದಿಂದಿರಿ. ಅನಾರೋಗ್ಯದ ಸಮಸ್ಯೆ ತಲೆದೋರಬಹುದು.

ಕರ್ಕಾಟಕ: ಅಧಿಕಾರಿ ವರ್ಗದವರಿಂದ ಸಹಕಾರ ದೊರಕುವುದು. ಕೃಷಿ ಕ್ಷೇತ್ರದಲ್ಲಿ ತೊಡಗಿಕೊಂಡವರಿಗೆ ಎಚ್ಚರಿಕೆ ಅಗತ್ಯ. ಮಹಿಳೆಯರಿಗೆ ಉತ್ತಮ ಸಹಕಾರ ದೊರೆತು ಕಾರ್ಯಸಿದ್ಧಿ.

ಸಿಂಹ: ಮನೆಯಲ್ಲಿನ ಸಮಸ್ಯೆಗಳು ಸುಲಭವಾಗಿ ಪರಿಹಾರ ಕಂಡು ನೆಮ್ಮದಿ ಮೂಡಿಬರುವುದು. ನಿಯಮಿತ ವ್ಯವಹಾರಗಳು ಲಾಭ ತಂದುಕೊಡಲಿವೆ. ಮಹಿಳೆಯರಿಗೆ ಉದ್ಯೋಗದಲ್ಲಿ ಬಡ್ತಿ ಸಾಧ್ಯತೆ.

ಕನ್ಯಾ: ಕೃಷಿ ಕೆಲಸಗಳಲ್ಲಿ ಪ್ರಗತಿ ಮತ್ತು ಲಾಭ ಪ್ರಾಪ್ತಿ. ನ್ಯಾಯಾಲಯದ ತೀರ್ಪು ಮುಂದೂಡುವ ಸಾಧ್ಯತೆ. ಮಾನಸಿಕ ಸ್ಥಿಮಿತ ಸಾಧಿಸಿಕೊಳ್ಳಿ. ಆಧ್ಯಾತ್ಮ ವಿಚಾರಗಳಲ್ಲಿ ಆಸಕ್ತಿ. ಆರ್ಥಿಕ ಪ್ರಗತಿಗಾಗಿ ಬಂಧುಗಳ ಸಹಕಾರ ದೊರಕಲಿದೆ.

ತುಲಾ: ಗುರುತರವಾದ ಜವಾಬ್ದಾರಿಯೊಂದನ್ನು ಹೊರಬೇಕಾದೀತು. ಶುಭ ಕಾರ್ಯಗಳು ಕೂಡಿಬರುವ ಸಾಧ್ಯತೆ. ಗುರು ದೇವತಾ ದರ್ಶನದಿಂದ ಸಂತೃಪ್ತಿ. ಸಾಮಾಜಿಕ ಗೌರವ ಪ್ರಾಪ್ತಿ. ಪ್ರಿಯ ವ್ಯಕ್ತಿಗಳ ಆಗಮನದಿಂದ ಸಂತಸ.

ವೃಶ್ಚಿಕ: ಹಣಕಾಸಿನ ಮುಗ್ಗಟ್ಟುಗಳು ದೂರವಾಗಿ ಆರ್ಥಿಕ ಸಬಲತೆಯತ್ತ ಹೆಜ್ಜೆ ಹಾಕುವಿರಿ. ಸಾಮಾಜಿಕ ಕಾರ್ಯಗಳಲ್ಲಿ ಉತ್ಸಾಹಕುಂದುವ ಸಾಧ್ಯತೆ. ದಾಂಪತ್ಯ ಜೀವನದಲ್ಲಿನ ಸಮಸ್ಯೆಗಳು ದೂರವಾಗುವ ಕಾಲ ಸನ್ನಿಹಿತ.

ಧನು: ಮಕ್ಕಳಿಂದ ನೆಮ್ಮದಿ ತರುವ ಸುದ್ದಿ. ಜಾಮೀನು, ಆಸ್ತಿ ತಗಾದೆಗಳಿಗೆ ಸಂಬಂಧಿಸಿದಂತೆ ಅಲೆದಾಡಬೇಕಾದೀತು. ಆಯುಧಗಳ ವಿಚಾರದಲ್ಲಿ ಎಚ್ಚರಿಕೆ ಇರಲಿ. ಆರೋಗ್ಯದಲ್ಲಿ ಏರುಪೇರುಗಳಾಗುವ ಸಾಧ್ಯತೆ.

ಮಕರ: ಆರೋಗ್ಯದಲ್ಲಿ ಸುಧಾರಣೆ ಕಂಡುಬರುವುದು. ಮಂಗಳ ಕಾರ್ಯಗಳ ವಿಚಾರದಲ್ಲಿ ಚರ್ಚಿಸುವಿರಿ. ಹೊಸ ವ್ಯವಹಾರಗಳಿಗೆ ಆತುರತೆ ಸಲ್ಲ. ಮಹಿಳೆಯರಿಂದ ಸಹಕಾರ. ಕೃಷಿಯಲ್ಲಿ ಅನಿಶ್ಚಿತತೆ ಸಾಧ್ಯತೆ.

ಕುಂಭ: ಆರ್ಥಿಕ ಅನುಕೂಲ ಹಾಗೂ ವ್ಯವಹಾರದಲ್ಲಿ ಹೆಚ್ಚಿನ ಆದಾಯ. ಗೃಹ ನಿರ್ಮಾಣ ಕಾರ್ಯಗಳಲ್ಲಿ ಪ್ರಗತಿ. ಕುಲದೇವತಾ ದರ್ಶನದಿಂದ ಸಮಸ್ಯೆಗಳಿಗೆ ಪರಿಹಾರ. ವಿದ್ಯಾರ್ಥಿಗಳಿಗೆ ಸಮಾಧಾನ ಮೂಡಿಬರುವುದು.

ಮೀನ: ಅಪರೂಪದ ವಸ್ತುಗಳ ಖರೀದಿ ಮಾಡುವಿರಿ. ಹಣಕಾಸಿನ ವ್ಯವಹಾರದಲ್ಲಿ ಹೆಚ್ಚಿನ ಲಾಭ ದೊರಕಲಿದೆ. ವೃತ್ತಿ ಸಮಸ್ಯೆಗಳು ಪರಿಹಾರವಾಗಿ ನೆಮ್ಮದಿ. ಮಹಿಳೆಯರಿಗೆ ಸಾಮಾಜಿಕ ಸ್ಥಾನಮಾನಗಳು ಲಭ್ಯವಾಗುವ ಸಾಧ್ಯತೆ.

ನಿಮ್ಮ ಜನ್ಮದಿನ 20-ಜೂನ್ ಈ ದಿನವು ಅತ್ಯಂತ ಶುಭಕರವಾಗಿದ್ದು, ಸಮಾಜದ ಬಗ್ಗೆ ಕಾಳಜಿ ಇರುವ ನೀವು ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಕೊಳ್ಳುವಿರಿ. ವಿದ್ಯಾಭ್ಯಾಸದಲ್ಲಿ ತೊಡಗಿರುವವರು ಉತ್ತಮ ಪ್ರಗತಿಯೊಂದಿಗೆ ಉನ್ನತ ಹುದ್ದೆಯನ್ನು ಹೊಂದುವಿರಿ. ನಿಮ್ಮ ಯಶಸ್ಸಿನ ಹಿಂದೆ ಒಬ್ಬ ಮಹಿಳೆಯ ಪ್ರೇರಣೆ ಇರುವುದನ್ನು ಅಲ್ಲಗಳೆಯುವಂತಿಲ್ಲ.

ಪದಬಂಧ 4633 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಪ್ರಕಟವಾಗದಿರುವ ಶಕ್ತಿ (5)
3.ಕೂಸಿನ ತಲೆಗೆ ಕಟ್ಟುವ ಟೊಪ್ಪಿಗೆ (3)
5. ಕಳೆಯುವ ಲೆಕ್ಕ (5)
7.ವಿಷ್ಣುವಿನ ವಾಹನ (3)
8.ಇದಂತೂ ಕೆಲಸಕ್ಕೆ ಬಾರದ ಮಾತು (5)
10.ಬಣಿವೆ ಹಾಕುವಾಗಿನ ತೊಂದರೆ (3)
11.ಅದೇ ತಾನೆ ಲಗ್ನವಾದ ಗಂಡ ಹೆಂಡತಿ (5)
14.ಸುಗಂಧಯುಕ್ತ ಜಲ (3)
15.ಈತ ಕೊಳ್ಳೆ ಹೊಡೆಯುವವನು (5)

ಮೇಲಿಂದ ಕೆಳಕ್ಕೆ
1.ಕೇಳಲು ಹಿತಕರವಾದುದು (3)
2.ಸಿಂಪಿಗನನ್ನು ಹೀಗೂ ಕರೆವರು (3)
4.ತಂಡ ಕೊನೆಗಿದ್ದಾಗ ಅರ್ಥವಿಲ್ಲದ ಮಾತು (3)
6.ಸೊಗಸಾಗಿಯೂ ಕಾಣುತ್ತಿರುವ ಶುಭಚಿಹ್ನೆ (3)
7.ಜಾಗಟೆ ಸದ್ದಿಗೇ ಈ ಗೊಂದಲ! (3)
8.ಪೈರಿನಿಂದ ಕಾಳನ್ನು ಬೇರ್ಪಡಿಸುವ ಕೆಲಸ (3)
9.ಬೊಕ್ಕಸದ ಹತ್ತಿರ ಅಸುರನಿದ್ದಾನಲ್ಲಾ? (3)
10.ಸ್ಲೇಟಿನ ಮೇಲೆ ಬರೆಯಲು ಬಳಸುವ ಸಾಧನ (3)
12.ದಂಗೆಯೊಳಗೆ ಕಾಣುತ್ತಿರುವ ಪಲ್ಲಕ್ಕಿ (3)
13.ತೀರದಲ್ಲೆಲ್ಲಾ ಕವಿದಿರುವ ಅಂಧಕಾರ (3)



4632ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಮದುಮಗ 3.ಒಡ್ಡೋಲಗ 5.ಜುಲುಮೆ 6.ರಿಕಾಪು 8.ದುರುಳ 9.ನಿಮೇಷ 10.ನಗದು 12.ಸಂಭಾವ್ಯ 14.ರಣಭೇರಿ 15.ನತದೃಷ್ಟ

ಮೇಲಿಂದ ಕೆಳಕ್ಕೆ: 1.ಮದಕರಿ 2.ಗಲೀಜು 3.ಒಲುಮೆ 4.ಗಟ್ಟಿಕುಳ 7.ಪುರುಷ 8.ದುಮ್ಮಾನ 9.ನಿರುತ್ತರ 11.ದುರಾದೃಷ್ಟ 12.ಸಂಚಾರಿ 13.ವ್ಯಸನ

ಸುಡೊಕು 5019

						5		7
	2		6		7			
	6	5		4			9	1
	4				1		7	
8				2				4
	9		7			6		
9				3		4		
			4		8			9
2		4					5	3

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5018 ಸುಡೊಕು

9	3	1	5	6	7	8	4	2
6	7	2	4	8	9	3	1	5
5	8	4	3	1	2	6	7	9
3	5	7	2	9	8	4	6	1
2	9	8	6	4	1	5	3	7
4	1	6	7	5	3	2	9	8
7	2	9	8	3	6	1	5	4
8	6	5	1	7	4	9	2	3
1	4	3	9	2	5	7	8	6

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಪ್ರಜಾವಾಣಿ DH DECCAN HERALD ಕೋವಿಡ್ ಪರಿಹಾರ ನಿಧಿ

ದೇಣಿಗೆ ಕೊಟ್ಟವರ ವಿವರ

ಸಂ	ಹೆಸರು, ವಿಳಾಸ	ದೇಣಿಗೆ ₹ಗಳಲ್ಲಿ
1	**ಶಂಕರ್ ವಿ.,** ನಿವೃತ್ತ ಪ್ರಾಂಶುಪಾಲರು, ನಂ.6, 10ನೇ ಅಡ್ಡರಸ್ತೆ, ಸ್ವರ್ಣಗಂಗಾ ನಿಲಯ, ವರಮಹಾಲಕ್ಷ್ಮಿ ದೇವಸ್ಥಾನ ರಸ್ತೆ, ರಾಘವೇಂದ್ರ ನಗರ, ಬೆಂಗಳೂರು	25,000
2	**ಡಿ.ಎಸ್.ಸುಬ್ಬಣ್ಣ,** 308, 6ನೇ ಎ ಕ್ರಾಸ್, ಬನಶಂಕರಿ 1ನೇ ಹಂತ, 2ನೇ ಬ್ಲಾಕ್, ಶ್ರೀನಿವಾಸನಗರ, ಬೆಂಗಳೂರು	10,000
3	**ವಿ.ಕೆ.ನಟರಾಜ್,** 102, ಶ್ರೀಲಕ್ಷ್ಮಿ ಅಪಾರ್ಟ್‌ಮೆಂಟ್ಸ್, 4ನೇ ಮುಖ್ಯರಸ್ತೆ, ಜಯಲಕ್ಷ್ಮಿಪುರಂ, ಮೈಸೂರು	10,000
4	**ರವಿಚಂದ್ರ ಶಟ್‌ದರ್ಶನಂ,** 205, ಸಾಯಿ ಸಿರಿ ಕೋರಲ್ ಅಪಾರ್ಟ್‌ಮೆಂಟ್, ಇಟ್ಟಮಡು, ಬನಶಂಕರಿ 3ನೇ ಹಂತ, ಬೆಂಗಳೂರು	10,000
5	**ಎಚ್.ಎಸ್.ಬೈಂದೂರ್‌ಕರ್,** ನಂ. 1951, ಸ್ಕಂದ, 16ನೇ ಮುಖ್ಯರಸ್ತೆ, ಮೈಕೊ ಲೇಔಟ್, ಪ್ರಭಾವತಿ ಬ್ಲಿಸ್ ಸಮೀಪ, ಹೊಂಗಸಂದ್ರ, ಬೆಂಗಳೂರು	10,000
6	**ಭುವನೇಶ್ವರಿ ಎಂ.ಎಸ್.,** ನಂ.971/10, 15ನೇ ಎ ಕ್ರಾಸ್, ಎ ಸೆಕ್ಟರ್, 3ನೇ ಹಂತ, ಯಲಹಂಕ ನ್ಯೂಟೌನ್, ಬೆಂಗಳೂರು	10,000
7	**ರಾಮಪ್ರಸಾದ್,** ಎಲ್&ಟಿ ಎಸ್., ಸಿಟಿ ಬ್ಲಾಕ್ ಸಿ3, 1101, ಬೆಂಗಳೂರು	10,000
8	**ಬಿಎಸ್‌ಎಸ್.,** 208, 9ನೇ ಮುಖ್ಯರಸ್ತೆ, 1ನೇ ಬ್ಲಾಕ್, ಎಚ್‌ಆರ್‌ಬಿಆರ್ ಲೇಔಟ್, ಕಲ್ಯಾಣನಗರ, ಬೆಂಗಳೂರು	10,000
9	**ಎನ್.ಶ್ರವಣ್,** ಬಾಣಸವಾಡಿ, ಬೆಂಗಳೂರು	5,000
10	**ಮಾದೇಶ್ ಸುಮಾ,** 343/4, ಯಲಹಂಕ –ಬಾಗಲೂರು ಮುಖ್ಯರಸ್ತೆ, ಸಂತೇಬೀದಿ, ಬೆಂಗಳೂರು	5,000
11	**ಪಿ.ಆರ್.ಕೃಷ್ಣನ್,** 6ನೇ ಮುಖ್ಯರಸ್ತೆ, 13ನೇ ಅಡ್ಡರಸ್ತೆ, ಇಂದಿರಾನಗರ, ಬೆಂಗಳೂರು	5,000
12	**ಅನ್ನಪೂರ್ಣಾ,** ಬಸವನಗುಡಿ, ಶಿವಮೊಗ್ಗ	5,000
13	**ಸ್ಟೀಫನ್ ಡಿ'ಕೋಸ್ತಾ,** ಅಜ್ಜರಕಾಡು, ಉಡುಪಿ	5,000
14	**ಗಣಪತಿ ಹಿರಿಯಣ್ಣ,** 228, ವಕೀಲ್ ಗಾರ್ಡನ್ ಸಿಟಿ, ತಲಘಟ್ಟಪುರ, ಕನಕಪುರ ರಸ್ತೆ, ಬೆಂಗಳೂರು	5,000
15	**ರೇವಪ್ಪ ನಾಯ್ಕ್,** 35, 9ನೇ ಮುಖ್ಯರಸ್ತೆ, ಮಾರುತಿ ಲೇಔಟ್, ಬಿಟಿಎಂ ಲೇಔಟ್, 1ನೇ ಹಂತ, ಬೆಂಗಳೂರು	5,000
16	**ಕೆ.ಮಧುಸೂದನ,** ನಂ.611, ವಿಷ್ಣುಪ್ರಿಯ, 2ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆ, ಬಾಲಾಜಿ ಲೇಔಟ್, ವಿದ್ಯಾರಣ್ಯಪುರ ಪೋಸ್ಟ್, ಬೆಂಗಳೂರು	5,000
17	**ಎಂ.ಜಿ.ನಾರಾಯಣ್,** 578, ಶ್ರೀಲಕ್ಷ್ಮಿ ನಿವಾಸ, ಎಚ್.ಬಿ.ಆರ್.ಲೇಔಟ್, 1ನೇ ಹಂತ, 3ನೇ ಬ್ಲಾಕ್, 6ನೇ ಮುಖ್ಯರಸ್ತೆ, ಬೆಂಗಳೂರು	5,000
18	**ನಿಶಾಂತ್ ನಾಗವಾರ,** ಆಂದೋಲನ ಸರ್ಕಲ್, ರಾಮಕೃಷ್ಣನಗರ, ಮೈಸೂರು	3,001
19	**ಸರ್ವಮಂಗಳಾ ಎಸ್.,** ಕಂಫರ್ಟ್ ಗಂಗಾ ಲಕ್ಷ್ಮಿ ಅಪಾರ್ಟ್‌ಮೆಂಟ್ ನಂ. 002, ಡಿ12, 5ನೇ ಅಡ್ಡರಸ್ತೆ, ವಿನಾಯಕ ನಗರ, ವಿಲ್ಸನ್ ಗಾರ್ಡನ್, ಬೆಂಗಳೂರು	3,000
20	**ವೆಂಕಟೇಶ್ ಕಾಮತ್,** ಸೃಷ್ಟಿ, ರಾಮಣ್ಣ ಶೆಟ್ಟಿ ಲೇಔಟ್, ಉಡುಪಿ	2,222
21	**ಸೈಯದ್ ಅತೀಕ್ ಅಹ್ಮದ್,** ಕೌಸರ್ ನಗರ, ಆರ್.ಟಿ.ನಗರ ಪೋಸ್ಟ್, ಬೆಂಗಳೂರು	2,000
22	**ರವೀಂದ್ರನಾಥ್ ಬಿ.ಆರ್.** ನಂ.9, ಲೇಖಕಿ ನಿರುಪಮಾ ರಸ್ತೆ, 3ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು	2,000
23	**ಆರ್.ಮಹಾಲಕ್ಷ್ಮಿ,** ನಂ.5/3, 1ನೇ ಮಹಡಿ, ವೆಂಕಟರಮಣಪ್ಪ ರಸ್ತೆ, ಜೈಭಾರತ್ ನಗರ, ಬೆಂಗಳೂರು	2,000
24	**ಷಣ್ಮುಖಪ್ಪ ಕೆ.,** ವಿನೋಬಾ ನಗರ, ಶಿವಮೊಗ್ಗ	2,000
25	**ಯು.ಎಂ.ಶ್ರೀನಿವಾಸ್,** 6, ಎಸ್.ಎಸ್.ನಿಲಯ, ಫ್ಯಾನ್ಸಿ ಕಾರ್ನರ್ ಎದುರು, 20ನೇ ಸಿ ಕ್ರಾಸ್, ಪೈಪ್‌ಲೈನ್ ರಸ್ತೆ, ಈಜಿಪುರ ಮುಖ್ಯರಸ್ತೆ, ಬೆಂಗಳೂರು	2,000
26	**ಬಿ.ಎನ್.ದೇವಣ್ಣ,** 56/6–8/1, 1ನೇ ಮುಖ್ಯರಸ್ತೆ, ಮಾರುತಿ ಎಕ್ಸ್‌ಟೆನ್ಷನ್, ಬೆಂಗಳೂರು	2,000
27	**ಸಿ.ಎಸ್.ಲಕ್ಷ್ಮಿನಾರಾಯಣ,** 1705, 17ನೇ ಮುಖ್ಯರಸ್ತೆ, 2ನೇ ಹಂತ, ಜೆ.ಪಿ. ನಗರ, ಬೆಂಗಳೂರು	2,000
28	**ಲಿಂಗರಾಜು ಡಿ.,** 7/2, 26ನೇ ಮುಖ್ಯರಸ್ತೆ, ಜಯನಗರ 9ನೇ ಬ್ಲಾಕ್, ಬೆಂಗಳೂರು	2,000
29	**ನಾಗರಾಜ ರಾವ್ ಎಂ.ಎಸ್.,** ಸ್ಪಂದನ, 2ನೇ ಕ್ರಾಸ್, ರವೀಂದ್ರ ನಗರ, ಶಿವಮೊಗ್ಗ	2,000
30	**ಹೆಸರು ನಮೂದಿಸಿಲ್ಲ,** ಜಮಖಂಡಿ	2,000
31	**ಅರುಣಾಚಲಂ ಜಿ.,** ಫ್ಲ್ಯಾಟ್ ಸಿ–304, ಮಂತ್ರಿ ಸ್ಪ್ಲೆಂಡರ್, ಹೆಣ್ಣೂರು ಮುಖ್ಯರಸ್ತೆ, ಗೆದ್ದಲಹಳ್ಳಿ, ಬೆಂಗಳೂರು	2,000
32	**ಅಫ್ರಾ ಸಾಥಕ್,** ನ್ಯೂ 135, ಕುಮಾರಪ್ಪ ಸ್ಟ್ರೀಟ್, ಚೆನ್ನೈ	1,500
33	**ರಫೀಕ್ ದರ್ಬಾರ್ ಹಾನಬಲ್, ಅಲಿ ದರ್ಬಾರ್,** ನಂ.996, ಸೇಂಟ್ ಜೋಸೆಫ್ ಪದವಿ ಕಾಲೇಜು ಹಿಂಭಾಗ, ದೂರವಾಣಿ ನಗರ, ಬಿ.ಕತ್ತಿಹಳ್ಳಿ, ಹಾಸನ	1,208
34	**ಪ್ರಮುಖ್ ದೇಸಾಯಿ,** 86ಬಿ, 31ನೇ ಅಡ್ಡರಸ್ತೆ, 2ನೇ ಬ್ಲಾಕ್, ರಾಜಾಜಿನಗರ, ಬಸವೇಶ್ವರ ನಗರ ಕಾಲೇಜು, ಬೆಂಗಳೂರು	1,201
35	**ಕೆ.ಎಸ್.ಗೋಪಾಲ್,** 2, ಶ್ರೀಗಂಗೋತ್ರಿ ಅಪಾರ್ಟ್‌ಮೆಂಟ್, ಪ್ರೊಫೆಸರ್ ಕ್ವಾಟ್ರಸ್, ಸರಸ್ವತಿಪುರಂ, ಮೈಸೂರು	1,116
36	**ಜನಾರ್ದನ್ ವಿ,** ನಂ. 70, 8ನೇ ಬಿ ಕ್ರಾಸ್, 4ನೇ ಅಡ್ಡರಸ್ತೆ, ವರದರಾಜ ಲೇಔಟ್, ಅಮೃತಹಳ್ಳಿ, ಸಹಕಾರ ನಗರ ಪೋಸ್ಟ್, ಬೆಂಗಳೂರು	1,100
37	**ನಾಗೇಶ್ವರರಾವ್ ಎನ್.ಪೆಂಡ್ಯಾಲ,** ನಂ.31, ಶಿವಕೃಪಾ ಬಿಲ್ಡಿಂಗ್, ಪಾರಸವಾಡಿ, ಐಯ್ಯಂಗಾರ್ ಬೇಕರಿ ಸಮೀಪ, ಕೇಶ್ವಾಪುರ, ಹುಬ್ಬಳ್ಳಿ	1,100
38	**ಗೋಪಾಲ್ ನಾಮದೇವ್,** ಎಸ್‌ಎಫ್ 207, ಸಂಜನಾ ಸಫೈರ್ ಅಪಾರ್ಟ್‌ಮೆಂಟ್, ಕೋಡಿಚಿಕ್ಕನಹಳ್ಳಿ, ನ್ಯೂ ಅರವಿಂದ ಸ್ಕೂಲ್ ಸಮೀಪ, ಬೆಂಗಳೂರು	1,008
39	**ಮಂಜುಳಾ ದೇವಿ ಜಿ.** ನಂ.25, 1ನೇ ಮುಖ್ಯರಸ್ತೆ, ಜ್ಞಾನಭಾರತಿ ಬಿಡಿಎ ಲೇಔಟ್, ವಲಗೇರನಹಳ್ಳಿ, ಬೆಂಗಳೂರು	1,001
40	**ಜಿ.ಗೋಪಾಲಕೃಷ್ಣ,** ಎ2013, ಲೇಡಿ ರತನ್ ಟವರ್ಸ್, ಗಾಂಧಿನಗರ, ವರ್ಲಿ, ಮುಂಬೈ	1,001
41	**ಯಾಸ್ಮಿನ್ ಅಮೀನ್,** ಓಲ್ಡ್ ಕೆಂಟ್ ಎಸ್ಟೇಟ್ಸ್, ಹೊರೂರು, ಸುಂಟಿಕೊಪ್ಪ, ಕೊಡಗು	1,001
42	**ಎಂ.ಎನ್.ಗಣೇಶ ಗೌಡ,** 53, 1ನೇ ಮುಖ್ಯರಸ್ತೆ, ಚಾಮುಂಡೇಶ್ವರಿ ಲೇಔಟ್, ವಿದ್ಯಾರಣ್ಯಪುರ, ಬೆಂಗಳೂರು	1,001
43	**ಸವಿತಾ ಕೋರೆಗೋಳ,** 25/2, ಸಾಯಿಕೃಪಾ, ನಳಂದ ಸ್ಕೂಲ್ ಸಮೀಪ, ಕೆ.ಎಚ್.ಬಿ.ಕಾಲೊನಿ, ವಿಜಯಪುರ	1,001
44	**ಗಂಗರಾಜು,** ನಂ.631, 3ನೇ ಮುಖ್ಯರಸ್ತೆ, ಬಿಇಎಂಎಲ್ 5ನೇ ಹಂತ, ರಾಜರಾಜೇಶ್ವರಿ ನಗರ, ಬೆಂಗಳೂರು	1,001
45	**ವೀರನಗೌಡ ಅಲೆಕೋಟೆ,** ನಂ. 27, ಬೀಚಿ ನಗರ, 1ನೇ ಅಡ್ಡರಸ್ತೆ, ಕಪ್ಪಗಲ ರಸ್ತೆ, ಬಳ್ಳಾರಿ	1,001
46	**ವಿ.ಪ್ರಕಾಶ್,** ವಿದ್ಯಾರಣ್ಯಪುರ, ಬೆಂಗಳೂರು	1,001
47	**ಜಮೀರುದ್ದೀನ್,** ಎಸ್.ಕೆ.ಗಾರ್ಡನ್, ಬೆಂಗಳೂರು	1,000
48	**ದೊರೆಸ್ವಾಮಿ ಎಚ್.ಆರ್.** ಎಲ್‌ಐಜಿ 7, 7ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ವಿನೋಬಾ ನಗರ, ಶಿವಮೊಗ್ಗ	1,000
49	**ನಿರೂಪ್ ಎಸ್.** 28, ಬಿ.ಬ್ಲಾಕ್, 1ನೇ ಮುಖ್ಯರಸ್ತೆ, 1ನೇ ಅಡ್ಡರಸ್ತೆ, ವಿನೋಬಾ ನಗರ, ಶಿವಮೊಗ್ಗ	1,000
50	**ಗೀತಾ ಶೇಷಾದ್ರಿ ಮೂರ್ತಿ,** 577, 9ನೇ ಅಡ್ಡರಸ್ತೆ, ಅನಿಕೇತನ ರಸ್ತೆ, ಕುವೆಂಪುನಗರ, ಮೈಸೂರು	1,000

ಲಸಿಕೆ ಅಭಿಯಾನಕ್ಕೆ ಗಮನ: ಎಲ್ಲ ರಾಜ್ಯಗಳಿಗೆ ಕೇಂದ್ರ ಗೃಹಸಚಿವಾಲಯ ಸೂಚನೆ

ಕೋವಿಡ್ ನಿಯಮ ಸಡಿಲ: ಇರಲಿ ಎಚ್ಚರ

ನವದೆಹಲಿ (ಪಿಟಿಐ): ಕೋವಿಡ್ ಲಾಕ್‌ಡೌನ್ ನಿಯಮಗಳನ್ನು ಸಡಿಲಗೊಳಿಸುವುದರಿಂದ ಮಾರುಕಟ್ಟೆಗಳಲ್ಲಿ ಜನಸಂದಣಿ ಹೆಚ್ಚಾಗುತ್ತಿರುವ ಬಗ್ಗೆ ಕಳವಳ ವ್ಯಕ್ತಪಡಿಸಿರುವ ಕೇಂದ್ರ ಸರ್ಕಾರವು, ಎಲ್ಲ ರಾಜ್ಯ ಸರ್ಕಾರಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಶನಿವಾರ ಕೆಲವು ಸೂಚನೆಗಳನ್ನು ನೀಡಿದೆ.

ಸೋಂಕು ಹರಡುವಿಕೆಯನ್ನು ತಡೆಗಟ್ಟಲು ಸೂಕ್ತವಾದ ಅಭ್ಯಾಸಗಳನ್ನು ಅನುಸರಿಸುವುದು, ಪರೀಕ್ಷೆ- ಪತ್ತೆ- ಚಿಕಿತ್ಸೆ ಕ್ರಮ ಜಾರಿಗೊಳಿಸುವುದು, ಲಸಿಕೆ ಅಭಿಯಾನ ನಡೆಸುವುದರತ್ತ ಗಮನಹರಿಸಬೇಕು. ಕೊರೊನಾ ಸರಪಳಿಯನ್ನು ತುಂಡರಿಸಬೇಕಾದರೆ, ಲಸಿಕೆ ಕಾರ್ಯಕ್ರಮ ಅತ್ಯಂತ ಪ್ರಮುಖವಾದುದು ಎಂದು ಕೇಂದ್ರದ ಗೃಹಕಾರ್ಯದರ್ಶಿ ಅಜಯ್ ಭಲ್ಲಾ ಅವರು ಎಲ್ಲ ರಾಜ್ಯಗಳಿಗೆ ಕಳುಹಿಸಿರುವ ಸುತ್ತೋಲೆಯಲ್ಲಿ ತಿಳಿಸಿದ್ದಾರೆ.

ನಿರ್ಬಂಧ ಸಡಿಲಿಸಿ, ವ್ಯಾಪಾರ ಮೊದಲಾದ ಚಟುವಟಿಕೆಗಳಿಗೆ ಅನುಮತಿ ನೀಡುವ ರಾಜ್ಯ ಸರ್ಕಾರಗಳು, ಇಡೀ ಪ್ರಕ್ರಿಯೆಯನ್ನು ಎಚ್ಚರಿಕೆಯಿಂದ ಗಮನಿಸಬೇಕು. ಕಡ್ಡಾಯವಾಗಿ ಮಾಸ್ಕ್ ಬಳಕೆ, ಕೈಗಳನ್ನು ಶುಚಿಯಾಗಿ ಇರಿಸಿಕೊಳ್ಳುವಿಕೆ, ವ್ಯಕ್ತಿಗತ ಅಂತರ ಕಾಪಾಡಿಕೊಳ್ಳುವಿಕೆ ಮೊದಲಾದ ನಡವಳಿಕೆಗಳನ್ನು ಜನರು ಪಾಲಿಸಬೇಕಿದೆ ಎಂದು ಹೇಳಿದರು.

'ಸೋಂಕು ಪತ್ತೆ ಪರೀಕ್ಷೆಗಳನ್ನು ಕಡಿಮೆ ಮಾಡುವಂತಿಲ್ಲ. ದೇಶದಲ್ಲಿ ಕೋವಿಡ್ ಪರಿಸ್ಥಿತಿ ಅಲ್ಪಮಟ್ಟಿಗೆ ತಿಳಿಯಾಗಿದ್ದರೂ, ಸಕ್ರಿಯ ಪ್ರಕರಣಗಳು ಅಥವಾ ಪಾಸಿಟಿವಿಟಿ ದರ ಉಲ್ಬಣವಾದಲ್ಲಿ, ಅವುಗಳ ಆರಂಭಿಕ ಚಿಹ್ನೆಗಳನ್ನು ನಿರ್ಲಕ್ಷಿಸುವಂತಿಲ್ಲ' ಎಂದಿದ್ದಾರೆ.

ಕೋವಿಡ್ ತಡೆಯಬೇಕಾದರೆ ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಸಮರೋಪಾದಿಯಲ್ಲಿ ಲಸಿಕೆ ಕಾರ್ಯಕ್ರಮ ಹಮ್ಮಿಕೊಂಡು ಗರಿಷ್ಠ ಸಂಖ್ಯೆಯ ಜನರಿಗೆ ಲಸಿಕೆ ನೀಡಬೇಕು. ಕೋವಿಡ್ ಎರಡನೇ ಅಲೆಯಲ್ಲಿ ಹಲವು ರಾಜ್ಯಗಳಲ್ಲಿ ಕೋವಿಡ್ ಪ್ರಕರಣಗಳು ಏರಿಕೆ ಕಂಡಿವೆ. ಸೋಂಕು ನಿಯಂತ್ರಿಸಲು ಹಲವು ರಾಜ್ಯಗಳು ನಿರ್ಬಂಧಗಳನ್ನು ವಿಧಿಸಿವೆ.

'ಸಕ್ರಿಯ ಪ್ರಕರಣಗಳ ಸಂಖ್ಯೆಯಲ್ಲಿ ಕುಸಿತ ಕಂಡುಬಂದಿದ್ದು, ಅನೇಕ ರಾಜ್ಯಗಳು ನಿರ್ಬಂಧಗಳನ್ನು ಸಡಿಲಿಸಲು ಪ್ರಾರಂಭಿಸಿವೆ. ಸ್ಥಳೀಯ ಪರಿಸ್ಥಿತಿಗೆ ಅನುಗುಣವಾಗಿ ನಿರ್ಬಂಧಗಳನ್ನು ಹೇರುವ ಅಥವಾ ಸರಾಗಗೊಳಿಸುವ ನಿರ್ಧಾರವನ್ನು ತೆಗೆದುಕೊಳ್ಳಬೇಕಾಗಿದೆ' ಎಂದು ಭಲ್ಲಾ ಹೇಳಿದ್ದಾರೆ.

ಲಸಿಕೆ ಪೂರೈಕೆ: ಭಾರತದ ಜತೆ ಮಾತುಕತೆ

ವಿಶ್ವಸಂಸ್ಥೆ (ಪಿಟಿಐ): ಲಸಿಕೆ ಪೂರೈಕೆಯ ಕೊರತೆಯಿಂದಾಗಿ ಎರಡನೇ ಡೋಸ್ ನೀಡಿಕೆಯನ್ನು ಮುಂದೂಡಿದ್ದ ರಾಷ್ಟ್ರಗಳಿಗೆ ಪುನಃ ಲಸಿಕೆಯ ಸರಬರಾಜು ಆರಂಭಿಸುವಂತೆ ಅಸ್ಟ್ರಾಜೆನೆಕಾ ಸಂಸ್ಥೆ, ಸೀರಂ ಇನ್‌ಸ್ಟಿಟ್ಯೂಟ್ ಹಾಗೂ ಭಾರತ ಸರ್ಕಾರದ ಜತೆಗೆ ವಿಶ್ವ ಆರೋಗ್ಯ ಸಂಸ್ಥೆಯು ತುರ್ತಾಗಿ ಮಾತುಕತೆ ನಡೆಸಲು ಪ್ರಯತ್ನಿಸಲಿದೆ ವಿಶ್ವಸಂಸ್ಥೆಯ ಆರೋಗ್ಯ ಘಟಕದ ಹಿರಿಯ ಅಧಿಕಾರಿ ತಿಳಿಸಿದ್ದಾರೆ.

'ಲಸಿಕೆಯ ಕೊರತೆಯಿಂದಾಗಿ ಎರಡನೇ ಡೋಸ್ ನೀಡಿಕೆಯನ್ನು ಮುಂದೂಡಿರುವ ರಾಷ್ಟ್ರಗಳ ದೊಡ್ಡ ಪಟ್ಟಿಯೇ ಇದೆ. ಆಫ್ರಿಕಾದ ಹಲವು ರಾಷ್ಟ್ರಗಳು, ಲ್ಯಾಟಿನ್ ಅಮೆರಿಕ, ಮಧ್ಯಪ್ರಾಚ್ಯ ಮತ್ತು ದಕ್ಷಿಣ ಏಷ್ಯಾ ರಾಷ್ಟ್ರಗಳು ಲಸಿಕೆಯ ಅಭಾವ ಎದುರಿಸುತ್ತಿವೆ ಎಂದು ವಿಶ್ವ ಆರೋಗ್ಯ ಸಂಸ್ಥೆಯ ಮಹಾನಿರ್ದೇಶಕ ಟೆಡ್ರೋಸ್ ಅದನೊಂ ಗೆಬ್ರಿಯೇಸಸ್ ಹೇಳಿದ್ದಾರೆ.

'ಈ ತಿಂಗಳ ಆರಂಭದಲ್ಲಿ ಕೋವ್ಯಾಕ್ಸ್ ಸಂಸ್ಥೆಯ ಮೂಲಕ ಸುಮಾರು 8 ಕೋಟಿ ಡೋಸ್‌ಗಳನ್ನು ವಿತರಿಸಲಾಗಿದೆ. ಜಾಗತಿಕವಾಗಿ 20 ಕೋಟಿ ಡೋಸ್ ಲಸಿಕೆ ವಿತರಣೆಯಾಗಿದೆ. ಭಾರತದಲ್ಲಿನ ಕೋವಿಡ್ ಎರಡನೇ ಅಲೆ ಪರಿಣಾಮದಿಂದ ಲಸಿಕೆ ಪೂರೈಕೆಗೆ ಅಡ್ಡಿಯುಂಟಾಗಿದೆ' ಎಂದು ಸಂಸ್ಥೆಯ ಹಿರಿಯ ಸಲಹೆಗಾರ ಬ್ರೂಸ್ ಐಲ್ವರ್ಡ್ ಹೇಳಿದರು.

'ನಾಳೆಯಿಂದ ಲಸಿಕೆ ಜಾಗೃತಿ ಅಭಿಯಾನ'

ನವದೆಹಲಿ (ಪಿಟಿಐ): ಗ್ರಾಮೀಣ ಪ್ರದೇಶಗಳಲ್ಲಿ ಕೋವಿಡ್ ಲಸಿಕೆ ಬಗ್ಗೆ ಜಾಗೃತಿ ಮೂಡಿಸಲು ಮತ್ತು ದೇಶದಲ್ಲಿ ಲಸಿಕೆ ಅಭಿಯಾನದ ವಿರುದ್ಧ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಹರಡುತ್ತಿರುವ ಆತಂಕಗಳನ್ನು ಹೋಗಲಾಡಿಸಲು ಅಲ್ಪಸಂಖ್ಯಾತ ವ್ಯವಹಾರಗಳ ಸಚಿವಾಲಯವು ಜೂನ್ 21 ರಿಂದ ಅಭಿಯಾನ ನಡೆಸಲಿದೆ ಎಂದು ಸಚಿವ ಮುಖ್ತಾರ್ ಅಬ್ಬಾಸ್ ನಖ್ವಿ ಶನಿವಾರ ಹೇಳಿದರು.

ಕೋವಿಡ್: 500ರ ಗಡಿಯೊಳಗೆ 27 ಜಿಲ್ಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಹೊಸದಾಗಿ 5,815 ಮಂದಿ ಕೋವಿಡ್ ಪೀಡಿತರಾಗಿರುವುದು ಶನಿವಾರ ದೃಢಪಟ್ಟಿದೆ. 27 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 500ರ ಗಡಿಯೊಳಗೆ ವರದಿಯಾಗಿದ್ದು, ಸೋಂಕು ದೃಢ ಪ್ರಮಾಣವು ಶೇ 3.78ಕ್ಕೆ ಇಳಿಕೆಯಾಗಿದೆ.

9 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿಯಲ್ಲಿದೆ. ವಿಶ್ವ ಆರೋಗ್ಯ ಸಂಸ್ಥೆಯು ಗುರುತಿಸಿದ ಹೊಸ ತಳಿಯ ವೈರಾಣುಗಳು ರಾಜ್ಯದಲ್ಲಿ ಕೂಡ ಕೆಲವರಲ್ಲಿ ಕಾಣಿಸಿಕೊಳ್ಳುತ್ತಿದೆ. ಅಮೆರಿಕಾ ಮೂಲಕ ಆಲ್ಫಾ/ಬಿ.1.1.7 ವೈರಾಣು ಈವರೆಗೆ 127 ಮಂದಿಯಲ್ಲಿ ಪತ್ತೆಯಾಗಿದೆ. ಅದೇ ರೀತಿ, ದಕ್ಷಿಣ ಆಫ್ರಿಕಾ ಮೂಲದ ಬೀಟಾ/ಬಿ.1.351 ವೈರಾಣು ಆರು ಮಂದಿಯಲ್ಲಿ, ನಮ್ಮ ದೇಶದ ಡೆಲ್ಟಾ/ಬಿ.1.617.2 ವೈರಾಣು 318 ಮಂದಿಯಲ್ಲಿ ಹಾಗೂ ಕಪ್ಪಾ/ಬಿ.1.617.1 ವೈರಾಣು 112 ಮಂದಿಯಲ್ಲಿ ಕಾಣಿಸಿಕೊಂಡಿರುವುದು ಜಿನೋಮಿಕ್ ಸಿಕ್ವೆನ್ಸಿಸ್ ಪರೀಕ್ಷೆಯಿಂದ ದೃಢಪಟ್ಟಿದೆ.

ಈ ತಿಂಗಳು 19 ದಿನಗಳಲ್ಲಿ 1.97 ಲಕ್ಷ ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ.

ಕಿಕ್ ಬ್ಯಾಕ್ ಆರೋಪ: ಡಿ.ಕೆ. ಶಿವಕುಮಾರ್ ಆಗ್ರಹ

'ಜಂಟಿ ಸದನ ಸಮಿತಿ ರಚಿಸಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭದ್ರಾ ಮೇಲ್ದಂಡೆ ಕಾಮಗಾರಿಯ ₹ 20 ಸಾವಿರ ಕೋಟಿ ಟೆಂಡರ್‌ನಲ್ಲಿ ಶೇ 10ರಷ್ಟು ಕಿಕ್ ಬ್ಯಾಕ್ ಪಡೆದಿದ್ದಾರೆ' ಎಂಬ ವಿಧಾನಪರಿಷತ್ ಸದಸ್ಯ ಎಚ್. ವಿಶ್ವನಾಥ್ ಆರೋಪದ ತನಿಖೆಗೆ ಜಂಟಿ ಸದನ ಸಮಿತಿ ರಚಿಸಬೇಕು' ಎಂದು ಆಗ್ರಹಿಸಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, 'ಮುಖ್ಯಮಂತ್ರಿ ನೇತೃತ್ವದಲ್ಲಿಯೇ ಸಮಿತಿ ರಚಿಸಲಿ' ಎಂದು ಸಲಹೆ ನೀಡಿದರು.

'ಈ ಆರೋಪದ ತನಿಖೆಯನ್ನು ಎಸಿಬಿಗೆ (ಭ್ರಷ್ಟಾಚಾರ ನಿಗ್ರಹ ದಳ) ಒಪ್ಪಿಸಬೇಕು' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆಗ್ರಹಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಶಿವಕುಮಾರ್, 'ಯಾವ್ಯಾವ ಕೋಡ್‌ಗಳಲ್ಲಿ ಬಿಲ್ ಪಾಸ್ ಆಗುತ್ತಿದೆ. ಯಾವ್ಯಾವ ಎಂಜಿನಿಯರ್ ಏನೇನು ಮಾಡುತ್ತಿದ್ದಾರೆ ಎಲ್ಲವೂ ಗೊತ್ತಿದೆ. ₹ 10 ಕೋಟಿಗೂ ಒಂದೊಂದು ಟೆಂಡರ್ ಕರೆಯಲಾಗುತ್ತಿದೆ. ಜಲಸಂಪನ್ಮೂಲ ಖಾತೆ ಮುಖ್ಯಮಂತ್ರಿ ಬಳಿಯಿದೆ. ವಿಶ್ವನಾಥ್ ಆರೋಪಕ್ಕೆ ಮುಖ್ಯಮಂತ್ರಿ ಉತ್ತರ ಕೊಡಬೇಕಿತ್ತು. ಯಾರೋ ಎಂ.ಡಿ ಕೈಯಲ್ಲಿ ಉತ್ತರ ಕೊಡಿಸಿದ್ದಾರೆ' ಎಂದರು.

ಮುಚ್ಚಿ ಹಾಕುವ ಪ್ರಯತ್ನ: 'ವಿಶ್ವನಾಥ್ ಮಾಡಿರುವ ಆರೋಪ ಎರಡು ಕಾರಣಗಳಿಗಾಗಿ ಗಂಭೀರ ಸ್ವರೂಪದ್ದು. ಮೊದಲನೆಯದಾಗಿ, ನೇರವಾಗಿ ಮುಖ್ಯಮಂತ್ರಿಯ ಮಗನ ಮೇಲೆ ಆರೋಪ ಮಾಡಲಾಗಿದೆ. ಎರಡನೆಯದಾಗಿ ಆಡಳಿತ ಪಕ್ಷದ ವಿಧಾನಪರಿಷತ್ ಸದಸ್ಯರೇ ಈ ಆರೋಪ ಮಾಡಿದ್ದಾರೆ. ತರಾತುರಿಯಲ್ಲಿ ನೀರಾವರಿ ಇಲಾಖೆ ಸ್ಪಷ್ಟನೆ ನೀಡಿರುವುದನ್ನು ನೋಡಿದರೆ ಹಗರಣ ಮುಚ್ಚಿಹಾಕುವ ಪ್ರಯತ್ನ ಸ್ಪಷ್ಟ' ಎಂದು ಸಿದ್ದರಾಮಯ್ಯ ಅಭಿಪ್ರಾಯಪಟ್ಟಿದ್ದಾರೆ.

'ನಗರದ ಬಿಐಇಸಿಯಲ್ಲಿ ನಿರ್ಮಿಸಲಾಗಿದ್ದ ಕೋವಿಡ್ ಕೇರ್ ಸೆಂಟರ್ ಹಾಸಿಗೆ ಮತ್ತು ಬೆಡ್‌ಗಳ ಖರೀದಿ-ಮಾರಾಟದಲ್ಲಿ ಶಾಸಕ ಎಸ್. ಆರ್. ವಿಶ್ವನಾಥ್ ಭ್ರಷ್ಟಾಚಾರ ಎಸಗಿದ್ದಾರೆ ಮತ್ತು ಭೂಹಗರಣದಲ್ಲಿ ಭಾಗಿಯಾಗಿದ್ದಾರೆ ಎಂಬ ಎಚ್. ವಿಶ್ವನಾಥ್ ಅವರ ಇನ್ನೊಂದು ಆರೋಪದ ಬಗ್ಗೆಯೂ ತನಿಖೆ ನಡೆಯಬೇಕು. ಸರ್ಕಾರವನ್ನು ಎಚ್.ವಿಶ್ವನಾಥ್ 'ಗುತ್ತಿಗೆದಾರರ ಸರ್ಕಾರ' ಎಂದು ಬಣ್ಣಿಸಿರುವುದು ನೋಡಿದರೆ ಅವರ ಬಳಿ ಬೇರೆ ಸಚಿವರ ಭ್ರಷ್ಟಾಚಾರದ ಮಾಹಿತಿಯೂ ಇದ್ದಂತಿದೆ' ಎಂದೂ ಹೇಳಿದ್ದಾರೆ.

ಕುಟುಂಬ ಹಸ್ತಕ್ಷೇಪದ ತನಿಖೆ ನಡೆಯಲಿ: ಎಚ್‌ಡಿಕೆ

'ಯಡಿಯೂರಪ್ಪ ಕುಟುಂಬದವರು ₹2 ಸಾವಿರ ಕೋಟಿ ಕಿಕ್ ಬ್ಯಾಕ್ ಪಡೆದಿದ್ದಾರೆ ಎಂದು ಸ್ವಪಕ್ಷೀಯರೇ ಆರೋಪ ಮಾಡಿದ್ದು, ಈ ಬಗ್ಗೆ ತನಿಖೆ ನಡೆಸಬೇಕು' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಆಗ್ರಹಿಸಿದ್ದಾರೆ.

'ರಾಕ್ಷಸ ಸರ್ಕಾರವೊಂದನ್ನು ಕೆಡವಿ ಅತ್ಯಂತ ಸಜ್ಜನ, ಸ್ವಚ್ಛ ಸರ್ಕಾರವನ್ನು ಪ್ರತಿಷ್ಠಾಪಿಸಿದವರೇ (ಎಚ್.ವಿಶ್ವನಾಥ್) ಈ ಆರೋಪ ಮಾಡಿದ್ದಾರೆ. ಹೀಗಾಗಿ ಈ ಪ್ರಕರಣವನ್ನು ತನಿಖೆಗೆ ಒಳಪಡಿಸಲೇಬೇಕು' ಎಂದು ಹೇಳಿದ್ದಾರೆ.

'2006ರಲ್ಲಿ ಮುಖ್ಯಮಂತ್ರಿಯಾಗಿದ್ದ ನನ್ನ ವಿರುದ್ಧ ಬಿಜೆಪಿ ನಾಯಕರೇ ₹150 ಕೋಟಿ ಗಣಿ ಲಂಚ ಆರೋಪ ಮಾಡಿದ್ದರು. ಸರ್ಕಾರದ ಪಾಲುದಾರ ಪಕ್ಷದವರೇ ದೂರಿದ್ದರಿಂದ ನಾನು ಅದನ್ನು ಲೋಕಾಯುಕ್ತಕ್ಕೆ ವಹಿಸಿ ಪಾರದರ್ಶಕತೆ ಕಾಯ್ದುಕೊಂಡಿದ್ದೆ. ಈಗ ತನಿಖೆ ಯಾಕಿಲ್ಲ? ಯಡಿಯೂರಪ್ಪನವರೇ, ನಾನು ಅಂದು ಇಟ್ಟಂಥ ಹೆಜ್ಜೆಯನ್ನೇ ಇಟ್ಟು ತಾವು ಪ್ರಾಮಾಣಿಕ ಎಂಬುದನ್ನು ಸಾಬೀತು ಮಾಡಿ' ಎಂದು ಕುಮಾರಸ್ವಾಮಿ ಒತ್ತಾಯಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಇರಾನ್: ಇಬ್ರಾಹಿಂ ರೈಸಿ ನೂತನ ಅಧ್ಯಕ್ಷರಾಗಿ ಆಯ್ಕೆ

ಇಬ್ರಾಹಿಂ ರೈಸಿ

ಟೆಹರಾನ್, ಅಂಕಾರಾ (ಎಎಫ್‌ಪಿ, ರಾಯಿಟರ್ಸ್, ಎಪಿ): 'ಇರಾನ್‌ನ ನೂತನ ಅಧ್ಯಕ್ಷರಾಗಿ ಇಬ್ರಾಹಿಂ ರೈಸಿ ಅವರು ಆಯ್ಕೆಯಾಗಿದ್ದಾರೆ. ವಿದೇಶಾಂಗ ಸಚಿವ ಮೊಹಮ್ಮದ್ ಜಾವಾದ್ ಜರೀಫ್ ಶನಿವಾರ ರೈಸಿ ಅವರ ಆಯ್ಕೆಯನ್ನು ಘೋಷಿಸಿದ್ದಾರೆ.

60 ವರ್ಷದ ರೈಸಿ ಅವರು ಆಗಸ್ಟ್‌ನಲ್ಲಿ ನೂತನ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಲಿದ್ದಾರೆ.

ಆನ್‌ಲೈನ್ ಕೋರ್ಸ್: 38 ವಿವಿಗಳಿಗೆ ಅನುಮತಿ

ನವದೆಹಲಿ: ಪೂರ್ಣ ಪ್ರಮಾಣದ ಆನ್‌ಲೈನ್ ಕೋರ್ಸ್‌ಗಳನ್ನು ಆರಂಭಿಸುವುದಕ್ಕೆ ವಿಶ್ವವಿದ್ಯಾಲಯ ಧನಸಹಾಯ ಆಯೋಗವು (ಯುಜಿಸಿ) ದೇಶದಾದ್ಯಂತ 38 ವಿಶ್ವವಿದ್ಯಾಲಯಗಳಿಗೆ ಅನುಮತಿ ನೀಡಿದೆ.

ಈ ವಿಶ್ವವಿದ್ಯಾಲಯಗಳು ಯುಜಿಸಿಯಿಂದ ಪೂರ್ವಾನುಮತಿ ಪಡೆಯದೆಯೇ ತಮ್ಮ ವ್ಯಾಪ್ತಿಯಲ್ಲಿನ ವಿಷಯಗಳಿಗೆ ಸಂಬಂಧಿಸಿದಂತೆ ಆನ್‌ಲೈನ್ ಕೋರ್ಸ್‌ನ್ನು ಪ್ರಾರಂಭಿಸಬಹುದಾಗಿದೆ. ಯುಜಿಸಿಯ ದೂರ ಶಿಕ್ಷಣ ನಿರ್ದೇಶನಾಲಯದ ಶಿಫಾರಸಿನ ಮೇಲೆ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಯುಜಿಸಿ ತಿಳಿಸಿರುವುದನ್ನು 'ಎನ್‌ಡಿಟಿವಿ' ವರದಿಮಾಡಿದೆ.

ರಾಜ್ಯದ ಕುವೆಂಪು ವಿವಿ, ಮೈಸೂರು ವಿವಿ, ಜೈನ್ ಡೀಮ್ಡ್ ವಿವಿ ಮತ್ತು ಯೇನೆಪೋಯ ಡೀಮ್ಡ್ ವಿವಿಗಳು ಇದರಲ್ಲಿ ಸೇರಿವೆ ಎಂದು ಹೇಳಲಾಗಿದೆ.

ಪೂರಕ ಪರೀಕ್ಷೆ ರದ್ದು ಕೋರಿ 'ಸುಪ್ರೀಂ'ಗೆ ಅರ್ಜಿ

ನವದೆಹಲಿ: 12ನೇ ತರಗತಿಯ ಪೂರಕ ಪರೀಕ್ಷೆ ಮತ್ತು ಖಾಸಗಿ ಅಭ್ಯರ್ಥಿಗಳ ಪರೀಕ್ಷೆಗಳನ್ನು ರದ್ದುಪಡಿಸಲು ಕೇಂದ್ರೀಯ ಪ್ರೌಢಶಿಕ್ಷಣ ಮಂಡಳಿಗೆ (ಸಿಬಿಎಸ್‌ಇ) ನಿರ್ದೇಶನ ನೀಡುವಂತೆ ಕೋರಿ 1,152 ವಿದ್ಯಾರ್ಥಿಗಳು ಸುಪ್ರೀಂಕೋರ್ಟ್ ಮೊರೆ ಹೋಗಿದ್ದಾರೆ.

ಪೂರಕ ಮತ್ತು ಖಾಸಗಿ ಅಭ್ಯರ್ಥಿಗಳ ಪರೀಕ್ಷೆಗಳನ್ನು ಭೌತಿಕ ಕ್ರಮದಲ್ಲಿ ನಡೆಸಲು ಮಂಡಳಿ ಮುಂದಾಗಿರುವುದು ಅದರ ಇಬ್ಬಗೆಯ ನೀತಿಯಾಗಿದೆ ಎಂದು ಅರ್ಜಿದಾರರು ದೂರಿದ್ದಾರೆ.

ಸ್ವಿಸ್ ಬ್ಯಾಂಕ್‌ನಲ್ಲಿ ಠೇವಣಿ: ಮಾಹಿತಿ ಕೇಳಿದ ಕೇಂದ್ರ

ನವದೆಹಲಿ (ಪಿಟಿಐ): ಭಾರತೀಯರು ಸ್ವಿಸ್ ಬ್ಯಾಂಕ್‌ನಲ್ಲಿ ಹೊಂದಿರುವ ಠೇವಣಿಗಳ ಕುರಿತು ಮಾಹಿತಿ ನೀಡುವಂತೆ ಭಾರತ ಸರ್ಕಾರವು ಬ್ಯಾಂಕ್‌ನ ಅಧಿಕಾರಿಗಳನ್ನು ಕೇಳಿದೆ.

ವ್ಯಕ್ತಿಗಳು ಮತ್ತು ಸಂಸ್ಥೆಗಳು 2020ರಲ್ಲಿ ಇಟ್ಟಿರುವ ಮೊತ್ತದಲ್ಲಿ ಆಗಿರುವ ಬದಲಾವಣೆಗಳಿಗೆ ಸಂಭವನೀಯ ಕಾರಣಗಳನ್ನು ನೀಡುವಂತೆ ಕೇಂದ್ರ ಹಣಕಾಸು ಸಚಿವಾಲಯ ಕೇಳಿದೆ. ಸ್ವಿಸ್ ಬ್ಯಾಂಕ್‌ನಲ್ಲಿ ಭಾರತೀಯರು ನೇರವಾಗಿ ಠೇವಣಿ ಇಡುತ್ತಿರುವ ಪ್ರಮಾಣವು 2019ರಿಂದ ಇಳಿಕೆ ಕಾಣುತ್ತಿದೆ ಎಂದಷ್ಟೇ ಸಚಿವಾಲಯ ಹೇಳಿದೆ. ಆದರೆ ಎಷ್ಟು ಮೊತ್ತ ಎನ್ನುವ ಮಾಹಿತಿ ನೀಡಿಲ್ಲ.

'ಭಾರತದವರು ಸ್ವಿಸ್ ಬ್ಯಾಂಕ್‌ಗಳಲ್ಲಿ ಇಟ್ಟಿರುವ ಹಣದ ಮೊತ್ತವು 2020ರಲ್ಲಿ ₹ 20,706 ಕೋಟಿಗೆ ಏರಿಕೆ ಕಂಡಿದೆ. ಬೇರೆ ಬೇರೆ ಹಣಕಾಸು ಉತ್ಪನ್ನಗಳ ಮೂಲಕ ಭಾರತದ ವ್ಯಕ್ತಿಗಳು ಹಾಗೂ ಸಂಸ್ಥೆಗಳಿಂದ ಸ್ವಿಸ್ ಬ್ಯಾಂಕ್‌ಗಳಲ್ಲಿ ಇಷ್ಟು ಮೊತ್ತವನ್ನು ಇರಿಸಲಾಗಿದೆ. 13 ವರ್ಷಗಳಲ್ಲಿನ ಅತಿಹೆಚ್ಚಿನ ಮೊತ್ತ ಇದಾಗಿದೆ' ಎಂದು ಸ್ವಿಸ್ ಬ್ಯಾಂಕ್ ಮಾಹಿತಿಯನ್ನು ಆಧರಿಸಿ ಸುದ್ದಿಸಂಸ್ಥೆಯು ವರದಿ ಮಾಡಿದೆ. ಈ ಹಿನ್ನೆಲೆಯಲ್ಲಿ ಭಾರತ ಸರ್ಕಾರವು ಬ್ಯಾಂಕ್‌ನಿಂದ ಮಾಹಿತಿ ಕೇಳಿದೆ.

ಭಾರತೀಯ ಕಂಪನಿಗಳ ಹೆಚ್ಚುತ್ತಿರುವ ವ್ಯಾಪಾರ ವಹಿವಾಟು, ಭಾರತದಲ್ಲಿ ನೆಲೆಗೊಂಡಿರುವ ಸ್ವಿಸ್ ಬ್ಯಾಂಕ್ ಶಾಖೆಗಳ ವ್ಯವಹಾರ ಹಾಗೂ ಸ್ವಿಸ್ ಮತ್ತು ಭಾರತೀಯ ಬ್ಯಾಂಕುಗಳ ನಡುವಿನ ಅಂತರ-ಬ್ಯಾಂಕ್ ವಹಿವಾಟಿನ ಹೆಚ್ಚಳ ಸೇರಿದಂತೆ ಇನ್ನೂ ಹಲವು ಕಾರಣಗಳಿಂದಾಗಿ ಠೇವಣಿಯಲ್ಲಿ ಹೆಚ್ಚಳ ಆಗಿರುವ ಸಾಧ್ಯತೆಯೂ ಇದೆ ಎಂದು ಸಚಿವಾಲಯ ಹೇಳಿದೆ.

ಭಾರತೀಯರು ಸ್ವಿಸ್ ಬ್ಯಾಂಕ್‌ಗಳಲ್ಲಿ ಇರಿಸಿದ್ದಾರೆ ಎನ್ನಲಾದ 'ಕಪ್ಪುಹಣ'ಕ್ಕೆ ಸಂಬಂಧಿಸಿದ ವಿವರ ಇದಲ್ಲ. ಬೇರೆ ದೇಶದ ಕಂಪನಿಗಳ ಹೆಸರಿನಲ್ಲಿ ಭಾರತೀಯರು, ಎನ್‌ಆರ್‌ಐಗಳು ಅಥವಾ ಇತರರು ಹೊಂದಿರಬಹುದಾದ ಹಣವನ್ನೂ ಇದು ಒಳಗೊಂಡಿಲ್ಲ ಎಂದು ಸಚಿವಾಲಯವು ಪ್ರಕಟಣೆಯಲ್ಲಿ ತಿಳಿಸಿದೆ.

ಪ್ರಜಾವಾಣಿ LIVE

Prajavani.net Prajavani Prajavani

ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರ ಪ್ರಸಾರ

ಸಂವಾದ

ಬಿಜೆಪಿ: ಮನೆಯೊಂದು, ಮೂರು ಬಾಗಿಲು?

ಸಂವಾದದಲ್ಲಿ ಭಾಗವಹಿಸುವವರು

ಪ್ರಿಯಾಂಕ್ ಖರ್ಗೆ
ಕಾಂಗ್ರೆಸ್ ಶಾಸಕ
ಕೆಪಿಸಿಸಿ ವಕ್ತಾರ

ತೇಜಸ್ವಿನಿ ಗೌಡ
ವಿಧಾನ ಪರಿಷತ್ ಸದಸ್ಯೆ
ಬಿಜೆಪಿ

ವೆಂಕಟರಾವ್ ನಾಡಗೌಡ
ಜೆಡಿಎಸ್ ಶಾಸಕ

ಸೋಮವಾರ, 21- 6-2021 ಸಮಯ- ಮಧ್ಯಾಹ್ನ 12 ರಿಂದ 1

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ

ಕೂಳೆ	700-800
ನಡುಗೋಲು	850-900
ರಾಶಿ	950-1000
ರಾಶಿ ಉತ್ತಮ	1000-1050
ಜರಡಿ	1150-1200
ಹೆರಕಿದ್ದು	1500-1600
ಹಸಿರು ಸಾಧಾರಣ	900-1000
ಹಸಿರು ಉತ್ತಮ	1100-1200
ಹಸಿರು ಅತಿ ಉತ್ತಮ	1400-1500
ಕಾಳು ಮೆಣಸು	390

ಅಡಿಕೆ
ಬಂಟ್ವಾಳ

ಕೋಕ	10000-22500
ಹೊಸತು	23500-42000
ಹಳತು	42500-52000

ಚಿತ್ರದುರ್ಗ

ಅಪಿ	41419-41829
ಬೆಟ್ಟೆ	33510-33969
ಕೆಂಪುಗೋಟು	27559-27900
ರಾಶಿ	40939-41399

ರಾಮನಗರ ರೇಷ್ಮೆ ಧಾರಣೆ

ಮಿಶ್ರತಳಿ (ಸಿ.ಬಿ)	200-389
ದ್ವಿತಳಿ (ಬಿ.ವಿ)	312-502

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

ಮೂಡಿಗೆರೆ	ಹಾಸನ			
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	10900	10700	10600	149.85 ಸೆಂಟ್ಸ್
ಎಸಿ	4730	4000	4050	
ಆರ್‌ಪಿ	5325	5100	5350	ಲಂಡನ್
ಆರ್‌ಸಿ	3125	3100	3100	1584 ಡಾಲರ್ಸ್

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹510
12 ಮೊಟ್ಟೆಗೆ	₹70

ಮೈಸೂರು

100 ಮೊಟ್ಟೆಗೆ	₹510

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈಂಡ್)	₹1430 (1430)
ಸೋಯಾ (ರಿಫೈಂಡ್)	₹1295 (1295)
ಸೂರ್ಯಕಾಂತಿ (ರಿಫೈಂಡ್)	₹1320 (1400)
ಪಾಮೋಲಿನ್	₹1140(1135)

ಮುಂಬೈ ಧಾರಣೆ

ಶೇಂಗಾ

19-6-2021

ಜಾವಾ 70/80(ಹೊಸ)	9750-9800
ಜಾವಾ 80/90(ಹೊಸ)	9050-9100
ದಪ್ಪ ಮಧ್ಯಪ್ರದೇಶ(ಹೊಸ)	10400-10500
ದಪ್ಪ ಗುಜರಾತ್(ಹೊಸ)	9300-9400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1440 (1400)
ಒಂದು ವಾರದ ಡೆಲಿವರಿ	1435 (1435)
ಸೋಯಾ ಕಚ್ಚಾ	1240 (1215)
ಪಾಮ್ ವಾರದ ಡೆಲಿವರಿ	1138 (1133)
ಸೂರ್ಯಕಾಂತಿ ಎಣ್ಣೆ ಕಚ್ಚಾ	1250 (1350)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
46,600 (46,900)
ಬೆಳ್ಳಿ ಕೆ.ಜಿ 68,200 (68,650)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

LOOKING TO BUILD, BUY OR SELL A PROPERTY

Please refer Classifieds on Sunday

ಕೈಲಾಸ ಸಮಾರಾಧನೆ

ಶ್ರೀಮತಿ ಡಿ. ಸಾವಿತ್ರಮ್ಮನವರು
(ಶ್ರೀ ಡಿ. ರಾಮಸ್ವಾಮಿಯವರ ಧರ್ಮಪತ್ನಿ)
ತಾ॥ 26–05–2021ನೇ ಬುಧವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾದ ಕೈಲಾಸ ಸಮಾರಾಧನೆಯ ಕಾರ್ಯವನ್ನು ತಾ॥ 20–06–2021ನೇ ಭಾನುವಾರ ಬೆಳಿಗ್ಗೆ 11 ಘಂಟೆಗೆ ಚಿತ್ರದುರ್ಗದ ಸ್ವಗೃಹದಲ್ಲಿ ನಡೆಸಲಾಗುವುದು. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ
ಇಂತಿ ದುಃಖಿತಪ್ತರು: ಶ್ರೀ ಡಿ. ರಾಮಸ್ವಾಮಿ ಮತ್ತು ಸಹೋದರರು ಮಕ್ಕಳು ಅಳಿಯಂದಿರು, ಮೊಮ್ಮಕ್ಕಳು, ಬಂಧು–ಬಳಗದವರು
ದೂರವಾಣಿ : 8197065448, 8904561456

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ರಿಯಲ್ ಎಸ್ಟೇಟ್ ಸೆಲ್ಲಿಂಗ್

Mysore

GOVIANU LUXURIA, High-end Luxury Flat at Mysore, Zoo Road, near Mysore Mall, Rera-003588, www.govianu.com. 8088330330

Residential/ Commercial

Bangalore North

ಬೆಂಗಳೂರು ಸಿಂಗಾಪುರದಲ್ಲಿ ಉತ್ತಮವಾಗಿ ನಿರ್ವಹಿಸಲ್ಪಟ್ಟ ಬಿಡಿಎ ವಿನ್ಯಾಸದಲ್ಲಿ ವಸತಿ ಪ್ಲಾಟ್ ಮಾರಾಟಕ್ಕೆ ಲಭ್ಯವಿದೆ ಪ್ರಸ್ತುತ ಚಾಲ್ತಿಯಲ್ಲಿರುವ ದರ ಪ್ರತಿ SQFT 6,000 ರೂ. ಪ್ಲಾಟ್ ಗಾತ್ರ 2400SQFT ಆಯಾಮ 60x40 ಪೂರ್ವಕ್ಕೆ ಎದುರಾಗಿರುವ ಆಸ್ತಿ ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ 9980366073

ವ್ಯಾಪಾರ

Business Offers

Business Centre

ಹಾಲಿ ಪ್ರಾವಿಜನ್ ಸ್ಟೋರ್ : ಬೆಂಗಳೂರಿನ ಶ್ರೀನಗರದಲ್ಲಿ ನಡೆಯುತ್ತಿದ್ದು , ಪಾಲುದಾರಿಕೆಯೊಂದಿಗೆ ಮುಂದುವರಿಸಲು ಆಸಕ್ತಿ ಇದ್ದಲ್ಲಿ ಸಂಪರ್ಕಿಸಿ : 9535663339.

ಭವಿಷ್ಯ

Astrology

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

★ಮಂತ್ರದುರ್ಗಿ ಮಾಂತ್ರಿಕರು★ ಕೇರಳ, ಕೊಳ್ಳೆಗಾಲದ ಮಂತ್ರಸಿದ್ಧ_ವಾಕ್ಸಿದ್ಧಿಯಿಂದ ಸ್ತ್ರೀಪುರುಷ ವಶೀಕರಣ ಕೆಲವೇ_ಗಂಟೆಗಳಲ್ಲಿ.ಫೋನಿನ_ ಮೂಖಾಂತರ ಶಾಶ್ವತ_ಪರಿಹಾರ. (ಸ್ತ್ರೀಪುರುಷ ವಶೀಕರಣ_ಸ್ಪೆಷಲಿಸ್ಟ್) ಪಂ.ರಾಮಚಂದ್ರಭಟ್. 9008711329

ಉದ್ಯೋಗಾವಕಾಶ

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

General

ಕರ್ನಾಟಕದಾದ್ಯಂತ ಪುನರಾರಂಭವಾಗಿರುವ ಪ್ರಸಿದ್ಧಕಂಪನಿ ಹಾಗೂ ಆಫೀಸ್ ಕೆಲಸಗಳಿಗೆಯುವಕ ಯುವತಿಯರು ಬೇಕಾಗಿದ್ದಾರೆ ವಸತಿಯೂಟದೊಂದಿಗೆ Salary+OT 16,800-45000/-.8792155097, 8792156697

To place your ad in Deccan Herald & Prajavani Classifieds
DH Classifieds More value, more impact
For details contact:
Jerry: 9731810277 Vishal: 9845114560 Tanveer: 9886213331
E-mail: dhclassifieds@deccanherald.co.in

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH ಪ್ರಜಾವಾಣಿ
BOOK YOUR CLASSIFIEDS ONLINE
5 EASY STEP TO BOOK YOUR CLASSIFIEDS ADS ONLINE
condition apply*
5 Easy steps to book your ads
1 LOG INTO WWW.DHCLASSIFIEDS.COM
2 CHOOSE THE CATEGORY
3 CHOOSE THE AD DATES
4 COMPOSE THE MATTER
5 CONFIRM AND PAY
REAL ESTATE JOB NOTICE NAME CHANGE ANY OTHER CATEGORY
WWW.DHCLASSIFIEDS.COM
9880856233
9886213331
E-mail: dhclassifieds@deccanherald.co.in

ಪ್ರಜಾವಾಣಿ
ಭಾನುವಾರದ ಪುರವಣಿ
ಭಾನುವಾರ, 20 ಜೂನ್ 2021


ಭೂಗತ ಪ್ರಪಂಚದ ರಾಣಿ 11


ರಂಗಲೋಕದ ಬಹದ್ದೂರ! 12

ಪೌರಕಾರ್ಮಿಕರ ಸ್ವಾಮೀಜಿ 13

ಮೋಹಿನಿ ಪಾಶದಲ್ಲಿ ಮಾಧ್ಯಮ!

ಭಾರತದ ಮಾಧ್ಯಮರಂಗ ಹಿಂದೆಂದಿಗಿಂತಲೂ ಆಳವಾದ ಕೆಸರಿನ ಗುಂಡಿಯಲ್ಲಿ ಬಿದ್ದು ಒದ್ದಾಡುತ್ತಿದೆ. ಅದು ತನ್ನನ್ನು ತಾನು ಬಿಡಿಸಿಕೊಳ್ಳಲು ಒದ್ದಾಡಿದಷ್ಟೂ ಮತ್ತಷ್ಟು ಆಳಕ್ಕೆ ಇಳಿಯುತ್ತಲೇ ಇದೆ. ಒಂದು ಕಾಲಕ್ಕೆ ಜನಸ್ನೇಹಿಯಾಗಿದ್ದ ಮಾಧ್ಯಮ ಇಂದು ತನ್ನ ಮೂಲ ಕರ್ತವ್ಯವನ್ನೇ ಮರೆತು ಈ ರೀತಿ ಭಸ್ಮಾಸುರನ ರೂಪ ತಾಳಿದ್ದಾದರೂ ಹೇಗೆ? ಭಾರತೀಯ ಮೂಲದ ಪತ್ರಕರ್ತೆಗೆ ಪುಲಿಟ್ಜರ್ ಪ್ರಶಸ್ತಿ ಘೋಷಣೆಯಾಗಿರುವ ಈ ಸಂದರ್ಭದಲ್ಲಿ ಹೀಗೊಂದು ಮಂಥನ...

ಎಚ್.ಆರ್.ಸುರೇಶ

ಬೆಳ್ಳಿಬೆಳಕು, ಇದು ಭರವಸೆಯ ಪ್ರತೀಕ. ಭರವಸೆ ಎಂಬುದು ಇಲ್ಲದೇ ಇದ್ದರೆ ಬದುಕೇ ದುರ್ಬರ. ಕಗ್ಗತ್ತಲಿನ ಮರೆಯಲ್ಲಿಯೂ ಬೆಳಕಿನ ಬೆಳ್ಳಿಗೆರೆಯೊಂದು ಇದ್ದೇ ಇರುತ್ತದೆ; ಮುಚ್ಚಿದ ಕಿಟಕಿಯ ಬಾಗಿಲ ಸಂದಿನ ತೆಳುವಾದ ಬಿರುಕಿನ ಮೂಲಕ ಕಾಣಸಿಗುವ ಕಿರಣದ ಕೋಲಿನಂತೆ. ಪತ್ರಿಕಾ ರಂಗದ ಸಾಧಕರಿಗೆ ದೊರೆಯುವ ಪುಲಿಟ್ಜರ್ ಪ್ರಶಸ್ತಿಯೂ ಅಂತಹ ಬೆಳಕಿನ ಬೆಳ್ಳಿಗೆರೆಯೇ ಆಗಿದೆ.

ಭಾರತದ ಮಾಧ್ಯಮರಂಗ ಹಿಂದೆಂದಿಗಿಂತಲೂ ಆಳವಾದ ಕೆಸರಿನ ಗುಂಡಿಯಲ್ಲಿ ಬಿದ್ದು ಒದ್ದಾಡುತ್ತಿದೆ. ಅದು ತನ್ನನ್ನು ತಾನು ಬಿಡಿಸಿಕೊಳ್ಳಲು ಒದ್ದಾಡಿದಷ್ಟೂ ಮತ್ತಷ್ಟು ಆಳಕ್ಕೆ ಇಳಿಯುತ್ತಲಿದೆ. ಇಂತಹ ವಿಕ್ಷಿಪ್ತ ಸನ್ನಿವೇಶದಲ್ಲಿ ಭಾರತೀಯ ಮೂಲದ ಪತ್ರಕರ್ತೆ ಮೇಘಾ ರಾಜಗೋಪಾಲನ್ ಪುಲಿಟ್ಜರ್ ಪ್ರಶಸ್ತಿಗೆ ಪಾತ್ರರಾಗಿರುವ ಸುದ್ದಿ ಬಂದಿದೆ. ಚೀನಾ ದೇಶದಲ್ಲಿ ದಸ್ತಗಿರಿ ಮಾಡಲ್ಪಟ್ಟ ಮುಸ್ಲಿಮರ ಸ್ಥಿತಿಗತಿಗಳನ್ನು ತೆರೆದಿಡುವ ತನಿಖಾ ವರದಿಗಾಗಿ ಅವರಿಗೆ ಪ್ರಶಸ್ತಿ ಒಲಿದಿದೆ. ಚೀನಾದ ಒತ್ತಡ ತಂತ್ರಕ್ಕೆ ಮಣಿಯದೇ ವರದಿ ಸಿದ್ಧಪಡಿಸುವಲ್ಲಿ ಅವರು ಮಾಡಿದ ಪ್ರಯತ್ನ ಪತ್ರಕರ್ತರಿಗೆಲ್ಲ ಮಾದರಿ.

ಭಾರತದ ಮಾಧ್ಯಮರಂಗ -ಮುದ್ರಣ ಮತ್ತು ವಿದ್ಯುನ್ಮಾನ- ಕೆಸರಿನಲ್ಲಿ ಸಿಲುಕಿ ಒದ್ದಾಡುತ್ತಿರುವುದು ಕೇವಲ ಎರಡೂವರೆ ದಶಕಗಳ ಕಥೆಯೇನೂ ಅಲ್ಲ. ಅದಕ್ಕೂ ಮೊದಲಿನಿಂದಲೂ ಒದ್ದಾಡುವ ಪ್ರಕ್ರಿಯೆ ನಡೆಯುತ್ತಲೇ ಇದೆ. ವ್ಯತ್ಯಾಸವೇನೆಂದರೆ ಆಗೆಲ್ಲ ಪತ್ರಕರ್ತರು ಮಾತ್ರ ಆ ಕೆಸರಿನಲ್ಲಿ ಸಿಕ್ಕಿಕೊಂಡಿರುತ್ತಿದ್ದರು. ಇಂದು ಇಡೀ ಮಾಧ್ಯಮರಂಗವೇ ಅದರಲ್ಲಿ ಸಿಲುಕಿಕೊಂಡು ಬಿಡಿಸಿಕೊಳ್ಳಲು ಕೊಸರಾಡ ಬಯಸದೇ ಆನಂದಾತಿಶಯವನ್ನು ಅನುಭವಿಸುತ್ತಿದೆ.

ಹಿಂದೆಲ್ಲ ಕೆಸರಿನಲ್ಲಿ ಸಿಲುಕಿಕೊಳ್ಳುವುದು ತೀರಾ ವೈಯಕ್ತಿಕವಾಗಿರುತ್ತಿತ್ತು. ಅದಕ್ಕಿದ್ದ ಕಾರಣಗಳಲ್ಲಿ ಆರ್ಥಿಕ, ಕೌಟುಂಬಿಕ, ಚಟದಾಸ್ಯ ಪ್ರಮುಖವಾಗಿದ್ದವು. ಇದರಿಂದ ಮಾಧ್ಯಮರಂಗದ ಮೇಲೆ ಅಂತಹ ಭಯಂಕರ ಪರಿಣಾಮವೇನೂ ಆಗುತ್ತಿರಲಿಲ್ಲ. ಆದರೆ, ಇಂದು ಇಡೀ ಮಾಧ್ಯಮ ವ್ಯವಸ್ಥೆಯೇ ಕೆಸರಿನ ಗುಂಡಿಯಲ್ಲಿ ಬಿದ್ದಿರುವುದರಿಂದ ಸಮಾಜದ ಕಟ್ಟಕಡೆಯ ವ್ಯಕ್ತಿಯೂ ಭೀಕರ ಪರಿಣಾಮವನ್ನು ಎದುರಿಸಬೇಕಾಗಿದೆ. ಇದಕ್ಕೆ ಕಳೆದ ಒಂದೂವರೆ ವರ್ಷದಲ್ಲಿ ಮುಂಚೂಣಿ ಮಾಧ್ಯಮ ಸಂಸ್ಥೆಗಳು -ಅಪವಾದ ಹೊರತುಪಡಿಸಿ- ಎಸಗಿದ ಅವಾಂತರಗಳಿಂದಾಗಿ ಬಹುದೊಡ್ಡ ಸಮೂಹವೊಂದು ತುತ್ತು ಅನ್ನಕ್ಕೂ ತತ್ವಾರಪಡಬೇಕಾದ ಸ್ಥಿತಿಗೆ ಸಿಲುಕಿ ಒದ್ದಾಡಿದ್ದೇ ದೊಡ್ಡ ಉದಾಹರಣೆ (ಆ ಪ್ರಮಾದಕ್ಕಾಗಿ ಸುದ್ದಿ ಪ್ರಸಾರ ಗುಣಮಟ್ಟ ಪ್ರಾಧಿಕಾರ ಈಗ ಕೆಲವು ಚಾನೆಲ್‌ಗಳಿಗೆ ದಂಡ ವಿಧಿಸಿದೆ). ಈ ಸಮೂಹದ ಒದ್ದಾಟ ಮುಂಚೂಣಿ ಮಾಧ್ಯಮಗಳ ಕಣ್ಣು, ಕಿವಿಗಳಿಗೆ ಬೀಳಲೇ ಇಲ್ಲ. ಬಿದ್ದರೂ ತನ್ನ ಕೆಸರಿನ ಗುಂಡಿ ವಾಸದ ಪರಿಣಾಮವಾಗಿ ಅವಕ್ಕೆ ಜಾಣಕುರುಡು, ಕಿವುಡು ಆಕ್ರಮಿಸಿಬಿಟ್ಟಿತ್ತು.

ಯಾವಾಗ ಮಾಧ್ಯಮರಂಗಕ್ಕೂ ವಿದೇಶಿ ನೇರ ಬಂಡವಾಳದ (ಪ್ರತ್ಯಕ್ಷ, ಪರೋಕ್ಷ) ಹರಿವು ಹಾಗೂ ಪ್ರಮುಖ ಉದ್ಯಮಿಗಳ ಹೂಡಿಕೆ ಆರಂಭವಾಯಿತೋ ಆಗಿನಿಂದಲೇ ಅದರ ಕೆಸರಿನ ಗುಂಡಿಯ ವಾಸದ ಸಮಯವೂ ಆರಂಭವಾಯಿತು ಎಂದು ಅಂದಾಜಿಸಬಹುದು. ವಿದೇಶಿ ಬಂಡವಾಳ ಮಾಧ್ಯಮರಂಗದಲ್ಲಿ ತೊಡಗಿಸಲ್ಪಟ್ಟರೆ ಇಂಥದೊಂದು ಸ್ಥಿತಿ ಬಂದೇ ಬರುತ್ತದೆ ಎಂದು ಅನೇಕ ಹಿರಿಯ ಪತ್ರಕರ್ತರಿಗೆ ಆಗಲೇ ಗೋಚರಿಸಿತ್ತು. ಅದನ್ನು ಅವರು ಅಂತರಂಗದಲ್ಲಿ, ಬಹಿರಂಗದಲ್ಲಿ ಹೇಳಿದ್ದರು ಕೂಡ. ಆದರೆ, ಅದನ್ನು ಕೇಳಿಸಿಕೊಳ್ಳುವ, ಎದುರಾಗಬಹುದಾದ ಪರಿಣಾಮಗಳ ಬಗೆಗೆ ಗಂಭೀರವಾಗಿ ಚರ್ಚಿಸುವ ಪ್ರಯತ್ನ ಮಾಡಿದವರೇ ಇಲ್ಲ.

ಇದಕ್ಕೊಂದು ಉದಾಹರಣೆ 'ದಿ ಹಿಂದೂ' ಪತ್ರಿಕೆಯ ಎನ್. ರಾಮ್ ಅವರ ಮಾತು -ಅದು 1997-98ನೇ ಇಸವಿ. ಏಷ್ಯನ್ ಸ್ಕೂಲ್ ಆಫ್ ಜರ್ನಲಿಸಂನ ಘಟಿಕೋತ್ಸವ ಬೆಂಗಳೂರಿನಲ್ಲಿ ನಡೆದಿತ್ತು. ಆ ಕಾರ್ಯಕ್ರಮಕ್ಕೆ ಅವರು ಮುಖ್ಯ ಅತಿಥಿಯಾಗಿದ್ದರು. ಅಲ್ಲಿ ಅವರು ಮಾತನಾಡುತ್ತ- ಭಾರತ ಸರ್ಕಾರ ಮಾಧ್ಯಮರಂಗಕ್ಕೂ ವಿದೇಶಿ ನೇರ ಬಂಡವಾಳ ಆಹ್ವಾನಿಸುತ್ತಿದೆ. ವಿದೇಶಿ ಬಂಡವಾಳ ತನ್ನೊಂದಿಗೆ ಹಣವನ್ನಷ್ಟೇ ತರುವುದಿಲ್ಲ, ಅದು ಇಲ್ಲಿನ ಸಂಸ್ಕೃತಿ ನಾಶ ಮಾಡಬಲ್ಲ ಶಕ್ತಿಗಳನ್ನೂ ತರುತ್ತದೆ. ಆದುದರಿಂದ ಭಾರತೀಯ ಮಾಧ್ಯಮರಂಗ ವಿದೇಶಿ ನೇರ ಬಂಡವಾಳವನ್ನು ವಿರೋಧಿಸಬೇಕು ಇಲ್ಲವೇ ದೇಶದೊಳಕ್ಕೆ ಪ್ರವೇಶಿಸಿದ ಶಕ್ತಿಗಳನ್ನು ಎದುರಿಸುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳಬೇಕು ಎಂಬರ್ಥದ ಮಾತುಗಳನ್ನು ಹೇಳಿದ್ದರು. ಅವರ ಅಂದಿನ ಅನುಮಾನ ಇಂದು ವಾಸ್ತವವಾಗಿದೆ.

ಕೆಸರಿನ ಗುಂಡಿಗೆ ಬೀಳುವುದಕ್ಕೆ ಸಂಬಂಧಿಸಿದಂತೆ ಇದು ಒಂದು ಕಾರಣವಾದರೆ ಜನರ ಧ್ವನಿಯಾಗಿದ್ದ ಮಾಧ್ಯಮರಂಗ ಹಣದ ಹರಿವಿನ ಕಾರಣದಿಂದಾಗಿ ಮಾಧ್ಯಮೋದ್ಯಮವಾಗಿ ಬದಲಾದುದು ಮತ್ತೊಂದು ಕಾರಣ. ಹಣದ ಹರಿವು ಆರಂಭವಾದ ಸಂದರ್ಭದಲ್ಲಿ ಈ ರಂಗದಲ್ಲಿದ್ದ ಅನೇಕರು ಖುಷಿಪಟ್ಟಿದ್ದುಂಟು. ಇದಕ್ಕೆ ಕಾರಣವೂ ಇತ್ತು. ಹಿಂದೆಂದೂ ಈ ಪ್ರಮಾಣದ ಹಣದ ಹರಿವನ್ನು ಮಾಧ್ಯಮ ಕಂಡಿರಲಿಲ್ಲ. ಎಲ್ಲಿಯವರೆಗೆ ಮಾಧ್ಯಮ 'ರಂಗ'ವಾಗಿತ್ತೋ ಅಲ್ಲಿಯವರೆಗೆ ಜನರ ನೋವಿಗೆ ಮಿಡಿವ ಸಜ್ಜಿಕೆಯಂತಿತ್ತು, ಮಿತ್ರನಾಗಿತ್ತು. ಮಾಧ್ಯಮ 'ಉದ್ಯಮ' ಆಗುತ್ತಿದ್ದಂತೆಯೇ ಕಾಂಚಾಣದ ಝಣತ್ಕಾರ ಥಕಥೈ ಎಂದು ರಾಕ್ಷಸ ಕುಣಿತ ಆರಂಭಿಸಿತು. ಅದರ ಫಲವಾಗಿ ಹಣವಿದ್ದವರ ಕೈಗೊಂಬೆಯಾಗುವ, ಆಡಳಿತಗಾರರನ್ನು ತಂದು ಕೂರಿಸುವ, ಕೈಗೊಂಬೆಯಾಗದವರ ಅಧಿಕಾರಕ್ಕೆ ಸಂಚಕಾರ ತರುವ ಪ್ರವೃತ್ತಿ ಮಾಧ್ಯಮೋದ್ಯಮದಲ್ಲಿ ಆರಂಭವಾಯಿತು.

ಮಾಧ್ಯಮವನ್ನು ಬಳಸಿಕೊಂಡು ತನ್ನಿಚ್ಛೆಯಂತೆ ಇತರರನ್ನು ಕುಣಿಸಲು ಪ್ರಯತ್ನಿಸುವ ಮಾಧ್ಯಮೋದ್ಯಮಿ ರುಪರ್ಟ್ ಮುರ್ದೋಕ್ ಪ್ರತಿರೂಪಗಳು ಭಾರತದಲ್ಲೂ ತಲೆ ಎತ್ತಿದವು. ಇದರ ಢಾಳುಢಾಳಾದ ಚಿತ್ರಗಳು ಇಂದು ದೇಶದ ಎಲ್ಲೆಡೆ ಕಣ್ಣಿಗೆ ರಾಚುವಷ್ಟು ಸ್ಪಷ್ಟವಾಗಿ ಗೋಚರಿಸುತ್ತಿವೆ. ಅದು ಮುದ್ರಣ ಮಾಧ್ಯಮದಲ್ಲೂ ವಿಭಿನ್ನ ರೂಪದಲ್ಲಿ ಅವತರಿಸಿದೆ. ಪರಿಣಾಮವಾಗಿ ಸುದ್ದಿ ರೂಪದ ಜಾಹೀರಾತುಗಳು, ಕಾಸಿಗಾಗಿ ಸುದ್ದಿಗಳು ಪುಟಗಳನ್ನು ಆಕ್ರಮಿಸಿ ಕುಳಿತಿವೆ. ಒಂದು ಕಾಲಕ್ಕೆ ಸಮಾಜದಲ್ಲಿ ಗೌರವ, ಹೆಮ್ಮೆಗಳನ್ನು ಗಳಿಸಿದ್ದ ಮಾಧ್ಯಮರಂಗ ಇದರಿಂದಾಗಿಯೇ ಇಂದು ಜನರ ಕಣ್ಣಿನಲ್ಲಿ ಭಯೋತ್ಪಾದಕನಾಗಿಯೋ, ಕಾಸು ಇದ್ದವರ ತಾಳಕ್ಕೆ ತಕ್ಕಂತೆ ಕುಣಿಯುವ ಕರಡಿಯಂತೆಯೋ ಗೋಚರಿಸತೊಡಗಿದೆ.

ಕಳೆದೊಂದು ವರ್ಷದಲ್ಲಿ ಸತ್ಯಕ್ಕೆ ಸಮೀಪವಾದ ಸುದ್ದಿಗಳನ್ನು ಬಿತ್ತರಿಸುವವರ ವಿರುದ್ಧ 'ರಣಹದ್ದುಗಳು' ಎಂಬ ಉಪಮೆ ಬಳಸುವುದನ್ನು ನೀವು ಗಮನಿಸಿರಬಹುದು. ಇದಕ್ಕೊಂದು ಹಿನ್ನೆಲೆ ಇದೆ. 1992ರಲ್ಲಿ ಸುಡಾನ್ ದೇಶದ ಭೀಕರ ಕ್ಷಾಮದ ಸಮಯದಲ್ಲಿ ಗಂಜಿ ಕೇಂದ್ರದ ಸಮೀಪ ಪುಟ್ಟ ಹುಡುಗಿಯೊಬ್ಬಳು ತೆವಳಲೂ ಆಗದ ಸ್ಥಿತಿಯಲ್ಲಿ ನೆಲಕ್ಕೆ ತಲೆಯೂರಿ ಕುಳಿತಿದ್ದು, ಅವಳ ಸಾವಿನ ನಿರೀಕ್ಷೆಯಲ್ಲಿಯೇ ಕುಳಿತ ರಣಹದ್ದಿನ ಚಿತ್ರವನ್ನು ಕ್ಲಿಕ್ಕಿಸಿದ ಕೆವಿನ್ ಕಾರ್ಟರ್‌ಗೆ ಪುಲಿಟ್ಸರ್ ಪ್ರಶಸ್ತಿ ದೊರೆತಿತ್ತು. ಆದರೆ, ಪ್ರಶಸ್ತಿ ಗಳಿಸಿದ ಕೆವಿನ್‌ಗೆ ಕ್ಷಾಮದ ದಾರುಣ ನೆನಪುಗಳಿಂದ ಕಳಚಿಕೊಳ್ಳುವುದು ಸಾಧ್ಯವೇ ಆಗಲಿಲ್ಲ. ಅವರಿಗೆ ಖಿನ್ನತೆ ಅವರಿಸಿತು. ಇದರಿಂದ ಹೊರಬರಲಾಗದೇ ಅದೇ ವರ್ಷ ಕೆವಿನ್ ಆತ್ಮಹತ್ಯೆ ಮಾಡಿಕೊಂಡರು. ಇದೇ ವಿಷಯವನ್ನು ಆಧರಿಸಿ ಛಾಯಾಚಿತ್ರದಲ್ಲಿನ ರಣಹದ್ದನ್ನೇ ಗಮನದಲ್ಲಿ ಇಟ್ಟುಕೊಂಡು, ಸತ್ಯಕ್ಕೆ ಸಮೀಪವಾದುದನ್ನು ಹೇಳಲು ಪ್ರಯತ್ನಿಸಿದವರನ್ನೆಲ್ಲ ರಣಹದ್ದುಗಳಿಗೆ ಹೋಲಿಸಿ ಹೀಯಾಳಿಸತೊಡಗಿತು ಆಡಳಿತದಲ್ಲಿರುವ ರಾಜಕೀಯ ಪಕ್ಷ. ಆ ಪಕ್ಷದ ವಕ್ತಾರರು ಹೀಯಾಳಿಸಿ ಮಾತನಾಡುವುದಕ್ಕೆ ಪ್ರಾಶಸ್ತ್ಯ ನೀಡಿ ವೀಕ್ಷಕರಿಗೆ ತೋರಿಸುವುದೂ ನಡೆಯಿತು. ಆ ಮೂಲಕ ಭಾರತೀಯ ಪತ್ರಕರ್ತರನ್ನು ಮಧ್ಯದಲ್ಲಿ ಇಟ್ಟುಕೊಂಡು ಕೆವಿನ್ ಕಾರ್ಟರ್‌ರ ಚಾರಿತ್ರ್ಯಹನನಕ್ಕೂ ಪ್ರಯತ್ನಿಸಲಾಯಿತು ಎನ್ನುವುದನ್ನು ನಿರ್ಲಕ್ಷಿಸುವಂತಿಲ್ಲ.

ಸುದ್ದಿಯಲ್ಲದ ವಿಷಯ ಸುದ್ದಿ ರೂಪ ತಾಳಿ ಬಂದುದನ್ನು ಕಂಡಾಗ ಸಂಪಾದಕರೊಬ್ಬರು ಹೇಳುತ್ತಿದ್ದುದೇನೆಂದರೆ- ಓದುಗರಿಗೆ ಬೇಕಾದುದನ್ನು ಪತ್ರಿಕೆಗಳು (ಇದನ್ನು ನೋಡುಗರು, ಟಿವಿ ವಾಹಿನಿಗಳು ಎಂದೂ ಬದಲಾಯಿಸಿಕೊಳ್ಳಬಹುದು) ಕೊಡಬೇಕು. ನಮಗೆ ತಿಳಿಯಿತು ಎಂದು ಇಲ್ಲಸಲ್ಲದುದನ್ನೆಲ್ಲ ಪುಟಗಳಲ್ಲಿ (ಟಿವಿ ಪರದೆಯಲ್ಲಿ) ತುರುಕುವುದಲ್ಲ. ಇಷ್ಟು ಮಾತ್ರವಲ್ಲ ಓದುಗರನ್ನು ಬುದ್ಧಿಗೇಡಿಗಳು, ದಡ್ಡರು, ತಿಳಿಗೇಡಿಗಳು, ಹೆಡ್ಡರು, ಪೆದ್ದರು ಎಂದು ಯಾವತ್ತೂ ಭಾವಿಸಬಾರದು. ಅವರಿಗೂ ಪ್ರಕಟಗೊಂಡ ಸುದ್ದಿಗಳಿಗೆ ಸಂಬಂಧಿಸಿದಂತೆ ಚಿಂತನೆ ನಡೆಸುವ, ನಿಲುವುಗಳನ್ನು ತಳೆಯುವ ಅವಕಾಶ ಕಲ್ಪಿಸಬೇಕು. ಏಕೆಂದರೆ, ಓದುಗರು ನಮಗಿಂತ ಹೆಚ್ಚು ತಿಳಿದವರೋ ಇಲ್ಲವೇ ಕಡಿಮೆ ತಿಳಿವಳಿಕೆಯವರೋ ಆಗಿದ್ದಿರಲಿಕ್ಕೂ ಸಾಕು. ಅವರು ಅವರವರ ಮಟ್ಟಕ್ಕೆ ತಕ್ಕಂತೆ ಸುದ್ದಿಗಳಿಗೆ ಸಂಬಂಧಿಸಿ ಚಿಂತನೆ ನಡೆಸುವವರೇ ಆಗಿರಬಹುದು. ಪತ್ರಿಕೆಯಲ್ಲಿ ದುಡಿಯುವ ಅವಕಾಶ ನಮಗೆ ಸಿಕ್ಕಂತೆ ಅವರಿಗೆ ಸಿಕ್ಕಿರಲಿಕ್ಕಿಲ್ಲ ಅಥವಾ ನಾವು ಬರೆದಷ್ಟು ಅಚ್ಚುಕಟ್ಟಾಗಿ ಬರೆಯಲು ಇಲ್ಲವೇ ಹೇಳಲು ಅವರಿಗೆ ಬಾರದೇ ಇರಬಹುದು ಅಷ್ಟೇ ಎಂಬುದಾಗಿತ್ತು.

ಇದೇ ಮಾತನ್ನು ಇಂದು ನಾವು 'ಓದುಗರು' ಎಂಬ ಸ್ಥಾನದಲ್ಲಿ 'ನೋಡುಗರು' ಎಂದು ಬದಲಾಯಿಸಿಕೊಂಡು ಪರಾಮರ್ಶಿಸಿದಲ್ಲಿ ಮಾಧ್ಯಮೋದ್ಯಮ ಜನರ ಮೇಲೆ ಹೇಗೆ ಸವಾರಿ ಮಾಡುತ್ತಲಿದೆ ಎಂಬುದು ತಿಳಿವಿಗೆ ಬರಬಲ್ಲದು.

ಕಳೆದೊಂದು ವರ್ಷದ ಕೊರೊನಾ ಕಾಲದಲ್ಲಂತೂ ಟಿವಿ ವಾಹಿನಿಗಳು ಜನರಿಗೆ ವೈದ್ಯಕೀಯ ಮಾಹಿತಿ ಕೊಟ್ಟಿದ್ದಕ್ಕಿಂತ ಅವರನ್ನು ಹೆದರಿಸಿ ನಿಯಂತ್ರಿಸಿದ್ದೇ ಹೆಚ್ಚು. ಇದರ ಪರಿಣಾಮವಾಗಿ ಅನೇಕರು ಸುದ್ದಿವಾಹಿನಿಗಳನ್ನು ನೋಡುವುದನ್ನೇ ನಿಲ್ಲಿಸಿದ್ದುಂಟು. ಆದರೆ, ತಮ್ಮ ಕೆಟ್ಟ ಚಾಳಿಯನ್ನು ಮಾತ್ರ ಎರಡನೇ ಅಲೆಯ ನಂತರವೂ ಕೆಲವು ವಾಹಿನಿಗಳು ನಿಲ್ಲಿಸಿಲ್ಲ ಎಂಬುದೂ ಅಷ್ಟೇ ಸತ್ಯ. ಇದನ್ನು ಅವಲೋಕಿಸಿದರೆ ಜನರಿಗೆ ಸಮಗ್ರ ಮಾಹಿತಿ ಒದಗಿಸಿ ತಿಳಿವಳಿಕೆ ಉಳ್ಳವರನ್ನಾಗಿ ಮಾಡಬೇಕೆಂಬ ಉದ್ದೇಶ ಮತ್ತು ಗುರಿಯೇ ಇವಕ್ಕೆ ಇದ್ದಂತೆ ಕಾಣುವುದಿಲ್ಲ.

ಮುಂದಿನ ಪುಟಕ್ಕೆ...



ಒಳ್ಳೆಯ ದಿನಗಳ ಕನಸು ಕಾಣುತ್ತಾ... 1967ರಲ್ಲಿ ನಡೆದ ವಿಯಟ್ನಾಂ ಯುದ್ಧದಲ್ಲಿ ಪಾಲ್ಗೊಂಡಿದ್ದ ಅಮೆರಿಕದ ಸೈನಿಕನೊಬ್ಬ ಸುರಿಯುವ ಮಳೆಯಲ್ಲೇ ಮರಳಿನ ಚೀಲದ ಮೇಲೆ ಮಲಗಿ ಸಣ್ಣ ನಿದ್ರೆ ತೆಗೆಯುತ್ತಿದ್ದ ಈ ಚಿತ್ರವನ್ನು ಸೆರೆ ಹಿಡಿದವರು ಜಪಾನ್‌ನ ತೋಷಿಯೊ ಸಕಾಯ್. ಈ ಚಿತ್ರಕ್ಕೆ 1968ರಲ್ಲಿ ಪುಲಿಟ್ಜರ್ ಪ್ರಶಸ್ತಿ ಸಿಕ್ಕಿತ್ತು

ಮೇಘಾ ರಾಜಗೋಪಾಲನ್

ಚೀನಾ ಸರಹದ್ದಿನಲ್ಲಿ ಮೇಘಾ ಸಾಹಸ

ದಸ್ತಗಿರಿ ಮಾಡಲ್ಪಟ್ಟು ಬಂದೀಖಾನೆಯಲ್ಲಿ ಇರಿಸಲ್ಪಟ್ಟಿರುವ ಮುಸ್ಲಿಮರ ಸ್ಥಿತಿಗತಿ ಕುರಿತ ತನಿಖಾ ವರದಿಯನ್ನು 'ಬಝ್‌ಫೀಡ್ ನ್ಯೂಸ್'ಗಾಗಿ ಸಿದ್ಧಪಡಿಸುವಲ್ಲಿ ಮೇಘಾ ರಾಜಗೋಪಾಲನ್ ನಿರತರಾಗಿದ್ದಾರೆ ಎನ್ನುವುದು ಗೊತ್ತಾಗುತ್ತಿದ್ದಂತೆ ಅವರ ವೀಸಾವನ್ನು ರದ್ದುಪಡಿಸಿದ ಚೀನಾ, ದೇಶದಿಂದ ಹೊರಗೆ ಕಳುಹಿಸಿತು. ಆದರೆ, ಅವರು ಪ್ರಯತ್ನವನ್ನು ನಿಲ್ಲಿಸಲಿಲ್ಲ. ಚೀನಾದ ಷಿನ್‌ಜಿಯಾಂಗ್ ಪ್ರಾಂತ್ಯಕ್ಕೆ ಹೊಂದಿಕೊಂಡ ಕಜಕಸ್ತಾನ ದೇಶದಲ್ಲಿ ಆಶ್ರಯ ಪಡೆದಿರುವ ಮುಸ್ಲಿಮರನ್ನು ಸಂಪರ್ಕಿಸಿ ಮಾಹಿತಿ ಕಲೆ ಹಾಕಿದರು. ಇಷ್ಟು ಮಾತ್ರವಲ್ಲ, ವಾಸ್ತುಶಿಲ್ಪಗಳು ಮತ್ತು ಉಪಗ್ರಹ ಚಿತ್ರಗಳನ್ನು ವಿಜ್ಞಾನ ಶಾಸ್ತ್ರೀಯವಾಗಿ ವಿಶ್ಲೇಷಿಸುವ ಪರವಾನಗಿ ಹೊಂದಿದ ವಾಸ್ತುಶಿಲ್ಪಿ ಅಲಿಸನ್ ಕಿಲ್ಲಿಂಗ್ ಮತ್ತು ದತ್ತಾಂಶಗಳನ್ನು ವಿಶ್ಲೇಷಿಸಲು ಪತ್ರಕರ್ತರಿಗೆ ತಂತ್ರಾಂಶ ರೂಪಿಸಿ ಕೊಡುವ ಕ್ರಿಸ್ಟೋ ಬಷೆಕ್‌ರನ್ನು ತಮ್ಮ ತನಿಖಾ ಪತ್ರಿಕೋದ್ಯಮಕ್ಕೆ ಸಹವರ್ತಿಗಳನ್ನಾಗಿ ಮಾಡಿಕೊಂಡು ಗುರಿ ಸಾಧಿಸಿದರು. ಅಂತಹ ಸಾಹಸಕ್ಕೀಗ ಪುಲಿಟ್ಜರ್ ಗರಿ ಬಂದು ಸೇರಿಕೊಂಡಿದೆ.

'ಗಾಡ್ಸ್ ಬನ್ಸಿ'ಯೊಂದಿಗೆ ಪಂಡಿತ್ ಪ್ರವೀಣ್ ಗೋಡ್ಖಿಂಡಿ

ಕೊಳಲೊಂದು ಲೀಲೆ ಹಲವು

ಪ್ರವೀಣ್ ಗೋಡ್ಖಿಂಡಿ ರೂಪಿಸಿದ 'ಗಾಡ್ಸ್ ಬನ್ಸಿ' ಕೊಳಲು ಎಂಟು ಅಡಿ ಎತ್ತರ, 22 ಕೆ.ಜಿ ಭಾರ ಇದೆ, ಗೊತ್ತಾ?

ಎಂ.ಎನ್.ಯೋಗೇಶ್

ದ್ವಾಪರಯುಗದ ಶ್ರೀಕೃಷ್ಣನ ಕೊಳಲನಾದ ಕೇಳಿದವರಿಲ್ಲ. ಆದರೆ, ಕಲಿಯುಗದ ಪಂಡಿತ್ ಪ್ರವೀಣ್ ಗೋಡ್ಖಿಂಡಿ ಅವರ ಕೊಳಲನಾದ ಕೇಳದವರೇ ಇಲ್ಲ. ಬಿದಿರಿನ ರಂಧ್ರದೊಳಗಿಂದ ತೂರಿ ಬರುವ ಗೋಡ್ಖಿಂಡಿ ಉಸಿರು ಕೇಳುಗರ ಎದೆಯೊಳಗೆ ನಾದಾನಂದ ಸೃಷ್ಟಿಸಿದೆ. ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದ ಅಕ್ಷಯ ಪಾತ್ರೆಯೊಳಗಿಂದ ಪಡಿಮೂಡುವ ಸ್ವರಗಳ ಸವಿಯೂಟ ವೈವಿಧ್ಯಮಯ ಪರಿಮಳ, ಕಂಪಿನೊಂದಿಗೆ ಕೇಳುಗರ ಮನ ಮುಟ್ಟಿದೆ. ಕಛೇರಿ, ಕೃತಿ, ಕೀರ್ತನೆಗಳಿಗಷ್ಟೇ ಸೀಮಿತವಾಗದ ಅವರು ಯೋಗ, ಪ್ರಯೋಗಗಳ ಮೂಲಕ 'ಕೊಳಲಿನ ದೇವರು' ಎನಿಸಿಕೊಂಡಿದ್ದಾರೆ.

ಕ್ಷಣಮಾತ್ರದಲ್ಲಿ ರಾಗದ ಛಾಯೆ ರಚಿಸುವ ಅವರು ಅಚ್ಚರಿಯ ಅಲೆ ಸೃಷ್ಟಿಸುತ್ತಾರೆ. ದೇವಾಲಯಗಳ ಮಂಗಳಾರತಿಯಾಗಿ, ಮೊಬೈಲ್ ಫೋನ್ ರಿಂಗಣವಾಗಿ, ಮನೆಯ ಕಾಲಿಂಗ್ ಬೆಲ್ಲಿನ ಧ್ವನಿಯಾಗಿ, ಕಾರಿನ ರಿವರ್ಸ್ ಗೇರ್ ಶಬ್ದವಾಗಿ ಪ್ರವೀಣ್ ಗೋಡ್ಖಿಂಡಿ ಕೊಳಲು ನಿತ್ಯ ನಿರಂತರ ನುಡಿಯುತ್ತಲೇ ಇದೆ.

ಸದಾ ಹುಡುಕಾಟದ ಮನೋಭಾವದ ಅವರು ಏಳಿಂಚಿನ ಕೊಳಲಿನಿಂದ ಎಂಟಡಿ ಬಾನ್ಸುರಿಯೊಳಗೆ ತಮ್ಮ ಉಸಿರು ತುಂಬಿದ್ದಾರೆ. ವಾದ್ಯದ ಜೊತೆ ಪ್ರಯೋಗಕ್ಕಿಳಿಯುವ ಅವರು ಕೊಳಲಿಗೆ ಹೊಸ ರೂಪ ಕೊಟ್ಟಿದ್ದಾರೆ. ವಿಶೇಷ ನುಡಿಸಾಣಿಕೆ ಜೊತೆಜೊತೆಯಲ್ಲೇ ಹಲವು ಬಗೆಯ ಬಾನ್ಸುರಿ ಬಳಕೆಯಲ್ಲೂ ಬೆರಗು ಮೂಡಿಸಿದ್ದಾರೆ.

50ರ ದಶಕದಲ್ಲೇ ಪಂಡಿತ್ ಪನ್ನಾಲಾಲ್ ಘೋಷ್ ಅವರು ಬಾನ್ಸುರಿಗೆ ಹೊಸ ರೂಪ ಕೊಟ್ಟರು. ಸಾಮಾನ್ಯವಾಗಿ ಏಳು ರಂಧ್ರಗಳ (ಆರು ಸ್ವರ ರಂಧ್ರ, ಒಂದು ಊದುವ ರಂಧ್ರ) ಕೊಳಲಿಗೆ ತೀವ್ರ ಮಧ್ಯಮ ಸೇರ್ಪಡೆ ಮಾಡಿ ಇನ್ನೊಂದು ರಂಧ್ರ ಸೃಷ್ಟಿಸಿದರು.

ನಂತರ ಹಲವು ಸಂಗೀತಗಾರರು ಮತ್ತಷ್ಟು ಪ್ರಯೋಗ ಮಾಡಿದರು. ನಮ್ಮವರೇ ಆದ ಪಂಡಿತ್ ವೆಂಕಟೇಶ ಗೋಡ್ಖಿಂಡಿ ಅವರು 80ರ ದಶಕದಲ್ಲಿ ಪಂಚಮಕ್ಕಾಗಿ ಎಂಟನೇ ರಂಧ್ರ ತೆರೆದರು. ಜೊತೆಗೆ ಪಿವಿಸಿ ಪೈಪ್‌ನಲ್ಲೂ ಬಾನ್ಸುರಿ ಬಾರಿಸಿ ಆಶ್ಚರ್ಯ ಉಂಟುಮಾಡಿದರು. ನಂತರ ಬಂದ ಅವರ ಮಗ ಪ್ರವೀಣ್ ಗೋಡ್ಖಿಂಡಿ ಕೊಳಲು ನುಡಿಸಾಣಿಕೆಯಲ್ಲಿ ಹಲವು ದಾಖಲೆ ಬರೆದರು. ಭಾರತೀಯ ಬಾನ್ಸುರಿಯ ಜೊತೆ ಹಲವು ದೇಶಗಳ ಕೊಳಲನ್ನು ಬೆಸೆಯುವಲ್ಲಿ ಯಶಸ್ವಿಯಾದರು.

ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದ ಆಧಾರದ ಮೇಲೆ ಸಮಕಾಲೀನ ಸಂಗೀತದ ಚಿತ್ತಾರ ಮೂಡಿಸಿದರು. ತಂದೆಯ ಜೊತೆಗೂಡಿ 'ಗೋಡ್ಖಿಂಡಿ ಘರಾಣೆ'ಯನ್ನೇ ಸೃಷ್ಟಿಸಿದರು. ಗಾಯನದಂತೆಯೇ ನುಡಿಯುವ ವಾದ್ಯವೈಭವ ಈ ಘರಾಣೆಯ ವಿಶೇಷ.

ಕಾಂಟ್ರಾಬಾಸ್ ಕೊಳಲು: ಎಂಟು ಅಡಿ ಉದ್ದವಿರುವ ಅಪರೂಪದ ಕಾಂಟ್ರಾಬಾಸ್ ಕೊಳಲು ನುಡಿಸುವ ವಿಶ್ವದ ಬೆರಳೆಣಿಕೆಯಷ್ಟು ಕಲಾವಿದರಲ್ಲಿ ಪ್ರವೀಣ್ ಗೋಡ್ಖಿಂಡಿ ಒಬ್ಬರು. 22 ಕೆ.ಜಿ ತೂಕ, ನಾಲ್ಕು ತುಂಡಗಳಲ್ಲಿರುವ ಈ ಕೊಳಲು ನುಡಿಸಲು ಕಲಾವಿದನಿಗೆ ವಿಶೇಷ ಶಕ್ತಿಯೇ ಇರಬೇಕು. ಸಾಮಾನ್ಯ ಬಾನ್ಸುರಿಗಿಂತ ಹತ್ತುಪಟ್ಟು ಹೆಚ್ಚು ಉಸಿರು ತುಂಬಿದರೆ ಮಾತ್ರ ಅದರಲ್ಲಿ ಧ್ವನಿ ಮೂಡುತ್ತದೆ. ಅಬ್ದುಲ್ ಕಲಾಂ ಅವರ ಎದುರು ಮೊದಲ ಬಾರಿಗೆ ಕಾಂಟ್ರಾಬಾಸ್ ಕೊಳಲಿನಲ್ಲಿ ಹಿಂದೂಸ್ತಾನಿ ರಾಗ ನುಡಿಸುವ ಮೂಲಕ ಪ್ರವೀಣ್ ಹೊಸ ದಾಖಲೆ ಸೃಷ್ಟಿಸಿದರು.

ಈ ಸಾಧನೆ ಅಷ್ಟು ಸುಲಭದ್ದಾಗಿರಲಿಲ್ಲ. ಶ್ರೀಕೃಷ್ಣ ಚಿತ್ರಪಟಗಳಲ್ಲಿ, ಮೂರುತಿಗಳಲ್ಲಿ ತನ್ನ ಬಲಭಾಗಕ್ಕೆ ಕೊಳಲ ಪಿಡಿದು ನಿಂತಿದ್ದಾನೆ, ಎಡಗೈ ಮೇಲಿದ್ದು, ಬಲಗೈ ಕೆಳಗಿದೆ. ಶೇ 99ರಷ್ಟು ಕಲಾವಿದರು ಇದೇ ಮಾದರಿಯಲ್ಲಿ ವಾದ್ಯ ನುಡಿಸುತ್ತಾರೆ. ಆದರೆ, ಪ್ರವೀಣ್ ಗೋಡ್ಖಿಂಡಿ ಅವರು ತಮ್ಮ ಎಡಭಾಗದಲ್ಲಿ ಕೊಳಲು ನುಡಿಸುತ್ತಾರೆ, ಬಲಗೈ ಮೇಲೆ, ಎಡಗೈ ಕೆಳಗಿರುತ್ತದೆ.

ಕಾಂಟ್ರಾಬಾಸ್ ಕೊಳಲು ನುಡಿಸುವಾಗ ಬಲುದೊಡ್ಡ ಸವಾಲು ಎದುರಿಸಬೇಕಾಯಿತು. ಈ ವಾದ್ಯವನ್ನು ಎಡಗೈ ಮೇಲೆ, ಬಲಗೈ ಕೆಳಗಿಟ್ಟು ನುಡಿಸಬೇಕು. ಹೀಗಾಗಿ ಅವರು ಸಣ್ಣ ಹುಡುಗನಂತೆ ಹೊಸ ಮಾದರಿಯಲ್ಲಿ ಬಾನ್ಸುರಿ ಕಲಿತು, ನುಡಿಸಿ ಸೈ ಎನಿಸಿಕೊಂಡರು. ಎರಡು ಸಂಗತಿಗಳ ನಡುವೆ ಉಸಿರು ತೆಗೆದುಕೊಳ್ಳುವ ಪ್ರಕ್ರಿಯೆಯೂ ಸಂಗೀತದ ಜೊತೆ ಬೆರೆತಿರುವುದು ಇಲ್ಲಿ ಬಹಳ ವಿಶೇಷ ಎನಿಸುತ್ತದೆ.

ಪ್ರವೀಣ್ ಗೋಡ್ಖಿಂಡಿ ಈ ವಾದ್ಯಕ್ಕೆ 'ಗಾಡ್ಸ್ ಬನ್ಸಿ' (ದೇವರ ಬಾನ್ಸುರಿ) ಎಂದು ನಾಮಕರಣ ಮಾಡಿದ್ದಾರೆ. ಶ್ರೀಕೃಷ್ಣ ಪರಮಾತ್ಮ ಧರೆಗಿಳಿದು ಬಂದರೆ ಅವರಿಗೆ ಈ ವಾದ್ಯವನ್ನು ಉಡುಗೊರೆಯಾಗಿ ಕೊಡುವ ಭಕ್ತಿ ಭಾವನೆ ಅವರ ಮನದಲ್ಲಿದೆ.

ಆಲ್ಟೊ ಬಾನ್ಸುರಿ ಸೃಷ್ಟಿಕರ್ತ: ಭಾರತೀಯ ಬಾನ್ಸುರಿ ಹಾಗೂ ಪಾಶ್ಚಾತ್ಯ ಕೊಳಲಿನ ನಡುವಿನ ಹೊಸ ರೂಪದಂತಿರುವ 'ಆಲ್ಟೊ ಬಾನ್ಸುರಿ' ಪ್ರವೀಣ್ ಗೋಡ್ಖಿಂಡಿ ಅವರ ಸೃಷ್ಟಿ. ಕೊಳಲು ಜಗತ್ತಿನ ಸೋಜಿಗಂತಿರುವ ಈ ಬಾನ್ಸುರಿ 'ಯು' ಆಕಾರದಲ್ಲಿದೆ.

ರಂಧ್ರಗಳ ನಡುವೆ ದೊಡ್ಡ ಅಂತರವಿದ್ದು ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ನುಡಿಸಾಣಿಕೆ ದೊಡ್ಡ ಸವಾಲು.

12ನೇ ಪುಟಕ್ಕೆ...

ಜಸ್ಟ್ ಬುಕ್ಸ್...

ಪುಸ್ತಕ ಪ್ರೇಮಿಗಳು ಇಲ್ಲಿಗೆ ತಿಂಗಳು, ವರ್ಷದ ಆಧಾರದಲ್ಲಿ ಚಂದಾದಾರರಾಗಲು ಅವಕಾಶ ನೀಡಲಾಗಿದೆ. ಚಂದಾ ಅವಧಿಯಲ್ಲಿ ಎಷ್ಟು ಪುಸ್ತಕಗಳನ್ನಾದರೂ ಪಡೆದು ಓದಬಹುದು. ಅದರ ಹೊರತಾಗಿ ದಿನದ ಬಾಡಿಗೆ ಆಧಾರದಲ್ಲೂ ಪುಸ್ತಕ ಪಡೆಯುವ ಆಯ್ಕೆ ಇದೆ...

ಗಣೇಶ ವೈದ್ಯ

ಪುಸ್ತಕ ಮನುಷ್ಯನ ಸದಾಕಾಲದ ಮಿತ್ರ. ಬೇಸರ ಕಳೆಯಲು, ಮನೋವಿಕಾಸಕ್ಕೆ ನೀರೆರೆಯಲು, ಜಗತ್ತನ್ನು ತಿಳಿಯಲು ಪುಸ್ತಕಗಳೇ ಆಧಾರ. ಪುಸ್ತಕ ಓದುವ ಹವ್ಯಾಸ ಇರುವವರು ಎಂತಹ ಏಕಾಂಗಿತನವನ್ನಾದರೂ ಜಯಿಸಬಲ್ಲರು. ಈ ಕಾರಣಕ್ಕೇ ಲಾಕ್‌ಡೌನ್ ಸಮಯದಲ್ಲಿ ಪುಸ್ತಕ ಓದುವವರ ಸಂಖ್ಯೆ ಹೆಚ್ಚಿದೆ. ಮನರಂಜನೆಯ ಜೊತೆಗೆ ಕುಸಿದ ಮನಸ್ಸುಗಳಿಗೆ ಊರುಗೋಲಾಗುವ ಕೆಲಸವನ್ನೂ ಪುಸ್ತಕಗಳು ಮಾಡುತ್ತವೆ. ಈ ನಿಟ್ಟಿನಲ್ಲಿ ಪುಸ್ತಕ ಓದುವ ಸಂಸ್ಕೃತಿಯನ್ನು ಪ್ರೇರೇಪಿಸುವ ಕೆಲಸವನ್ನು ಮಾಡುತ್ತಿದೆ 'ಜಸ್ಟ್ ಬುಕ್ಸ್' ಗ್ರಂಥಾಲಯ.

ಪುಸ್ತಕ ಕೊಳ್ಳುವ, ಮನೆಯಲ್ಲಿ ಇಟ್ಟುಕೊಳ್ಳುವ ಸೌಕರ್ಯ ಇಲ್ಲದವರಿಗೆ ಹೇಳಿಮಾಡಿಸಿದಂತಿರುವ ವೇದಿಕೆ 'ಜಸ್ಟ್ ಬುಕ್ಸ್'. ಈ ವೇದಿಕೆ ಮೂಲಕ ಪುಸ್ತಕಗಳನ್ನು ಎರವಲು ಕೊಡಲಾಗುತ್ತದೆ. ಬೆಂಗಳೂರು, ಚೆನ್ನೈ, ಹೈದರಾಬಾದ್, ಮೈಸೂರು, ಪುಣೆ, ಮುಂಬೈ ಮುಂತಾದ ಕಡೆಗಳಲ್ಲಿ ಎಂಬತ್ತಕ್ಕೂ ಅಧಿಕ ಕೇಂದ್ರಗಳನ್ನು ಜಸ್ಟ್ ಬುಕ್ಸ್ ಹೊಂದಿದೆ. ಈ ಕೇಂದ್ರಗಳಿಂದ ಪುಸ್ತಕಗಳನ್ನು ಬಾಡಿಗೆಗೆ ತೆಗೆದುಕೊಂಡು ಹೋಗಬಹುದು.

ಆದರೆ ಈಗ ಕೊರೊನಾ ಭಯದಿಂದ ಹೊರಗಡೆ ಓಡಾಡಲು ಜನರು ಅಂಜುತ್ತಿದ್ದಾರೆ. ಅಂಥವರಿಗೂ ಜಸ್ಟ್ ಬುಕ್ಸ್ ತನ್ನ ಸಹಾಯಹಸ್ತವನ್ನು ಚಾಚಿದೆ. ನಿಮಗೆ ಯಾವ ಪುಸ್ತಕ ಬೇಕು ಎಂದು ವೆಬ್‌ಸೈಟ್ (justbooks.in) ಮತ್ತು ಆ್ಯಪ್‌ಗಳಲ್ಲಿ (justbooks) ತಿಳಿಸಿದರೆ ಸಾಕು. ಜಸ್ಟ್ ಬುಕ್ಸ್ ಸಿಬ್ಬಂದಿ ನಿಮ್ಮ ಮನೆಬಾಗಿಲಿಗೇ ಬಂದು ಪುಸ್ತಕ ಕೊಟ್ಟು ಹೋಗುತ್ತಾರೆ, ಅದೂ ಉಚಿತವಾಗಿ! ಓದಿ ಮುಗಿದ ನಂತರ ಅದನ್ನು ವಾಪಸ್ ತೆಗೆದುಕೊಂಡು ಹೋಗುವ ವ್ಯವಸ್ಥೆಯನ್ನೂ ಮಾಡುತ್ತಾರೆ. ವಿಶೇಷ ಎಂದರೆ ಕನ್ನಡ, ತಮಿಳು, ತೆಲುಗು, ಮಲಯಾಳಂ, ಬೆಂಗಾಲಿ, ಇಂಗ್ಲಿಷ್, ಹಿಂದಿ ಭಾಷೆಗಳಿಗೆ ಸೇರಿದ ಹದಿನೈದು ಲಕ್ಷಕ್ಕೂ ಅಧಿಕ ಪುಸ್ತಕಗಳ ಆಯ್ಕೆಗಳು ಇಲ್ಲಿವೆ.

ಪುಸ್ತಕ ಪ್ರೇಮಿಗಳು ಇಲ್ಲಿಗೆ ತಿಂಗಳು, ವರ್ಷದ ಆಧಾರದಲ್ಲಿ ಚಂದಾದಾರರಾಗಲು ಅವಕಾಶ ನೀಡಲಾಗಿದೆ. ಚಂದಾ ಅವಧಿಯಲ್ಲಿ ಎಷ್ಟು ಪುಸ್ತಕಗಳನ್ನಾದರೂ ಪಡೆದು ಓದಬಹುದು. ಅದರ ಹೊರತಾಗಿ ದಿನದ ಬಾಡಿಗೆ ಆಧಾರದಲ್ಲೂ ಪುಸ್ತಕ ಪಡೆಯುವ ಆಯ್ಕೆ ಇದೆ. ಈ ರೀತಿ ಪುಸ್ತಕ ತೆಗೆದುಕೊಂಡರೆ ದಿನಕ್ಕೆ ಇಂತಿಷ್ಟು ಎಂದು, ಎಷ್ಟು ದಿನ ಪುಸ್ತಕ ಇಟ್ಟುಕೊಳ್ಳುತ್ತಾರೆಯೋ ಅಷ್ಟು ದಿನಕ್ಕೆ ಬಾಡಿಗೆ ಕಟ್ಟಬೇಕು.

ಬೆಂಗಳೂರಿನಲ್ಲೇ ಆದರೆ ಎರಡು ದಿನಗಳ ಒಳಗಾಗಿ ಪುಸ್ತಕ ತಲುಪಿಸಲಾಗುತ್ತದೆ. ಕೆಲವೊಮ್ಮೆ ಏಳು ದಿನಗಳು ಬೇಕಾಗುತ್ತವೆ ಅಥವಾ ಪುಸ್ತಕ ಲಭ್ಯ ಇಲ್ಲದಿದ್ದರೆ ಹತ್ತು ದಿನಗಳ ಒಳಗಾಗಿ ತರಿಸಿ ತಲುಪಿಸುವ ಬದ್ಧತೆಯನ್ನು ಜಸ್ಟ್ ಬುಕ್ಸ್ ಹೊಂದಿದೆ. ಬೇಡಿಕೆ ಸಲ್ಲಿಸಿ ಮೂರು ತಾಸಿನ ಒಳಗಾಗಿ ತಲುಪಿಸುವ ವ್ಯವಸ್ಥೆಯೂ ಇದೆ. ಕೇಳಿದ ಪುಸ್ತಕ ಸ್ಥಳೀಯ ಕೇಂದ್ರದಲ್ಲಿ ಲಭ್ಯವಿಲ್ಲದೇ ಹೋದರೆ ಬೇರೆ ಕೇಂದ್ರಗಳಿಂದಲಾದರೂ ತರಿಸಿ ಕೊಡಲಾಗುತ್ತದೆ. ಹಾಗೊಮ್ಮೆ ತಮ್ಮ ಜಾಲದಲ್ಲಿ ಎಲ್ಲೂ ಆ ಪುಸ್ತಕ ಇಲ್ಲ ಎಂದಾದಲ್ಲಿ ಅದನ್ನು ಖರೀದಿಸಿ ಬಾಡಿಗೆಗೆ ನೀಡಲಾಗುತ್ತದೆ.

ಮುಂದಿನ ಪುಟಕ್ಕೆ...

ಸುಂದರ ಕಲಾಕೃತಿಯಂತೆ ಗೋಚರಿಸುವ ಪೋಸ್ಟಾಯ್ನ್ ಕೇವ್‌ನ ಒಳಗಿನ ನೋಟ. ಈ ಗುಹೆಯನ್ನು ಪೂರ್ತಿಯಾಗಿ ನೋಡಲು ಕನಿಷ್ಠ ಆರು ಗಂಟೆಗಳಾದರೂ ಬೇಕು

ಭೂಗತ ಪ್ರಪಂಚದ ರಾಣಿ

ಸ್ಲೋವೇನಿಯಾದ ಈ ಗುಹೆಗೆ ಮಾರು ಹೋಗದವರೇ ಇಲ್ಲ. ಈ ಗುಹೆಯೊಳಗೆ ಗಿರಿ, ಕಂದರಗಳಿವೆ, ಝುಳು, ಝುಳು ಮಂಜುಳ ನಿನಾದ ಹೊರಡಿಸುತ್ತಾ ಹರಿಯುವ ನದಿ ಇದೆ. ತೆರೆದ ರೈಲಿನಲ್ಲಿ ಆ ಸೊಬಗನ್ನು ಕಣ್ತುಂಬಿಕೊಳ್ಳುತ್ತಾ ವಿಹರಿಸುವ ಆನಂದ ಶಬ್ದಗಳಿಗೆ ನಿಲುಕದ್ದು!

ಪ್ರವಾಸ

ರಾಜೇಂದ್ರ ಎನ್. ಆಚಾರ್ಯ

ಮಧ್ಯ ಯುರೋಪಿನ ಸ್ಲೋವೇನಿಯಾದ ಒಂದು ಪುಟ್ಟ ನಗರ ಕ್ರಾನ್. ಕೆಲಸದ ನಿಮಿತ್ತ, ಸಹೋದ್ಯೋಗಿಗಳಾದ ಪ್ರಭಂಜನ್ ಮತ್ತು ವಿಶ್ವೇಶ್ ಅವರೊಂದಿಗೆ ಕ್ರಾನ್‌ಗೆ ಹೋಗಿದ್ದೆ. ಅಲ್ಲಿನ ಸೆಂಟ್ರಲ್ ಅಪಾರ್ಟ್‌ಮೆಂಟ್ ರೇಜಾ ಹೋಟೆಲ್‌ನಲ್ಲಿ ನಾವು ತಂಗಿದ್ದೆವು.

ವಾರಾಂತ್ಯದ ರಜಾದಿನಗಳಲ್ಲಿ ಯಾವುದಾದರೂ ವಿಶಿಷ್ಟ ಪ್ರದೇಶಕ್ಕೆ ಭೇಟಿ ನೀಡಬೇಕೆಂಬ ಅಭಿಲಾಷೆ ನಮ್ಮದಾಗಿತ್ತು. ಅದರಂತೆ ನಾವಿದ್ದ ನಗರದಿಂದ ಸುಮಾರು 86 ಕಿ.ಮೀ. ದೂರವಿರುವ 'ಭೂಗತ ಪ್ರಪಂಚದ ರಾಣಿ' ಎಂದೇ ಪ್ರಖ್ಯಾತವಾಗಿರುವ 'ಪೋಸ್ಟಾಯ್ನ್ ಕೇವ್' ವೀಕ್ಷಿಸಬೇಕೆಂದು ತೀರ್ಮಾನಿಸಿದೆವು. ನೈರುತ್ಯ ಸ್ಲೋವೇನಿಯಾದಲ್ಲಿರುವ 24,340 ಮೀಟರ್ ಉದ್ದ ಹಾಗೂ 115 ಮೀಟರ್ ಆಳದ ಗುಹೆ ಇದು. ದೇಶದ ಎರಡನೇ ಅತಿ ಉದ್ದದ ಗುಹೆಯೆಂಬ ಹೆಗ್ಗಳಿಕೆಗೆ ಇದು ಪಾತ್ರವಾಗಿದ್ದು, ಪ್ರಸಿದ್ಧ ಪ್ರವಾಸಿ ತಾಣಗಳಲ್ಲಿ ಒಂದಾಗಿದೆ.

ಕ್ರಾನ್‌ನಿಂದ ಲುಬ್ಲಾನ ಮಾರ್ಗವಾಗಿ 'ಪೋಸ್ಟಾಯ್ನ್ ಕೇವ್'ಗೆ 90 ನಿಮಿಷಗಳ ಪಯಣ. ಅತ್ಯಂತ ಕಡಿಮೆ ವಾಹನ ಸಂಚಾರವಿರುವ ರಸ್ತೆ. ಕ್ರಾನ್ ಮತ್ತು ಲುಬ್ಲಾನ ನಡುವೆ ಪೈನ್ ಮರಗಳ ಕಾಡಿನೊಳಗಿನ ಸಂಚಾರ ಮನಸ್ಸಿಗೆ ಮುದ ನೀಡುತ್ತದೆ. ತದನಂತರ ವಿಶಾಲವಾದ ಹೊಲ ಗದ್ದೆಗಳು ಅವುಗಳ ಹಿಂದೆ ಹಿಮಾಚ್ಛಾದಿತ ಪರ್ವತಗಳು. ನೋಡಲು ಕ್ಯಾನ್ವಾಸ್‌ನಲ್ಲಿ ಚಿತ್ರ ಬರೆದಂತೆ ಕಾಣುತ್ತವೆ.

ಒಂದು ದಿನದಲ್ಲಿ 'ಪೋಸ್ಟಾಯ್ನ್ ಕೇವ್' ವೀಕ್ಷಿಸಬಹುದು. ಪ್ಯಾಕೇಜ್ ಟೂರ್‌ಗೆಂದೇ ಪ್ರತ್ಯೇಕ ಬಸ್‌ಗಳೂ ಇವೆ. ಗುಹೆಯನ್ನು ವೀಕ್ಷಿಸಲು 40 ಯೂರೋಗಳನ್ನು ನೀಡಿ ಟಿಕೆಟ್ ಖರೀದಿಸಬೇಕು. ಗುಹೆಯೊಳಗೆ ರೈಲಿನಲ್ಲಿ ತೆರಳಬೇಕು. ಸ್ಲೋವೇನಿಯಾ, ಡಚ್, ಜರ್ಮನ್ ಹಾಗೂ ಇಂಗ್ಲಿಷ್ ಹೀಗೆ ನಾಲ್ಕು ಭಾಷೆಗಳನ್ನು ಮಾತನಾಡುವ ಗೈಡ್‌ಗಳು ಲಭ್ಯ.

ಗುಹೆಯೊಳಗೆ ರೈಲು ಪಯಣ!

ಗುಹೆಯನ್ನು ಸಂಪೂರ್ಣವಾಗಿ ವೀಕ್ಷಿಸಲು ಆರು ಗಂಟೆಗಳ ಸಮಯ ತಗಲುತ್ತದೆ. ಡಬಲ್ ಟ್ರ್ಯಾಕ್ ಹೊಂದಿರುವ ವಿಶ್ವದ ಏಕೈಕ ಗುಹೆ ಇದಾಗಿದ್ದು, 50-60 ಮಂದಿ ಕುಳಿತುಕೊಳ್ಳಲು ಆಸನ ವ್ಯವಸ್ಥೆಯಿರುವ ತೆರೆದ ರೈಲಿನಲ್ಲಿ ಪ್ರಯಾಣಿಸುವ ಅನುಭವ ಮುದ ನೀಡುತ್ತದೆ. ರೈಲಿನಲ್ಲಿ ಕುಳಿತು ಗುಹೆಯೊಳಗೆ ಸುಮಾರು 3.7 ಕಿ.ಮೀ ಕ್ರಮಿಸಬೇಕು. ಪ್ರವಾಸಿಗರು ನೋಡಬೇಕಾದ ಮುಖ್ಯವಾದ ಸ್ಥಳಗಳಲ್ಲಿ ಬಣ್ಣ ಬಣ್ಣದ ಲೈಟ್‌ಗಳು ಉರಿಯುತ್ತವೆ. ಅಲ್ಲಿ ರೈಲನ್ನು ನಿಲ್ಲಿಸುವ ಗೈಡ್ ಕಂ ಡ್ರೈವರ್ ಆ ಪ್ರದೇಶದ ವಿಶೇಷವನ್ನು ವಿವರಿಸುತ್ತಾನೆ. ಹೀಗೆ ಗುಹೆಯ ಹಲವು ಭಾಗಗಳನ್ನು ನೋಡಿದ ಮೇಲೆ ರೈಲು 'ಸೆಂಟ್ರಲ್ ಮೇನ್ ಹಾಲ್' ಎಂದು ಕರೆಯಲ್ಪಡುವ ಪ್ರದೇಶವನ್ನು ತಲುಪುತ್ತದೆ.

ದೇಶ ವಿದೇಶಗಳ ಪ್ರವಾಸಿಗರು 'ಪೋಸ್ಟಾಯ್ನ್ ಕೇವ್'ಗೆ ಭೇಟಿಯಿತ್ತ ನೆನಪಿಗಾಗಿ ತಮ್ಮ ನೆಂಟರಿಷ್ಟರಿಗೆ ನೀಡಲು ನೆನಪಿನ ಕಾಣಿಕೆಗಳನ್ನು ಇಲ್ಲಿ ಖರೀದಿಸಬಹುದು. ಇಲ್ಲಿ ಎಲ್ಲವೂ ಅಚ್ಚುಕಟ್ಟು. ದಣಿದು ಬಂದವರು ವಿಶ್ರಮಿಸಿಕೊಳ್ಳಲು ಆಸನಗಳ ವ್ಯವಸ್ಥೆ, ಉಚಿತ ವಾಶ್ ರೂಂಗಳು ಇವೆ. ಇಲ್ಲಿಂದ ಮುಂದೆ 3 ಕಿ.ಮೀ. ದೂರ ಕಾಲುದಾರಿಯಲ್ಲಿ ನಡೆದುಕೊಂಡೇ ಗುಹೆಯನ್ನು ವೀಕ್ಷಿಸಬೇಕು.

ನೈಸರ್ಗಿಕ ಕೌತುಕ

'ಪಿವ್ಕಾ' ನದಿಯ ನೀರಿನ ಹರಿವಿನಿಂದ ಹಲವು ದಶಲಕ್ಷ ವರ್ಷಗಳಿಂದ ಈ ಗುಹೆ ರೂಪತಾಳಿದ್ದು, ಸುಣ್ಣದ ಕಲ್ಲಿನಿಂದ ಕೂಡಿದ ಪ್ರದೇಶದಲ್ಲಿ ಭೂಮಿಯಲ್ಲಿರುವ ಸುಣ್ಣ ಕರಗಿ ವಿವಿಧ ಆಕಾರಗಳ ರಚನೆಗಳು ರೂಪುಗೊಂಡಿವೆ. ಚಿತ್ತಾಕರ್ಷಕ ರಚನೆಗಳಿಂದ ಕೂಡಿದ ಗುಹೆ ಸ್ವರ್ಗಸದೃಶ ನೈಸರ್ಗಿಕ ಕೌತುಕವಾಗಿದೆ. ಭೂಮಿಯ ಮೇಲ್ಮೈಯಲ್ಲಿರುವಂತೆ ಇಲ್ಲಿಯೂ ಎತ್ತರದ ಪರ್ವತಗಳು, ಕಲರವವನ್ನು ಉಂಟುಮಾಡುವ ನದಿಗಳಿವೆ. ಈ ಗುಹೆಯನ್ನು ಅನ್ವೇಷಕರ ಹಾಗೂ ಗುಹೆಗಳ ವೈಜ್ಞಾನಿಕ ಅಧ್ಯಯನ ನಡೆಸುವವರ ತೊಟ್ಟಿಲೆಂದೇ ಹೇಳಬಹುದು. ಬಣ್ಣಬಣ್ಣದ ವಿದ್ಯುತ್ ದೀಪಗಳ ಬೆಳಕಿನಿಂದ ನೈಸರ್ಗಿಕವಾಗಿ ರೂಪುಗೊಂಡಿರುವ ರಚನೆಗಳ ಅಂದ ಇಮ್ಮಡಿಗೊಳ್ಳುತ್ತದೆ. ಈ ರಚನೆಗಳು ಚಿತ್ರ ವಿಚಿತ್ರವಾಗಿದ್ದು, ಕೆಲವು ಕಡೆ ಪ್ರಾಣಿಗಳನ್ನು ಹೋಲುವಂತಿವೆ. ಕೆಲವು ಕಡೆ ಶುಭ್ರವಾದ ನೀರು ತೊಟ್ಟಿಕ್ಕುತ್ತಿರುತ್ತದೆ. ಒಳಗೆ ಹರಿಯುತ್ತಿರುವ ಪಿವ್ಕಾ ನದಿಯನ್ನು ದಾಟಿಹೋಗಲು ಸೇತುವೆಯನ್ನು ಸಹ ನಿರ್ಮಿಸಲಾಗಿದೆ.

ಪೋಸ್ಟಾಯ್ನ್ ಕೇವ್‌ನ ಡ್ಯಾನ್ಸ್ ಹಾಲ್ ಚಾವಣಿಯಿಂದ ನೇತಾಡುವ ಅದ್ಭುತ ಮುರಾನೋ ಗ್ಲಾಸ್ ಗೊಂಚಲುಗಳು ಕಾಲ್ಪನಿಕ ಲೋಕವನ್ನು ಸೃಷ್ಟಿಸುತ್ತವೆ. ಗುಹೆಗಳನ್ನು ಸಂಪರ್ಕಿಸುವ ಹಾದಿಗಳು ಹಾಗೂ ಸೈಫನ್‌ಗಳನ್ನು ಒಟ್ಟಾರೆಯಾಗಿ ವೀಕ್ಷಿಸಬಯಸುವ ಪ್ರವಾಸಿಗರು ಕಾಲುದಾರಿಯಲ್ಲಿ ನಡೆದುಕೊಂಡು ಹಾಗೂ ಕೆಲವು ಕಡೆ ಈಜಿಕೊಂಡೇ ಹೋಗಬೇಕಾಗುತ್ತದೆ.

ಈ ಗುಹೆಯು 1213ರಿಂದಲೂ ಇತ್ತೆಂದು ಗುಹೆಯಲ್ಲಿ ಕಾಣಸಿಗುವ ಗೀಚುಬರಹದಿಂದ ತಿಳಿದುಬರುತ್ತದೆ. ಮೊದಲ ಪ್ರವಾಸಿ ಗೈಡ್ ಆರ್ಚ್ ಡ್ಯೂಕ್ 1819ರಲ್ಲಿ ಈ ಗುಹೆಗಳಿಗೆ ಭೇಟಿ ನೀಡಿದ್ದನಂತೆ. ಪ್ರವಾಸಿಗರನ್ನು ಆಕರ್ಷಿಸಲು 1884ರಲ್ಲಿ ವಿದ್ಯುದೀಕರಣ ಮಾಡಲಾಯಿತಂತೆ. 20ನೇ ಶತಮಾನದಲ್ಲಿ ಗ್ಯಾಸ್ ಲೋಕೊಮೋಟಿವ್‌ಅನ್ನು ಪರಿಚಯಿಸಿ ತದನಂತರ ವಿದ್ಯುತ್‌ಗೆ ಪರಿವರ್ತಿಸಲಾಯಿತು. ಪ್ರಸ್ತುತ 5.3 ಕಿ.ಮೀ ಗುಹೆ ಮಾತ್ರ ಪ್ರವಾಸಿಗರ ವೀಕ್ಷಣೆಗೆ ಮುಕ್ತವಾಗಿದೆ.

ಎರಡನೇ ಮಹಾಯುದ್ಧದ ಸಮಯದಲ್ಲಿ ಜರ್ಮನ್ ಆಕ್ರಮಣ ಪಡೆಗಳು ಸುಮಾರು ಸಾವಿರ ಬ್ಯಾರಲ್‌ಗಳಷ್ಟು ವಿಮಾನ ಇಂಧನವನ್ನು ಸಂಗ್ರಹಿಸಲು ಈ ಗುಹೆಯನ್ನು ಬಳಸಿದ್ದು, ಅವುಗಳನ್ನು 1944 ಏಪ್ರಿಲ್ ತಿಂಗಳಲ್ಲಿ ಸ್ಲೋವೇನಿಯನ್ ಪಂಗಡಗಳು ನಾಶಪಡಿಸಿದಾಗ ಏಳು ದಿನಗಳವರೆಗೆ ಬೆಂಕಿಯ ಜ್ವಾಲೆ ಗುಹೆಯಿಂದ ಹೊರಬಂದು ಗುಹೆಯ ಬಹುಪಾಲು ನಾಶವಾಯಿತಂತೆ. 1990ರ ದಶಕದಲ್ಲಿ ವಿಶ್ವದ ಅತಿ ಹೆಚ್ಚು ಪ್ರವಾಸಿಗರು ಸಂದರ್ಶಿಸಿದ ತಾಣವೆಂಬ ಹೆಗ್ಗಳಿಕೆಗೆ ಈ ಗುಹೆ ಪಾತ್ರವಾಯಿತು. ವಿಶ್ವದ ಏಕೈಕ ಭೂಗತ ಅಂಚೆ ಕಚೇರಿ ಈ ಗುಹೆಯಲ್ಲಿರುವುದು ಮತ್ತೊಂದು ವಿಶೇಷವೆಂದೇ ಹೇಳಬಹುದು.

ಗುಹೆಯ ಒಂದು ಭಾಗದಲ್ಲಿ 'ವಿವೇರಿಯಂ' ಇದೆ. ಶತಮಾನಗಳಿಂದಲೂ ಈ ಗುಹೆಯಲ್ಲಿ ವಾಸಿಸುತ್ತಿದ್ದ ಹಲವು ಪ್ರಾಣಿಗಳು ಹಾಗೂ ಜಲಚರಗಳನ್ನು ಗಾಜಿನ ತೊಟ್ಟಿಗಳಲ್ಲಿ ಇರಿಸಿದ್ದಾರೆ. ವಿವರಗಳುಳ್ಳ ಫಲಕಗಳನ್ನು ತೂಗುಹಾಕಲಾಗಿದ್ದು ಪ್ರವಾಸಿಗರು ಜಲಚರಗಳ ಮಾಹಿತಿಯನ್ನು ಪಡೆದುಕೊಳ್ಳಬಹುದು. ಪ್ರಚಲಿತದಲ್ಲಿರುವ ದಂತಕತೆಯ ಪ್ರಕಾರ 'ಬೇಬಿ ಡ್ರ್ಯಾಗನ್' ಎಂದೇ ಪ್ರಸಿದ್ಧಿಯಾಗಿರುವ 'ಓಲ್ಮ್'ಗಳು ಪ್ರವಾಸಿಗರನ್ನು ಆಕರ್ಷಿಸುತ್ತವೆ. ಎರೆ ಹುಳುವಿನಂತೆ ಕಾಣುವ ತಿಳಿ ಕೆಂಪುಬಣ್ಣದ ಜಲವಾಸಿ ಇದಾಗಿದ್ದು, ಯುರೋಪಿನ ಗುಹೆಗಳಲ್ಲಿ ಮಾತ್ರ ಕಂಡುಬರುವ ಪ್ರಭೇದವಾಗಿದೆ. ಈ ಪ್ರಾಣಿಗಳು ಉಭಯಚರಿಗಳಾಗಿದ್ದರೂ, ಇಲ್ಲಿ ಸಂಪೂರ್ಣ ಜಲಚರಿಗಳು. ಹತ್ತು ವರ್ಷಗಳ ಕಾಲ ಆಹಾರವಿಲ್ಲದೆ ಬದುಕಬಲ್ಲ ಈ ಪ್ರಾಣಿಗಳ ವಾಸ, ಜೀವನ ಹಾಗೂ ಸಂತಾನೋತ್ಪತ್ತಿ ಎಲ್ಲವೂ ನೀರಿನಲ್ಲೇ ಆಗುವುದು ವಿಶೇಷ. 2016 ಜನವರಿ 30ರಂದು ಹೆಣ್ಣು ಓಲ್ಮ್ 50 ಮರಿಗಳಿಗೆ ಜನ್ಮ ನೀಡಲು ಪ್ರಾರಂಭಿಸಿದ ಘಟನೆ ವಿಶ್ವದೆಲ್ಲೆಡೆ ಸುದ್ದಿಯಾಯಿತು.

ಪಾರಂಪರಿಕ ತಾಣವಾಗಿ ಗುರುತಿಸಲ್ಪಟ್ಟಿರುವ 'ಪೋಸ್ಟಾಯ್ನ್ ಕೇವ್' ಸಾರ್ವಜನಿಕ ರಜಾದಿನಗಳನ್ನು ಒಳಗೊಂಡಂತೆ ವರ್ಷವಿಡೀ ಪ್ರವಾಸಿಗರ ವೀಕ್ಷಣೆಗೆ ತೆರೆದಿರುತ್ತದೆ. ಗುಹೆಯನ್ನು ವೀಕ್ಷಿಸಲು ಸುಮಾರು ಆರು ಗಂಟೆಗಳ ಸಮಯ ತಗಲುತ್ತದೆ. ಸಂದರ್ಶಕರು 17 ಭಾಷೆಗಳಲ್ಲಿ ಲಭ್ಯವಿರುವ ಆಡಿಯೊ ಗೈಡ್‌ಗಳನ್ನು ಬಳಸಬಹುದಾಗಿದೆ. ಗುಹೆಯೊಳಗಿನ ತಾಪಮಾನ ಸದಾಕಾಲ 10 ಡಿಗ್ರಿ ಸೆಂಟಿಗ್ರೇಡ್‌ನಲ್ಲಿ ಸ್ಥಿರವಾಗಿರುತ್ತದೆ. ಆದುದರಿಂದ ಸಂದರ್ಶಕರು ಬೆಚ್ಚನೆಯ ಉಡುಪು ಹಾಗೂ ಶೂಗಳನ್ನು ಹಾಕಿಕೊಳ್ಳಲೇಬೇಕು.

ಕಳೆದ 200 ವರ್ಷಗಳಲ್ಲಿ 3.9 ಕೋಟಿಗೂ ಅಧಿಕ ಪ್ರವಾಸಿಗರು ಈ ಗುಹೆಯನ್ನು ವೀಕ್ಷಿಸಿದ್ದು, ಅತ್ಯಂತ ಗಣ್ಯ ವ್ಯಕ್ತಿಗಳು ಗುಹೆಯ ಬಗ್ಗೆ ತಮ್ಮ ಅನಿಸಿಕೆಗಳನ್ನು 'ಗೋಲ್ಡನ್ ಬುಕ್ ಆಫ್ ವಿಸಿಟರ್ಸ್'ನಲ್ಲಿ ಹಂಚಿಕೊಂಡಿದ್ದಾರೆ. ❖



ಪೋಸ್ಟಾಯ್ನ್ ಕೇವ್

ಮೋಹಿನಿ ಪಾಶದಲ್ಲಿ ಮಾಧ್ಯಮ

10ನೇ ಪುಟದಿಂದ...

ಪತ್ರಕರ್ತ ಗಾಂಧಿ ಪತ್ರಿಕಾ ಕಾರ್ಯಗಳಿಗೆ ಸಂಬಂಧಿಸಿದಂತೆ ತಮ್ಮ ಆತ್ಮಕಥೆಯಲ್ಲಿ ಬರೆದಿರುವ ಕೆಲವು ಮಾತುಗಳೇನೆಂದರೆ- 'ಯೋಚನೆ ಮಾಡದೆ, ವಿಚಾರ ಮಾಡದೆ ಬರೆದ ಒಂದು ಮಾತಾಗಲೀ, ಉದ್ದೇಶಪೂರ್ವಕವಾದ ಅತಿಶಯೋಕ್ತಿಯಾಗಲೀ ಅಥವಾ ಸುಮ್ಮನೆ ಯಾರನ್ನಾದರೂ ಸಂತೋಷಪಡಿಸುವುದಕ್ಕಾಗಲೀ ಯಾವುದನ್ನೂ ಬರೆದುದು ನೆನಪಿಲ್ಲ. ನನಗೆ ಮಾನವ ಸ್ವಭಾವದ ಬೇರೆ ಬೇರೆ ಮಾದರಿಗಳನ್ನೂ ಛಾಯೆಗಳನ್ನೂ ಅಭ್ಯಸಿಸುವ ಒಂದು ಸಾಧನವಾಯಿತು ಇಂಡಿಯನ್ ಒಪೀನಿಯನ್ ಪತ್ರಿಕೆ. ವೃತ್ತ ಪತ್ರಿಕೆ ಒಂದು ದೊಡ್ಡ ಶಕ್ತಿ. ಹತೋಟಿ ಹೊರಗಿನದಾದರೆ ಹತೋಟಿ ಇಲ್ಲದಿರುವುದಕ್ಕಿಂತ ಹೆಚ್ಚು ಅಪಾಯವಾಗುತ್ತದೆ. ಅಂಕುಶ ಒಳಗಿನಿಂದ ಬಂದಾಗ ಮಾತ್ರ ಲಾಭದಾಯಕ ಆಗಬಲ್ಲದು. ಈ ವಿಚಾರ ಸರಣಿ ಸರಿಯಾದುದಾದರೆ ಪ್ರಪಂಚದಲ್ಲಿ ಎಷ್ಟು ಪತ್ರಿಕೆಗಳು (ಇಂದು ಟಿವಿ ವಾಹಿನಿಗಳನ್ನೂ ಸೇರಿಸಬಹುದು –ಲೇಖಕ) ಈ ಪರೀಕ್ಷೆಯಲ್ಲಿ ತೇರ್ಗಡೆ ಆಗಬಲ್ಲವು? ಒಳ್ಳೆಯದು ಮತ್ತು ಕೆಟ್ಟದ್ದು ಇರುವಂತೆ ಪ್ರಯೋಜನಕರವೂ ಅಪ್ರಯೋಜಕವೂ ಆದದ್ದು ಒಟ್ಟಿಗೇ ಇರುತ್ತವೆ. ಇವುಗಳಲ್ಲಿ ಮನುಷ್ಯ ತನಗೆ ಬೇಕಾದುದನ್ನು ಆರಿಸಿಕೊಳ್ಳಬೇಕು' ಎನ್ನುತ್ತಾರೆ.

ಒಂದು ಸಂದರ್ಭದಲ್ಲಿ ಜನಸ್ನೇಹಿಯಾಗಿದ್ದ ಮಾಧ್ಯಮ ಇಂದು ತನ್ನ ಮೂಲ ಕರ್ತವ್ಯವನ್ನು ಮರೆತು ಭಸ್ಮಾಸುರನ ರೂಪ ತಾಳಿದ್ದು, ಇತರರ ತಲೆಯ ಮೇಲೆ ಕೈಯಿಟ್ಟು ಇನ್ನಿಲ್ಲವಾಗಿಸುವ ಮಾರ್ಗದಲ್ಲಿ ನಡೆದಿದೆ. ಇದು ಇನ್ನೂ ಎಷ್ಟು ದಿನ ನಡೆಯುತ್ತದೋ ಕಾಯ್ದು ನೋಡುವುದೊಂದೇ ಜನರ ಪಾಲಿಗೆ ಉಳಿದಿರುವ ಮಾರ್ಗ ಎನ್ನಿಸುತ್ತದೆ.

ಜಸ್ಟ್ ಬುಕ್ಸ್

10ನೇ ಪುಟದಿಂದ...

ಓದುವ ಅಭಿರುಚಿಯನ್ನು ಬೆಳೆಸುವುದು ಮೂಲಭೂತ ಅಗತ್ಯಗಳಲ್ಲಿ ಒಂದು ಎಂದು ನಂಬಿರುವ ಕೋ ಕ್ರಿಯೇಟ್ ಕಂಪನಿಯ ಮಾಲೀಕ ಸುರೇಶ್ ನರಸಿಂಹ ಅವರು, ಬೆಂಗಳೂರು ಮೂಲದ 'ಜಸ್ಟ್ ಬುಕ್ಸ್' ಅನ್ನು ನಡೆಸುತ್ತಿದ್ದಾರೆ.



ಸುರೇಶ್ ನಾರಾಯಣ್

'ಕನ್ನಡದಲ್ಲಿ ಎಸ್.ಎಲ್. ಭೈರಪ್ಪ, ಸಾಯಿಸುತೆ ಅವರನ್ನು ಹಾಗೂ ಇಂಗ್ಲಿಷ್‌ನಲ್ಲಿ ಹ್ಯಾರಿ ಪಾಟರ್ ಪುಸ್ತಕಗಳನ್ನು ಜನ ಹೆಚ್ಚಾಗಿ ಓದುವುದು ಇದುವರೆಗಿನ ಟ್ರೆಂಡ್' ಎಂದು ಅವರು ಹೇಳುತ್ತಾರೆ.

'ನಮ್ಮ ಗ್ರಂಥಾಲಯದ ಗ್ರಾಹಕರಿಗೆ ಎಷ್ಟೊಂದು ಬಗೆಯ ಪುಸ್ತಕಗಳು ಒಂದೇ ಕಡೆ ಸಿಗುತ್ತವೆ. ಎಷ್ಟೆಲ್ಲ ಆಯ್ಕೆಗಳಿವೆ. ತಮಗೆ ಬೇಕಾದ ಪುಸ್ತಕಗಳು ಸಿಗುತ್ತವೆ ಎಂದಾದಾಗ ಓದುವ ಶಿಸ್ತು ಬೆಳೆಯುತ್ತದೆ. ಅದೂ ಅಲ್ಲದೆ ಮನೆಗಳಲ್ಲಿ ಸಾವಿರಾರು ಪುಸ್ತಕಗಳನ್ನು ಇಟ್ಟುಕೊಳ್ಳಲು ಸಾಕಷ್ಟು ಸ್ಥಳಾವಕಾಶ ಬೇಕು. ಹೊಸ ಪುಸ್ತಕಗಳಿಗೆ ಜಾಗ ಮಾಡಲು ಆಗುವುದಿಲ್ಲ. ಯಾರಿಗಾದರೂ ಕೊಟ್ಟರೆ ಅದು ವಾಪಸ್ ಬರುವುದಿಲ್ಲ, ಪದೇ ಪದೇ ಕೇಳಲು ಆಗುವುದಿಲ್ಲ. ಅದೇ ಬಾಡಿಗೆ ಪಡೆದು ಓದುವುದಾದರೆ ಇಷ್ಟೆಲ್ಲ ತಲೆಬಿಸಿಯೇ ಇಲ್ಲ. ಹೀಗಾಗಿ ಪುಸ್ತಕಗಳನ್ನು ಖರೀದಿಸುವುದು ಒಳಿತೇ ಅಥವಾ ಬಾಡಿಗೆ ಪಡೆದು ಓದುವುದು ಲಾಭದಾಯಕವೇ ಎಂಬ ಆರ್ಥಿಕ ಲೆಕ್ಕಾಚಾರದ ಕುರಿತು ಜನರು ತಲೆಕೆಡಿಸಿಕೊಳ್ಳುವುದಿಲ್ಲ. ಅಷ್ಟಕ್ಕೂ ಗ್ರಂಥಾಲಯಕ್ಕೆ ಹೋಗುವುದು, ಅಲ್ಲಿಂದ ಪುಸ್ತಕ ತಂದು ಓದುವುದು ಒಂದು ಸಂಸ್ಕೃತಿ' ಎಂದು ಸುರೇಶ್ ಅಭಿಪ್ರಾಯಪಡುತ್ತಾರೆ.

ಲಾಕ್‌ಡೌನ್ ಪರಿಣಾಮ

ಲಾಕ್‌ಡೌನ್ ಸಂದರ್ಭದಲ್ಲಿ ಪುಸ್ತಕಗಳನ್ನು ಓದುಗರಿಗೆ ತಲುಪಿಸುವುದು ಕಷ್ಟವಾಗಿದೆ. ಬೆಳಿಗ್ಗೆ ಹತ್ತು ಗಂಟೆ ಒಳಗೆ ಸಾಧ್ಯವಾದಷ್ಟು ಪುಸ್ತಕಗಳನ್ನು ತಲುಪಿಸುತ್ತಿದ್ದಾರೆ. 'ದಿನಪತ್ರಿಕೆ, ಬೇರೆ ಎಲ್ಲ ಅಗತ್ಯ ಸೇವೆಗಳನ್ನು ಮನೆಗೆ ತಲುಪಿಸಲು ಅವಕಾಶ ನೀಡಿದಂತೆಯೇ ನಮಗೂ ಅವಕಾಶ ನೀಡಬೇಕಿತ್ತು. ಮಕ್ಕಳಿಗೆ ಎಷ್ಟು ಅಂತ ಟಿ.ವಿ., ಮೊಬೈಲ್ ನೋಡಿಸಲು ಸಾಧ್ಯವಾಗುತ್ತದೆ' ಎಂದು ಸುರೇಶ್ ಕೇಳುತ್ತಾರೆ.

ಪುಸ್ತಕವನ್ನು ಪ್ರತಿಬಾರಿ ಗ್ರಾಹಕರಿಂದ ವಾಪಸ್ ತಂದಮೇಲೆ ಅದನ್ನು ಸ್ಯಾನಿಟೈಸ್ ಮಾಡಲಾಗುತ್ತದೆ. ಒಂದು ದಿನ ಹೊರಗಡೆ ಇಟ್ಟು ಅದನ್ನು ಯಾರೂ ಮುಟ್ಟುವುದಿಲ್ಲ. ಪ್ರತಿಯೊಬ್ಬ ಸಿಬ್ಬಂದಿಯೂ ಲಸಿಕೆ ಹಾಕಿಸಿಕೊಂಡಿದ್ದಾರೆ. ಪ್ರತಿಯೊಬ್ಬರನ್ನೂ ನಿತ್ಯ ಪರೀಕ್ಷೆ ಮಾಡಿಯೇ ಒಳಕ್ಕೆ ಬಿಟ್ಟುಕೊಳ್ಳಲಾಗುತ್ತದೆ. ಏಕೆಂದರೆ ಹೆಚ್ಚಿನ ಓದುಗರು ಹಿರಿಯ ನಾಗರಿಕರು ಮತ್ತು ಮಕ್ಕಳು ಎಂಬ ಕಾಳಜಿ ಜಸ್ಟ್ ಬುಕ್ಸ್‌ನದ್ದು.

ಬರಲಿದೆ 'ಎಲ್ಲರಿಗಿಂತ ಮೊದಲು...'

ರಾಜ್ಯದಲ್ಲಿ ಬೆಂಗಳೂರು, ಮೈಸೂರು ಅಲ್ಲದೆ ಪ್ರಮುಖ ನಗರಗಳು ಹಾಗೂ ದೇಶದ ಇತರ ಪ್ರಮುಖ ಭಾಗಗಳಲ್ಲೂ ಜಸ್ಟ್ ಬುಕ್ಸ್, ತನ್ನ ಕಾರ್ಯಾಚರಣೆಯನ್ನು ವಿಸ್ತರಿಸುವ ಯೋಜನೆ ಹೊಂದಿದೆ. ಅದಕ್ಕಾಗಿ 'ಬಿಫೋರ್ ಎನಿಒನ್ ಎಲ್ಸ್' (ಎಲ್ಲರಿಗಿಂತ ಮೊದಲು) ಎಂಬ ಪ್ರತ್ಯೇಕ ಆ್ಯಪ್ ಬಿಡುಗಡೆ ಮಾಡುವ ಸಿದ್ಧತೆಯೂ ನಡೆದಿದೆ.

ಉದಾಹರಣೆಗೆ, ಹುಬ್ಬಳ್ಳಿ ನಗರದಲ್ಲಿ ಜಸ್ಟ್ ಬುಕ್ಸ್ ಕೇಂದ್ರ ಇಲ್ಲ, ಸದ್ಯಕ್ಕೆ ಅವರ ವೇದಿಕೆಯಿಂದ ಇಲ್ಲಿ ಪುಸ್ತಕ ಬಾಡಿಗೆ ಸೇವೆ ಇಲ್ಲ. ಆದರೆ ಹುಬ್ಬಳ್ಳಿಯಲ್ಲಿ ಯಾರ ಹತ್ತಿರವೋ ಸಾವಿರಾರು ಪುಸ್ತಕಗಳು ಇವೆ. ಅವರು 'ಬಿಫೋರ್ ಎನಿಒನ್ ಎಲ್ಸ್' ಆ್ಯಪ್‌ನಲ್ಲಿ ನೋಂದಣಿ ಮಾಡಿಕೊಳ್ಳಬಹುದು. ಪುಸ್ತಕಗಳನ್ನು ಬಾಡಿಗೆಗೆ ಪಡೆಯುವ ಗ್ರಾಹಕರೂ ಈ ಆ್ಯಪ್‌ಗೆ ನೋಂದಣಿ ಮಾಡಿಕೊಳ್ಳುತ್ತಾರೆ. ಆ್ಯಪ್ ಮೂಲಕ ಪುಸ್ತಕವನ್ನು ಬಾಡಿಗೆ ಕೊಡಬಹುದು.

ಈ ರೀತಿ ಕೊಡುವ ಪುಸ್ತಕಗಳಿಗೆ ಬಾಡಿಗೆ ದರವನ್ನು ಮಾಲೀಕರೇ ನಿಗದಿ ಮಾಡುತ್ತಾರೆ. ಇವರಿಬ್ಬರ ನಡುವೆ ಕೊಂಡಿಯಂತೆ ಕೆಲಸ ಮಾಡುವ ಜಸ್ಟ್ ಬುಕ್ಸ್, ಪುಸ್ತಕಗಳನ್ನು ಓದುಗರಿಗೆ ತಲುಪಿಸುವುದು, ವಾಪಸ್ ತರುವುದು, ಅವರಿಂದ ಬಾಡಿಗೆ ಹಣವನ್ನು ಸಂಗ್ರಹಿಸಿ ಮಾಲೀಕರಿಗೆ ಸಂದಾಯ ಮಾಡುವ ಕೆಲಸವನ್ನು ಮಾಡುತ್ತದೆ. ಪುಸ್ತಕ ಹಾಳಾದರೆ ಅದಕ್ಕೆ ಪರಿಹಾರವನ್ನೂ ಕೊಡಿಸುತ್ತದೆ. ಯಾವ ಪುಸ್ತಕ ಯಾರ ಹತ್ತಿರ ಲಭ್ಯವಿದೆ ಎಂಬ ಮಾಹಿತಿಯನ್ನೂ ಆ್ಯಪ್‌ನಲ್ಲಿ ಹಂಚಿಕೊಳ್ಳುತ್ತದೆ. ಜುಲೈನಲ್ಲಿ ಈ ಯೋಜನೆ ಕಾರ್ಯಾರಂಭಿಸುವ ಸಾಧ್ಯತೆ ಇದೆ.

ಹೊಸ ಮಾಧ್ಯಮಗಳ ದಾಳಿಯಿಂದ ಪುಸ್ತಕ ಸಂಸ್ಕೃತಿ ನಾಶವಾಗುತ್ತಿದೆ ಎಂಬ ನಿರಾಸೆಯ ಹುಯಿಲಿನಲ್ಲಿ ಜಸ್ಟ್ ಬುಕ್ಸ್ ರೀತಿಯ ಸಂಸ್ಥೆಗಳು ಮಾಡುತ್ತಿರುವ ಕೆಲಸ ಓದುಪ್ರಿಯರಲ್ಲಿ ನಾಳೆಯ ಬಗ್ಗೆ ನಂಬಿಕೆಯನ್ನು ಹುಟ್ಟಿಸುವುದಂತೂ ಸತ್ಯ. ❖

ಮುನ್ನೋಟ 20-06-2021 ರಿಂದ 26-06-2021

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಹೊಸ ವಸ್ತ್ರ ಖರೀದಿಸಿ ಶುಭ ಸಮಾರಂಭಗಳಿಗೆ ಹೋಗಿ ಬರುವ ಸಾಧ್ಯತೆ ಇದೆ. ಅನಿರೀಕ್ಷಿತ ಬಂಧುಗಳ ಆಗಮನ ಆಗಬಹುದು. ಅತಿಯಾಗಿ ಸಾಲ ಮಾಡಿದರೆ, ಸಾಲಗಾರರ ಕಾಟ ಹೆಚ್ಚಬಹುದು. ರತ್ನ ಮತ್ತು ಹರಳುಗಳ ವ್ಯಾಪಾರಿಗಳಿಗೆ ವ್ಯವಹಾರ ಹೆಚ್ಚುತ್ತದೆ. ಗುಡಿ ಕೈಗಾರಿಕೆಯಲ್ಲಿ ಮುತ್ತುಗಳನ್ನು ತಯಾರಿಸಿ ಮಾರುವವರಿಗೆ ವ್ಯವಹಾರ ವೃದ್ಧಿಸಿ ಬೇಡಿಕೆ ಹೆಚ್ಚಾಗುತ್ತದೆ. ಆದಾಯವು ನಿರೀಕ್ಷಿತ ಮಟ್ಟದಲ್ಲಿ ಇರುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ವಿದ್ಯಾರ್ಥಿಗಳಿಗೆ ಅತ್ಯಂತ ಅನುಕೂಲಕರವಾದ ವಾರ. ನಿರುದ್ಯೋಗಿಗಳ ಜೀವನದಲ್ಲಿ ಮಹತ್ವದ ತಿರುವು ಪಡೆದು ಉದ್ಯೋಗ ಸಿಗುವ ಸಾಧ್ಯತೆ ಇದೆ. ಅಧಿಕಾರಿಗಳ ಸಹಕಾರದಿಂದ ಎಣಿಸಿದ ಕಾರ್ಯದಲ್ಲಿ ಪ್ರಗತಿ ಇರುತ್ತದೆ. ಲೇವಾದೇವಿಗಾರರಿಗೆ ಬಾಕಿಹಣಗಳು ಬರುತ್ತವೆ. ಯಾವುದೇ ಕೆಲಸದಲ್ಲಿ ಆರಂಭಶೂರತ್ವ ಬೇಡ, ಹಣದ ನಿರ್ವಹಣೆಯನ್ನು ಸರಿಯಾಗಿ ಮಾಡಿರಿ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಸಂಗಾತಿಯ ಸಹಾಯದಿಂದ ಕೆಲಸಕಾರ್ಯಗಳಲ್ಲಿ ಪ್ರಗತಿ. ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಹೆಚ್ಚಿನ ಚರ್ಚೆ ನಡೆಯುತ್ತದೆ. ರಿಯಲ್ ಎಸ್ಟೇಟ್ ಉದ್ಯಮಿಗಳಿಗೆ ಆದಾಯದಲ್ಲಿ ಸ್ವಲ್ಪ ಏರಿಕೆ ಕಾಣಬಹುದು. ಸಸ್ಯಸಂಪತ್ತನ್ನು ಕಾಪಾಡುವವರು ಹೆಚ್ಚು ಚುರುಕಾಗಿ ಕೆಲಸ ಮಾಡುವರು. ಕೆಲವು ರಾಜಕೀಯ ಮುಖಂಡರು ಜನರೆದುರಿಗೆ ಮುಖಭಂಗ ಅನುಭವಿಸುವ ಸಂದರ್ಭವಿದೆ,

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಕರಕುಶಲ ಕಾರ್ಮಿಕರಿಗೆ ಉತ್ತಮ ಮನ್ನಣೆ ದೊರೆಯುತ್ತದೆ. ಇವರು ಹಾಗೂ ಕೃಷಿಕರು ಸರ್ಕಾರದಿಂದ ಹೆಚ್ಚಿನ ಸಹಾಯ ನಿರೀಕ್ಷಿಸಬಹುದು. ಸಂಗಾತಿಯ ಆರೋಗ್ಯದಲ್ಲಿ ವ್ಯತ್ಯಾಸವಾಗಬಹುದು. ಪ್ರೇಮಿಗಳಿಗೆ ಅವರ ಹಿರಿಯರಿಂದ ಅಡ್ಡಿ-ಎದುರಾಗಬಹುದು. ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಗಮನ ಕೊಡುವುದರ ಜೊತೆಗೆ ಮೇಲ್ವಿಚಾರಣೆ ಮಾಡಬೇಕು. ಗರ್ಭಿಣಿಯರು ಸ್ವಲ್ಪ ಎಚ್ಚರಿಕೆಯಿಂದ ಇರುವುದು ಒಳಿತು.

ಸಿಂಹ — ಮುಖ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಮಾನಸಿಕ ಸ್ಥೈರ್ಯ ದೃಢವಾಗಿ ನೀವು ದೊಡ್ಡ ನಿರ್ಧಾರಗಳನ್ನು ಕೈಗೊಳ್ಳುವಿರಿ. ಕೌಟುಂಬಿಕ ಬಿಕ್ಕಟ್ಟಿಗೆ ಹಿರಿಯರ ಮಧ್ಯಸ್ಥಿಕೆ ನಡೆದು ಪರಿಣಾಮಕಾರಿ ಫಲಿತಾಂಶ ಸಿಗುತ್ತದೆ. ಕುಟುಂಬದವರೊಡನೆ ಮಾತನಾಡುವಾಗ ಅತಿಯಾದ ಸಿಡುಕುತನ ಬೇಡ. ಆದಾಯದ ಹೊಸ ದಾರಿ ನಿಮಗೆ ಗೋಚರಿಸುತ್ತದೆ. ಕುಲುಮೆಗಳಲ್ಲಿ ಕೆಲಸ ಮಾಡುವವರು ಅಗ್ನಿ ದುರಂತಗಳ ಬಗ್ಗೆ ಎಚ್ಚರಿಕೆ ವಹಿಸುವುದು ಉತ್ತಮ.

ಕನ್ಯಾ — ಉತ್ತರ ಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಭೂಮಿಯ ವ್ಯವಹಾರಕ್ಕೆ ಸಂಬಂಧಿಸಿ ಶೀಘ್ರಗತಿಯಲ್ಲಿ ಕಾರ್ಯಚಟುವಟಿಕೆಗಳು ನಡೆದು ಲಾಭ ಬರುತ್ತದೆ. ತೈಲ ಸಂಸ್ಕರಣೆ ಮಾಡುವವರಿಗೆ ಬೇಡಿಕೆ ಬರುತ್ತದೆ ಮತ್ತು ಹೊಸ ತೈಲ ಸಂಸ್ಕರಣ ಘಟಕ ಸ್ಥಾಪಿಸಲು ಬೇಕಾದ ಅನುಕೂಲಗಳು ದೊರೆಯುತ್ತವೆ. ಚಿಕ್ಕದಾಗಿ ಆರಂಭವಾದ ಕೆಲವು ಗೃಹೋದ್ಯಮಗಳು ಈಗ ಉದ್ದಿಮೆಯ ಸ್ವರೂಪ ಪಡೆಯುತ್ತವೆ. ಗಾಯಕರಿಗೆ ಉತ್ತಮ ಮಾರುಕಟ್ಟೆ ದೊರೆಯುವ ಸಾಧ್ಯತೆ ಇದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖೆ 1,2,3

ಯೋಜಿಸಿದ್ದ ಕೆಲಸಗಳು ಮಂದಗತಿಯಲ್ಲಿ ನಡೆಯುತ್ತವೆ. ವಿದ್ಯಾರ್ಥಿಗಳು ಉತ್ತಮ ಅಧ್ಯಯನ ಮಾಡಬಹುದು. ವಸ್ತ್ರವಿನ್ಯಾಸಕಾರರಿಗೆ ಹೆಚ್ಚಿನ ಬೇಡಿಕೆ ಒದಗುತ್ತದೆ. ಕೈಮಗ್ಗ ವಸ್ತುಗಳನ್ನು ತಯಾರಿಸುವವರಿಗೆ ಹೆಚ್ಚಿನ ಅವಕಾಶಗಳು ದೊರೆಯುತ್ತವೆ. ಸ್ತ್ರೀರೋಗ ತಜ್ಞರಿಗೆ ಹೆಚ್ಚು ಬೇಡಿಕೆ ಬರುತ್ತದೆ. ಕಣ್ಣಿನತೊಂದರೆ ಅಥವಾ ಮೂಳೆ ತೊಂದರೆಗಳು ಬಾಧಿಸಬಹುದು. ಮಾನಸಿಕ ಸ್ಥೈರ್ಯ ಕುಗ್ಗಿಸಿ ಕೊಳ್ಳಬೇಡಿರಿ.

ವೃಶ್ಚಿಕ — ವಿಶಾಖ 4 ಅನೂರಾಧ, ಜ್ಯೇಷ್ಠ

ಕಟ್ಟಡ ನಿರ್ಮಾಣ ವಸ್ತುಗಳ ಮಾರಾಟಗಾರರಿಗೆ ಮುನ್ನಡೆ. ವೈವಾಹಿಕ ಜೀವನದಲ್ಲಿ ಸಂತಸ. ರಾಜಕೀಯ ನಾಯಕರಿಗೆ ನಿಭಾಯಿಸಲಾಗದ ಜವಾಬ್ದಾರಿ ಬಂದು ಕಸಿವಿಸಿಯಾಗುವುದು. ಶತ್ರುಗಳನ್ನು ಮಟ್ಟಹಾಕಲು ನಿಮ್ಮ ತಂತ್ರಗಳು ಸಾಕಷ್ಟು ಫಲಿತಾಂಶ ಕೊಡುತ್ತವೆ. ವಿದ್ಯಾರ್ಥಿಗಳಿಗೆ ಅವರ ಸಾಧನೆಯಲ್ಲಿ ಅನುಕೂಲತೆ ಒದಗುತ್ತದೆ.

ಧನುಸ್ಸು — ಮೂಲ, ಪೂರ್ವಾಷಾಢ, ಉತ್ತರಾಷಾಢ 1

ಉದ್ಯೋಗದಲ್ಲಿ ಬಹಳ ಲವಲವಿಕೆಯ ಕಾಲ, ಹಿರಿಯ ಅಧಿಕಾರಿಗಳಿಂದ ಪ್ರಶಂಸೆಗಳು ಕೇಳಿ ಬರುತ್ತವೆ. ಉದ್ಯೋಗ ಕ್ಷೇತ್ರದಲ್ಲಿ ಸ್ವಲ್ಪ ಒತ್ತಡ ಕಂಡರು ಸ್ನೇಹಿತರ ಸಹಕಾರದಿಂದ ಅದು ಪರಿಹಾರವಾಗುತ್ತದೆ. ಮಕ್ಕಳ ಯೋಗಕ್ಷೇಮದ ಬಗ್ಗೆ ಸ್ವಲ್ಪ ನಿಗಾ ಇರಲಿ. ಹಣದ ಒಳಹರಿವು ಕಡಿಮೆ ಇದ್ದರೂ ಹಣದ ನಿರ್ವಹಣೆ ಸರಿಯಾಗಿ ಮಾಡುವಿರಿ. ಹಣ ಉಳಿಸುವ ವಿಷಯದಲ್ಲಿ ನಿಮ್ಮ ಸಾಫಲ್ಯತೆ ಕಂಡು ಬರುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಚಿಲ್ಲರೆ ವ್ಯಾಪಾರಿಗಳು ಕಡಿಮೆ ವ್ಯಾಪಾರವಿದ್ದರೂ ಇರುವ ವ್ಯಾಪಾರವನ್ನು ನಡೆಸುವುದು ಉತ್ತಮ. ಹಣಕಾಸು ಸ್ಥಿತಿ ಸುಧಾರಣೆಯಾಗಬಹುದು. ಷೇರುಪೇಟೆ ವ್ಯವಹಾರದಲ್ಲಿ ಹಿನ್ನಡೆ ಇದ್ದರೂ ಕೆಲವು ಷೇರುಗಳು ನಿಮ್ಮ ಕೈ ಹಿಡಿಯುತ್ತವೆ. ನೌಕಾಯಾನಗಳಿಗೆ ಇದ್ದ ಒತ್ತಡಗಳು ಕಡಿಮೆಯಾಗಿ ನಿರಾಳವೆನಿಸುತ್ತದೆ. ಉದ್ದಿಮೆದಾರರಿಗೆ ಕಾರ್ಮಿಕರ ಸಮಸ್ಯೆ ಬರಬಹುದು.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಮಾನಸಿಕ ಚಿಂತನೆಯನ್ನು ಇತರರೊಂದಿಗೆ ಹಂಚಿಕೊಳ್ಳಿ. ಸಂಸಾರದ ಸೌಕರ್ಯಕ್ಕಾಗಿ ಹೊಸ ಪ್ರಯತ್ನಗಳನ್ನು ಮಾಡುವಿರಿ. ಹೊಸ ಆದಾಯಮೂಲ ಅನ್ವೇಷಿಸುವಿರಿ. ಯುವಕರಿಗೆ ವೃತ್ತಿರಂಗದಲ್ಲಿ ಹಳೆ ವೈಷಮ್ಯ ಗರಿಗೆದರಬಹುದು. ರಕ್ಷಣಾ ಕ್ಷೇತ್ರದಲ್ಲಿ ಕೆಲಸ ಮಾಡುವವರು ಎಚ್ಚರಿಕೆಯಿಂದ ಕೆಲಸ ಮಾಡಬೇಕಾದ ಕಾಲ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಕೆಲಸಗಳಲ್ಲಿ ಭಿನ್ನಾಭಿಪ್ರಾಯ ಬಂದರೂ ಚಿಂತಿಸುವ ಅಗತ್ಯ ಇಲ್ಲ, ಹಾಗೆಂದು ಎಲ್ಲರ ವಿಷಯದಲ್ಲೂ ಮೂಗು ತೂರಿಸಲು ಹೋದಲ್ಲಿ ನಿಮಗೆ ಸಾಕಷ್ಟು ಹಿನ್ನಡೆಯಾಗುವ ಸಂದರ್ಭವಿದೆ. ನಿಮ್ಮ ಆಡಂಬರದ ಜೀವನಕ್ಕೆ ಹೆಚ್ಚು ಹಣ ಖರ್ಚನ್ನು ಮಾಡಲು ಗುರುತಿರುವವರ ಬಳಿ ಸಾಲ ಮಾಡುವಿರಿ. ಪ್ರೀತಿಪಾತ್ರದವರಿಂದ ಸ್ವಲ್ಪ ಕಿರಿಕಿರಿಯಾಗಬಹುದು. ಅಪೇಕ್ಷಿಸಿದ್ದ ಸಾಲಗಳು ದೊರೆತು ಆತಂಕಗಳು ದೂರವಾಗುತ್ತವೆ.

ಪದಬಂಧ 2692



ಮೇಲಿಂದ ಕೆಳಕ್ಕೆ

1. ಸಾಗರದ ಮೇಲೆ ಹಾಯುವ ಸಾರಿಗೆ 3
2. ಮಹಾನ್ ಈಶ್ವರ 3
3. ಲೆಕ್ಕಾಚಾರದ ಚತುರ ಯಂತ್ರ 3
5. ತಿರಿದು ಆವರಿಸುವ ಕತ್ತಲು 3
7. ಪಕ್ಷಿ ಗುಂಪು ಹೀಗಿರುತ್ತೆ 3
9. ವೈರಿಯ ಜೊತೆ ಮಾತುಕತೆ 5
10. ಬೇಟೆಯಾಡುವವರ ಊರೇ ಇದು? 5
11. ದೇವರು ಮತ್ತು ರಾಜರನ್ನು ತಂಪಾಗಿಡುವ ಚಮರಿ ಬೀಸಣಿಕೆ 3
12. ಮಾನವನ ಮೂಲರೂಪದಿಂದ ಶುರುವಾದ ಜಲಾಶಯ ಯೋಜನೆ 3
16. ಹಿಂದಿಯವರ ಹರೆಯ 3
17. ದೇಹಕ್ಕೆ ಮನಸ್ಸಿಗೆ ಆಗುವ ಸುಸ್ತು 3
19. ಕುರುವಂಶದ ಶನಿ, ಕೌರವರ ಮಾವ 3
20. ಯಶ ಪಡೆದ ಯೋಗಿ 3
21. ಮತ್ತೆ ಮತ್ತೆ ಮನಸ್ಸಿನಲ್ಲಿ ಗಟ್ಟಿಮಾಡಿಕೊಳ್ಳುವಿಕೆ 3

ಎಡದಿಂದ ಬಲಕ್ಕೆ

1. ಆರ್ಯಸಂಸ್ಕೃತಿಯಲ್ಲಿ ಹವಸ್ಸಿನ ಅಗ್ನಿಕಾರ್ಯ 5
3. ಚಳಿಗೆ ನಡುಗುವ ಸದ್ದು 4
4. ಹಾಸನದಲ್ಲಿ ಹರಿವ ಬಂಗಾರದ ಚೆಲುವೆ 4
6. ಗೋಪ್ಯ ವರ್ತಕನ ಇಂಗಿತ ಓಲೆ 5
8. ಕನ್ನಡದ ಪರಿಮಳವನ್ನು ಹೋಲುವ ಮೃಗಸುಗಂಧ 3
10. ಪರ್ವತದ ತುದಿ 3
11. ಗಾಡಿಯನ್ನು ನಡೆಸುವವ 3
13. ನದಿಗಳ ಕೂಡಲಿನಂತೆ ಪ್ರೇಮಿಗಳ ಮಿಲನ 3
14. ಹಾನಿ ಮಾಡಲು ರಹಸ್ಯ ಒಳಸಂಚು 3
15. ಅಮಾವಸ್ಯೆಯಂದು ರಜೆ ಹಾಕುವ ಚಂದಿರ 3
17. ನಂದದ ಸಂತೋಷ ಹರುಷ 3
18. ಬಾಯಿ ಸಿಹಿಯಾಗಿಸುವ ಸಂಸ್ಕೃತ ಪದಾರ್ಥ ಹಿಂದುಮುಂದು 3
20. ಕಾಲಕ್ಕೆ ತಕ್ಕಂತೆ ಪಾಲಿಸಬೇಕಾದ ಕಟ್ಟಳೆ 5
22. ಗುಪ್ತಗಾಮಿನಿಯಾಗಿ ದೀರ್ಘವಾಗಿ ಹರಿಯುವ ನದಿ 4
23. ಹೊಸ ಒಂಭತ್ತನೆಯ ಕೂಗು 4
24. ನೂರು ನಮನಗಳು 5

ಪದಬಂಧ ಉತ್ತರ -2691

ಮೇಲಿಂದ ಕೆಳಕ್ಕೆ

1. ಕಾಡುಪಾಪ 2.ನವಸಾಗರ 3.ಜನನಾಯಕ 4.ಸಿನಿಜಗತ್ತು 7.ರಂಜನೀಯ 8.ಮರಿಪಂಡಿತ 11.ಸತ್ಕರಿಸು 12.ಸಾಮಗಾಯನ 13.ವಸತಿಹೀನ 15.ನವಮಾನವ 18.ವಸ್ತ್ರದಾನ

ಎಡದಿಂದ ಬಲಕ್ಕೆ

1. ಕಾಲಜ್ಞಾನ 3.ಜಲವಾಸಿ 5.ವನಜೀವನ 6.ಪದರಂಗ 8.ಮಲಯ 9.ಜರತಾರಿ 10.ಕಸರತ್ತು 12.ಸಾವಯವ 14.ಡಿಕ್ಷನರಿ 16.ಸತತ 17.ವಸುಧೈವ 19.ಹೀನಾಯಮಾನ 20.ನವಗಾನ 21.ವರಮಾನ

ಕಪ್ಪು ನೆಲದ ಕೆಂಪು ರಂಗಿನ ಕಥೆ

ದೀಪಾ ದೇವಕತೆ

'ಗುಂಡಿಗೆಯ ಬಿಸಿರಕ್ತ' - ಆಫ್ರಿಕನ್ ಸಂಕಥನವು ಕಥೆಗಾರ ಕೇಶವ ಮಳಗಿಯವರು ಅನುವಾದಿಸಿದ ಕೃತಿ. ಆಯ್ದ 30 ಆಫ್ರಿಕನ್ ಲೇಖಕರ ಒಟ್ಟು 34 ಪ್ರಬುದ್ಧ ಲೇಖನಗಳನ್ನು ಈ ಕೃತಿಯು ಒಳಗೊಂಡಿದೆ. ವಿಶಾಲ ಆಫ್ರಿಕನ್ ಜಗತ್ತಿನ ಒಡಲು ಮತ್ತು ಒಡಲಿಗಂಟಿದ ಸಾಹಿತ್ಯ, ಕಲೆ, ಸಂಸ್ಕೃತಿ, ರಾಜಕೀಯ, ಸ್ತ್ರೀತ್ವದ ಸಾಹಿತ್ಯಾತ್ಮಕ ಅಸ್ತಿತ್ವ, ಅಭಿವ್ಯಕ್ತಿ ಹಾಗೂ ನೆಲಮೂಲದ ಸೂಕ್ಷ್ಮ ಸಂವೇದನಾಶೀಲತೆಯನ್ನೇ ಜೀವಾಳವಾಗಿ ಹೊಂದಿದ ಬರಹಗಳ ಬಹುತ್ವದ ಹೊತ್ತಗೆ ಇದು.

ಜಗತ್ತಿನಾದ್ಯಂತ ವಿದ್ಯಾರ್ಥಿಗಳು ಚರಿತ್ರೆಯ ಪಠ್ಯಗಳಲ್ಲಿ 'ಕತ್ತಲೆಯ ಖಂಡ'ವೆಂದು ಅಭ್ಯಸಿಸಲ್ಪಡುವ ಆಫ್ರಿಕಾದ ಕಥೆ ಕರುಣಾಜನಕ. ತಮ್ಮದಲ್ಲದ ತಪ್ಪಿಗೆ ಶಿಕ್ಷೆಗೊಳಗಾದವರು ಈ ಜನ. ಪಶುಗಳಂತೆ ಸಂತೆಗಳಲ್ಲಿ ಮಾರಲ್ಪಟ್ಟು ಗುಲಾಮರೆಂಬ ಹೆಸರಿನಲ್ಲಿ ದಾರುಣದ ಬಾಳನ್ನೂ ಹೊತ್ತವರು. ಈ ದಾರುಣ ಬದುಕಿನ ಅಳಿದುಳಿದ ಅವಶೇಷಗಳು ಅಮೆರಿಕದಂತಹ ದೇಶದಲ್ಲೂ ಆಗಾಗ ಗೋಚರಿಸುವುದುಂಟು. ಈ ನಿಟ್ಟಿನಲ್ಲಿ ವೊಲೆ ಷೋಯಿಂಕರು ಹೇಳಿದಂತೆ 'ಕಪ್ಪು ಜನರ ಕ್ಷಮಾಗುಣದಿಂದ ಜಗವು ಪಾಠ ಕಲಿಯಬೇಕು'. ಈ ಮಾತುಗಳು ಬಿಳಿಯರೆಂದು ತಿಳಿದುಕೊಂಡಿರುವ ಮನುಷ್ಯರ ಬಾಯಿಯಿಂದ ಬರುವ ತನಕವೂ ಕಪ್ಪು ಜನರ ಹೋರಾಟಕ್ಕೆ ದಣಿವಿಲ್ಲ. ಆಳುವವರ ಧರ್ಮ, ಭಾಷೆಗಳ ಹೊಡೆತಕ್ಕೆ ಸಿಲುಕಿ ಅಸ್ಮಿತೆಯ ಅಯೋಮಯವನ್ನು ಅನುಭವಿಸಿದ ಜನ, ಅಕ್ಷರವನ್ನು ಎದೆಯ ದನಿಯ ಸಾಧನವನ್ನಾಗಿ ಮಾಡಿಕೊಂಡು, ಗುಂಡಿಗೆಯ ರಕ್ತದ ಬಿಸಿಯನ್ನು ಕಾಗದದ ಮೇಲೆ ಹೊರಹಾಕುವ ಸಂಕಥನವಿದು.

ವಸಾಹತು ನೀತಿಯ ದಾಸ್ಯ, ವಿಮೋಚನೆಯ ನಂತರದ ಅರಾಜಕ ಸ್ಥಿತಿ, ಸಾಂಸ್ಕೃತಿಕ ತಳಮಳ, ತೃತೀಯ ಜಗತ್ತು ಅಥವಾ ಅಭಿವೃದ್ಧಿಶೀಲ ಜಗತ್ತು ಎಂಬ ಹೀನ ಬಿರುದುಗಳು ನೀಡಿದ ತಲ್ಲಣಗಳನ್ನೆಲ್ಲ ಹೊರಹೊಮ್ಮಿಸುವುದು ಸುಲಭದ ಹಾದಿಯೇನಲ್ಲ. ಅನುಭವಿಸಿ ಬರೆದ ಸಾಹಿತ್ಯ ಹೆಚ್ಚು ಜೀವಂತವಾಗಿರುತ್ತದೆ ಎನ್ನುವುದಕ್ಕೆ ಇಲ್ಲಿ ಮೂಡಿರುವ ಆಫ್ರಿಕನ್ ಲೇಖಕರ ಸಮತೋಲಿತ ವಿಚಾರಧಾರೆಗಳೇ ಸಾಕ್ಷಿ. ಕೃತಿಯ ಅನುವಾದದ ಗಮ್ಯವು ಯಾವುದೇ ದೇಶದ ಓದುಗನನ್ನು (ಆಯಾ ಭಾಷೆಗಳಲ್ಲಿ) ತನ್ನ ಸಮಕಾಲೀನ ಜಗತ್ತನ್ನು ವಿಮರ್ಶಾತ್ಮಕವಾಗಿ ನೋಡುವಂತೆ ಸಹ ಪ್ರಚೋದಿಸುತ್ತದೆ.

ಪು: 280
₹280

ಗುಂಡಿಗೆಯ ಬಿಸಿರಕ್ತ
(ಆಫ್ರಿಕನ್ ಸಂಕಥನ)
ಕನ್ನಡ ರೂಪ: ಕೇಶವ ಮಳಗಿ
ಪ್ರ: ದೀಪಂಕರ
ಸಂ: 9886279441

ವರ್ಣಭೇದ ನೀತಿಯ ವಿರುದ್ಧದ ಹೋರಾಟ, ಸೆರೆಮನೆವಾಸದ ದಮನಿತ ಅನುಭವ ಕಲ್ಪನಾತೀತ. ಅಂತಹ ಹೋರಾಟದಲ್ಲಿ ಅರಳಿದ ನೆಲ್ಸನ್ ಮಂಡೇಲಾ ಮತ್ತು ವಂಗಾರಿ ಮಥಾಯಿಯಂಥವರ ಬದುಕಿನ ಸಾರ್ಥಕತೆ ಆಧ್ಯಾತ್ಮಿಕವಾಗಿಯೂ ಸಂಘರ್ಷಗಳಿಗೆ ದಕ್ಕಿದ ನೊಬೆಲ್ ಪುರಸ್ಕಾರಗಳು ಲೌಕಿಕವಾಗಿಯೂ ಓದುಗನನ್ನು ಚಿಂತನೆಗೆ ಹಚ್ಚುತ್ತವೆ. ಪ್ರಶಸ್ತಿ ಪಡೆಯುವಾಗ ಅವರು ಮಾಡಿದ ಭಾಷಣಗಳು ಆದರ್ಶದ ಬದುಕಿನ ಮೌಲ್ಯ ಮತ್ತು ಸೂಕ್ಷ್ಮ ಪರಿಸರದ ಸಂವೇದನೆಯನ್ನು ಮುಂದಿನ ಪೀಳಿಗೆಗೆ ನಾವು ಕಲಿಸುತ್ತಿದ್ದೇವೆಯೇ ಎಂಬ ಪ್ರಶ್ನೆಯನ್ನು ಕೇಳಿಕೊಳ್ಳುವಂತಿವೆ.

ವಂಗಾರಿಯವರ ಜೀವಪರ ಸಂವೇದನೆಯ ನವಿರಾದ ಬಾಲ್ಯದ ನೆನಪು ಓದುಗನ ಮನ ಮಿಡಿಯುವಂತೆ ಮಾಡುತ್ತದೆ. ನದಿಯ ದಡದಲ್ಲಿ ಮೊಟ್ಟೆಗಳನ್ನು ಮುತ್ತುಗಳೆಂದು ತಿಳಿದು ಹಿಡಿಯಲು ಹೋದಾಗ ಅವುಗಳಿಂದ ನೂರಾರು ಕಪ್ಪೆಗಳು ಹೊರಬರುವುದನ್ನು ವಿಸ್ಮಯದಂತೆ ಕಾಣುವ ಲೇಖಕಿಯ ಮುಗ್ಧತೆಯನ್ನು ಅನುವಾದಕ ಮಳಗಿಯವರು ಅಷ್ಟೇ ವಿಸ್ಮಯಕಾರಿಯಾಗಿ ಕಟ್ಟಿಕೊಟ್ಟಿದ್ದಾರೆ. ಇಂತಹ 'ಮರಳಿ ಕಪ್ಪೆಗಳ ಲೋಕ'ವನ್ನು ಸಂಪಾದಿಸುವುದು ಕನಸಿನಂತೆ ಕಂಡು, ನದಿಯ ಬತ್ತುವಿಕೆಗೆ ತೋರುವ ಅಳಲು ಸದಾ ಕಾಡುವಂಥದ್ದು.

ಕಪ್ಪಿನ ಜೊತೆಗೆ ಹೆಣ್ಣು ಎಂಬುದನ್ನು ಕೂಡ ಇಲ್ಲಿ ಕಳಂಕ ರೂಪದಲ್ಲಿ ಹೊರಿಸಲಾಗಿದೆ. ಈ ಹೊರೆಯಿಂದ ಹೊರಬರುವ ಕಪ್ಪುನೆಲದ ಬರಹಗಾರ್ತಿಯರ ಸಾಹಸ ದೊಡ್ಡದು. ಅಡುಗೆ ಮನೆ ಸಾಹಿತ್ಯವೆಂದು ಲೇವಡಿಗೊಳಗಾಗುವ ದೌರ್ಭಾಗ್ಯ ಬಹುಶಃ ಇವತ್ತಿನ ಕಾಲಕ್ಕೂ ಪೂರ್ತಿಯಾಗಿ ನಿಂತಿಲ್ಲವೇನೋ! ಎಲ್ಲ ನಿರ್ಬಂಧಗಳನ್ನು ಮೀರಿಯೂ ತನ್ನ ಅಂತಃಸತ್ವದ ಶಕ್ತಿಯನ್ನು ನೂರ್ಮಡಿಸಿಕೊಂಡು ಹೊಮ್ಮುವ ಅಕ್ಷರ ಕುಲುಮೆಗೊಡ್ಡಿದ ಕಬ್ಬಿಣದಂತೆ ಗಟ್ಟಿ ಎಂಬುದನ್ನು ಲೇಖಕಿಯರ ವಿಚಾರಗಳು ಪ್ರತಿಫಲಿಸುತ್ತವೆ. ವಿಶೇಷವಾಗಿ ಆಫ್ರಿಕನ್ ಲೇಖಕಿಯರು ಬೌದ್ಧಿಕವಾಗಿ ಪುರುಷ ಸಾಹಿತಿಗಳಿಗೆ ಸರಿಸಮಾನವಾದ ಜಾಗತಿಕ ಸಾಹಿತ್ಯ ಮನ್ನಣೆಗಾಗಿ ಪ್ರಶ್ನೆ ಎತ್ತುವಂತಹ ನಿಷ್ಠುರ ಮನೋಭಾವವನ್ನು ತೋರುತ್ತಾರೆ.

ಆಮಾ ಆತಾ ಆಯಿದೊ ಅವರು ಬರೀ ಹೊರುವುದು, ಹೆರುವುದಕ್ಕಷ್ಟೇ ಸೀಮಿತಗೊಳ್ಳದೆ ಸೃಜನಶೀಲ ಶಕ್ತಿಯಾಗಿಯೂ ಹೆಣ್ಣು ರೂಪುಗೊಂಡ ಬಗೆಯ ಕುರಿತು ಬರೆಯುತ್ತಾರೆ. ತಾಯ್ತನದ ಹಿರಿಮೆಯೊಂದಿಗೇ, ಪುರುಷರು ಮಹಿಳೆಯ ಮೇಲೆಸಗಿದ ಅತಿರೇಕದ ಶೋಷಣೆಯ ಕ್ಷಮಿಸದಿರುವಿಕೆ ಕೂಡ ನೇರನುಡಿಯಾಗಿ, ಗಟ್ಟಿದನಿಯಾಗಿ ಅನುರಣಿಸುತ್ತದೆ. ಪಾರಂಪರಿಕ ದೃಷ್ಟಿಕೋನದಲ್ಲಿ ಬರೆದ ಪುರುಷ ಸಾಹಿತಿಗಳು ಹೆಣ್ಣಿನ ಕುರಿತು ಉದಾತ್ತ ಚಿಂತನೆಯನ್ನು ಅಭಿವ್ಯಕ್ತಿಸಲಿಲ್ಲ ಎಂಬ ಹಳಹಳಿಕೆ ಅಲ್ಲಲ್ಲಿ ಕಂಡರೂ ಅದು ಪುರುಷಶಾಹಿಯ ನಿರಂತರ ಶೋಷಣೆಗೊಳಗಾದ ಮಹಿಳೆಯ ಆರ್ತನಾದದಂತಿದೆ. ಇದು ಸಾಕಷ್ಟು ಓದುಗರಿಗೆ ಕಿರಿಕಿರಿಯೆನಿಸಬಹುದು. ಆದರೆ ಕಗ್ಗತ್ತಲೆಯ ಖಂಡದ ಕಡುಕಷ್ಟದ ಮಹಿಳೆಯ ಶೋಷಣೆಯನ್ನು ಅರ್ಥೈಸಿಕೊಂಡಾಗ ಇದು ಹಳಹಳಿಕೆ ಎನಿಸದು. ಮುಕ್ತ ಚಿಂತನೆ ಮತ್ತು ಸ್ವತಂತ್ರ ಆಲೋಚನೆಯ ಹೆಣ್ಣು ವರ್ಜ್ಯವೆಂಬ ನಕಾರಾತ್ಮಕ ವಿಚಾರವು ಬರಹದೊಂದಿಗೆ ಖಂಡನೀಯವಾಗಿ ಬಿಂಬಿತವಾಗಿದೆ.

ಹೊಸ ಓದುಗರಿಗಾಗಿ ಜ್ಞಾನದ ಒರತೆಯನ್ನು ಹೆಚ್ಚಿಸುವಂತೆ ಮಾಡುವಲ್ಲಿ ಮಳಗಿ ಅವರ ಈ ಕೃತಿಯು ಮಹತ್ವದ್ದೆನಿಸುತ್ತದೆ.

ಕಥೆ

ವೈ.ಕೆ. ಸಂಧ್ಯಾ ಶರ್ಮಾ ಅವರ ಕಥೆ
ಮಾಚಕ್ಕ ಮತ್ತು ಕೊರೊನಾ

ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

https://www.prajavani.net/short-story

ಕವಿತೆ

ಅನಿತಾ ಪಿ. ತಾಕೊಡೆ ಅವರ ಕವಿತೆ
ಕಲ್ಲಾದವರು

ಮೊಬೈಲ್‌ನಲ್ಲಿ ಕವಿತೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

https://www.prajavani.net/poetry

ಪಾಕ್ ಮಣ್ಣಿನಲ್ಲಿ ಅರಳಿದ ಕಥೆಗಳು

ಎಚ್.ಟಿ. ಪೋತೆ

ಜೀವಪರ ಚಿಂತಕನಾದ ಯಾವೊಬ್ಬ ವ್ಯಕ್ತಿಗೂ ಜಾತಿ-ಕುಲ-ಗೋತ್ರ, ಧರ್ಮದ –ಅಂತೆಯೇ ದೇಶದ– ಗಡಿಗೆರೆಗಳು ಮುಖ್ಯವಾಗುವುದಿಲ್ಲ. ಅಷ್ಟೇ ಅಲ್ಲ, ಅವು ಆತನನ್ನು ತಡೆದು ನಿಲ್ಲಿಸಲಾರವು ಕೂಡ. ಇದಕ್ಕೆ ಬಹುದೊಡ್ಡ ಉದಾಹರಣೆ ಗೌತಮ ಬುದ್ಧ. ನೂರಾರು ಶತಮಾನಗಳಿಂದ ಇಂದಿನವರೆಗೂ ಮಿತಿಗಳನ್ನೆಲ್ಲ ಮೀರಿ ಆತ ಬೆಳೆದು ಉಳಿದವನು. ಅಂತೆಯೇ ಕಾಲಾಂತರದಲ್ಲಿ ಈ ನೆಲದ ಬಸವಾದಿ ಶರಣರು, ಸಂತರು, ಸೂಫಿಗಳು, ತತ್ವಪದಕಾರರೂ ಪ್ರತಿಪಾದಿಸಿರುವ ಬದುಕಿನ ಸತ್ಯಗಳು ಇಂದು, ಎಂದೆಂದೂ ಮನನ ಯೋಗ್ಯವಾಗಿವೆ. ಇಂತಹ ನೆಲೆಯಲ್ಲಿಯೇ ಚಿಂತಿಸಿದವರು ಕಥೆಗಾರ ಇಂತಿಜಾರ್ ಹುಸೇನ್.

ಭಾರತ ಮೂಲದವರೇ ಆದ ಹುಸೇನ್ ಅವರು ಭಾರತ ವಿಭಜನೆಯ ನಂತರ ಪಾಕಿಸ್ತಾನಕ್ಕೆ ಹೋದವರು. ಒಬ್ಬ ಕಾದಂಬರಿಕಾರರಾಗಿ, ಕಥೆಗಾರರಾಗಿ ರಾಷ್ಟ್ರ-ಅಂತರರಾಷ್ಟ್ರೀಯ ಮನ್ನಣೆಗೆ ಪಾತ್ರರಾದವರು. ಅವರು ಬರೆದಿರುವ (A chronicle of the Peacocks) ಕಥೆಗಳನ್ನು ಪ್ರೊ. ಕೆ.ಈ.ರಾಧಾಕೃಷ್ಣ ಅವರು 'ನವಿಲು ಪುರಾಣ' ಎಂಬ ಹೆಸರಿನಲ್ಲಿ ಕನ್ನಡಕ್ಕೆ ತಂದಿದ್ದಾರೆ.

ಮೂಲ ನೆಲದಿಂದ ಬೇರು ಕಿತ್ತುಕೊಂಡ ಮರ ಇನ್ನೊಂದು ನೆಲದಲ್ಲಿ ಅಷ್ಟೊಂದು ಸಹಜವಾಗಿ, ಮೂಲ ನೆಲದಲ್ಲಿಯಷ್ಟು ಸದೃಢವಾಗಿ ಬೇರುಬಿಟ್ಟು ಬೆಳೆಯಲು ಸಾಧ್ಯವಾಗುವುದಿಲ್ಲ. ಹಾಗೆಯೇ ಮನುಷ್ಯ ಕೂಡ. ಆತ ತನ್ನ ಮೂಲ ನೆಲೆಯಿಂದ ಅನ್ಯ ನೆಲೆಗೆ ಅನಿವಾರ್ಯವಾಗಿ ಹೋಗಬೇಕಾದಾಗ, ಅಲ್ಲಿಯೇ ಬಾಳಬೇಕಾದಾಗ ಮೂಲದ ಆತ್ಮವಿಶ್ವಾಸ, ನಿಶ್ಚಿಂತಭಾವ ಕಡಿಮೆಯಾಗಿರುತ್ತದೆ. ತವಕ-ತಲ್ಲಣ, ಅತಂತ್ರಭಾವ ಸದಾ ಬಾಧಿಸುತ್ತಿರುತ್ತದೆ. ಮನುಷ್ಯ ತನ್ನ ದೇಹಕ್ಕಾದ ಗಾಯವನ್ನು ಕೆಲಕಾಲದ ನಂತರ ಮರೆಯಲು ಸಾಧ್ಯವಿದೆ. ಆದರೆ, ಮನಸ್ಸಿಗಾದ ಗಾಯ ಮತ್ತೆ ಮತ್ತೆ ಮರುಕಳಿಸುತ್ತದೆ. ಇಂತಹ ಸಂಕಟವೇ ಕೆಲವು ಸಲ ಆತನಿಂದ ಅದ್ಭುತವಾದದ್ದನ್ನು ಹುಟ್ಟಿಸುತ್ತದೆ. ಇದಕ್ಕೆ ತಕ್ಕ ಉದಾಹರಣೆ ಇಂತಿಜಾರ್ ಅವರ ಕಥೆಗಳು.

ಪಿತೃಭೂಮಿಯಾದ ಪಾಕಿಸ್ತಾನದ ಮುಸ್ಲಿಂ ತೀವ್ರವಾದಿಗಳು ತಮ್ಮನ್ನು ತಪ್ಪು ತಿಳಿಯಬಾರದು, ಅಂತೆಯೇ ಭಾರತದ ಹಿಂದೂ ಅತಿರೇಕವಾದಿಗಳೂ ತಮ್ಮನ್ನು ದುರುಪಯೋಗ ಮಾಡಿಕೊಳ್ಳಬಾರದು ಎಂಬ ವಿನಮ್ರತೆಯುಳ್ಳವರು ಅವರು. ಯಾವುದೇ ಕಲೆಯೂ ರಾಜಕೀಯದ ಅಡಿಯಾಳಾಗಬಾರದು ಎಂದು ನಂಬಿದ, ಆ ರೀತಿಯಲ್ಲಿಯೇ ಬದುಕಿದ, ಅದನ್ನೇ ತಮ್ಮ ಸಾಹಿತ್ಯದಲ್ಲಿ ಜೀವಂತಗೊಳಿಸಿದ ಕಥೆಗಾರ ಇಂತಿಜಾರ್.

'ನವಿಲು ಪುರಾಣ'ದಲ್ಲಿ ಒಟ್ಟು ಹದಿನೈದು ಕಥೆಗಳಿವೆ. 'ಬರೆಯಲಾಗದ ಪುರಾಣ' ಕಥೆಯು ಕಥಾನಾಯಕನಿಗೆ ಇರಬೇಕಾದ ಎಲ್ಲ ಯೋಗ್ಯತೆಗಳಿದ್ದರೂ ಅವಕಾಶವಂಚಿತನಾಗುವುದರ ಸುತ್ತಲಿನ ವ್ಯವಸ್ಥೆಯ ಚಿತ್ರಣವನ್ನು ತೆರೆದುತೋರುತ್ತದೆ. ಭಾರತದಲ್ಲಿದ್ದಾಗ ತುಂಬ ಗೌರವಸ್ಥನೂ ಅನುಕೂಲಸ್ಥನೂ ಆಗಿದ್ದ ಈತ ಪಾಕಿಸ್ತಾನಕ್ಕೆ ಹೋದಮೇಲೆ ತನ್ನವರಿಂದಲೇ ಅವಮಾನಿತನಾಗಿ, ನಿರ್ಗತಿಕನಾಗಿ ತೊಳಲಾಡಬೇಕಾಗುತ್ತದೆ. ದೇಶವೊಂದರ ನಾಗರಿಕ ಮನಸ್ಸುಗಳು ಛಿದ್ರಗೊಂಡಾಗ, ಭವಿಷ್ಯದ ಅರಿವಿಲ್ಲದೆ ತೀರ್ಮಾನಗಳನ್ನು ಕೈಗೊಂಡಾಗ ಅಲ್ಲಿನ ಜನಜೀವನ ಅಸ್ತವ್ಯಸ್ತಗೊಳ್ಳುವ ಪರಿ ಮನ ಮಿಡಿಯುವಂತಹದ್ದು. ಅಂತಹ ಚಡಪಡಿಕೆಯನ್ನು ಕಥೆ ಸಶಕ್ತವಾಗಿ ಕಟ್ಟಿಕೊಟ್ಟಿದೆ.



ಪು: 420
₹450

ನವಿಲು ಪುರಾಣ
ಮೂಲ: ಇಂತಿಜಾರ್ ಹುಸೇನ್
ಕನ್ನಡಕ್ಕೆ: ಪ್ರೊ.ಕೆ.ಇ. ರಾಧಾಕೃಷ್ಣ
ಪ್ರ: ಸೃಷ್ಟಿ ಪಬ್ಲಿಕೇಷನ್ಸ್
ಸಂ: 9845096668

ಯುವಕನೊಬ್ಬ ಸಂಬಂಧ-ವಿಘಟನೆಗಳ ಸಂದರ್ಭದಲ್ಲಿ ಪಡುವ ಸಂಕಟವನ್ನು 'ಆಮೆ' ಕಥೆಯು ಪ್ರತಿಬಿಂಬಿಸುತ್ತದೆ. ಗೋಪಾಲ, ವಿದ್ಯಾಸಾಗರ ಹಾಗೂ ಸುಂದರ ಸಮುದ್ರದ ನಡುವಿನ ಸಂಬಂಧಗಳ ಹೊಯ್ದಾಟ ಮನಕಲಕುವಂತಹದ್ದು, ಬಿಟ್ಟುಬಂದ ತಾಯ್ನೆಲ, ಅಲ್ಲಿನ ಸಮರಸದ ಸುಮಧುರ ಜೀವನಾನುಭವ ಇವ್ಯಾವುವನ್ನೂ ಮರೆಯಲಿಕ್ಕಾಗದ ಗೊಂದಲಮಯ ಸ್ಥಿತಿಯನ್ನು ಇಲ್ಲಿಯ ಪಾತ್ರಗಳು ಅನುಭವಿಸುವುದು ವ್ಯವಸ್ಥೆಯ ಪ್ರತಿಬಿಂಬವಾಗಿ ಕಂಡುಬರುತ್ತದೆ.

'ಸಂಪೂರ್ಣ ಜ್ಞಾನ' ಎಂಬ ಕಥೆಯು ಹಿಂದೂ-ಮುಸ್ಲಿಮರೆಲ್ಲ ಹೇಗೆ ಯಾವ ತರತಮವೂ ಇಲ್ಲದಂತೆ ಬೆರೆತು ಬಾಳಿ ಬದುಕುತ್ತಿದ್ದರು ಎನ್ನುವುದನ್ನು ಅರಿವಿಗೆ ತರುತ್ತದೆ. ಪ್ರತಿಹೆಜ್ಜೆಗೂ ಹೊಸತರೆಡೆಗೆ ತುಡಿಯುತ್ತ ಸಾಗುವ ಕಥೆ ಓದುಗರಲ್ಲಿ ಕುತೂಹಲವನ್ನು ಇಮ್ಮಡಿಗೊಳಿಸುತ್ತ ಮುಂದುವರಿಯುತ್ತದೆ. ಹುಟ್ಟು ಬ್ರಾಹ್ಮಣನಾಗಿದ್ದ ಮನೋಹರ ದಾರಿಬಿಟ್ಟು ನಡೆದವನು. ಒಮ್ಮೆ ತಂದೆಯ ಹಿತೋಪದೇಶವನ್ನು ಕೇಳಿ ಓದುಗಳನ್ನೆಲ್ಲ ಓದಿ ವಿದ್ವಾಂಸರೊಂದಿಗೆ, ಸಾಧಕರೊಂದಿಗೆ ಚರ್ಚಿಸಿ ಜ್ಞಾನಸಂಪಾದಿಸಿದರೂ ತೃಪ್ತಿ ಕಾಣದವನು. ಮನಸ್ಸಿನ ಚಂಚಲತೆಯಿಂದ ಕೊರಗಿದವನು. ಹಿತೈಷಿ ಗುರುವಿನ ಉಪದೇಶವನ್ನು ಕೇಳಿ ಎಲ್ಲ ಕಾಮನೆಗಳನ್ನು ಗೆದ್ದು ಗುರುವಿನಲ್ಲಿ ಅರ್ಪಿಸಿಕೊಂಡಾಗ ಗುರುವೇ ಆತನನ್ನು ತನ್ನ ಪೀಠದಲ್ಲಿ ಕುಳ್ಳಿರಿಸಿ ತಾನು ಹೊರಡುವುದು ಕಥೆಯ ಮಾರ್ಮಿಕವಾದ ಅಂತ್ಯ.

ಬುದ್ಧನಂತೆಯೇ ಇಲ್ಲಿಯೂ ಸಾಧಕನಿಗೆ ಮತ್ತೆ ಮತ್ತೆ ಪರೀಕ್ಷೆಗೆ ಈಡುಮಾಡುವ ಕ್ರಮ ಜಾತಕ ಕಥೆಗಳನ್ನು ನೆನಪಿಗೆ ತರುತ್ತದೆ. ಗಮನಿಸಬೇಕಾದ ಮತ್ತೊಂದು ಕಥೆ 'ದುಃಖನಗರಿ'. ಈ ಕಥೆಯಲ್ಲಿ ಮೂರು ಪಾತ್ರಗಳು ತಾವೇ ಹುಟ್ಟುಹಾಕಿದ ವ್ಯವಸ್ಥೆಯಿಂದ ರೋಸಿಹೋದರೂ ಅದರಿಂದ ಬಿಡಿಸಿಕೊಳ್ಳದ ಅಸಹಾಯಕತೆಯಲ್ಲಿ ಸಿಲುಕುತ್ತವೆ. ತಮ್ಮನ್ನೇ ತಾವು ಕೊಂದುಕೊಂಡು ಹೆಣವಾಗಿರುವವರು ತಮ್ಮ ತಮ್ಮ ಹೆಣಗಳನ್ನೇ ಹೊತ್ತು ತಿರುಗಾಡಿ ಹೂಳಲು ಹೆಣಗಿ ಸೋಲುವ ಪರಿ ವ್ಯವಸ್ಥೆಯ ಮುಖಕ್ಕೆ ಕನ್ನಡಿ ಹಿಡಿಯುತ್ತದೆ. ನಿಷ್ಕರುಣೆ, ನಿರ್ದಯಿಗಳಾದ ಈ ಮೂರೂ ಪಾತ್ರಗಳು ವಿಭಜನೆಯ ಸಂದರ್ಭದ ಹಿಂದೂ-ಮುಸ್ಲಿಂ ಜನಾಂಗದ ಪ್ರತಿನಿಧಿಗಳಾಗಿ ಕಾಣುತ್ತವೆ.

'ಹಿಂದೂಸ್ತಾನ ಒಂದು ಪತ್ರ', 'ದೋಣಿ', 'ಒಕ್ಕಣ್ಣ ದಜ್ಜಾಲ', 'ಎಲೆಗಳು', 'ರೈಲುನಿಲ್ದಾಣದ ಜಗಲಿ' ಕುತೂಹಲದಿಂದ ಓದಿಸಿಕೊಂಡು ಹೋಗುವ ಕಥೆಗಳು. ಒಂದು ಕಾಲ-ದೇಶದ ಸಾಮಾಜಿಕ, ಸಾಂಸ್ಕೃತಿಕ ಜೀವನದ ವಿಘಟನೆಯ ಗಳಿಗೆಯಲ್ಲಿ ಅಲ್ಲಲ್ಲಿಯ ಜನ ಅನುಭವಿಸುವ ಸಂಕಟ-ವಿಷಾದ ಎಂತಹದ್ದು ಎನ್ನುವುದನ್ನು ಇಲ್ಲಿಯ ಕಥೆಗಳು ದರ್ಶಿಸುತ್ತವೆ. 'ಒಕ್ಕಣ್ಣ ದಜ್ಜಾಲ' ಕಥೆ ಭಾರತದ ಪ್ರಸ್ತುತ ರಾಜಕೀಯ ಸ್ಥಿತಿಯನ್ನು ಪ್ರತಿಬಿಂಬಿಸುತ್ತದೆ.

ಅನುವಾದ ಎನ್ನುವುದು ಪರಕಾಯ ಪ್ರವೇಶದಷ್ಟೇ ಸತ್ಯ. ಒಂದು ಭಾಷೆಯ ಭಾವ ಮುಕ್ಕಾಗದಂತೆ ಇನ್ನೊಂದು ಭಾಷೆಯಲ್ಲಿ ಎರಕಹೊಯ್ಯುವುದು ತುಂಬ ಎಚ್ಚರಿಕೆಯ ಕೆಲಸ. ಅನುವಾದಕ ಒಂದು ಭಾಷೆಯನ್ನು ಪ್ರತಿಭಾಷೆಯಲ್ಲಿ ಇಳಿಸುವ ಯಂತ್ರವಲ್ಲ. ಅನುವಾದಕನಲ್ಲಿ ಮೂಲಕರ್ತೃವಿನ ಕುರಿತು ವಿಶೇಷ ಕುತೂಹಲ ಹಾಗೂ ಗೌರವಗಳಿರಬೇಕು.

ಮೂಲಕರ್ತೃವಿನ ವಿಚಾರಶೀಲತೆಯನ್ನು ಅವನು ಚೆನ್ನಾಗಿ ಅರಿತಿರಬೇಕು. ರಾಧಾಕೃಷ್ಣ ಅವರು ಅಂತಹ ಸೂಕ್ಷ್ಮಗ್ರಾಹಿ. ಇಂತಿಜಾರ್ ಅವರ ಕಥೆಗಳನ್ನು ಸಮರ್ಥವಾಗಿ ಕನ್ನಡಕ್ಕೆ ಅನುವಾದಿಸಿದ್ದಾರೆ.

ಕೊಳಲೊಂದು ಲೀಲೆ ಹಲವು

10ನೇ ಪುಟದಿಂದ...

ಇದರಲ್ಲೂ ಯಶಸ್ವಿಯಾಗಿರುವ ಪ್ರವೀಣ್ ಗೋಡ್ಖಿಂಡಿ ಅವರು ಕೊಳಲು ಜಗತ್ತಿಗೆ ಹೊಸ ವಾದ್ಯ ನೀಡಿದ ಹೆಮ್ಮೆಯನ್ನೂ ಹೊಂದಿದ್ದಾರೆ.

ಏಳಿಂಚಿನ ಕೊಳಲು: ಸೋಲೊ ಜೊತೆಗೆ ಜುಗಲ್‌ಬಂದಿ ಕಛೇರಿ, ಸಮಕಾಲೀನ ಸಂಗೀತ ಕಾರ್ಯಕ್ರಮ ನುಡಿಸುವಾಗ ಪ್ರವೀಣ್ ಅವರ ಸುತ್ತಲೂ ವಿವಿಧ ಅಳತೆಯ ಬಾನ್ಸುರಿಗಳ ರಾಶಿಯೇ ಇರುತ್ತದೆ. ಅದರಲ್ಲೊಂದು ಏಳಿಂಚಿನ ಪುಟಾಣಿ ಕೊಳಲು ಗಮನ ಸೆಳೆಯುತ್ತದೆ. ಎತ್ತರದ ಸ್ಥಾಯಿಗಳ ಸ್ವರ ನುಡಿಸುವಾಗ ಇದು ರೋಮಾಂಚನ ಸೃಷ್ಟಿ ಮಾಡುತ್ತದೆ.

ಉಸಿರು ಕಟ್ಟಿ ನುಡಿಸುವ ಪ್ರಯೋಗ: ಹಲವರು ಉಸಿರುಗಟ್ಟಿ ಹಾಡಿ (ಬ್ರೆಥ್‌ಲೆಸ್ ಸಾಂಗ್) ಸಾಧನೆ ಮಾಡಿದ್ದಾರೆ. ಆದರೆ ವಾಸ್ತವವಾಗಿ ಅದು ರೆಕಾರ್ಡಿಂಗ್ ವೇಳೆ ನಡೆಯುವ ತಾಂತ್ರಿಕತೆಯೇ ಆಗಿರುತ್ತದೆ. ಆದರೆ ಕೊಳಲನ್ನು ಉಸಿರುಗಟ್ಟಿಸಿ ನುಡಿಸುವ ಪ್ರಯೋಗವೊಂದನ್ನು ಪ್ರವೀಣ್ ಗೋಡ್ಖಿಂಡಿ ಮಾಡಿದ್ದಾರೆ. ಉಸಿರನ್ನು ಗಂಟಲಿನಲ್ಲಿ ಕೇಂದ್ರೀಕರಿಸಿ ಸ್ವರಗಳ ನಡುವೆ ಬಿಡುವು ನೀಡದೆ ನಿರಂತರವಾಗಿ ನುಡಿಸುವ ಪರಿ ಇದು. ಸಂಗೀತ ಸಂಗತಿಯ ಅಂತಿಮ ಹಂತದಲ್ಲಿ ಕ್ಷಣಕಾಲ ಈ ತಂತ್ರ ಪ್ರಯೋಗಿಸಿ ಕೇಳುಗರ ಉಸಿರುಗಟ್ಟಿಸುತ್ತಾರೆ. ಈ ತಂತ್ರಕ್ಕೆ ಕೇಂದ್ರಿತ ಉಸಿರಾಟ ತಂತ್ರ (ಸರ್ಕ್ಯುಲೇಟೆಡ್ ಬ್ರೀಥಿಂಗ್ ಟೆಕ್ನಿಕ್) ಎಂದು ಕರೆದಿದ್ದಾರೆ.

ಮದುವೆ ಬ್ಯಾಂಡ್‌ಸೆಟ್‌ನಲ್ಲಿ, ನಾದಸ್ವರ ಕಾರ್ಯಕ್ರಮಗಳಲ್ಲಿ ಶ್ರುತಿ ನುಡಿಸುವಾತ ದವಡೆಯಲ್ಲಿ ಉಸಿರು ತುಂಬಿಕೊಂಡು ನುಡಿಸುವುದನ್ನು ನೋಡಿದ್ದೇವೆ. ಇದೇ ತಂತ್ರವನ್ನು ಇಲ್ಲಿ ಅಳವಡಿಸಿಕೊಳ್ಳಲಾಗಿದೆ. ನಾದಸ್ವರದಂತೆ ಕೊಳಲನ್ನು ತುಟಿ ಮುಚ್ಚಿ ನುಡಿಸಲಾಗದು. ಹೀಗಾಗಿ ಗಂಟಲಲ್ಲಿ ಉಸಿರು ಕೇಂದ್ರೀಕರಿಸಿ ಕೊಳಲು ನುಡಿಸುವ ಪ್ರಯೋಗವಿದು. ರಾಜಸ್ಥಾನದ ಜನಪದ ವಾದ್ಯ ಅಲ್ಗೋಜಾವೂ ಇದಕ್ಕೆ ಪ್ರೇರಣೆಯಾಗಿದೆ.

ಪ್ರವೀಣ್ ಗೋಡ್ಖಿಂಡಿ

'ಬಿದಿರಿಗೆ ಪರ್ಯಾಯವಾಗಿ ಮರ, ಉಕ್ಕು, ಬೆಳ್ಳಿ, ಫೈಬರ್ ಕೊಳವೆ, ಗಾಜು, ಎಬೋನೈಟ್ ಮಾಧ್ಯಮದಲ್ಲಿ ಕೊಳಲುಗಳಿವೆ. ಚಿನ್ನದ ಹೊದಿಕೆಯ ಕೊಳಲುಗಳೂ ಇವೆ. ಇವುಗಳಲ್ಲಿ ಹಲವು ನನ್ನ ಸಂಗ್ರಹದಲ್ಲಿವೆ. ಆದರೆ ಬಿದಿರಿನಲ್ಲಿ ಸಿಗುವ ನಾದಸುಖ ಬೇರೆ ಯಾವುದೇ ಮಾಧ್ಯಮದ ವಾದ್ಯದಲ್ಲಿ ದೊರೆಯದು' ಎಂಬುದು ಪಂಡಿತ್ ಪ್ರವೀಣ್ ಗೋಡ್ಖಿಂಡಿ ಅವರ ಮನದಾಳ.

****

101 ರಾಗಗಳ ರಾಗಟೈನ್‌ಮೆಂಟ್

ಲಾಕ್‌ಡೌನ್ ಅವಧಿಯಲ್ಲಿ ಪ್ರವೀಣ್ ಗೋಡ್ಖಿಂಡಿ ಅವರು ಆನ್‌ಲೈನ್‌ನಲ್ಲಿ ಹೊಸದೊಂದು ಪ್ರಯೋಗ ಮಾಡಿದ್ದಾರೆ. ವಾರಕ್ಕೆ ಎರಡು ರಾಗಗಳ ವಿಶೇಷತೆಗಳನ್ನು ಅನಾವರಣಗೊಳಿಸಲಾಗುತ್ತದೆ. ಜಗತ್ತಿನೆಲ್ಲೆಡೆ ಇರುವ ಸಂಗೀತಗಾರರನ್ನು ಒಳಗೊಳ್ಳುವ ಪ್ರಯತ್ನ ಮಾಡಿದ್ದಾರೆ. ಕಳೆದ ಒಂದು ವರ್ಷದಿಂದ ಈ ಪ್ರಯೋಗ ನಡೆಯುತ್ತಿದ್ದು ಜೂನ್ 24ರಂದು 101ನೇ ರಾಗದ ಪ್ರಯೋಗವಿದೆ. ಸಂಗೀತ ದಿಗ್ಗಜರೆಲ್ಲರೂ ಈ ಸಮಾರಂಭದಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಈ ವಿಶೇಷ ಕಾರ್ಯಕ್ರಮ ವೀಕ್ಷಣೆ ಮಾಡಲು ಪ್ರವೀಣ್ ಗೋಡ್ಖಿಂಡಿ ಅಫೀಷಿಯಲ್ ಫೇಸ್‌ಬುಕ್ ಪುಟ ತೆರೆಯಬಹುದು.

'ಲಾಕ್‌ಡೌನ್ ಅವಧಿಯಲ್ಲಿ ಎಲ್ಲರಲ್ಲೂ ನೋವಿತ್ತು. ನೋವು ಮರೆಸುವಂತಹ ರಾಗಗಳ ಪ್ರಯೋಗ ಮಾಡಲಾಗಿದೆ. ಜೊತೆಗೆ ಶಾಸ್ತ್ರೀಯ ಸಂಗೀತದತ್ತ ಯುವಕರನ್ನು ಸೆಳೆಯುವ ಉದ್ದೇಶದಿಂದಲೂ ಈ ಪ್ರಯೋಗ ಮಾಡುತ್ತಿದ್ದೇನೆ' ಎಂದು ಪಂಡಿತ್ ಪ್ರವೀಣ್ ಗೋಡ್ಖಿಂಡಿ ಹೇಳುತ್ತಾರೆ.

ಮಾಸೂರ... ರಂಗಲೋಕದ ಬಹದ್ದೂರ!

ವಿಜಯವಾಮನ

ಕನ್ನಡ ರಂಗಭೂಮಿಯು ಆಗಿನ್ನೂ ಕೈಲಾಸಂ, ಪರ್ವತವಾಣಿ ಮುಂತಾದವರಿಗಷ್ಟೇ ಸೀಮಿತವಾಗಿತ್ತು. ಬೆಂಗಳೂರು ನಗರದಲ್ಲಿ ಮಾತ್ರ ಹವ್ಯಾಸಿ ರಂಗಚಟುವಟಿಕೆಗಳು ನಡೆಯುತ್ತಿದ್ದವು. ರಂಗಶಾಲೆಗಳಾಗಲಿ, ರಂಗಾಯಣಗಳಾಗಲಿ, ತಿರುಗಾಟಗಳಾಗಲಿ ಯಾವುದೂ ಇರಲಿಲ್ಲ. ದೂರದ ಬಂಗಾಳ, ದಿಲ್ಲಿ, ಮುಂಬೈ, ಚೆನ್ನೈ ಮಹಾನಗರಗಳಲ್ಲಿ ಅಲ್ಲೊಬ್ಬರು ಅಲ್ಕಾಜಿ, ಇಲ್ಲೊಬ್ಬರು ಶಂಭುಮಿತ್ರ ಅವರಂಥವರು ಮಾತ್ರ ಇದ್ದರು. ಗಿರೀಶ ಕಾರ್ನಾಡ, ಅಮೋಲ್ ಪಾಲೇಕರ್ ಆಗಲಿ, ನಾಸಿರುದ್ದೀನ್ ಷಾ, ಓಂ ಪ್ರಕಾಶ್ ಪುರಿಯಾಗಲಿ ಇನ್ನೂ ಎಳವೆಯಲ್ಲಿದ್ದರು. ಕನ್ನಡದ ರಂಗ ಪರಂಪರೆಗೆ ಬಿ.ವಿ.ಕಾರಂತರ ಆಗಮನವಾಗಿರಲಿಲ್ಲ. ಕೆ.ವಿ.ಸುಬ್ಬಣ್ಣ ಅವರ 'ನೀನಾಸಂ' ಇನ್ನೂ ತೆರೆದಿರಲಿಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ನಾಟಕಕಾರ ಶ್ರೀರಂಗರು ಕೂಡ ಕನ್ನಡ ರಂಗಭೂಮಿಗೆ ಪದಾರ್ಪಣೆ ಮಾಡಿರಲಿಲ್ಲ!

ಕನ್ನಡನಾಡಿನ, ಶಿವಮೊಗ್ಗ ಜಿಲ್ಲೆಯ ಮಲೆನಾಡಿನ ಹೃದಯ, ಸಾಗರದಲ್ಲಿ ರಂಗಚಟುವಟಿಕೆ ನಿಧಾನವಾಗಿ ಆರಂಭವಾಗಿತ್ತು. ಆದರೆ ಅವರು ಇನ್ನೂ ಗಂಭೀರ ನಾಟಕಗಳಿಗೆ ಕೈಹಚ್ಚಿರಲಿಲ್ಲ. ಎಲ್ಲಾ ಕಡೆ ಕಂಪನಿ ನಾಟಕಗಳೇ ರಾಜ್ಯಭಾರ ಮಾಡುತ್ತಿದ್ದ ಕಾಲವದು.

ಸಾಗರದ ಎನ್.ಆರ್.ಮಾಸೂರ ಎಂಬ ನಾಟಕದ ಗೀಳಿನ ಮನುಷ್ಯ 'ಕಿರಿಯರ ತಂಡ' ಎಂಬ ಗುಂಪು ಕಟ್ಟಿಕೊಂಡು, ಮೆಲ್ಲನೆ ರಂಗಭೂಮಿಯ ಚಟುವಟಿಕೆ ಪ್ರಾರಂಭಿಸಿದರು. ಅದು 1938ರಲ್ಲಿ! ಮಾಸೂರ ಅವರ ಜೊತೆಗೆ ಬಣ್ಣ ಹಚ್ಚಿಕೊಂಡವರು ಹಾವನೂರು ಶ್ರೀಪತಿ, ಗೋಪಾಲಕೃಷ್ಣರಾಯ, ಕೋಳಿವಾಡ ಕೃಷ್ಣಮೂರ್ತಿ ಮುಂತಾದವರು.

1948ರಲ್ಲಿ ಇದೇ 'ಕಿರಿಯರ ತಂಡ'ವು 'ಉದಯ ಕಲಾವಿದರು' ಎಂಬ ಸಂಸ್ಥೆಯಾಗಿ ಬದಲಾಯಿತು. ಇದು ನಾಡಿನ ಹೆಸರಾಂತ ಸಂಸ್ಥೆ. ಏಕೆಂದರೆ, ಖ್ಯಾತ ನಾಟಕಕಾರ ಶ್ರೀರಂಗರ ನಾಟಕಗಳನ್ನೇ ಒಂದರ ಹಿಂದೆ ಒಂದರಂತೆ ಆಡುತ್ತ ಬಂದ ತಂಡ ಇದೊಂದೆ! ಶ್ರೀರಂಗ ಹಾಗೂ ಮಾಸೂರ ಜೋಡಿಯದು ಕನ್ನಡ ರಂಗಭೂಮಿಯ ಅಪರೂಪದ ನೆಂಟಸ್ತಿಕೆ! ಶ್ರೀರಂಗರು ತಮ್ಮ ನಾಟಕಗಳ ಹಸ್ತಪ್ರತಿಗಳನ್ನು ಮೊದಲು ಕಳಿಸಿಕೊಡುತ್ತಿದ್ದದ್ದು ಸಂಸ್ಥೆಯ ರೂವಾರಿ ಮಾಸೂರ ಅವರಿಗೇ.

ಮಾಸೂರ ಅವರ ನೇತೃತ್ವದಲ್ಲಿ 1950ರಲ್ಲಿ ದೆಹಲಿಯಲ್ಲಿ ಪ್ರದರ್ಶನ ನೀಡಲು ತೆರಳಿದ್ದ ತಂಡ

ಎಪ್ಪತ್ತು- ಎಂಬತ್ತರ ದಶಕಗಳಲ್ಲಿ ಮಾಸೂರ ಅನೇಕ ಯುವಕರನ್ನು ಕಲೆಹಾಕಿ ಅದ್ಭುತವಾದ ನಾಟಕಗಳನ್ನು ನಿರ್ದೇಶಿಸಿದರು. ಬಯಲುಸೀಮೆಯ ಲಕ್ಷ್ಮೇಶ್ವರದಿಂದ ಬಂದ ಈ ಹಿರಿಯ ಕಲಾವಿದ, ಸಾಗರದ ಒಂದು ಪೆಟ್ರೋಲ್ ಬಂಕಿನಲ್ಲಿ ಗುಮಾಸ್ತರಾಗಿ ಬದುಕು ಸಾಗಿಸುತ್ತಿದ್ದ ಸರಳ ಸಾಮಾನ್ಯ ವ್ಯಕ್ತಿ. ಕನ್ನಡಕ್ಕೆ ರಂಗ ದೀಕ್ಷೆ ನೀಡಿದವರಲ್ಲಿ ಪ್ರಮುಖರಾದ ಮಾಸೂರರ ಜನ್ಮ ಶತಾಬ್ಧಿ ಮೊನ್ನೆಯಷ್ಟೇ ಸದ್ದಿಲ್ಲದೆ ಸರಿದುಹೋಯಿತು...

ಕೇವಲ ವಿದೇಶಗಳಲ್ಲಿ ಕಾಣಲಾಗುತ್ತಿದ್ದ ಶೇಕ್ಸ್‌ಪಿಯರ್ ಥಿಯೇಟರ್, ಇಬ್ಸನ್ ಥಿಯೇಟರ್, ಬ್ರೆಕ್ಟ್ ಥಿಯೇಟರ್ ರೀತಿ ಒಬ್ಬ ನಾಟಕಕಾರನಿಗೇ ಮೀಸಲಾದ ರಂಗ ತಂಡಗಳಂತೆ 'ಉದಯ ಕಲಾವಿದರು' ಶ್ರೀರಂಗರ ನಾಟಕಗಳಿಗೇ ಮೀಸಲಾಗಿತ್ತು.

ಹರಿಜನ್ವಾರ, ಹುಟ್ಟಿದ್ದು ಹೊಲೆಯೂರು, ಸ್ವರ್ಗಕ್ಕೆ ಮೂರೇ ಬಾಗಿಲು, ಸಿರಿ ಪುರಂದರ, ರಂಗ ಭಾರತ, ಕತ್ತಲೆ-ಬೆಳಕು, ಶೋಕ ಚಕ್ರ, ಸೌಭಾಗ್ಯವತಿ ಭವ, ನೀ ಕೊಡೆ ನಾ ಬಿಡೆ, ಈಸ ಬೇಕು ಇದ್ದು ಜೈಸ ಬೇಕು, ಉತ್ತಮ ಪ್ರಭುತ್ವ ಲೊಳಲೊಟ್ಟೆ ಮುಂತಾದ ಶ್ರೀರಂಗರ ಕೃತಿಗಳನ್ನು ರಂಗಭೂಮಿಗೆ ತಂದು, ಸಾಗರದ ಉದಯ ಕಲಾವಿದರು ಮಾಸದ ಹೆಸರಾಗಿ ಹೋದರು. ಜೊತೆಗೆ ಶ್ರೀರಂಗರ ನಾಟಕಗಳಲ್ಲದೆ ಮಾಸೂರ ಅವರು ನಿರ್ದೇಶಿಸಿದ 'ಹಯವದನ' ಕೂಡಾ ಹೆಸರು ಗಳಿಸಿತು. ಇದೇ ಕಾಲಘಟ್ಟದಲ್ಲಿ ಶ್ರೀರಂಗರು ಹಾಗೂ ಬಿ.ವಿ.ಕಾರಂತರು ಬೆಂಗಳೂರಿಗೆ ಆಗಮಿಸಿದರು. ಕನ್ನಡ ನಾಟಕದ ಭವ್ಯ ಪರಂಪರೆಗೆ ಇದು ನಾಂದಿಯಾಯಿತು.

ನೂರರ ನೆನಪು

ಎಪ್ಪತ್ತು- ಎಂಬತ್ತರ ದಶಕಗಳಲ್ಲಿ ಮಾಸೂರ ಅನೇಕ ಯುವಕರನ್ನು ಕಲೆಹಾಕಿ ಅದ್ಭುತವಾದ ನಾಟಕಗಳನ್ನು ನಿರ್ದೇಶಿಸಿದರು. ಬಯಲುಸೀಮೆಯ ಲಕ್ಷ್ಮೇಶ್ವರದಿಂದ ಬಂದ ಈ ಹಿರಿಯ ಕಲಾವಿದ, ಸಾಗರದ ಒಂದು ಪೆಟ್ರೋಲ್ ಬಂಕಿನಲ್ಲಿ ಗುಮಾಸ್ತರಾಗಿ ಬದುಕು ಸಾಗಿಸುತ್ತಿದ್ದ ಸರಳ ಸಾಮಾನ್ಯ ವ್ಯಕ್ತಿ. ಯಾವ ವಿದ್ಯಾಭ್ಯಾಸವೂ ಇಲ್ಲ, ರಂಗ ತರಬೇತಿಯೂ ಇಲ್ಲ, ಹಣವಂತೂ ಮೊದಲೇ ಇಲ್ಲ! ಆದರೆ ಅಪಾರವಾದ ಆತ್ಮವಿಶ್ವಾಸ, ಅದಮ್ಯವಾದ ರಂಗಾಸಕ್ತಿ, ಕಲಿಯುವ ಮನಸ್ಸು, ಹುಮ್ಮಸ್ಸನ್ನು ತುಂಬಿಕೊಂಡು ಬೆಂಗಳೂರು, ಮೈಸೂರು, ಹಾಸನ, ಶಿವಮೊಗ್ಗ, ರಾಯಚೂರು, ಧಾರವಾಡ, ಶಿರಸಿ, ಬೆಳಗಾವಿ ಮುಂತಾದ ಕಡೆ ಶ್ರೀರಂಗರ ನಾಟಕಗಳನ್ನೇ ಹೆಚ್ಚಾಗಿ ಆಡಿಸುತ್ತಾ ನಡೆದರು ಈ ರಂಗ ಭೂಪ!

ಇವರ ಮನೆತನ ದೀಕ್ಷಿತರದ್ದು. ಪೂರ್ಣ ಹೆಸರು ನಾರಾಯಣ ರಾಮಚಂದ್ರ ದೀಕ್ಷಿತ ಯಾನೆ ಮಾಸೂರ. ತಾನೂ ರಂಗ ದೀಕ್ಷೆ ತೆಗೆದುಕೊಂಡು ಇತರರಿಗೂ ರಂಗ ದೀಕ್ಷೆ ನೀಡುತ್ತಿದ್ದ ಈ 'ರಂಗ ದೀಕ್ಷಿತ' ಬದುಕಿದ್ದರೆ 101 ವರ್ಷ ತುಂಬಿರುತ್ತಿತ್ತು (12.6.1920). ರಂಗಾಸಕ್ತರ ಪಾಲಿಗೆ ಇವರು ಮಾಸೂರ ಎಂದೇ ಪರಿಚಿತರು.

'ಉದಯ ಕಲಾವಿದರು' ತಂಡದ ಹೆಗ್ಗಳಿಕೆಯೆಂದರೆ, ಮಾಸೂರ ಅವರಿಂದ ಕಲಿತ ಡೈಲಾಗ್ ಡೆಲಿವರಿ, ಉಸಿರಿನ ನಿಯಂತ್ರಣ, ದನಿಯ ಏರಿಳಿತಗಳು, ರಂಗ ಚಲನೆ ಹಾಗೂ ಮಾತುಗಳ ಸ್ಪಷ್ಟ ಉಚ್ಚಾರಣೆ. ವರ್ತಕರು, ವಕೀಲರು, ಉಪನ್ಯಾಸಕರು, ಬ್ಯಾಂಕ್ ಅಧಿಕಾರಿಗಳು, ಎಲ್‌ಐಸಿ, ಬಿಎಸ್‌ಎನ್‌ಎಲ್ ಅಧಿಕಾರಿಗಳು, ಕೃಷಿಕರು, ನಿರುದ್ಯೋಗಿಗಳು ಮುಂತಾದವರನ್ನೆಲ್ಲಾ ಕಟ್ಟಿಕೊಂಡು ಉಚ್ಚಾರದ ಮಹತ್ವ, ಆಂಗಿಕ ಶಿಸ್ತು ಕಲಿಸುತ್ತಾ, ಕಸ ಹೊಡೆಸಿ, ಪರದೆ ಕಟ್ಟಿಸಿ, ದೀಪಗಳೇರಿಸಿ, ಬಣ್ಣ ಹಚ್ಚಿಸಿ, ರಂಗದ ಮೇಲೂ ಅವತರಿಸಿ, ಕಡಿಮೆ ವೆಚ್ಚದಲ್ಲಿ ಪ್ರದರ್ಶನಗಳನ್ನು ನೀಡುತ್ತಾ, ಮತ್ತೆ ವ್ಯಾನು, ಬಸ್ಸುಗಳಲ್ಲಿ ನಾಡಿನಾದ್ಯಂತ ಅಲೆದಾಡಿದ್ದೇ ಇಂದು ಕೆಲವು ತಂಡಗಳು ಮಾಡುತ್ತಿರುವ ತಿರುಗಾಟದಂಥ ಪ್ರಯೋಗಗಳಿಗೆ ಮಾದರಿ ಎಂದರೆ ಅತಿಶಯೋಕ್ತಿಯಲ್ಲ.

ಉದಯ ಕಲಾವಿದರು ನಾಟಕದ ತಾಲೀಮು ನಡೆಸುತ್ತಿದ್ದ 'ಅಟ್ಟ' ಕನ್ನಡ ನಾಡಿನ ರಂಗಭೂಮಿ ಕಲಾವಿದರಿಗೆ ಚಿರಪರಿಚಿತ. ಪ್ರತೀ ಸಂಜೆ 'ಅಟ್ಟ'ದಲ್ಲಿ ಯಾವುದಾದರೂ ನಾಟಕದ ತಾಲೀಮು ನಡೆಯುತ್ತಲೇ ಇರುತ್ತಿತ್ತು. ಈ 'ಅಟ್ಟ'ಕ್ಕೆ ವರಕವಿ ಬೇಂದ್ರೆ, ನಿರ್ದೇಶಕ ಬಿ.ವಿ.ಕಾರಂತ, ನಟ ಅಮೋಲ್ ಪಾಲೇಕರ್, ಮೋಹನ ಮಹರ್ಷಿ ಮುಂತಾದ ಖ್ಯಾತನಾಮರು ಭೇಟಿ ನೀಡಿದ್ದರು. ಕೈಲಾಗದೆ ಹಾಸಿಗೆ ಹಿಡಿದಾಗಲೂ ಮಾಸೂರ 'ಅಟ್ಟ'ಕ್ಕೆ ಹಗ್ಗ ಹಿಡಿದು ಮೆಟ್ಟಿಲು ಹತ್ತುತ್ತ ಬರುತ್ತಿದ್ದರು.



ಎನ್.ಆರ್. ಮಾಸೂರ ಚಿತ್ರ: ಕೆ.ಜಿ.ಸೋಮಶೇಖರ್

ಮಾಸೂರ ನಂತರವೂ 'ಉದಯ ಕಲಾವಿದರು' ಹಲವಾರು ವರ್ಷಗಳ ಕಾಲ ಹತ್ತಾರು ಪ್ರಸಿದ್ಧ ನಾಟಕಗಳನ್ನು ನೀಡಿದ್ದಾರೆ. ಅನಿವಾರ್ಯ ಕಾರಣಗಳಿಂದಾಗಿ ನಿಷ್ಕ್ರಿಯವಾಗಿದ್ದ ಈ ತಂಡ ಈಗ ಸಂಪೂರ್ಣ ಸ್ತಬ್ಧವಾಗಿದೆ. ಗಿಜಿಗುಡುವ ರಂಗತಾಣವಾಗಿದ್ದ 'ಅಟ್ಟ' ಕಣ್ಮರೆಯಾಗಿ, ಕೇವಲ ನೆನಪಾಗಿ ಉಳಿದಿದೆ. ಈ ನೆನಪು ನಿರಂತರವಾಗಿ ಇರಬೇಕಾದಲ್ಲಿ ಮಾಸೂರ ಹೆಸರಿನಲ್ಲಿ ರಂಗಮಂದಿರವೊಂದು ಸಾಗರದಲ್ಲಿ ನಿರ್ಮಾಣವಾಗಬೇಕು. ಮಾಸೂರ ಹಾಗೂ ಅನೇಕ ಹಿರಿಯ 'ಉದಯ ಕಲಾವಿದ'ರಿಗೆ ಗೌರವ ಸಲ್ಲಿಸಲು 'ಮಾಸೂರ ರಂಗಮಂದಿರ' ಮಾತ್ರವೇ ಸರಿಯಾದ ವೇದಿಕೆ.

ಪೌರಕಾರ್ಮಿಕರ ಪೂಜನೀಯ ಸ್ವಾಮೀಜಿ

ಪೌರಕಾರ್ಮಿಕರಿಗಾಗಿ ದೇವಾಲಯಗಳನ್ನು ಕಟ್ಟಿಸಿರುವ ಈ ಸ್ವಾಮೀಜಿ, ಪೌರಕಾರ್ಮಿಕರನ್ನೇ ಅರ್ಚಕರನ್ನಾಗಿ ನೇಮಿಸಿದ್ದಾರೆ. ಸಂಗೀತ ಬಲ್ಲ ಈ ಸ್ವಾಮೀಜಿಗೆ ಕುಬ್ಜ ಗಿಡಗಳ ಮೇಲೆ ಪ್ರೀತಿ, ಗಿಳಿಗಳೆಂದರೆ ಪಂಚಪ್ರಾಣ...

ಎಸ್.ಪ್ರಕಾಶ್ ಬಾಬು

ಇವರನ್ನು ನೀವು ಪೌರಕಾರ್ಮಿಕರ ಸ್ವಾಮೀಜಿ ಎಂದೇ ಕರೆಯಬಹುದು. ಈ ಸ್ವಾಮೀಜಿ ಪೌರಕಾರ್ಮಿಕರಿಗೆ ತಮ್ಮ ಆಶ್ರಮದಲ್ಲಿ ಮುಕ್ತ ಅವಕಾಶ ನೀಡಿದ್ದಾರೆ. ಈಗಾಗಲೇ ಎರಡು ಬಾರಿ ತಮ್ಮ ಆಶ್ರಮದಲ್ಲಿ ಪೌರಕಾರ್ಮಿಕರ ಬೃಹತ್ ಸಮಾವೇಶ ನಡೆಸಿದ್ದಾರೆ. ಮೈಸೂರು ಮತ್ತು ಸುತ್ತಮುತ್ತಲಿನ ಪಟ್ಟಣಗಳ ಪೌರಕಾರ್ಮಿಕರ ಕಾಲೊನಿಗಳಲ್ಲಿ ಇದುವರೆಗೆ 14 ದೇವಾಲಯಗಳನ್ನು ಕಟ್ಟಿಸಿದ್ದಾರೆ ಅಥವಾ ಜೀರ್ಣೋದ್ಧಾರ ಮಾಡಿಸಿದ್ದಾರೆ. ಮೈಸೂರಿನ ಬನ್ನಿಮಂಟಪ, ಕುದುರೆ ಮಾಳಗಳಲ್ಲಿರುವ ಪೌರಕಾರ್ಮಿಕರ ಕಾಲೊನಿಗಳಲ್ಲಿ ಈಗ ಎರಡು ದೇವಾಲಯಗಳು ನಿರ್ಮಾಣವಾಗುತ್ತಿವೆ. ಈ ದೇವಾಲಯಗಳಲ್ಲಿ ಪೂಜೆ ಮಾಡುವವರೂ ಪೌರಕಾರ್ಮಿಕರೇ ಆಗಿದ್ದಾರೆ!

ಪೌರಕಾರ್ಮಿಕರನ್ನು ಆಶ್ರಮಕ್ಕೆ ಕರೆಸಿಕೊಂಡು ಅವರಿಗೆ ದೇವರ ಪೂಜೆ ಮಂತ್ರಗಳನ್ನು ಹೇಳಿಕೊಟ್ಟಿದ್ದಾರೆ. 2002 ಮತ್ತು 2019ರಲ್ಲಿ ಆಶ್ರಮದಲ್ಲಿ ಪೌರಕಾರ್ಮಿಕರ ಸಮಾವೇಶ ನಡೆಸಿ ಅವರ ಶಿಕ್ಷಣ ಮತ್ತು ವಸತಿ ಸೌಲಭ್ಯಕ್ಕೂ ನೆರವು ನೀಡುವುದಾಗಿ ಭರವಸೆ ನೀಡಿದ್ದಾರೆ. ಪ್ರತಿವರ್ಷ ಸ್ವಾಮೀಜಿ ಅವರ ಹುಟ್ಟುಹಬ್ಬದ ದಿನ ಪೌರಕಾರ್ಮಿಕರು ಆಶ್ರಮಕ್ಕೆ ಬಂದು ಸ್ವಾಮೀಜಿಗೆ ವಿಶೇಷ ರೀತಿಯಲ್ಲಿ ಕೃತಜ್ಞತೆ ಸಲ್ಲಿಸುತ್ತಾರೆ. ಅಲ್ಲದೆ ಸ್ವಾಮೀಜಿ ಅವರು ಕಟ್ಟಿಸಿದ ದೇವಾಲಯಗಳಲ್ಲಿ ವಿಶೇಷ ಪೂಜೆ ನಡೆಯುತ್ತದೆ.

ಸಮಾಜದ ಕಟ್ಟಕಡೆಯ ಸ್ಥಾನದಲ್ಲಿರುವ ಹಾಗೂ ಸಮಾಜದ ಎಲ್ಲ ಕೊಳಕುಗಳನ್ನು ಸ್ವಚ್ಛ ಮಾಡುವ ಪೌರಕಾರ್ಮಿಕರಿಗೆ ನೆರವಾಗುತ್ತಿರುವ ಸ್ವಾಮೀಜಿ ಯಾರಪ್ಪಾ ಎಂದರೆ ಮೈಸೂರಿನ ಗಣಪತಿ ಸಚ್ಚಿದಾನಂದ ಸ್ವಾಮೀಜಿ. ಹೆಚ್ಚಾಗಿ ದಲಿತರನ್ನೇ ಒಳಗೊಂಡ ಪೌರಕಾರ್ಮಿಕರಿಗೆ ನೆರವಾಗುವ ಇಂತಹ ಕಾರ್ಯಕ್ಕೆ ಪ್ರೇರಣೆ ಏನು ಎಂದು ಕೇಳಿದರೆ, 'ನಾವು ವಿದೇಶಕ್ಕೆ ಭೇಟಿ ನೀಡಿದಾಗ ನಮ್ಮ ಧರ್ಮದ ಬಗ್ಗೆ ಎಲ್ಲರೂ ಪ್ರಶಂಸೆ ಮಾಡುತ್ತಾರೆ. ಆದರೆ ಅಸ್ಪೃಶ್ಯತೆಯ ಬಗ್ಗೆ ತೀವ್ರ ವಿರೋಧ ವ್ಯಕ್ತಪಡಿಸುತ್ತಾರೆ. ಈ ಬಗ್ಗೆ ಕೆಲವರು ನಿಂದನೆಯ ಮಾತುಗಳನ್ನೂ ಹೇಳಿದ್ದರು. ಅದು ನಮ್ಮ ಮನಸ್ಸಿಗೆ ತುಂಬಾ ನೋವಾಗಿದ್ದರಿಂದ ಅಸ್ಪೃಶ್ಯತೆಯನ್ನು ತೊಲಗಿಸುವ ಪ್ರಯತ್ನವಾಗಿ ಪೌರಕಾರ್ಮಿಕರಿಗೆ ನೆರವು ನೀಡಲು ಆರಂಭಿಸಿದ್ದೇವೆ' ಎಂದು ಸ್ವಾಮೀಜಿ ಹೇಳುತ್ತಾರೆ.

ಧಾರ್ಮಿಕ ಕ್ಷೇತ್ರದಲ್ಲಿ ಸ್ವಾಮೀಜಿ ಸಾಕಷ್ಟು ಕೆಲಸ ಮಾಡಿದ್ದಾರೆ. ಆಶ್ರಮದಲ್ಲಿ ವೇದ ಪಾಠಶಾಲೆ ಇದೆ. ದತ್ತಪೀಠದಲ್ಲಿ ನಿರಂತರ ಸೇವಾ ಕಾರ್ಯಗಳು ನಡೆಯುತ್ತಿವೆ. ಗಣಪತಿ ಸಚ್ಚಿದಾನಂದ ಆಶ್ರಮದ 87 ಶಾಖೆಗಳು ಭಾರತದಲ್ಲಿವೆ. ವಿದೇಶಗಳಲ್ಲಿ 12 ಆಶ್ರಮಗಳಿವೆ. ವಿದೇಶಗಳಲ್ಲಿ ಎರಡು ದತ್ತಾತ್ರೇಯ ದೇವಾಲಯಗಳನ್ನು ಕಟ್ಟಿಸಿದ್ದಾರೆ. ವೆಸ್ಟ್ ಇಂಡೀಸ್ ದ್ವೀಪ ಸಮೂಹದ ಟ್ರಿನಿಡಾಡ್‌ನಲ್ಲಿ 87 ಅಡಿ ಎತ್ತರದ ಕಾರ್ಯಸಿದ್ಧಿ ಹನುಮಾನ್ ಬೃಹತ್ ಏಕಶಿಲಾ ವಿಗ್ರಹವನ್ನು ಸ್ಥಾಪಿಸಿದ್ದಾರೆ. ಹೀಗೆ ನಿರಂತರ ಆಧ್ಯಾತ್ಮಿಕ ಕಾರ್ಯ ಮಾಡುತ್ತಿದ್ದರೂ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಪ್ರಸಿದ್ಧರಾಗಿರುವುದು ಅವರ ಇತರ ವಿಶಿಷ್ಟ ಕಾರ್ಯಗಳಿಂದ.

ಮೈಸೂರಿನ ಆಶ್ರಮದಲ್ಲಿ ಅವರು ಸ್ಥಾಪಿಸಿರುವ ಬೋನ್ಸಾಯಿ ಉದ್ಯಾನ ಸ್ವಾಮೀಜಿ ಅವರನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ಏರಿಸಿದೆ. ಇಲ್ಲಿ 400ಕ್ಕೂ ಹೆಚ್ಚು ಬೋನ್ಸಾಯಿ ಗಿಡಗಳಿವೆ. 'ಬೋನ್ಸಾಯಿಗಳ ಮೂಲ ಚೀನಾ ಮತ್ತು ಜಪಾನ್ ಎಂಬ ಭಾವನೆ ನಮ್ಮಲ್ಲಿ ಇತ್ತು. ನಾವು ಒಮ್ಮೆ ಚೀನಾಕ್ಕೆ ಹೋದಾಗ ಅಲ್ಲಿನ ಬೋನ್ಸಾಯಿ ಉದ್ಯಾನದ ಬಾಗಿಲಿನಲ್ಲಿಯೇ ಬೋನ್ಸಾಯಿ ಮೂಲ ಹಿಮಾಲಯ ಎಂಬ ಫಲಕ ಇತ್ತು. ಅದನ್ನು ನೋಡಿ ನಮಗೆ ಜ್ಞಾನೋದಯ ಆಯಿತು. ಅಲ್ಲದೆ ರಾಮಾಯಣದ ಸುಂದರಕಾಂಡದಲ್ಲಿ ಬರುವ ದಧಿಮುಖನ ಕತೆ ಕೂಡ ಬೋನ್ಸಾಯಿ ಬೆಳೆಸಲು ಪ್ರೇರಣೆ' ಎಂದು ಸ್ವಾಮೀಜಿ ಹೇಳುತ್ತಾರೆ.

'ನಮ್ಮಲ್ಲಿ ಕುಬ್ಜ ವೃಕ್ಷ ಶಾಸ್ತ್ರವೇ ಇದೆ. ಬೋನ್ಸಾಯಿ ಗಿಡಗಳ ವಿಶೇಷ ಏನು ಎಂದರೆ ನಿಮ್ಮ ಅಜ್ಜ ಅಥವಾ ಮುತ್ತಜ್ಜ ಅಥವಾ ಮುತ್ತಜ್ಜನ ಅಜ್ಜ ಒಂದು ಗಿಡವನ್ನು ನೆಟ್ಟಿದ್ದರೆ ಅದೇ ಗಿಡಕ್ಕೆ ನೀವೂ ನೀರು ಎರೆಯಬಹುದು. ಅಜ್ಜ, ಮುತ್ತಜ್ಜ ಎಲ್ಲರೂ ಕಣ್ಮರೆಯಾಗಬಹುದು. ಆದರೆ ಬೋನ್ಸಾಯಿ ಜೀವಂತವಾಗಿರುತ್ತದೆ. ನೀವು ನೆಟ್ಟು ಅದರಿಂದ ಆಮ್ಲಜನಕ ಪಡೆದಿದ್ದರೆ ನಿಮ್ಮ ಮೊಮ್ಮಕ್ಕಳು ಮಾತ್ರ ಅಲ್ಲ, ಮೊಮ್ಮಕ್ಕಳ ಮೊಮ್ಮಕ್ಕಳೂ ಅದರಿಂದ ಆಮ್ಲಜನಕ ಪಡೆಯಬಹುದು. ಬೋನ್ಸಾಯಿ ಬೆಳೆಸುವುದಕ್ಕೆ ಹೆಚ್ಚಿನ ಜಾಗವೂ ಬೇಡ. ಈಗಂತೂ ನಗರ ಪ್ರದೇಶಗಳಲ್ಲಿ ಅಪಾರ್ಟ್‌ಮೆಂಟ್‌ಗಳು ತಲೆ ಎತ್ತಿವೆ. ನಿಮ್ಮ ಫ್ಲ್ಯಾಟ್‌ಗಳಲ್ಲಿಯೂ ಬೋನ್ಸಾಯಿ ಬೆಳೆಯಬಹುದು. ನಿಮ್ಮ ಅಪಾರ್ಟ್‌ಮೆಂಟ್ ಮತ್ತು ಫ್ಲ್ಯಾಟ್‌ಗಳ ಆಯುಷ್ಯಕ್ಕಿಂತ ಬೋನ್ಸಾಯಿ ಆಯುಷ್ಯ ಹೆಚ್ಚು. ಮನೆಗೆ ಸೌಂದರ್ಯವೂ ಹೌದು, ಶುದ್ಧ ಗಾಳಿಯೂ ಸಿಗುತ್ತದೆ' ಎಂದು ಅವರು ಹೇಳುತ್ತಾರೆ.

ಸ್ವಾಮೀಜಿ ಅವರ ಇನ್ನೊಂದು ವಿಶಿಷ್ಟ ಹವ್ಯಾಸ ಗಿಳಿಗಳ ರಕ್ಷಣೆ. ಮೈಸೂರಿನ ಆಶ್ರಮದಲ್ಲಿ 400 ಪ್ರಭೇದಗಳ ಮೂರು ಸಾವಿರಕ್ಕೂ ಹೆಚ್ಚು ಗಿಳಿಗಳಿವೆ. ಸ್ವಾಮೀಜಿ ಅವರು ಒಮ್ಮೆ ಭಾಗವತ ಪಾರಾಯಣ ಕಾರ್ಯಕ್ರಮ ನಡೆಸಿದರು. ಕಾರ್ಯಕ್ರಮ ಮುಗಿದ ನಂತರ ಭಕ್ತರೊಬ್ಬರು ಎರಡು ಗಿಳಿಗಳನ್ನು ತಂದು ಇವುಗಳಿಗೆ ಆಶ್ರಮದಲ್ಲಿ ಆಶ್ರಯ ಕೊಡಿ ಎಂದರು. ಹೀಗೆ ಯಾರ ಯಾರದ್ದೋ ಮನೆಗಳಲ್ಲಿ ಪಂಜರಗಳಲ್ಲಿ ಇರುವ, ಗಾಯಗೊಂಡಿರುವ ಗಿಳಿಗಳನ್ನು ಆಶ್ರಮಕ್ಕೆ ತಂದುಕೊಡಿ ಎಂದು ಸ್ವಾಮೀಜಿ ಕರೆ ನೀಡಿದ್ದರಿಂದ ಗಿಳಿಗಳ ದಂಡೇ ಆಶ್ರಮಕ್ಕೆ ಹರಿದು ಬಂತು. ಅದರಿಂದಾಗಿ ಆಶ್ರಮದಲ್ಲಿ ಶುಕವನ ಸೃಷ್ಟಿಯಾಯಿತು. ಇದು ಈಗ ಅಂತರರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಪಡೆದಿದೆ.

ಗಿಳಿಗಳೊಂದಿಗೆ ಗಣಪತಿ ಸಚ್ಚಿದಾನಂದ ಸ್ವಾಮೀಜಿ

ಮೈಸೂರಿನ ದತ್ತಪೀಠದ ನಾದಮಂಟಪದಲ್ಲಿ ನಡೆದ ಪೌರಕಾರ್ಮಿಕರ ಸಮಾವೇಶದ ನೋಟ

ಸ್ವಾಮೀಜಿ ಮತ್ತೊಂದು ಮಹತ್ವದ ಸಾಧನೆ ಮಾಡಿದ್ದಾರೆ. ಅದು ಅವರ ತಾಯಿಯಿಂದ ಬಳುವಳಿಯಾಗಿ ಬಂದಿದ್ದು. ಅದು ನಾದ ಚಿಕಿತ್ಸೆ. ನಮ್ಮ ದೇಹದಲ್ಲಿ 72 ಸಾವಿರ ನಾಡಿಗಳಿವೆ. ಯಾವ ಯಾವ ರಾಗಗಳನ್ನು ಹಾಡಿದರೆ ಅಥವಾ ಕೇಳಿದರೆ ಯಾವ ನಾಡಿ ಬಡಿತ ಸರಿಯಾಗುತ್ತದೆ ಎನ್ನುವುದನ್ನು ಶೋಧಿಸಿ ಅವರು ತಿಳಿಸಿದ್ದಾರೆ. ರಾಗರಾಗಿಣಿ ವಿದ್ಯೆಯನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಜನಪ್ರಿಯಗೊಳಿಸಿದ್ದಾರೆ. ಸ್ವಾಮೀಜಿ ಅವರು ರಾಗಪ್ರಿಯರೂ ಹೌದು. ಗಿಳಿ ಪ್ರಿಯರೂ ಹೌದು. ಮೈಸೂರಿನಲ್ಲಿ ಅವರು ಕಟ್ಟಿಸಿದ ನಾದ ಮಂಟಪವೇ ಪ್ರವಾಸಿಗರ ಆಕರ್ಷಣೆಯ ಕೇಂದ್ರ.

ಸ್ವಾಮೀಜಿ ಅವರ ಪೂರ್ವಾಶ್ರಮದ ಹೆಸರು ಸತ್ಯನಾರಾಯಣ. ಮೇಕೆದಾಟು ಅವರ ಜನ್ಮಸ್ಥಳ. ತಂದೆ ಆಂಧ್ರಪ್ರದೇಶದ ಅನಂತಪುರದ ಬೊಮ್ಮೆಪರ್ತಿ ಗ್ರಾಮದ ನರಸಿಂಹಶಾಸ್ತ್ರಿ. ತಾಯಿ ಜಯಲಕ್ಷ್ಮಿ. ಸ್ವಾಮೀಜಿ ಹುಟ್ಟಿದ್ದು 1942ರ ಮೇ 26ರಂದು. ತಮ್ಮ 11ನೇ ವಯಸ್ಸಿನಲ್ಲಿ ತಾಯಿಯನ್ನು ಕಳೆದುಕೊಂಡರು. ತಾಯಿ ನಿಧನದ ನಂತರ ತಂದೆ ವಿರಾಗಿಯಾದರು. ಜ್ಯೇಷ್ಠ ಪುತ್ರರಾಗಿದ್ದ ಸತ್ಯನಾರಾಯಣನ ಮೇಲೆ 8 ವರ್ಷ ಮತ್ತು 5 ವರ್ಷದ ತಂಗಿಯರು ಮತ್ತು ಒಂದು ತಿಂಗಳ ಹಸುಗೂಸು ತಮ್ಮ ಕೋದಂಡರಾಮನ ಜವಾಬ್ದಾರಿ ಬಿತ್ತು. ತಮ್ಮ ಬಹಳ ಕಾಲ ಬದುಕಲಿಲ್ಲ. ಕಡುಬಡತನದಲ್ಲಿ ಮೈಸೂರಿನ ಅಜ್ಜನ ಮನೆಯಲ್ಲಿ ಬೆಳೆದ ಸತ್ಯನಾರಾಯಣ ವಿದ್ಯಾಭ್ಯಾಸವನ್ನೂ ಮುಂದುವರಿಸಲು ಆಗಲಿಲ್ಲ. ಆದರೆ ಅಧ್ಯಾತ್ಮ ಸಾಧನೆಯನ್ನು ಬಿಡಲಿಲ್ಲ.

ಸಂಗೀತದಲ್ಲಿ ತಲ್ಲೀನರಾದ ಸ್ವಾಮೀಜಿ

ಅಂಚೆ ಕಚೇರಿಯಲ್ಲಿ ತಾತ್ಕಾಲಿಕ ಹುದ್ದೆಯಲ್ಲಿದ್ದರೂ ಅಧ್ಯಾತ್ಮದ ಒಲವು ಹೆಚ್ಚಾಗಿದ್ದರಿಂದ ಸನ್ಯಾಸ ಸ್ವೀಕರಿಸಿ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಆದರು. 1966ರ ಜೂನ್ 6ರಂದು, ನಂಜನಗೂಡು ರಸ್ತೆಯಲ್ಲಿರುವ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ಅವಧೂತ ದತ್ತ ಪೀಠದ ಆಶ್ರಮ ಸ್ಥಾಪಿಸಿದರು. 1969ರಲ್ಲಿ ಅನ್ನಪೂರ್ಣಮಂದಿರ ಸ್ಥಾಪಿಸಿದರು. 1971ರಲ್ಲಿ ದ್ವೈತ-ಅದ್ವೈತ-ವಿಶಿಷ್ಟಾದ್ವೈತ ಪೀಠಾಧಿಪತಿಗಳ ಆಶ್ರಯದಲ್ಲಿ ತ್ರಿಮತ ಸಮ್ಮೇಳನ ನಡೆಯಿತು. ಇದರ ಸ್ಮರಣಾರ್ಥ 'ರಾಮಾನುಜ-ಮಧ್ವ-ಶಂಕರ ಕುಟೀರ' ಮಂದಿರಕ್ಕೆ ಶಂಕುಸ್ಥಾಪನೆ ಮಾಡಿದರು. ಇದು 'ರಾ.ಮ.ಶಂಕರ ಕುಟೀರ' ಎಂಬ ಮಂದಿರವಾಗಿ 1976ರಲ್ಲಿ ಲೋಕಾರ್ಪಣೆಯಾಯಿತು.

1978ರ ಜೂನ್ 9ರಂದು ಆಶ್ರಮದಲ್ಲಿ ಸ್ವಾಮೀಜಿಯವರ ಸ್ವಹಸ್ತದಿಂದ ಕಾಲಾಗ್ನಿಶಮನ ದತ್ತಾತ್ರೇಯ ಪ್ರತಿಷ್ಠಾಪನೆಯಾಯಿತು. ಸ್ವಾಮೀಜಿ ಅವರಿಗೆ ಕರ್ನಾಟಕ ಮಾತ್ರವಲ್ಲದೆ ಕೇರಳ, ಆಂಧ್ರಪ್ರದೇಶ, ತಮಿಳುನಾಡು ರಾಜ್ಯಗಳಲ್ಲಿ ಭಕ್ತರಿದ್ದಾರೆ. ವಿದೇಶಗಳಲ್ಲಿ ಸಾಕಷ್ಟು ಅನುಯಾಯಿಗಳಿದ್ದಾರೆ. ಕೊರೊನಾ ಕಾಲದಲ್ಲಿಯೂ ಅವರು ಸಾಕಷ್ಟು ಮಂದಿಗೆ ನೆರವಾಗಿದ್ದಾರೆ. 'ಮಾನವನ ಅತಿರೇಕದ ಮತ್ತು ವಿವೇಚನಾರಹಿತ ಭೋಗವಿಲಾಸ ಜೀವನದಿಂದ ಆರೋಗ್ಯಕರ ಪರಿಸರ ಹಾಳಾಗಿ ಕೊರೊನಾದಂಥ ರೋಗರುಜಿನಗಳ ಬಾಧೆ ಮಿತಿಮೀರಿದೆ. ಆಧುನಿಕತೆ ಹೆಸರಿನಲ್ಲಿ ಮಾನವರು ಮಾಡಿಕೊಂಡ ಐಷಾರಾಮಿ ಬದುಕು ಅವರ ರೋಗ ನಿರೋಧಕ ಶಕ್ತಿಯನ್ನೇ ಹಾಳುಮಾಡಿದೆ. ಮನುಷ್ಯನ ದೈಹಿಕ ಶಕ್ತಿ ಕುಸಿದಂತೆಲ್ಲಾ ಮಾನಸಿಕ ದೌರ್ಬಲ್ಯಗಳು ಹೆಚ್ಚಿ, ಆತಂಕದ ಉನ್ಮಾದ ಸ್ಥಿತಿ ನಿರ್ಮಾಣವಾಗುತ್ತಿದೆ. ಕೆಲವೇ ಜನರ ಹಣದ ಲಾಲಸೆಗೆ ಇಡೀ ಮನುಕುಲ ನಾಶವಾಗುತ್ತಿದೆ. ಈಗಲಾದರೂ ಮಾನವರು ಎಚ್ಚೆತ್ತು, ಪರಿಸರಕ್ಕೆ ಒಳಿತಾಗುವ ಕಾರ್ಯಾನುಷ್ಠಾನಕ್ಕೆ ರಚನಾತ್ಮಕವಾದ ದಿಟ್ಟ ಹೆಜ್ಜೆ ಇಡಬೇಕಿದೆ' ಎಂಬುದು ಅವರ ಸಂದೇಶ.

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಪಾರಿವಾಳ ಮತ್ತು ಇರುವೆ

• ಕಲೆ–ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ



ಒಂದು ಕಾಡಿನಲ್ಲಿ ಜೋರಾಗಿ ಮಳೆ ಸುರಿದಿದ್ದರಿಂದ ಹೊಳೆ ತುಂಬಿ ಹರಿಯುತ್ತಿತ್ತು. ಅದರ ಪ್ರವಾಹದಲ್ಲಿ ಸಿಕ್ಕ ಇರುವೆಯೊಂದು ನೀರಿನಲ್ಲಿ ಕೊಚ್ಚಿಕೊಂಡು ಹೋಗುತ್ತಿತ್ತು



ಇರುವೆ ಕೊಚ್ಚಿಕೊಂಡು ಹೋಗುವುದನ್ನು ಕಂಡ ಪಾರಿವಾಳವೊಂದು ಮರದಿಂದ ಎಲೆಯೊಂದನ್ನು ಕಿತ್ತುತಂದು ಇರುವೆ ಮುಂದೆ ಹಿಡಿದು ಅದನ್ನು ನೀರಿನಿಂದ ಎತ್ತಿತು



ಪಾರಿವಾಳವು ತನ್ನನ್ನು ರಕ್ಷಿಸಿ ಹೊರಟ ಸ್ವಲ್ಪ ಸಮಯದಲ್ಲಿ ಆ ಜಾಗಕ್ಕೆ ಬೇಟೆಗಾರನೊಬ್ಬ ಬಿಲ್ಲು–ಬಾಣ ಹಿಡಿದು ಬಂದಿದ್ದನ್ನು ಇರುವೆ ಗಮನಿಸಿತು

ಮೇಲೆ ಹಾರುತ್ತಿದ್ದ ಪಾರಿವಾಳವನ್ನು ಕಂಡ ಬೇಟೆಗಾರ ಅದರ ಮೇಲೆ ಬಾಣ ಹೂಡಲು ಗುರಿ ಇಟ್ಟು ಸನ್ನದ್ಧನಾದ. ಒಳ್ಳೆಯ ಬೇಟೆ ಸಿಕ್ಕಿತು ಎಂದು ಹಿಗ್ಗಿದ

ಬೇಟೆಗಾರ ಇನ್ನೇನು ಬಾಣವನ್ನು ಬಿಡಬೇಕು ಎನ್ನುವಾಗ ಇರುವೆ ಅವನ ಕಾಲಿಗೆ ಬಲವಾಗಿ ಕಚ್ಚಿತು. ಬೇಟೆಗಾರನ ಗುರಿ ತಪ್ಪಿ ಪಾರಿವಾಳದ ಜೀವ ಉಳಿಯಿತು



ಬೇಟೆಗಾರ ಹೋದ ಮೇಲೆ ಇರುವೆ ಬಳಿ ಬಂದ ಪಾರಿವಾಳ ಧನ್ಯವಾದ ಹೇಳಿತು. ನೀನೂ ನನ್ನ ಜೀವ ಉಳಿಸಿದ್ದೆ. ನಾವು ಒಗ್ಗಟ್ಟಿನಿಂದ ಇದ್ದರೆ ನಮಗೇ ಒಳಿತು ಎಂದು ಇರುವೆ ಹೇಳಿತು

ಪದ-ಬದಲಾಟ

1	ಕರಿದಬಾಳೆ	= ....
2	ರವಿಚಾಮಾಡು	= ....
3	ನಮ್ಮಭಾರತ	= ....
4	ಆಶ್ರಯಮನೆ	= ....

ಶಬ್ದಗಳಲ್ಲಿ ಸರಸ...

ಇಲ್ಲಿ ಕೊಟ್ಟಿರುವ ಪದ ಚಕ್ರದ ಮಧ್ಯದಲ್ಲಿನ 'ಕರ' ಎಂಬ ಪದಕ್ಕೆ ಹೊಂದುವಂತೆ ಸುತ್ತಲೂ ಕೊಟ್ಟ ವೃತ್ತದಲ್ಲಿ ಒಂದಕ್ಷರ ತುಂಬಿ ಕರ ಎಂಬ ಪದದಿಂದ ಪ್ರಾರಂಭವಾಗುವ ಮೂರು ಅಕ್ಷರಗಳ 10 ಪದಗಳನ್ನು ರಚಿಸಿ.



ಟ್ವೆಂಟಿ – 20 ಮ್ಯಾಚ್

ಇಲ್ಲಿ ಕೊಟ್ಟಿರುವ ಜೀವಿಗಳಿಗೂ ಅವುಗಳ ವಿಶೇಷ ಗುಣ ಸ್ವಭಾವಕ್ಕೂ ಹೊಂದಿಸಿ

1.	ಅಳಿಲಿನ	A	ಬುದ್ಧಿ
2.	ಹಾವಿನ	B	ಬಲ
3.	ಕೋತಿಯ	C	ನಿಷ್ಠೆ
4.	ಕರಡಿಯ	D	ಗರ್ಜನೆ
5.	ಕತ್ತೆಯ	E	ಕಣ್ಣೀರು
6.	ಇರುವೆಯ	F	ಸಾಲು
7.	ಕಾಗೆಯ	G	ಸೇವೆ
8.	ಹದ್ದಿನ	H	ಚೇಷ್ಟೆ
9.	ಮೊಸಳೆಯ	I	ಕಣ್ಣು
10.	ಮೀನಿನ	J	ಭಾರ
11.	ಸಿಂಹದ	K	ದ್ವೇಷ
12.	ಆಮೆಯ	L	ಕಾಳಗ
13.	ನಾಯಿಯ	M	ಸಭ್ಯತೆ
14.	ಕೋಗಿಲೆಯ	N	ಪಾಠ
15.	ಆನೆಯ	O	ಇಂಚರ
16.	ಗೂಳಿಯ	P.	ಹಿಡಿತ
17.	ಆಕಳಿನ	Q	ವೇಗ
18.	ನರಿಯ	R	ಹೆಜ್ಜೆ
19.	ಉಡದ	S	ಬಳಗ
20.	ಗಿಳಿಯ	T	ಕುಣಿತ

ಗಣಿತದಲ್ಲಿ ಗರ್ದಿಗಮ್ಮತ್ತು

ಮ್ಯಾಥಮ್ಯಾಟ್ರಿಕ್ಸ್

A	B	C	D	E
069	345	186	872	756
366	642	582	278	558
168	246	087	575	657
762	147	285	377	954
663	543	483	179	855
564	048	384	674	459

ಇಲ್ಲಿ ನಿಮ್ಮ ಮಿತ್ರನಿಗೆ ಪ್ರತಿ ಕಂಬಸಾಲಿನಲ್ಲೂ ಒಂದು ಸಂಖ್ಯೆ ಆಯ್ದುಕೊಂಡು ಬರೆದುಕೊಳ್ಳಲು ಹೇಳಿ, ಅದನ್ನು ಕೂಡಿಸುವಂತೆ ತಿಳಿಸಿ. ಆದರೆ, ಅವನು ಕೂಡಿಸುವ ಮೊದಲೇ ನೀವು ಉತ್ತರ ಹೇಳಿ ಅವನಿಗೆ ಆಶ್ಚರ್ಯಗೊಳಿಸಬಹುದು. ಅದು ಹೇಗೆ?

ಹೀಗೆ: ನಿಮ್ಮ ಮಿತ್ರ ಬರೆದುಕೊಂಡ ಎಲ್ಲಾ ಸಂಖ್ಯೆಗಳ ಬಿಡಿ ಅಂಕಿಗಳನ್ನು ನೋಡಿ. ಮನದಲ್ಲೆ ಕೂಡಿಸು. ಬಂದ ಉತ್ತರವನ್ನು 50ರಲ್ಲಿ ಕಳೆದು ಬರುವ ಸಂಖ್ಯೆಯನ್ನು ಮೊದಲು ಬರೆ. ನಂತರ ಬಿಡಿ ಕೂಡಿಸಿ ಮೊತ್ತವನ್ನು ನಂತರ ಬರೆ. ಎರಡು ಓದಿದರೆ ನಿನ್ನ ಮಿತ್ರ ಕೂಡಿಸಿದ ಮೊತ್ತವೇ ಆಗಿರುತ್ತದೆ. ಉದಾ: ನಿಮ್ಮ ಮಿತ್ರ ಎ ಸಾಲಿನಿಂದ 168 ಬಿ ಸಾಲಿನಿಂದ 246, ಸಿ ಸಾಲಿನಿಂದ 087, ಡಿ ಸಾಲಿನಿಂದ 377, ಇ ಸಾಲಿನಿಂದ 459 ಎಂದು ಬರೆದಿಟ್ಟುಕೊಂಡರೆ - ನೀವು ಆ ಎಲ್ಲಾ ಸಂಖ್ಯೆಗಳ ಬಿಡಿ ಅಂಕಿಗಳನ್ನು ಮನದಲ್ಲೇ ಕೂಡಿಸಿದಾಗ: $8 + 6 + 7 + 7 + 9 = 37$ ಈ 37ನ್ನು ಗುಟ್ಟಿನ ಸಂಖ್ಯೆ 50ರಲ್ಲಿ ಕಳೆದಾಗ $50 - 37 = 13$ ಬರುತ್ತದೆ. ಈ 13ರ ಮುಂದೆ ಬಿಡಿ ಅಂಕಿಗಳ ಮೊತ್ತ 37 ಬರೆದಾಗ ಎಲ್ಲಾ ಸೇರಿ (13 ಮತ್ತು 37) 1337 ಆಗುತ್ತದೆ. ಇದೇ ಉತ್ತರ.

ಪುಟಾಣಿ ಪದಬಂಧ

ಇಲ್ಲಿ ಕೊಟ್ಟಿರುವ ಅನುಸ್ವಾರದ ಆಚೀಚೆ ಸುಳಿವು ಆಧರಿಸಿ, ಅಕ್ಷರ ಪಟ್ಟಿಯಿಂದ ಎರಡಕ್ಷರ ತುಂಬಿ ಪದ ರಚಿಸಿ.

ಪದ ಪಟ್ಟಿ

ಬು	ಗಿ	ತ	ಧ	ದಿ
ತ	ಬ	ನಿ	ದೆ	ಗು

	ಂ		ಇಳಿದುಕೊಳ್ಳು
	ಂ		ಕಿರಿಯ ಸಹೋದರಿ
	ಂ		ಮಲಗುವಾಗ ತಲೆಗಿಟ್ಟುಕೊಳ್ಳುವ ಸಾಧನ
	ಂ		ತೆಗಳಿಕೆ
	ಂ		ಜೋಡಣೆ

ಕಳೆದ ಸಂಚಿಕೆಯ ಸರಿ ಉತ್ತರಗಳು

ಪುಟಾಣಿ ಪದಬಂಧ
1 ಗಂಧೆ 2 ರಂಧ್ರ 3 ಬೇಂದ್ರೆ 4 ಸಿಂಧು 5 ಬಿಂದು

ಪದಬದಲಾಟ: 1. ರಸಪೂರಿ, 2. ಬಗೆಹರಿ, 3. ಕಾಗೆಗೂಡು, 4. ಮಾಲೆತರು

ಟ್ವೆಂಟಿ- 20 ಮ್ಯಾಚ್: 1-D, 2-T, 3-C, 4-S, 5-B, 6-R, 7-A, 8-L, 9-Q, 10-O, 11-F, 12-P, 13-N, 14-G, 15-M, 16-H, 17-L, 18-I, 19-K, 20-J

ಮಜ ಮಜ ಮಜಕೂರದ ಕಳೆದ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ನೀಡಿದ ಆಯ್ದ ಮೂವರು ಪುಟಾಣಿಗಳು

ಅಯಾನ್ ಎಂ.ಎನ್., ಕೊಪ್ಪಳ



ಸ್ನಿಗ್ಧಾ ಎಸ್. ಜಹಗೀರದಾರ್, ಬೆಂಗಳೂರು

ಸಾಯಿವಾತ್ಸಲ್ಯ ಪಿ. ನಾಯಕ್, ತುಮಕೂರು

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ–20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಮಿಲ್ಖಾ ಸಿಂಗ್ ಜೀವನ, ಸಾಧನೆಯ ಹಾದಿ...

- **ಜನನ:** ನವೆಂಬರ್ **20, 1929**
- **ಮರಣ:** ಜೂನ್ **18, 2021**
- **ಜನ್ಮಸ್ಥಳ:** ಗೋವಿಂದ್‌ಪುರಿ, ಮುಜಾಫರ್‌ಘರ್ (ಪಂಜಾಬ್ ಪ್ರಾಂತ್ಯ)
- **ಉದ್ಯೋಗ:** ಭಾರತೀಯ ಸೇನೆ (ಗೌರವ ಕ್ಯಾಪ್ಟನ್)
- **ವಾಸವಿದ್ದ ಸ್ಥಳ:** ಚಂಡೀಘಡ
- **ವಿವಾಹ:** **1962**
- **ಪತ್ನಿ:** ದಿವಂಗತ ನಿರ್ಮಲ್ ಕೌರ್ (ಭಾರತ ಮಹಿಳಾ ವಾಲಿಬಾಲ್ ತಂಡದ ಮಾಜಿ ನಾಯಕಿ)
- **ಕೋಚ್/ಪೋಷಕರು:** ಗುರುದೇವ್ ಸಿಂಗ್, ಚಾರ್ಲ್ಸ್ ಜೆಂಕಿನ್ಸ್, ಆರ್ಥರ್ ಹೊವಾರ್ಡ್

ಅಂತರರಾಷ್ಟ್ರೀಯ ಟ್ರ್ಯಾಕ್‌ಗೆ ಪದಾರ್ಪಣೆ
1956 ಮೆಲ್ಬರ್ನ್ ಒಲಿಂಪಿಕ್ಸ್ (ಆರಂಭಿಕ ಸುತ್ತು)

- **1953:** ರಾಷ್ಟ್ರೀಯ ಮಟ್ಟದ 10 ಕಿಮೀ ಕ್ರಾಸ್ ಕಂಟ್ರಿ ಓಟದಲ್ಲಿ 6ನೇ ಸ್ಥಾನ
- ರಾಷ್ಟ್ರೀಯ ಮಟ್ಟದ (ಬ್ರಿಗೇಡ್ ಕೂಟ) ಬೊಬ್ಬಲ 400 ಮೀ ಓಟದಲ್ಲಿ 4ನೇ ಸ್ಥಾನ
- **1958:** ಕಾರ್ಡಿಫ್‌ನಲ್ಲಿ ನಡೆದ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಐತಿಹಾಸಿಕ ಚಿನ್ನದ ಸಾಧನೆ
- **1958:** ಟೋಕಿಯೊದಲ್ಲಿ ನಡೆದ ಏಷ್ಯನ್ ಗೇಮ್ಸ್‌ನ 200 ಮೀಟರ್ಸ್‌ನಲ್ಲಿ ಚಿನ್ನ
- **1958:** ಟೋಕಿಯೊದಲ್ಲಿ ನಡೆದ ಏಷ್ಯನ್ ಗೇಮ್ಸ್‌ನ 400 ಮೀಟರ್ಸ್‌ನಲ್ಲಿ ಚಿನ್ನ

- **1962:** ಜಕಾರ್ತದಲ್ಲಿ ನಡೆದ ಏಷ್ಯನ್ ಗೇಮ್ಸ್‌ನ 400 ಮೀಟರ್ಸ್‌ನಲ್ಲಿ ಚಿನ್ನ
- **1962:** ಜಕಾರ್ತದಲ್ಲಿ ನಡೆದ ಏಷ್ಯನ್ ಗೇಮ್ಸ್‌ನ 4x400 ಮೀಟರ್ಸ್ ರಿಲೆಯಲ್ಲಿ ಚಿನ್ನ
- **1958:** ಕಟಕ್‌ನಲ್ಲಿ ನಡೆದ ರಾಷ್ಟ್ರೀಯ ಕ್ರೀಡಾಕೂಟದ 200 ಮೀಟರ್ಸ್‌ನಲ್ಲಿ ಚಿನ್ನ
- **1958:** ಕಟಕ್‌ನಲ್ಲಿ ನಡೆದ ರಾಷ್ಟ್ರೀಯ ಕ್ರೀಡಾಕೂಟದ 400 ಮೀಟರ್ಸ್‌ನಲ್ಲಿ ಚಿನ್ನ
- **1964:** ಕೋಲ್ಕತ್ತದಲ್ಲಿ ನಡೆದ ರಾಷ್ಟ್ರೀಯ ಕ್ರೀಡಾಕೂಟದ 400 ಮೀಟರ್ಸ್‌ನಲ್ಲಿ ಬೆಳ್ಳಿ
- **1956,1960,1964** ಒಲಿಂಪಿಕ್ಸ್ ಕೂಟಗಳ 400 ಮೀಟರ್ಸ್ ಓಟದಲ್ಲಿ ಭಾಗಿ (1960ರಲ್ಲಿ 4ನೇ ಸ್ಥಾನ)



ಮಿಲ್ಖಾಸಿಂಗ್ –ಪಿಟಿಐ ಚಿತ್ರ

ಮಿಲ್ಖಾಗೆ ಭಾರತರತ್ನ ಸಲ್ಲಬೇಕಿತ್ತು: ಕೆನೆತ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಿಲ್ಖಾಸಿಂಗ್ ಅವರು ಸಾರ್ವಕಾಲಿಕ ಶ್ರೇಷ್ಠ ಅಥ್ಲೀಟ್. ಅವರಿಗೆ ಭಾರತರತ್ನ ಗೌರವಕ್ಕೆ ಅತ್ಯಂತ ಸೂಕ್ತವಾದ ವ್ಯಕ್ತಿ. ದುರದೃಷ್ಟವಶಾತ್ ಅವರಿಗೆ ಆ ಗೌರವ ಸಿಗಲಿಲ್ಲ...'

ಕೆನೆತ್ ಪೊವೆಲ್

1964ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಮಿಲ್ಖಾಸಿಂಗ್ ಜೊತೆಗೆ ಭಾರತ ತಂಡವನ್ನು ಪ್ರತಿನಿಧಿಸಿದ್ದ ಬೆಂಗಳೂರಿನ ಸ್ಪ್ರಿಂಟರ್ ಕೆನೆತ್ ಪೊವೆಲ್ ಅವರ ಬೇಸರದ ನುಡಿಗಳಿವು. ಕೋವಿಡ್ ಸೋಂಕಿನಿಂದಾಗಿ ಶುಕ್ರವಾರ ತಡರಾತ್ರಿ ನಿಧನರಾದ ಕ್ರೀಡಾಲೋಕದ ದಂತಕಥೆ ಮಿಲ್ಖಾ ಸಿಂಗ್ ಅವರೊಂದಿಗಿನ ತಮ್ಮ ಒಡನಾಟವನ್ನು ಕೆನೆತ್ 'ಪ್ರಜಾವಾಣಿ'ಯೊಂದಿಗೆ ಹಂಚಿಕೊಂಡಿದ್ದಾರೆ.

'ಆ ಕಾಲದಲ್ಲಿ ಇನ್ನೂ ಅರ್ಜುನ ಪ್ರಶಸ್ತಿ ಆರಂಭವಾಗಿರಲಿಲ್ಲ. ಆದರೆ ಭಾರತ ಸರ್ಕಾರವು ಪದ್ಮಶ್ರೀ ಪುರಸ್ಕಾರ ನೀಡಿ ಗೌರವಿಸಿತ್ತು. ಅವರು ಸ್ಪರ್ಧೆಗಳಿಂದ ದೂರ ಸರಿದು ಹಲವು ವರ್ಷಗಳ ನಂತರ ಜೀವಮಾನ ಸಾಧನೆ ನೀಡುವುದಾಗಿ ಘೋಷಿಸಲಾಗಿತ್ತು. ಆಗ ಮಿಲ್ಖಾ, ಈಗಾಗಲೇ ಯುನಿವರ್ಸಿಟಿ ಪದವಿ ಪಡೆದವರಿಗೆ ಹೈಸ್ಕೂಲಿನ ಪ್ರಮಾಣಪತ್ರ ಕೊಡುವಂತಹ ಕ್ರಮ ಇದು. ಪದ್ಮ ಪುರಸ್ಕಾರ ಪಡೆದ ಮೇಲೆ ಈ ಪ್ರಶಸ್ತಿ ಬೇಕಿಲ್ಲವೆಂದು ತಿರಸ್ಕರಿಸಿದ್ದರು' ಎಂದು ಕೆನೆತ್ ನೆನಪಿಸಿಕೊಂಡರು.

'60ರ ದಶಕದಲ್ಲಿ ಅವರೊಂದಿಗಿನ ನನ್ನ ಒಡನಾಟ ಶುರುವಾಗಿತ್ತು. 1962ರಲ್ಲಿ ಬೆಂಗಳೂರಿನಲ್ಲಿ ನಡೆದ ಶಿಬಿರದಲ್ಲಿ ಜೊತೆಯಾಗಿದ್ದೆವು. ನಾವಿಬ್ಬರೂ ಸ್ಪ್ರಿಂಟರ್ ಆದ ಕಾರಣ ಹೆಚ್ಚು ಆಪ್ತರಾಗಿದ್ದೆವು. 1963ರಲ್ಲಿ ಅಲಹಾಬಾದ್‌ನಲ್ಲಿ ನಡೆದಿದ್ದ ಅಂತರರಾಜ್ಯ ಅಥ್ಲೆಟಿಕ್ಸ್‌ನಲ್ಲಿ ನಾನು ಅವರಿಗಿ ಸರಿಸಾಟಿಯಾಗಿ ಓಡಿದ್ದೆ. ಬೆನ್ನು ತಟ್ಟಿ, ಎಷ್ಟು ಸರಳ ಮತ್ತು ಸುಲಭವಾಗಿ ಓಡುತ್ತಿದ್ದೀರಿ ನೀವು ಎಂದಿದ್ದರು. ಅದೇ ಕೂಟದ 200 ಮೀಟರ್ಸ್‌ಸ್ಪರ್ಧೆಯಿಂದ ಹಿಂದೆ ಸರಿದಿದ್ದ ಅವರು ಯುವಕರಿಗೆ ಅವಕಾಶ ಬಿಟ್ಟುಕೊಟ್ಟಿದ್ದರು. ಅವರೊಂದಿಗೆ 1964ರ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಿದ್ದೆ. ನಿವೃತ್ತಿಯ ನಂತರವೂ ಬಹಳಷ್ಟು ಸಲ ಬೇರೆ ಬೇರೆ ಕಾರ್ಯಕ್ರಮಗಳಲ್ಲಿ ಭೇಟಿಯಾಗಿದ್ದೇವೆ. ಯಾವಾಗಲೂ ಆಪ್ತವಾಗಿರುತ್ತಿದ್ದರು' ಎಂದರು ಕೆನೆತ್.

'ಒಲಿಂಪಿಕ್ಸ್‌ನ ಅಥ್ಲೆಟಿಕ್ಸ್ ವಿಭಾಗದಲ್ಲಿ ಭಾರತದ ಅಥ್ಲೀಟ್‌ವೊಬ್ಬರು ಪದಕ ಗೆಲ್ಲುವುದನ್ನು ನೋಡುವುದೇ ತಮ್ಮ ಜೀವನದ ಕೊನೆಯ ಆಸೆ ಎನ್ನುತ್ತಿದ್ದರು. ಆದರೆ ದುರದೃಷ್ಟವಶಾತ್ ಇಲ್ಲಿಯವರೆಗೂ ಅದು ನನಸಾಗಿಲ್ಲ. ಮುಂಬರಲಿರುವ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಜಾವೆಲಿನ್ ಥ್ರೋ ಪಟು ನೀರಜ್ ಚೋಪ್ರಾ ಪದಕ ಜಯಿಸುವ ಭರವಸೆ ಇದೆ. ಆ ಮೂಲಕ ಮಿಲ್ಖಾಗೆ ಗೌರವ ಸಂದರೆ ಚೆನ್ನ' ಎಂದರು ಕೆನೆತ್.

'ರೋಮ್' ಓಟ ನೆನಪಿಸಿಕೊಂಡ ಗುರುಬಚನ್

ನವದೆಹಲಿ (ಪಿಟಿಐ): 'ಅದು ಅವರ ಜೀವನದ ಮಹತ್ವದ ಓಟವಾಗಿತ್ತು. ಆದರೆ ಕೊನೆಯಲ್ಲಿ ಮಿಲ್ಖಾ ಸಿಂಗ್ ಸಂಪೂರ್ಣ ಹತಾಶೆಗೊಂಡಿದ್ದರು'

1960ರ ರೋಮ್ ಒಲಿಂಪಿಕ್ಸ್‌ನಲ್ಲಿ ಕೇವಲ 0.1 ಸೆಕೆಂಡ್ ಅಂತರದಲ್ಲಿ 'ಪೋಡಿಯಂ ಫಿನಿಶ್' ತಪ್ಪಿಸಿಕೊಂಡಿದ್ದರು ದಿಗ್ಗಜ ಅಥ್ಲೀಟ್ ಮಿಲ್ಖಾ ಸಿಂಗ್. ಆ ನೋವು ಅವರನ್ನು ಜೀವನದುದ್ದಕ್ಕೂ ಕಾಡಿತ್ತು. 400 ಮೀಟರ್ ಓಟದ ಕುರಿತು ಮಾಜಿ ಅಥ್ಲೀಟ್ ಗುರುಬಚನ್ ಸಿಂಗ್ ರಂಧಾವ ನೆನಪಿಸಿಕೊಂಡಿದ್ದಾರೆ.

1960ರ ರೋಮ್ ಹಾಗೂ 1964ರ ಟೋಕಿಯೊ ಒಲಿಂಪಿಕ್ಸ್‌ಗಳಲ್ಲಿ ಮಿಲ್ಖಾ ಹಾಗೂ ಗುರುಬಚನ್ ತಂಡದಲ್ಲಿದ್ದರು.

'1960ರ ಕೂಟದಲ್ಲಿ ಇತಿಹಾಸ ಸೃಷ್ಟಿಯಾಗಲಿದೆ ಎಂದು ಇಡೀ ಭಾರತ ತಂಡ ಕಾತರದಿಂದ ಕಾಯುತ್ತಿತ್ತು. ಮಿಲ್ಖಾ ಅವರಿಂದ ಎಲ್ಲರೂ ಪದಕ ನಿರೀಕ್ಷಿಸುತ್ತಿದ್ದರು. 400 ಮೀ. ಓಟದ ಆರಂಭಕ್ಕೆ ಉಸಿರು ಬಿಗಿ ಹಿಡಿದು ಕಾದಿದ್ದರು' ಎಂದು 82 ವರ್ಷದ ರಂಧಾವ ನೆನಪಿಸಿಕೊಂಡಿದ್ದಾರೆ.

ಕ್ರೀಡಾ ಕ್ಷಿತಿಜದಲ್ಲಿ 'ಫ್ಲೈಯಿಂಗ್ ಸಿಖ್' ಲೀನ

ಚಂಡೀಗಡ (ಪಿಟಿಐ): ದಿಗ್ಗಜ ಅಥ್ಲೀಟ್ ಮಿಲ್ಖಾ ಸಿಂಗ್ ಅವರ ಅಂತ್ಯಸಂಸ್ಕಾರವು ಸಕಲ ಸರ್ಕಾರಿ ಗೌರವಗಳೊಂದಿಗೆ ಶನಿವಾರ ಇಲ್ಲಿ ನೆರವೇರಿತು.

ಕೊರೊನಾ ಸೋಂಕಿತರಾಗಿದ್ದ ಮಿಲ್ಖಾ ಸಿಂಗ್ ಶುಕ್ರವಾರ ತಡರಾತ್ರಿ ನಿಧನರಾಗಿದ್ದರು. ಅವರಿಗೆ ಪುತ್ರ, ಗಾಲ್ಫ್ ಆಟಗಾರ ಜೀವ್ ಮಿಲ್ಖಾ ಸಿಂಗ್ ಮತ್ತು ಮೂವರು ಪುತ್ರಿಯರಿದ್ದಾರೆ.

ಚಂಡೀಗಡದಲ್ಲಿರುವ ಮಿಲ್ಖಾ ಅವರ ನಿವಾಸದಲ್ಲಿ ಇರಿಸಲಾಗಿದ್ದ ಪಾರ್ಥೀವ ಶರೀರಕ್ಕೆ ಅಭಿಮಾನಿಗಳು, ಕ್ರೀಡಾಪಟುಗಳು ಅಂತಿಮ ನಮನ ಸಲ್ಲಿಸಿದರು.

ಕೇಂದ್ರ ಕ್ರೀಡಾ ಸಚಿವ ಕಿರಣ್ ರಿಜಿಜು, ಪಂಜಾಬ್ ರಾಜ್ಯಪಾಲ ವಿ.ಪಿ. ಸಿಂಗ್ ಬದ್ನೋರ್, ಮಿಲ್ಖಾ ಸಿಂಗ್ ಕುಟುಂಬ ಸದಸ್ಯರು ಈ ಸಂದರ್ಭದಲ್ಲಿದ್ದರು. ಜೀವ್ ಮಿಲ್ಖಾ ಸಿಂಗ್ ಅವರು ಅಂತಿಮ ವಿಧಿವಿಧಾನಗಳನ್ನು ನೆರವೇರಿಸಿದರು.

ಮಿಲ್ಖಾ ಸಿಂಗ್ ಅವರ ಗೌರವಾರ್ಥ ಪಂಜಾಬ್ ಸರ್ಕಾರ ಶನಿವಾರ ಒಂದು ದಿನದ ಶೋಕಾಚರಣೆ ಮತ್ತು ರಜೆ ಘೋಷಿಸಿತ್ತು.

ಹೋದ ಭಾನುವಾರ ಮಿಲ್ಖಾ ಪತ್ನಿ, ಭಾರತ ವಾಲಿಬಾಲ್ ತಂಡದ ಮಾಜಿ ನಾಯಕಿ ನಿರ್ಮಲ್ ಕೌರ್ ನಿಧನರಾಗಿದ್ದರು.

ಬೆಂಕಿಯಿಂದ ಎದ್ದು ಬಂದ ಪ್ರತಿಭೆ

ಬೆಂಗಳೂರು: ಕ್ರೀಡಾಲೋಕದ ದಂತಕಥೆ ಮಿಲ್ಖಾ ಸಿಂಗ್ ಹದಿಹರೆಯದಲ್ಲಿ ಅನುಭವಿಸಿದ ನೋವು ಸಣ್ಣದಲ್ಲ. 1947ರಲ್ಲಿ ದೇಶ ವಿಭಜನೆಯಾದಾಗ ಪಂಜಾಬ್‌ನಲ್ಲಿ ನಡೆದ ದಂಗೆಗಳಲ್ಲಿ ಮಿಲ್ಖಾಸಿಂಗ್ ಅವರ ತಂದೆ, ತಾಯಿ ಮತ್ತು ಸಂಬಂಧಿಗಳನ್ನು ಕಗ್ಗೊಲೆ ಮಾಡಲಾಯಿತು. ಅವುಗಳನ್ನು ಕಣ್ಣಾರೆ ಕಂಡಿದ್ದ ಮಿಲ್ಖಾ ಅಲ್ಲಿಂದ ತಪ್ಪಿಸಿಕೊಂಡು ಭಾರತಕ್ಕೆ ಬಂದಿದ್ದರು.



ಐತಿಹಾಸಿಕ ಒಲಿಂಪಿಕ್ ಓಟಗಾರನಿಗೆ ಗೌರವ!

ಪ್ರಜಾವಾಣಿ facebook LIVE
FB.com/prajavani.net
ಸರಣಿ ಚಿಂತನೆ
ಕೊರೊನಾ ಕಾಡಿದ ಸಮಯ ಆಗಿದ್ದು - ಆಗಬೇಕಾದ್ದು
ಆಡಳಿತ ಮತ್ತು ದಕ್ಷತೆ

ಐ.ಎಂ.ವಿಠಲ ಮೂರ್ತಿ I.A.S. (ನಿವೃತ್ತ), ವಿಶ್ರಾಂತ ಪ್ರಧಾನ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ಮೂರು ಪ್ರಶಸ್ತಿ ಪುರಸ್ಕೃತ ಕನ್ನಡ ಚಲನಚಿತ್ರಗಳ ಗೌರವ ನಿರ್ಮಾಣ ಸಲಹೆಗಾರರು
ಇಂದು ಸಂಜೆ 6 ರಿಂದ 7
ನಾಳೆ 6.30 ರಿಂದ
ಸೋಮವಾರ, 21 ನೇ ಜೂನ್
ಡಾ. ಪುರುಷೋತ್ತಮ ಬಿಳಿಮಲೆ ಅವರಿಂದ ಚಿಂತನೆ
ಸಾಹಿತಿ ಮತ್ತು ಸಾಹಿತ್ಯ

ಯೂರೊ ಕಪ್: ಜರ್ಮನಿಗೆ ಜಯ

ಪ್ಯಾರಿಸ್ (ಎಎಫ್‌ಪಿ): ಎರಡು ಗೋಲು ಗಳಿಸಿದರೂ ಎರಡು ಗೋಲುಗಳನ್ನು ಉಡುಗೊರೆಯಾಗಿ ನೀಡಿದ ಪೋರ್ಚುಗಲ್ ತಂಡ ಯೂರೊ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಸೋಲು ಕಂಡಿತು.

ಶನಿವಾರ ರಾತ್ರಿ ನಡೆದ ಪಂದ್ಯದಲ್ಲಿ ಜರ್ಮನಿ 4–2ರಲ್ಲಿ ಪೋರ್ಚುಗಲ್ ವಿರುದ್ಧ ಜಯ ಗಳಿಸಿತು.

15ನೇ ನಿಮಿಷದಲ್ಲಿ ಕ್ರಿಸ್ಟಿಯಾನೊ ರೊನಾಲ್ಡೊ ಪೋರ್ಚುಗಲ್‌ಗೆ ಮುನ್ನಡೆ ಗಳಿಸಿಕೊಟ್ಟರು. ಆದರೆ 35 ಹಾಗೂ 39ನೇ ನಿಮಿಷಗಳಲ್ಲಿ ರುಬೆನ್ ಡಯಾಸ್ ಹಾಗೂ ರಫೆಲ್ ಎದುರಾಳಿ ತಂಡಕ್ಕೆ ಉಡುಗೊರೆ ಗೋಲು ನೀಡಿದರು. 51 ಮತ್ತು 60ನೇ ನಿಮಿಷದಲ್ಲಿ ಜರ್ಮನಿ ಪರ ಹಾವೆಜ್ ಮತ್ತು ರಾಬಿನ್ ಗೋಲು ಗಳಿಸಿದರು. 67ನೇ ನಿಮಿಷದಲ್ಲಿ ಜೋತಾ, ಪೋರ್ಚುಗಲ್‌ನ ಸೋಲಿನ ಅಂತರ ಕಡಿಮೆ ಮಾಡಿದರು.

ಇಂಗ್ಲೆಂಡ್‌ಗೆ ನಿರಾಸೆ: ಲಂಡನ್‌ನಲ್ಲಿ ಶುಕ್ರವಾರ ರಾತ್ರಿ ನಡೆದ ಪಂದ್ಯದಲ್ಲಿ ಇಂಗ್ಲೆಂಡ್ ವಿರುದ್ಧ ಸ್ಕಾಟ್ಲೆಂಡ್ ಗೋಲು ರಹಿತ ಡ್ರಾ ಸಾಧಿಸಿತು. ಶನಿವಾರ ರಾತ್ರಿ ನಡೆದ ಹಂಗೇರಿ ಮತ್ತು ಫ್ರಾನ್ಸ್ ಪಂದ್ಯ 1–1ರ ಡ್ರಾದಲ್ಲಿ ಮುಕ್ತಾಯಗೊಂಡಿತು. ಹಂಗೇರಿ ಪರ ಅಟಿಲಾ (45ನೇ ನಿ) ಮತ್ತು ಫ್ರಾನ್ಸ್ ಪರ ಆಂಟಾಯ್ನ್ (66) ಗೋಲು ಗಳಿಸಿದರು.

ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್: ಎರಡನೇ ದಿನದಾಟಕ್ಕೆ ಮಂದ ಬೆಳಕಿನ ಕಾಟ

ವಿರಾಟ್–ರಹಾನೆ ಜೊತೆಯಾಟದ ಆಸರೆ

ಸೌತಾಂಪ್ಟನ್(ಪಿಟಿಐ): ಏಜಿಸ್ ಬೌಲ್ ಕ್ರೀಡಾಂಗಣದಲ್ಲಿ ಶನಿವಾರ ಬೆಳಕು ಮಂದವಾಗುವ ಮುನ್ನ ವಿರಾಟ್ ಕೊಹ್ಲಿ ಮತ್ತು ಅಜಿಂಕ್ಯ ರಹಾನೆ ತಮ್ಮ ಲಯ ಕಂಡುಕೊಂಡರು.

ಇಲ್ಲಿ ಆರಂಭವಾದ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ಪಂದ್ಯದಲ್ಲಿ ನಾಯಕ ವಿರಾಟ್ (ಬ್ಯಾಟಿಂಗ್ 44) ಮತ್ತು ಉಪನಾಯಕ ರಹಾನೆ (ಬ್ಯಾಟಿಂಗ್ 29) ಭಾರತದ ಇನಿಂಗ್ಸ್‌ನಲ್ಲಿ ಭರವಸೆಯ ಬೆಳಕು ಮೂಡಿಸಿದರು. ಈ ಜೋಡಿಯ ತಾಳ್ಮೆಯ ಆಟದಿಂದಾಗಿ ತಂಡವು 64.4 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 146 ರನ್ ಗಳಿಸಿತು.

ಶುಕ್ರವಾರ ಮಳೆಯಿಂದಾಗಿ ಮೊದಲ ದಿನದಾಟ ನಡೆದಿರಲಿಲ್ಲ. ಎರಡನೇ ದಿನವಾದ ಶನಿವಾರ ಟಾಸ್ ಗೆದ್ದ ನ್ಯೂಜಿಲೆಂಡ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು.

ಆದರೆ ದಿನದಾಟದಲ್ಲಿ 62 ಓವರ್‌ಗಳ ಆಟ ಮುಗಿದಾಗ ಮಂದ ಬೆಳಕಿನ ಕಾರಣ ಸ್ಥಗಿತಗೊಳಿಸಲಾಗಿತ್ತು. ಚಹಾ ವಿರಾಮದ ನಂತರ ಆರಂಭಿಸಲಾಯಿತು. ಮತ್ತೆ 2.4 ಓವರ್‌ಗಳ ಆಟ ನಡೆಯಿತು. ಬೆಳಕಿನ ಕೊರತೆಯಿಂದಾಗಿ ಆಟ ನಿಲ್ಲಿಸಲಾಯಿತು. ನಂತರ ಮುಂದುವರಿಸಲಾಗಲಿಲ್ಲ.

ರೋಹಿತ್ ಶರ್ಮಾ (34; 68ಎಸೆತ) ಮತ್ತು ಶುಭಮನ್ ಗಿಲ್ (28; 64ಎ) ಮೊದಲ ವಿಕೆಟ್‌ಗೆ 62 ರನ್ ಸೇರಿಸಿ ಉತ್ತಮ ಆರಂಭ ನೀಡಿದರು. ಆದರೆ 21ನೇ ಓವರ್‌ನಲ್ಲಿ ಕೈಲ್ ಜೆಮಿಸನ್ ಎಸೆತದಲ್ಲಿ ರೋಹಿತ್ ಔಟಾದರು.

ನಾಲ್ಕು ಓವರ್‌ಗಳ ನಂತರ ನೀಲ್ ವಾಗ್ನರ್ ಎಸೆತವನ್ನು ಆಡಲು ಯತ್ನಿಸಿದ ಯುವ ಬ್ಯಾಟ್ಸ್‌ಮನ್ ಗಿಲ್ ಅವರು ವಾಟ್ಲಿಂಗ್‌ಗೆ ಕ್ಯಾಚಿತ್ತರು. ಚೇತೇಶ್ವರ್ ಪೂಜಾರ ಜೊತೆಗೂಡಿದ ವಿರಾಟ್ ತಾಳ್ಮೆಯಿಂದ ಆಡಿದರು. ಪೂಜಾರ 54 ಎಸೆತಗಳಲ್ಲಿ 8 ರನ್ ಗಳಿಸಿದರು. ಟ್ರೆಂಟ್ ಬೌಲ್ಟ್ ಹಾಕಿದ 41ನೇ ಓವರ್‌ನಲ್ಲಿ ಪೂಜಾರ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು. ಆಗಿನ್ನೂ ತಂಡದ ಮೊತ್ತ ನೂರರ ಗಡಿಯನ್ನೂ ದಾಟಿರಲಿಲ್ಲ. ಈ ಹಂತದಲ್ಲಿ ಕೊಹ್ಲಿ ಜೊತೆಗೂಡಿದ ರಹಾನೆ ಇನಿಂಗ್ಸ್‌ಗೆ ಸ್ಥಿರತೆ ಒದಗಿಸಿದರು. ಇಬ್ಬರೂ ಮುರಿಯದ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 58 ರನ್ ಸೇರಿಸಿದರು. ಇನಿಂಗ್ಸ್‌ನಲ್ಲಿ ಮೂಡಿಬಂದ ಎರಡನೇ ಅರ್ಧಶತಕದ ಜೊತೆಯಾಟವಿದು.

ವಿರಾಟ್ ಕೊಹ್ಲಿ ಬ್ಯಾಟಿಂಗ್ ಗಮ್ಮತ್ತು

ಮಿಲ್ಖಾ ಸಿಂಗ್‌ಗೆ ಗೌರವ: ಅಥ್ಲೀಟ್ ಮಿಲ್ಖಾ ಸಿಂಗ್ ಅವರ ಸ್ಮರಣಾರ್ಥ ಭಾರತ ಕ್ರಿಕೆಟ್ ತಂಡದ ಆಟಗಾರರು ತೋಳಿಗೆ ಕಪ್ಪುಪಟ್ಟಿ ಧರಿಸಿ ಕಣಕ್ಕಿಳಿದರು.

ವಿರಾಟ್ ಕೊಹ್ಲಿ ಸೇರಿದಂತೆ ಭಾರತದ ಪ್ರಮುಖ ಆಟಗಾರರು ಮತ್ತು ಕೋಚ್ ರವಿ ಶಾಸ್ತ್ರಿ ಈಗಾಗಲೇ ಮಿಲ್ಖಾ ಸಿಂಗ್ ನಿಧನಕ್ಕೆ ಸಂತಾಪ ಸೂಚಿಸಿದ್ದಾರೆ. ಒಲಿಂಪಿಯನ್ ಕ್ರೀಡಾಪಟುವೊಬ್ಬರಿಗೆ ಭಾರತ ಕ್ರಿಕೆಟ್ ತಂಡವು ಕಪ್ಪುಪಟ್ಟಿ ಧರಿಸಿ ಗೌರವ ಸೂಚಿಸಿರುವುದು ಅಪರೂಪವಾಗಿದೆ.

ಭಾರತ–ನ್ಯೂಜಿಲೆಂಡ್ ಸ್ಕೋರ್ ಕಾರ್ಡ್

ಭಾರತ ಮೊದಲ ಇನಿಂಗ್ಸ್ 3ಕ್ಕೆ 146 (64.4 ಓವರ್‌ಗಳಲ್ಲಿ)
ರೋಹಿತ್ ಸಿ ಸೌಥಿ ಬಿ ಜೆಮೀಸನ್ 34 (68ಎ, 4X6), ಶುಭಮನ್ ಸಿ ವಾಟ್ಲಿಂಗ್ ಬಿ ವ್ಯಾಗ್ನರ್ 28 (64ಎ, 4X3), ಚೇತೇಶ್ವರ್ ಎಲ್‌ಬಿಡಬ್ಲ್ಯು ಬಿ ಬೌಲ್ಟ್ 08 (54ಎ 4X2), ಕೊಹ್ಲಿ ಬ್ಯಾಟಿಂಗ್ 44 (124ಎ, 4X1), ರಹಾನೆ ಬ್ಯಾಟಿಂಗ್ 29 (79ಎ, 4X1)
ಇತರೆ (ಲೆಗ್ ಬೈ 2, ನೋಬಾಲ್ 1) 03
ವಿಕೆಟ್ ಪತನ: 1–62 (ರೋಹಿತ್ ಶರ್ಮಾ, 20.1), 2–63 (ಶುಭಮನ್ ಗಿಲ್, 24.3), 3–88 (ಚೇತೇಶ್ವರ್ ಪೂಜಾರ, 40.2)
ಬೌಲಿಂಗ್: ಟಿಮ್ ಸೌಥಿ 17–4–47–0, ಟ್ರೆಂಟ್ ಬೌಲ್ಟ್ 12.4–2–32–1, ಕೈಲ್ ಜೆಮೀಸನ್ 14–9–14–1, ಕಾಲಿನ್ ಡಿ ಗ್ರ್ಯಾಂಡ್‌ಹೋಮ್ 11–6–23–0, ನೀಲ್ ವ್ಯಾಗ್ನರ್ 10–3–28–1

ಧೋನಿ ದಾಖಲೆ ಮೀರಿದ ನಾಯಕ ಕೊಹ್ಲಿ

ಸೌತಾಂಪ್ಟನ್: ಭಾರತ ಕ್ರಿಕೆಟ್ ತಂಡದ ನಾಯಕ ವಿರಾಟ್ ಕೊಹ್ಲಿ ಅವರು ಐಸಿಸಿ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ಪಂದ್ಯದಲ್ಲಿ ಕಣಕ್ಕಿಳಿಯುವ ಮೂಲಕ ನೂತನ ದಾಖಲೆ ಬರೆದಿದ್ದಾರೆ.

ಭಾರತದ ಪರ ಅತಿ ಹೆಚ್ಚು ಟೆಸ್ಟ್ ಪಂದ್ಯಗಳಲ್ಲಿ ನಾಯಕತ್ವ ವಹಿಸಿದ ಶ್ರೇಯಕ್ಕೆ ಪಾತ್ರರಾಗಿದ್ದಾರೆ. ತಂಡದ ಮಾಜಿ ನಾಯಕ ಮಹೇಂದ್ರ ಸಿಂಗ್ ಧೋನಿ ದಾಖಲೆಯನ್ನು ಅವರು ಮೀರಿದ್ದಾರೆ.

ಕೊಹ್ಲಿ ಸದ್ಯ 61ನೇ ಪಂದ್ಯದಲ್ಲಿ ಭಾರತ ತಂಡವನ್ನು ಮುನ್ನಡೆಸುತ್ತಿದ್ದಾರೆ. ಅವರ ಸಾರಥ್ಯದಲ್ಲಿ ತಂಡವು 36 ಗೆಲುವು, 14 ಸೋಲು ಹಾಗೂ 10 ಪಂದ್ಯಗಳಲ್ಲಿ ಡ್ರಾ ಮಾಡಿಕೊಂಡಿದೆ.

ಧೋನಿ ನಾಯಕತ್ವದಲ್ಲಿ ಭಾರತವು ಆಡಿರುವ 60 ಪಂದ್ಯಗಳಲ್ಲಿ 27 ಗೆಲುವು, 18 ಸೋಲು ಹಾಗೂ 15 ಡ್ರಾ ಮಾಡಿಕೊಂಡಿದೆ.

ವಿರಾಟ್ ಕೊಹ್ಲಿ, ವಿಶ್ವ ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ಟೆಸ್ಟ್ ಪಂದ್ಯಗಳಲ್ಲಿ ನಾಯಕತ್ವ ವಹಿಸಿರುವವರಲ್ಲಿ ಆರನೇ ಸ್ಥಾನದಲ್ಲಿದ್ದಾರೆ. ಈ ಪಟ್ಟಿಯಲ್ಲಿ ದಕ್ಷಿಣ ಆಫ್ರಿಕಾದ ಮಾಜಿ ನಾಯಕ ಗ್ರೇಮ್ ಸ್ಮಿತ್ (109 ಪಂದ್ಯ) ಅಗ್ರಸ್ಥಾನದಲ್ಲಿದ್ದಾರೆ.

ಇಂಗ್ಲೆಂಡ್ ಮಹಿಳಾ ತಂಡದ ಎದುರಿನ ಟೆಸ್ಟ್: ಸ್ನೇಹ್, ಶೆಫಾಲಿ, ದೀಪ್ತಿ ಅರ್ಧಶತಕ

ಸೋಲಿನಿಂದ ಪಾರಾದ ಮಿಥಾಲಿ ಬಳಗ

ಬ್ರಿಸ್ಟಲ್ (ಪಿಟಿಐ): ಎಂಟನೇ ಕ್ರಮಾಂಕದ ಸ್ನೇಹ್ ರಾಣಾ (80; 154 ಎಸೆತ, 13 ಬೌಂಡರಿ) ಕೆಚ್ಚೆದೆಯಿಂದ ಗಳಿಸಿದ ಅರ್ಧಶತ ಭಾರತ ಮಹಿಳಾ ತಂಡದ ಕೈ ಹಿಡಿಯಿತು.

ಸ್ನೇಹ್ ಮತ್ತು 10ನೇ ಕ್ರಮಾಂಕದ ತಾನಿಯಾ ಭಾಟಿಯಾ ಅವರ ಅಮೋಘ ಆಟದಿಂದಾಗಿ ಇಂಗ್ಲೆಂಡ್ ಮಹಿಳಾ ತಂಡದ ವಿರುದ್ಧ ಇಲ್ಲಿ ನಡೆದ ಏಕೈಕ ಟೆಸ್ಟ್ ಪಂದ್ಯವನ್ನು ಡ್ರಾ ಮಾಡಿಕೊಳ್ಳುವಲ್ಲಿ ಮಿಥಾಲಿ ರಾಜ್ ಬಳಗ ಯಶಸ್ವಿಯಾಯಿತು.

ಫಾಲೊ ಆನ್‌ಗೆ ಒಳಗಾಗಿದ್ದ ಭಾರತ ಎರಡನೇ ಇನಿಂಗ್ಸ್‌ನಲ್ಲಿ ಭರ್ಜರಿ ಬ್ಯಾಟಿಂಗ್ ಪ್ರದರ್ಶಿಸಿತು. ಮೊದಲ ಇನಿಂಗ್ಸ್‌ನಲ್ಲಿ ಅರ್ಧಶತಕ ಗಳಿಸಿದ್ದ ಶೆಫಾಲಿ ವರ್ಮಾ (63; 83 ಎಸೆತ, 11 ಬೌಂಡರಿ, 1 ಸಿಕ್ಸರ್) ಎರಡನೇ ಇನಿಂಗ್ಸ್‌ನಲ್ಲೂ ದಿಟ್ಟ ಆಟವಾಡಿದರು. ಮೂರನೇ ಕ್ರಮಾಂಕದ ದೀಪ್ತಿ ಶರ್ಮಾ (54; 168 ಎ, 8 ಬೌಂ) ಕೂಡ ಅರ್ಧಶತಕ ಸಿಡಿಸಿದರು.

ಮಧ್ಯಮ ಕ್ರಮಾಂಕ ಕುಸಿತ ಕಂಡಾಗ ತಂಡ ಇನಿಂಗ್ಸ್ ಸೋಲಿನ ಸುಳಿಯಲ್ಲಿ ಸಿಲುಕಿತ್ತು. ದೀಪ್ತಿ ಮತ್ತು ಪೂನಂ ರಾವತ್ (39 104 ಎ, 5 ಬೌಂ) 72 ರನ್‌ಗಳ ಜೊತೆಯಾಟದ ಮೂಲಕ ತಂಡವನ್ನು ಇನಿಂಗ್ಸ್ ಸೋಲಿನಿಂದ ಪಾರು ಮಾಡಿದರು.

ಆದರೂ ಸೋಲಿನ ಆತಂಕ ಕಾಡಿತ್ತು. ಆದರೆ ಪೂಜಾ ವಸ್ತ್ರಕಾರ್, ಸ್ನೇಹ್, ಶಿಖಾ ಪಾಂಡೆ ಮತ್ತು ತಾನಿಯಾ ಭಾಟಿಯಾ ತಂಡವನ್ನು ಪಾರು ಮಾಡಿ ದರು.

ಗುರುವಾರ ಒಂದು ವಿಕೆಟ್ ಕಳೆದುಕೊಂಡು 83 ರನ್ ಗಳಿಸಿದ್ದ ಭಾರತ ತಂಡಕ್ಕೆ ಇನಿಂಗ್ಸ್ ಸೋಲಿನಿಂದ ತಪ್ಪಿಸಿಕೊಳ್ಳಲು ಮತ್ತೆ 83 ರನ್ ಬೇಕಾಗಿತ್ತು. ಶೆಫಾಲಿ ವರ್ಮಾ ಔಟಾದಾಗ ಒತ್ತಡ ಹೆಚ್ಚಾಯಿತು.

ದೀಪ್ತಿ ಮತ್ತು ಪೂನಂ ರಾವತ್ ಭೋಜನ ವಿರಾಮದ ವರೆಗೆ ಭರವಸೆ ತುಂಬಿದರು. ಮಿಥಾಲಿ ರಾಜ್ ಮತ್ತು ಹರ್ಮನ್‌ಪ್ರೀತ್ ಕೌರ್ ಎರಡಂಕಿಯನ್ನೂ ದಾಟದೆ ಮರಳಿದಾಗ ಸೋಲು ಖಚಿತ ಎಂದಾಯಿತು. ನಂತರ ಪರಿಸ್ಥಿತಿ ಸಂಪೂರ್ಣ ಬದಲಾಯಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಇಂಗ್ಲೆಂಡ್: 9ಕ್ಕೆ 396 ಡಿಕ್ಲೇರ್; **ಭಾರತ:** 231; **ಎರಡನೇ ಇನಿಂಗ್ಸ್: ಭಾರತ** (ಫಾಲೊ ಆನ್, ಶುಕ್ರವಾರ 24.3 ಓವರ್‌ಗಳಲ್ಲಿ 1ಕ್ಕೆ 83): 121 ಓವರ್‌ಗಳಲ್ಲಿ 8ಕ್ಕೆ 344 (ಶೆಫಾಲಿ ವರ್ಮಾ 63, ದೀಪ್ತಿ ಶರ್ಮಾ 54, ಪೂನಂ ರಾವತ್ 39, ಸ್ನೇಹ್ ರಾಣಾ ಔಟಾಗದೆ 80, ಶಿಖಾ ಪಾಂಡೆ 18, ತಾನಿಯಾ ಭಾಟಿಯಾ ಔಟಾಗದೆ 44; ಕ್ಯಾಥರಿನ್ ಬ್ರೂಂಟ್ 49ಕ್ಕೆ1, ಸೋಫಿ ಎಕ್ಲೆಸ್ಟೋನ್ 118ಕ್ಕೆ4, ಹೀಥರ್ ನೈಟ್ 41ಕ್ಕೆ1, ನತಾಲಿ ಶೀವರ್ 21ಕ್ಕೆ2) **ಫಲಿತಾಂಶ: ಪಂದ್ಯ ಡ್ರಾ. ಪಂದ್ಯದ ಶ್ರೇಷ್ಠ ಆಟಗಾರ್ತಿ: ಶೆಫಾಲಿ ವರ್ಮಾ.**

ಸ್ನೇಹ್ ರಾಣಾ ಅವರ ಬ್ಯಾಟಿಂಗ್ ವೈಖರಿ –ರಾಯಿಟರ್ಸ್ ಚಿತ್ರ

ಶಾನ್ ಗಂಗೂಲಿ

ಈಜು: ಶಾನ್ ಗಂಗೂಲಿಗೆ ಚಿನ್ನ

ಬೆಂಗಳೂರು: ಭಾರತದ ಶಾನ್ ಗಂಗೂಲಿ ಸರ್ಬಿಯಾದಲ್ಲಿ ನಡೆಯುತ್ತಿರುವ ಬೆಲ್‌ಗ್ರೇಡ್ ಟ್ರೋಫಿ ಒಲಿಂಪಿಕ್ ಅರ್ಹತಾ ಈಜು ಸ್ಪರ್ಧೆಯಲ್ಲಿ ಶನಿವಾರ ಚಿನ್ನದ ಪದಕ ಗೆದ್ದುಕೊಂಡಿದ್ದಾರೆ. ಪುರುಷರ 400 ಮೀಟರ್ ಮಡ್ಲೆಯಲ್ಲಿ ಅವರು ಅಗ್ರಸ್ಥಾನ ಗಳಿಸಿದರು.

ಶಾನ್ 4 ನಿಮಿಷ 37.70 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ಸರ್ಬಿಯದ ಪೀಟರ್ ಡ್ಯುಬೊವಾಕ್ (4 ನಿ. 46.21 ಸೆ.) ಬೆಳ್ಳಿ ಗೆದ್ದರೆ, ಅದೇ ದೇಶದ ವೆಜಿಕೊ ಸ್ವರಾಕ (4 ನಿ. 56.99 ಸೆ.) ಮೂರನೇ ಸ್ಥಾನ ಗಳಿಸಿದರು.

ಮಹಿಳೆಯರ 50 ಮೀಟರ್ ಫ್ರೀಸ್ಟೈಲ್‌ನಲ್ಲಿ ಭಾರತದ ಕೆನಿಶಾ ಗುಪ್ತಾ ನಾಲ್ಕನೇ ಸ್ಥಾನ ಗಳಿಸಿದರು. ಟೂರ್ನಿಯು ಫಿನಾದಿಂದ ಮಾನ್ಯತೆ ಪಡೆದಿದೆ.